ಶನಿವಾರ, ಫೆಬ್ರುವರಿ 27, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ

ಕಾಶ್ಮೀರದ ಗುಲ್‌ಮಾರ್ಗ್‌ನಲ್ಲಿ ಶುಕ್ರವಾರ ನಡೆದ ‘ಖೇಲೋ ಇಂಡಿಯಾ’ ರಾಷ್ಟ್ರೀಯ ಚಳಿಗಾಲದ ಕ್ರೀಡೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಯುವತಿಯೊಬ್ಬರು ನೃತ್ಯ ಪ್ರದರ್ಶಿಸಿದರು



ಶನಿವಾರ, ಫೆಬ್ರುವರಿ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 58 | ಪುಟ 28

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಸಂಗಾತಿ ಜತೆಗಿದ್ದು ಸಂಬಂಧದಲ್ಲಿನ ಒಂಟಿತನವನ್ನು ದೂರ ಮಾಡಲು ಸಂಗಾತಿಗೆ ಹತ್ತಿರವಾಗುವ ಮಾರ್ಗವನ್ನು ಕಂಡುಕೊಳ್ಳಬೇಕು...



ಲಸಿಕೆ 2ನೇ ಹಂತ: ನೋಂದಣಿ ಹೇಗೆ? 8

ಪರಿಸರ ಸೂಕ್ಷ್ಮ ವಲಯದಲ್ಲೇ ಗಣಿಗಾರಿಕೆ! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
49,099	14,529	₹48,100 (ಬೆಂಗಳೂರು)	₹70,700 (ಬೆಂಗಳೂರು)	73.47

ಚೆನ್ನೈ– ಮಂಗಳೂರು ರೈಲಿನಲ್ಲಿ ಸ್ಫೋಟಕ ಪತ್ತೆ: ಮಹಿಳೆ ಸೆರೆ

ಕೋಯಿಕ್ಕೋಡ್ (ಪಿಟಿಐ): ಚೆನ್ನೈ–ಮಂಗಳೂರು ರೈಲಿನಲ್ಲಿದ್ದ ಮಹಿಳಾ ಪ್ರಯಾಣಿಕರೊಬ್ಬರ ಬಳಿ ಶುಕ್ರವಾರ ಭಾರಿ ಪ್ರಮಾಣದಲ್ಲಿ ಸ್ಫೋಟಕಗಳು ಪತ್ತೆಯಾಗಿವೆ.

‘ತಿರುವಣ್ಣಾಮಲೈ ನಿವಾಸಿ ರಮಣಿ ಎನ್ನುವವರು ಚೆನ್ನೈ–ಮಂಗಳೂರು ಸೂಪರ್‌ಫಾಸ್ಟ್ ರೈಲಿನ ಮೂಲಕ ಚೆನ್ನೈನಿಂದ ಕಣ್ಣೂರು ಜಿಲ್ಲೆಯ ತಲಶ್ಶೇರಿಗೆ ಬಂದಿದ್ದಾರೆ. ಈಕೆ ತನ್ನ ಸೀಟಿನ ಕೆಳಗೆ 117 ಜೆಲೆಟಿನ್ ಕಡ್ಡಿಗಳು ಮತ್ತು 300 ಸ್ಫೋಟಕ ಸಾಧನಗಳನ್ನು ಅಡಗಿಸಿಕೊಂಡಿದ್ದರು. ಮಹಿಳೆಯನ್ನು ಬಂಧಿಸಲಾಗಿದೆ ’ ಎಂದು ಆರ್‌ಪಿಎಫ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವಚನವಾಣಿ
ಪ್ರಜಾವಾಣಿ ಕನ್ನಡ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ನಾಲ್ಕು ರಾಜ್ಯಗಳು, ಪುದುಚೇರಿ ವಿಧಾನ ಸಭೆಗೆ ಚುನಾವಣೆ ಘೋಷಣೆ

ಹಣಾಹಣಿಗೆ ದಿನ ನಿಗದಿ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳ, ತಮಿಳುನಾಡು ಮತ್ತು ಪುದುಚೇರಿ ವಿಧಾನ ಸಭೆಗಳಿಗೆ ಚುನಾವಣೆ ಘೋಷಣೆಯಾಗಿದೆ.

ಪಶ್ಚಿಮ ಬಂಗಾಳದಲ್ಲಿ ಅತ್ಯಂತ ಹೆಚ್ಚು, ಅಂದರೆ, ಎಂಟು ಹಂತಗಳಲ್ಲಿ ಮತದಾನ ನಡೆಯಲಿದೆ. ಅಸ್ಸಾಂನಲ್ಲಿ ಮೂರು ಹಂತಗಳಲ್ಲಿ ಜನರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಮೊದಲ ಹಂತದ ಮತದಾನವು ಮಾರ್ಚ್ 27 ರಂದು ನಡೆಯಲಿದೆ. ತಮಿಳುನಾಡು, ಕೇಂದ್ರಾಡಳಿತ ಪ್ರದೇಶ ಪುದುಚೇರಿ ಮತ್ತು ಕೇರಳದಲ್ಲಿ ಏಪ್ರಿಲ್ 6ರಂದು ಒಂದೇ ಹಂತದಲ್ಲಿ ಮತದಾನ ನಿಗದಿಯಾಗಿದೆ. ಮೇ 2ರಂದು ಮತ ಎಣಿಕೆ ನಡೆಯಲಿದೆ.

ಚುನಾವಣೆ ನಡೆಯಲಿರುವ ಹೆಚ್ಚಿನ ರಾಜ್ಯಗಳಲ್ಲಿ ಬಿಜೆಪಿ, ಇತರ ಪಕ್ಷಗಳಿಗೆ ಭಾರಿ ಸ್ಪರ್ಧೆ ಒಡ್ಡುವ ನಿರೀಕ್ಷೆ ಇದೆ. ಅಸ್ಸಾಂನಲ್ಲಿ ಈಗ ಬಿಜೆಪಿಯೇ ಅಧಿಕಾರದಲ್ಲಿದ್ದು ಅಧಿಕಾರ ಉಳಿಸಿಕೊಳ್ಳುವ ಸವಾಲು ಆ ಪಕ್ಷದ ಮುಂದಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸರ್ಕಾರ ಇದೆ. ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಬಿಜೆಪಿ ಭಾರಿ ಪ್ರಯತ್ನ ನಡೆಸುತ್ತಿದೆ.

ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಸರ್ಕಾರ ಇದೆ. ತಮಿಳುನಾಡಿನಲ್ಲಿ ಎಐಎಡಿಎಂಕೆ ಸರ್ಕಾರ ಇದೆ.

ಜನತಂತ್ರದ ಹಬ್ಬ 2021

ಎಐಎಡಿಎಂಕೆ ಜತೆಗೆ ಬಿಜೆಪಿಗೆ ಮೈತ್ರಿ ಇದೆ. ಪುದುಚೇರಿಯಲ್ಲಿ ಕೆಲವೇ ದಿನಗಳ ಹಿಂದಿನ ವರೆಗೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಇತ್ತು. ಆದರೆ, ಕಾಂಗ್ರೆಸ್ ಮತ್ತು ಡಿಎಂಕೆಯ ಕೆಲವು ಶಾಸಕರು ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರಿಂದ ಅಲ್ಲಿನ ಸರ್ಕಾರ ಉರುಳಿದೆ. ಈಗ ಅಲ್ಲಿ ರಾಷ್ಟ್ರಪತಿ ಆಡಳಿತವಿದೆ. ಈ ಮೂರೂ ಕಡೆಗಳಲ್ಲಿ ಬಿಜೆಪಿಗೆ ಗಟ್ಟಿ ನೆಲೆ ಇಲ್ಲ. ಆದರೆ, ಅಲ್ಲಿ ನೆಲೆಯೂರಲು ದೊಡ್ಡ ಮಟ್ಟದ ಪ್ರಯತ್ನ ಮತ್ತು ಕಾರ್ಯತಂತ್ರಗಳನ್ನು ಬಿಜೆಪಿ ನಡೆಸುತ್ತಿದೆ.

ಅಧಿಕಾರಕ್ಕೆ ಏರಲು ಬಿಜೆಪಿ ನಡೆಸುತ್ತಿರುವ ಭಾರಿ ಪ್ರಯತ್ನಗಳಿಂದಾಗಿ ಪಶ್ಚಿಮ ಬಂಗಾಳ ಚುನಾವಣೆಯ ಮೇಲೆ ಇಡೀ ದೇಶದ ಗಮನ ಇದೆ. ಹಾಗಾಗಿಯೇ, ಈ ರಾಜ್ಯಕ್ಕೆ ಇಬ್ಬರು ವಿಶೇಷ ವೀಕ್ಷಕರನ್ನು ಚುನಾವಣಾ ಆಯೋಗವು ನೇಮಿಸಿದೆ. ಕಳೆದ ಕೆಲವು ವರ್ಷಗಳಲ್ಲಿ ಈ ರಾಜ್ಯದಲ್ಲಿ ರಾಜಕೀಯ ಹಿಂಸಾಚಾರ ತೀವ್ರವಾಗಿದೆ. ಹಾಗಾಗಿಯೇ ಇಬ್ಬರು ವಿಶೇಷ ವೀಕ್ಷಕರನ್ನು ನೇಮಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಸುನಿಲ್ ಅರೋರ ಹೇಳಿದ್ದಾರೆ.

ಅರೋರ ಅವರು ಈ ಚುನಾವಣಾ ಪ್ರಕ್ರಿಯೆಯ ಮಧ್ಯದಲ್ಲಿಯೇ ಅಂದರೆ ಏಪ್ರಿಲ್ 13ರಂದು ನಿವೃತ್ತರಾಗಲಿದ್ದಾರೆ.

ಎಂಟು ಹಂತ ಏಕೆ: ಮಮತಾ ಪ್ರಶ್ನೆ

ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ನಿರ್ದೇಶನದಂತೆ ಪಶ್ಚಿಮ ಬಂಗಾಳದಲ್ಲಿ ಎಂಟು ಹಂತಗಳಲ್ಲಿ ಮತದಾನ ನಡೆಸುವ ನಿರ್ಧಾರ ತೆಗೆದುಕೊಳ್ಳಲಾಗಿದೆಯೇ ಎಂದು ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಶ್ನಿಸಿದ್ದಾರೆ. ‘ಯಾರ ಹಿತಾಸಕ್ತಿಗಾಗಿ ಎಂಟು ಹಂತಗಳಲ್ಲಿ ಮತದಾನ? ನಿಮ್ಮ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಒಂದೇ ಜಿಲ್ಲೆಯಲ್ಲಿ ಹಲವು ಹಂತಗಳಲ್ಲಿ ಮತದಾನ ನಡೆಸಲು ಕಾರಣವೇನು ಎಂಬುದನ್ನು ಹೇಳಿ. ಅಸ್ಸಾಂ (ಇಲ್ಲಿ ಮೂರು ಹಂತಗಳಿವೆ), ತಮಿಳುನಾಡು, ಕೇರಳದಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಸಬಹುದಾದರೆ ಪಶ್ಚಿಮ ಬಂಗಾಳದಲ್ಲಿ 23 ದಿನಗಳ ಆಟ ಏಕೆ’ ಎಂದು ಮಮತಾ ಪ್ರಶ್ನಿಸಿದ್ದಾರೆ. ಪ್ರಧಾನಿ ಮತ್ತು ಗೃಹ ಸಚಿವರು ಪಶ್ಚಿಮ ಬಂಗಾಳದಲ್ಲಿ ತಮ್ಮ ಅಧಿಕಾರ ದುರುಪಯೋಗ ಮಾಡದಂತೆ ನೋಡಿಕೊಳ್ಳಿ ಎಂದು ಚುನಾವಣಾ ಆಯೋಗವನ್ನು ಕೋರಿದ್ದಾರೆ.

ಇನ್ನಷ್ಟು ಸುದ್ದಿಗಳು 7

ಮತ ಎಣಿಕೆ ಮೇ 2

ಎರಡು ರಾಜ್ಯಗಳು, ಪುದುಚೇರಿಗೆ ಒಂದೇ ಹಂತದಲ್ಲಿ ಮತದಾನ
- ತಮಿಳುನಾಡು
- ಪುದುಚೇರಿ *
- ಕೇರಳ

ಏಪ್ರಿಲ್ 6 ಮತದಾನ

*ಕೇಂದ್ರಾಡಳಿತ ಪ್ರದೇಶ

ಕ್ಷೇತ್ರಗಳು: •ತಮಿಳುನಾಡು: 243 •ಕೇರಳ: 140 •ಪುದುಚೇರಿ: 30

ಪಶ್ಚಿಮ ಬಂಗಾಳದಲ್ಲಿ ಎಂಟು ಹಂತ — ಕ್ಷೇತ್ರಗಳು 294

ಹಂತ	ದಿನಾಂಕ
ಮೊದಲ ಹಂತ	ಮಾರ್ಚ್ 27
ಎರಡನೇ ಹಂತ	ಏಪ್ರಿಲ್ 1
ಮೂರನೇ ಹಂತ	ಏಪ್ರಿಲ್ 6
ನಾಲ್ಕನೇ ಹಂತ	ಏಪ್ರಿಲ್ 10
ಐದನೇ ಹಂತ	ಏಪ್ರಿಲ್ 17
ಆರನೇ ಹಂತ	ಏಪ್ರಿಲ್ 22
ಏಳನೇ ಹಂತ	ಏಪ್ರಿಲ್ 26
ಎಂಟನೇ ಹಂತ	ಏಪ್ರಿಲ್ 29

ಅಸ್ಸಾಂನಲ್ಲಿ ಮೂರು ಹಂತ — ಕ್ಷೇತ್ರಗಳು 126

ಹಂತ	ದಿನಾಂಕ
ಮೊದಲ ಹಂತ	ಮಾರ್ಚ್ 27
ಎರಡನೇ ಹಂತ	ಏಪ್ರಿಲ್ 1
ಮೂರನೇ ಹಂತ	ಏಪ್ರಿಲ್ 6

ಯುಪಿಎಸ್‌ಸಿ ಮಾದರಿಯಲ್ಲೇ ಕೆಪಿಎಸ್‌ಸಿ ಪರೀಕ್ಷೆ!

ಬೆಂಗಳೂರು: ಪ್ರಶ್ನೆಪತ್ರಿಕೆ ಸೋರಿಕೆಯಿಂದ ಎಚ್ಚೆತ್ತುಕೊಂಡಿರುವ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ), ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಇದೇ ಮೊದಲ ಬಾರಿಗೆ ಯುಪಿಎಸ್‌ಸಿ ಪರೀಕ್ಷೆಗಳ ಮಾದರಿಯ ಭದ್ರತಾ ವ್ಯವಸ್ಥೆ ಮಾಡಿಕೊಂಡಿದೆ! 4

ಐವರಿಗೆ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡುವ 2020ನೇ ಸಾಲಿನ ‘ವಾರ್ಷಿಕ ಗೌರವ ಪ್ರಶಸ್ತಿ’ಗೆ ದಕ್ಷಿಣ ಕನ್ನಡದ ಪ್ರೊ. ಅಮೃತ ಸೋಮೇಶ್ವರ, ಗದಗದ ಷಣ್ಮುಖಯ್ಯ ಅಕ್ಕೂರಮಠ ಸೇರಿದಂತೆ ಐವರು ಆಯ್ಕೆಯಾಗಿದ್ದಾರೆ. 5

ಅಂಬಾನಿ ಮನೆ ಬಳಿ ಸ್ಫೋಟಕ ತುಂಬಿದ್ದ ವಾಹನ ವಶ

ಮುಂಬೈ: ದಕ್ಷಿಣ ಮುಂಬೈನಲ್ಲಿರುವ ಉದ್ಯಮಿ ಮುಖೇಶ್ ಅಂಬಾನಿ ಅವರ ಐಷಾರಾಮಿ ನಿವಾಸ ‘ಅಂಟಿಲಿಯಾ’ ಸಮೀಪ ಗುರುವಾರ ಪತ್ತೆಯಾದ ಸ್ಫೋಟಕ ವಸ್ತು ತುಂಬಿದ್ದ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. 8

ಹಿಂಜರಿತದಿಂದ ಹೊರಬಂದ ಅರ್ಥ ವ್ಯವಸ್ಥೆ

ನವದೆಹಲಿ: ತಯಾರಿಕೆ, ಕಟ್ಟಡ ನಿರ್ಮಾಣ ಮತ್ತು ಕೃಷಿ ವಲಯಗಳಲ್ಲಿ ಚೇತರಿಕೆ ಕಂಡುಬಂದ ಕಾರಣದಿಂದಾಗಿ ದೇಶದ ಅರ್ಥ ವ್ಯವಸ್ಥೆಯು ಡಿಸೆಂಬರ್ ತ್ರೈಮಾಸಿಕದಲ್ಲಿ ಬೆಳವಣಿಗೆಯ ಹಾದಿಗೆ ಮರಳಿದೆ. ಹಿಂಜರಿತದ ಸ್ಥಿತಿಯಿಂದ ಹೊರಬಂದಿದೆ. 9

‘ತಮಿಳುನಾಡು ಯೋಜನೆ ಪ್ರಶ್ನಿಸಿ ಕಾನೂನು ಹೋರಾಟ’

ಸಚಿವ ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ತಜ್ಞರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ ತಮಿಳುನಾಡು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಇಂತಹ ಯಾವುದೇ ನೀರಾವರಿ ಯೋಜನೆಗಳಿಗೆ ನಮ್ಮ ಒಪ್ಪಿಗೆ ಇಲ್ಲ. ಈ ವಿಚಾರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟಕ್ಕೆ ತೀರ್ಮಾನಿಸಿದ್ದೇವೆ’ ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.



ಬಸವರಾಜ ಬೊಮ್ಮಾಯಿ

ನ್ಯಾಯಾಲಯದಲ್ಲಿರುವ ಅಂತರ ರಾಜ್ಯ ಜಲವಿವಾದಗಳಿಗೆ ಸಂಬಂಧಿಸಿದ ದಾವೆಗಳ ಕುರಿತಂತೆ ಜಲ ಸಂಪನ್ಮೂಲ ಸಚಿವ ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ನೀರಾವರಿ ತಜ್ಞರು ಹಾಗೂ ಕಾನೂನು ತಜ್ಞರ ಜೊತೆ ಶುಕ್ರವಾರ ನಡೆದ ಸಭೆಯ ಬಳಿಕ ಅವರು ಮಾತನಾಡಿದರು.

‘ಕಾವೇರಿ ಹೆಚ್ಚುವರಿ ನೀರು ಅಧಿಕೃತವಾಗಿ ಹಂಚಿಕೆ ಆಗಿಲ್ಲ. ಆದರೂ, ಕಾವೇರಿ, ವೆಲ್ಲಾರು–ವೈಗೈ–ಗುಂಡಾರು ನದಿ ಜೋಡಣೆ ಯೋಜನೆಗೆ ತಮಿಳುನಾಡು ಅಡಿಗಲ್ಲು ಹಾಕಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

5ನೇ ಪುಟ ನೋಡಿ

ರಾಜ್ಯಕ್ಕೆ ನೀರು ಒದಗಿಸದಂತೆ ತಡೆಯುವ ಹುನ್ನಾರ: ದೇವೇಗೌಡ



ಪಾಂಡವಪುರ (ಮಂಡ್ಯ): ‘ತಮಿಳುನಾಡು ಸರ್ಕಾರವು ₹ 14 ಸಾವಿರ ಕೋಟಿ ವೆಚ್ಚದಲ್ಲಿ ನದಿ ಜೋಡಣೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿರುವುದು, 2018 ರಲ್ಲಿ ಸುಪ್ರೀಂಕೋರ್ಟ್ ಹಾಗೂ ನ್ಯಾಯಮಂಡಳಿ ನೀಡಿದ ತೀರ್ಪಿನ ಉಲ್ಲಂಘನೆಯಾದಂತಾಗಿದೆ’ ಎಂದು ಜೆಡಿಎಸ್ ವರಿಷ್ಠ, ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಶುಕ್ರವಾರ ಇಲ್ಲಿ ಹೇಳಿದರು.

ಪಟ್ಟಣದಲ್ಲಿ ಜೆಡಿಎಸ್‌ನಿಂದ ಆಯೋಜಿಸಿದ್ದ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸುಪ್ರೀಂಕೋರ್ಟ್‌ನ ತೀರ್ಪಿನಂತೆ, ರಾಜ್ಯ ಸರ್ಕಾರವು ತನ್ನ ಪಾಲಿನ ನೀರಿನಿಂದ ನೀರಾವರಿ, ಕುಡಿಯುವ ನೀರಿಗಾಗಿ ಮೇಕೆದಾಟು ಮತ್ತು ಮಾರ್ಕಂಡೇಯ ಯೋಜನೆಗಳನ್ನು ಪ್ರಾರಂಭಿಸಲು ಯೋಜನೆ ರೂಪಿಸಿತ್ತು. ಆದರೆ, ತಮಿಳುನಾಡು ಸರ್ಕಾರವು ನದಿ ಜೋಡಣೆ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿರುವುದು ಕರ್ನಾಟಕದ ಪ್ರಸ್ತಾವಿತ ಯೋಜನೆಗಳಿಗೆ ನೀರು ಒದಗಿಸದಂತೆ ತಡೆಯುವ ಹುನ್ನಾರ. ತಮಿಳುನಾಡಿನ ನದಿ ಜೋಡಣೆ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಬೆಂಬಲವೂ ಇದೆ’ ಎಂದು ದೂರಿದರು.

5ನೇ ಪುಟ ನೋಡಿ

ಸಿಐಡಿಯಿಂದ ಡಿಜಿಪಿಗೆ ತನಿಖಾ ವರದಿ ಸಲ್ಲಿಕೆ

ಪೊಲೀಸರಿಂದಲೇ ಕಾರು ಮಾರಾಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಎಲಿಯ ಕನ್‌ಸ್ಟ್ರಕ್ಷನ್ ಕಂಪನಿಯ ಅವ್ಯವಹಾರ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಮೂರು ಕಾರುಗಳ ಪೈಕಿ ಜಾಗ್ವಾರ್ ಕಾರನ್ನು ಪೊಲೀಸರೇ ಮಾರಾಟ ಮಾಡಿರುವುದು ತನಿಖೆಯಲ್ಲಿ ಗೊತ್ತಾಗಿದೆ.

₹30 ಕೋಟಿ ವಂಚನೆ ಸಂಬಂಧ ಎಲಿಯ ಕನ್‌ಸ್ಟ್ರಕ್ಷನ್ ಆಂಡ್ ಬಿಲ್ಡರ್ಸ್ ಕಂಪನಿಯ ಜಾಗ್ವಾರ್, ಪೋರ್ಷೆ ಹಾಗೂ ಬಿಎಂಡಬ್ಲ್ಯು ಕಾರುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಈ ಪೈಕಿ ಎರಡು ಕಾರುಗಳನ್ನು ಸ್ವಂತಕ್ಕೆ ಬಳಸಿಕೊಂಡಿದ್ದ ಸಿಸಿಬಿ ಪೊಲೀಸರು, ಆರೋಪಿಯೊಬ್ಬನ ಮೂಲಕವೇ ಜಾಗ್ವಾರ್ ಕಾರು ಮಾರಾಟ ಮಾಡಿಸಿದ್ದರು.

ಈ ಬಗ್ಗೆ ತನಿಖೆ ನಡೆಸುವಂತೆ ಡಿಜಿಪಿ ಪ್ರವೀಣ್ ಸೂದ್ ಅವರು ಸಿಐಡಿಗೆ ಸೂಚಿಸಿದ್ದರು. ಅದರಂತೆ ಸಿಐಡಿ ಅಧಿಕಾರಿಗಳು ವರದಿ ನೀಡುವಂತೆ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಅವರಿಗೆ ಸೂಚನೆ ನೀಡಿದ್ದರು. ಈ ಕುರಿತು ಡಿಸಿಪಿ ವಿನಯ್ ಗಾಂವ್ಕರ್ ಅವರ ವರದಿಯನ್ನು ಆಧರಿಸಿ, ಸಿಐಡಿಯಿಂದ ಡಿಜಿಪಿಗೆ ತನಿಖಾ ವರದಿ ಸಲ್ಲಿಕೆಯಾಗಿದೆ.

ಎರಡು ಕಾರುಗಳನ್ನು ಪೊಲೀಸರು ಸ್ವಂತಕ್ಕೆ ಬಳಕೆ ಮಾಡಿಕೊಂಡಿದ್ದು, ಜಾಗ್ವಾರ್ ಕಾರನ್ನು ಪ್ರಕರಣದ ಆರೋಪಿಯಿಂದಲೇ ಮಾರಾಟ ಮಾಡಿಸಿ, ಬಂದ ಹಣದಲ್ಲೂ ಅವ್ಯವಹಾರ ಮಾಡಿದ್ದರು ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಿರಂತರ ಜನಸೇವೆಯಲ್ಲಿ ತೊಡಗುವ ಜನನಾಯಕ ಯಡಿಯೂರಪ್ಪ

ಬಿಎಸ್‌ವೈ: ದಕ್ಷಿಣ ಕೋಟೆಯ ಹೆಬ್ಬಾಗಿಲು

ನಾಯಕನಾದವನು ಉತ್ತಮ ಸಂಘಟಕನಾಗಿರಬೇಕು, ಕೇಳಿಸಿಕೊಳ್ಳುವ ಗುಣ ಹೊಂದಿರಬೇಕು, ಉತ್ತಮ ವಾಗ್ಮಿಯಾಗಿರಬೇಕು ಎಂಬ ಅನೇಕ ವಿಚಾರಗಳಿವೆ. ಆದರೆ ಯಡಿಯೂರಪ್ಪ ಅವರಲ್ಲಿ ರಾಜಕೀಯ ನಾಯಕರು, ಜನಸಾಮಾನ್ಯರು, ವಿರೋಧ ಪಕ್ಷದವರೂ ಕಾಣುವ ಗುಣ ನಂಬಿಕೆ. ನಂಬಿದವರನ್ನು ಯಡಿಯೂರಪ್ಪ ಕೈಬಿಡುವುದಿಲ್ಲ ಎಂಬುದು ಪಕ್ಷಾತೀತವಾಗಿ ಎಲ್ಲರೂ ಒಪ್ಪುವ ಮಾತು.

ಅಭಿವೃದ್ಧಿ ವಿಚಾರ ಹಾಗೂ ಜನರ ಸಮಸ್ಯೆ ಬಗೆಹರಿಸುವ ವಿಚಾರ ಬಂದಾಗ ಯಡಿಯೂರಪ್ಪನವರಲ್ಲಿ ರಾಜಕೀಯವನ್ನು ಮೀರಿದ ಮುತ್ಸದ್ದಿತನ ಎದ್ದು ಕಾಣುತ್ತದೆ. ಸದನದಲ್ಲಿ ಎದುರು ಬದುರು ನಿಂತು ಕಾದಾಡಿದ ವಿರೋಧ ಪಕ್ಷದವರೇ, ತಮ್ಮ ಕ್ಷೇತ್ರದ ಜನರ ಸಮಸ್ಯೆಯನ್ನು ಮುಂದಿಟ್ಟು ಕೊಂಡು ಹೋದರೆ, ಸದನದಲ್ಲಿ ಏನೂ ನಡೆದೇ ಇಲ್ಲವೇನೊ ಎಂಬಂತೆ ಮಾತನಾಡಿಸಿ ಕೆಲಸ ಮಾಡಿಕೊಡುವ ಗುಣ ಅವರದು.

ಯಾವ ಪಕ್ಷದವರು? ಇವರಿಗೆ ಅನುದಾನ ನೀಡಿದರೆ ನಮ್ಮ ಪಕ್ಷದ ಸ್ಥಳೀಯ ಕಾರ್ಯಕರ್ತರು ಸಿಟ್ಟಾಗುತ್ತಾರೆಯೇ? ಊಹೂಂ. ಇಂತಹ ಯೋಚನೆಗಳೇ ಅವರಲ್ಲಿ ಸುಳಿಯುವುದಿಲ್ಲ.

ಹೋರಾಟದ ಫಲ

ಶಿಕಾರಿಪುರದ ಸಣ್ಣ ಅಕ್ಕಿ ಗಿರಣಿಯಿಂದ ಜೀವನ ಆರಂಭಿಸಿದ ಯಡಿಯೂರಪ್ಪ ಅವರನ್ನು ಜನರು ಈಗಲೂ ಗುರುತಿಸುವುದು ರೈತ ನಾಯಕ ಎಂದೇ. ರಾಜ್ಯದಲ್ಲಿ ಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ ಮಾಡುವ ಮೂಲಕ ರೈತರ ಬಗೆಗಿನ ತಮ್ಮ ಕಾಳಜಿ ಚುನಾವಣೆಗೋ, ತೋರಿಕೆಗೋ ಅಲ್ಲ, ನೈಜವಾದದ್ದು ಎಂಬುದನ್ನು ಸಾಬೀತುಪಡಿಸಿದರು.

ಮೂಲತಃ ಆರೆಸ್ಸೆಸ್ ಕಾರ್ಯಕರ್ತನಾಗಿ ಸಾಮಾಜಿಕ ಜೀವನಕ್ಕೆ ಪಾದಾರ್ಪಣೆ ಮಾಡಿದ ಯಡಿಯೂರಪ್ಪ, ನಂತರದಲ್ಲಿ ಜನಸಂಘದ ದೀಪವನ್ನು ರಾಜ್ಯದ ಮೂಲೆಮೂಲೆಯಲ್ಲೂ ಉರಿಸಲು ಶ್ರಮಿಸಿದವರು. ಸೈಕಲ್‌ನಲ್ಲೇ ಊರೂರು ಸುತ್ತಿ ಸಂಘಟನೆ ಕಟ್ಟಿದರು. ಗೆಲ್ಲುವುದಿರಲಿ, ಚುನಾವಣೆಯಲ್ಲಿ ಜನಸಂಘದ ಅಭ್ಯರ್ಥಿಯ ಠೇವಣಿ ಉಳಿದರೆ ಸಿಹಿ ಹಂಚಿ ಪಟಾಕಿ ಸಿಡಿಸುತ್ತಿದ್ದ ಕಾಲ ಅದು. ತಮ್ಮ ಜೀವಿತಾವಧಿಯಲ್ಲೇ ಪಕ್ಷ ಅಧಿಕಾರಕ್ಕೆ ಏರಬಹುದು ಎಂಬ ಕಲ್ಪನೆಗೂ ಅವಕಾಶವಿಲ್ಲದ ಸಂದರ್ಭದಲ್ಲಿ ಜನಜಾಗೃತಿ ಕೈಗೊಂಡರು.

ರೈತರನ್ನು ಕೇಂದ್ರಿತವಾಗಿರಿಸಿಕೊಂಡು ನೈಜ ಹೋರಾಟ ಮಾಡಿದ್ದೇ ಆದರೆ ಜನಸೇವೆಯ ಅವಕಾಶ ಸಿಕ್ಕೇಸಿಗುತ್ತದೆ ಎಂದು ಜತೆಗಿದ್ದ ಕಾರ್ಯಕರ್ತರಲ್ಲೂ ಭರವಸೆ ಮೂಡಿಸುತ್ತಲೇ ತಾವೂ ಬೆಳೆಯುತ್ತ ಪಕ್ಷವನ್ನೂ ಬೆಳೆಸಿದರು. ತುರ್ತು ಪರಿಸ್ಥಿತಿಯಲ್ಲಿ 45 ದಿನದ ಸೆರೆವಾಸ ಅನುಭವಿಸುವುದರಿಂದ ಹಿಡಿದು ಲಾಲ್‌ಚೌಕ್ ಧ್ವಜಾರೋಹಣ, ರಾಮಜನ್ಮಭೂಮಿ ಆಂದೋಲನದವರೆಗೆ ದೇಶ, ಧರ್ಮದ ವಿಚಾರದಲ್ಲಿ ಎಂದೂ ರಾಜಿ ಮಾಡಿಕೊಳ್ಳದೆ ಹೋರಾಡಿದವರು. ಆದರೆ ಆರೆಸ್ಸೆಸ್ ಸಿದ್ಧಾಂತವನ್ನೂ ಮೀರಿ ಜನಮಾನಸದಲ್ಲಿ ಯಡಿಯೂರಪ್ಪ ಅವರಿಗೆ ವಿಶಿಷ್ಟ ಸ್ಥಾನವಿದೆ. ಹಿಂದೂಗಳಷ್ಟೆ ಅಲ್ಲ, ಮುಸ್ಲಿಂ, ಕ್ರೈಸ್ತರಿಗೂ ಯಡಿಯೂರಪ್ಪ ತಮ್ಮವರು ಎನ್ನಿಸುತ್ತಾರೆ. ಮೊದಲ ಬಾರಿಗೆ ಉಪಮುಖ್ಯಮಂತ್ರಿಯಾಗಿದ್ದಾಗ ಜಾರಿ ಮಾಡಿದ ಉಚಿತ ಸೈಕಲ್, ಭಾಗ್ಯಲಕ್ಷ್ಮಿಯಂತಹ ಯೋಜನೆಗಳು ಒಂದು ಸಮುದಾಯಕ್ಕೆ ಸೀಮಿತವಾದವಲ್ಲ. ಎಲ್ಲ ಧರ್ಮ, ನಂಬಿಕೆಗಳ ಜನರೂ ಯಾವುದೇ ಭೇದವಿಲ್ಲದೆ ಫಲ ಕಂಡುಕೊಳ್ಳುವಂತೆ ಮಾಡಿದ್ದು ಯಡಿಯೂರಪ್ಪ ಅವರಲ್ಲಿರುವ ಈ ವಿಶಿಷ್ಟ ಗುಣ.

ಯಡಿಯೂರಪ್ಪ ಬಳಿ ಏನು ಕೇಳಿದರೂ ಬರಿಗೈಲಿ ಕಳಿಸುವುದಿಲ್ಲ ಎಂಬ ಮಾತೂ ಜನಜನಿತವಾಗಿದೆ. ಬೇರೆ ಯಾವ ಅವಧಿಯಲ್ಲಿಯೂ ಇಲ್ಲದಷ್ಟು ಮನವಿಗಳು, ಬೇಡಿಕೆಗಳು ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಸಲ್ಲಿಕೆಯಾಗುತ್ತವೆ. ಇಂತಹ ಜಾತಿ ಎಂಬ ಕಾರಣಕ್ಕೆ ಯಡಿಯೂರಪ್ಪ ಕೆಲಸ ಮಾಡಿಕೊಟ್ಟಿಲ್ಲ ಎಂಬ ಒಂದೇ ಉದಾಹರಣೆಯನ್ನು ವಿರೋಧ ಪಕ್ಷಗಳೂ ನೀಡಲು ಸಾಧ್ಯವಿಲ್ಲ ಎಂಬಷ್ಟು ಸ್ಪಷ್ಟ ವ್ಯಕ್ತಿತ್ವ ಅವರದ್ದು.



ಯಡಿಯೂರಪ್ಪ ಅವರೊಂದಿಗೆ ಡಾ.ಕೆ.ಸುಧಾಕರ್

ಚುನಾವಣೆಗಳ ಸಂದರ್ಭದಲ್ಲಂತೂ ಎದುರಾಳಿಗಳ ಅನೇಕ ಅಸ್ತ್ರಗಳಿಂದ ಪಕ್ಷವನ್ನು ಕಾಪಾಡಿದ ಉದಾಹರಣೆಗಳಿವೆ. 2018ರ ಚುನಾವಣೆ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಪ್ರತ್ಯೇಕ ಲಿಂಗಾಯತ ಧರ್ಮ ಬೇಕು ಎಂಬ ದಾಳವನ್ನು ಅಂದಿನ ಆಡಳಿತ ಪಕ್ಷದ ಪ್ರಮುಖರು ಉರುಳಿಸಿದ್ದೇ ಮತಗಳ ವಿಭಜನೆ ಮಾಡಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಬೇಕು ಎಂಬ ಕಾರಣಕ್ಕೆ. ಅತ್ಯಂತ ಯೋಜಿತವಾಗಿ ರೂಪಿಸಿದ್ದ ಈ ಚುನಾವಣಾ ರಣತಂತ್ರಕ್ಕೆ ವಿರುದ್ಧ ದಿಕ್ಕಿನಲ್ಲಿ ಗುರಾಣಿಯಾಗಿ ಯಡಿಯೂರಪ್ಪ ಅಲ್ಲದೆ ಬೇರೆ ಯಾರೇ ಇದ್ದರೂ ಬಿಜೆಪಿ ಮತಗಳು ವಿಭಜನೆ ಆಗುವುದನ್ನು ತಡೆಯಲು ಸಾಧ್ಯವಿರುತ್ತಿರಲಿಲ್ಲ.

ದಕ್ಷಿಣ ಭಾರತದ ಬಿಜೆಪಿ ಭದ್ರಕೋಟೆ ಎಂದು ಕರ್ನಾಟಕವನ್ನು ಬಣ್ಣಿಸಲಾಗುತ್ತದೆ. ದಕ್ಷಿಣ ಭಾರತದಲ್ಲಿ ಬೇರೆ ಯಾವ ರಾಜ್ಯಗಳಲ್ಲೂ ಇಲ್ಲದ ವಿಶಿಷ್ಟ ಸ್ವರೂಪದ ರಾಷ್ಟ್ರೀಯವಾದ ಕರ್ನಾಟಕದ ಜನರಲ್ಲಿದೆ. ಈ ರಾಷ್ಟ್ರೀಯ ಅಲೆಯ ಜತೆಗೆ ಯಡಿಯೂರಪ್ಪನವರಂತಹ ‘ನಂಬಿಕಸ್ಥ’ ವ್ಯಕ್ತಿತ್ವವೇ ಬಿಜೆಪಿಗೆ ಶ್ರೀರಕ್ಷೆಯಾಗಿದೆ. ಈ ದಕ್ಷಿಣ ಭಾರತದ ಕೋಟೆಗೆ ಭದ್ರವಾದ ಹೆಬ್ಬಾಗಿಲಾಗಿ ನಿಂತಿರುವುದು ಇದೇ ಯಡಿಯೂರಪ್ಪ.

2019ರ ಲೋಕಸಭೆ ಚುನಾವಣೆಯಲ್ಲಿ ದೇಶದಾದ್ಯಂತ ನರೇಂದ್ರ ಮೋದಿ ಅಲೆ ಇತ್ತು. ಹಾಗಾಗಿ ಕರ್ನಾಟಕದಲ್ಲಿ 25 ಲೋಕಸಭೆ ಸದಸ್ಯರು ಬಿಜೆಪಿಯಿಂದಲೇ ಆಯ್ಕೆಯಾದರು ಎಂಬುದು ನೂರಕ್ಕೆ ನೂರು ನಿಜ. ಮೋದಿ, ಅಮಿತ್ ಶಾ ಜೋಡಿಗೆ ಕರ್ನಾಟಕದ ಮಟ್ಟಿಗೆ ಯಡಿಯೂರಪ್ಪ ಶಕ್ತಿ ಸಾಥ್ ನೀಡಿತು ಎಂಬುದು ರಾಜಕೀಯ ಪಂಡಿತರು ಮುಂದಿಡುವ ವಿಶ್ಲೇಷಣೆ.

2014ರಲ್ಲಿ 17 ಸಂಸದರು ಜಯಿಸಿದಾಗಲೂ ಕರ್ನಾಟಕದ ಮಟ್ಟಿಗೆ ಇದೇ ಸೂತ್ರ ಕೆಲಸ ಮಾಡಿತೆಂಬುದರಲ್ಲಿ ಅತಿಶಯೋಕ್ತಿ ಏನೂ ಇಲ್ಲ. ಈ ಮಾತಿಗೆ 2009ರಲ್ಲಿ ಬಿಜೆಪಿಯಿಂದ 19 ಸಂಸದರು ಆಯ್ಕೆಯಾಗಿದ್ದು, 2004ರ ಚುನಾವಣೆಯಲ್ಲಿ 18 ಬಿಜೆಪಿ ಸಂಸದರು ಜಯಿಸಿದ್ದು ಒಂದು ಐತಿಹಾಸಿಕ ನಿದರ್ಶನ ಎಂದರೆ ತಪ್ಪಾಗದು. 2014ರಿಂದೀಚೆಗೆ ಬಿಜೆಪಿ ಕೇಂದ್ರ ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಿತು. ಮೋದಿ ಮತ್ತು ಶಾ ಎಂಬ ಎರಡು ದೈತ್ಯ ಶಕ್ತಿಯ ಬಲ, ಚುನಾವಣಾ ರಣತಂತ್ರದ ವ್ಯೂಹ ಬಿಜೆಪಿಗೆ ದಿಲ್ಲಿಯಿಂದ ಹಳ್ಳಿಯವರೆಗೆ ಶ್ರೀಶಕ್ತಿ ಆಗಿ ನಿಂತುಕೊಂಡಿದೆ.

2004 ಹಾಗೂ 2009ರ ಚುನಾವಣೆಗಳಲ್ಲಿ ಕರ್ನಾಟಕದ ಮೂಲಕ ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲು ತೆರೆದದ್ದು ಯಡಿಯೂರಪ್ಪ ಎಂಬ ದೈತ್ಯ ಶಕ್ತಿ ಎಂಬುದರಲ್ಲಿ ಎರಡು ಮಾತಿಲ್ಲ. ಆಗಲೂ, ಈಗಲೂ ಕರ್ನಾಟಕದ ಮಟ್ಟಿಗೆ ಮೋದಿ, ಶಾ ಮೋಡಿಯ ಜೊತೆಗೆ ಯಡಿಯೂರಪ್ಪ ವರ್ಚಸ್ಸು ಒಂದೊಳ್ಳೇ ಗೆಲುವಿನ ಕಾಂಬಿನೇಷನ್ ಎಂಬುದೂ ನಿರ್ವಿವಾದ. ದೇಶ ಅಭಿವೃದ್ಧಿಯಾಗಬೇಕೆಂದರೆ ಮೋದಿ ಪ್ರಧಾನಿಯಾಗಬೇಕು, ಮೋದಿ ಕೈ ಬಲಪಡಿಸಬೇಕು ಎನ್ನುತ್ತ ಪಕ್ಷಕ್ಕೆ ವಾಪಸಾದ, ಅಭಿವೃದ್ಧಿಯೆಡೆಗಿನ ಅವರ ಬದ್ಧತೆ ನಿಚ್ಚಳವಾಗಿ ಕಾಣುತ್ತದೆ.

ಶಿಕಾರಿಪುರದ ಸಾರ್ವಜನಿಕ ಹೋರಾಟದಿಂದ ಇಂದಿನವರೆಗೆ ಯಡಿಯೂರಪ್ಪ ಅವರ ಹೋರಾಟ, ಒತ್ತು ಏನಿದ್ದರೂ ಅದು ಜನಸಾಮಾನ್ಯರ ವಿಚಾರಗಳೇ. ನೀರು, ವಿದ್ಯುತ್ ಸಮಸ್ಯೆ, ರೈತರ ಸಮಸ್ಯೆ, ಕೂಲಿಗಾಗಿ ಕಾಳು ಯೋಜನೆಯಲ್ಲಿ ಅಕ್ರಮ, ರೈತರ ಭೂಮಿ ಉಳಿಸುವ ಹೋರಾಟ, ಗ್ರಾಮ ರಾಜ್ಯ ಉಳಿಸಿ ರೈತರ ರಕ್ಷಿಸಿ ಪಾದಯಾತ್ರೆ, ಕಾವೇರಿ ಸಮಸ್ಯೆ ಉಲ್ಬಣಿಸಿದಾಗ ರೈತ ಜಾಥಾ, ಬಗರ್‌ಹುಕುಂ ಸಾಗುವಳಿದಾರರಪರ ಹೋರಾಟ...

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಹಾಗೆಯೇ ಮುಖ್ಯಮಂತ್ರಿಯಾಗಿ ಕೊರೊನಾ ಸಂಕಷ್ಟ ನಿರ್ವಹಿಸಿದ ರೀತಿಯನ್ನು ಉಲ್ಲೇಖಿಸದೇ ಹೋದರೆ ಹೇಗೆ?

ಇಡೀ ಜಗತ್ತನ್ನು ಕಾಡಿದ ಕೊರೊನಾಕ್ಕೆ ಮದ್ದು ಅರೆಯುವಲ್ಲೂ ಕರ್ನಾಟಕವೇ ಮುಂಚೂಣಿಯಲ್ಲಿ ನಿಂತುಕೊಂಡಿತು. ದೇಶದಲ್ಲಿ ಮೊದಲು ಲಾಕ್ ಡೌನ್ ಮಾಡಿದ್ದೂ ಕರ್ನಾಟಕ. ಲಾಕ್ ಡೌನ್ ಮೊದಲು ಮುಕ್ತಾಯಗೊಳಿಸಿದ್ದೂ ಕರ್ನಾಟಕ ಎಂಬುದು ನಮ್ಮ ಪಾಲಿನ ಸಾರ್ವಕಾಲಿಕ ಹೆಮ್ಮೆ. ಕೊರೊನಾದಿಂದ ಉಂಟಾದ ಆರೋಗ್ಯ ಹಾಗೂ ಆರ್ಥಿಕ ಸಂಕಷ್ಟಕ್ಕೆ ಎಂಥ ಬಲಿಷ್ಠನೇ ಆದರೂ ಜಂಘಾಬಲವೇ ಉಡುಗಿ ಹೋಗಬೇಕು. ಅಂಥ ಸಂದರ್ಭದಲ್ಲಿ ಧೃತಿಗೆಡದೆ ಯುದ್ಧಕಾಲದ ನಾಯಕನಂತೆ ಯಡಿಯೂರಪ್ಪ ಅಚಲವಾಗಿ ನಿಂತುಕೊಂಡರು. ಕೊರೊನಾ ಸಂಕಷ್ಟಕಾಲದಲ್ಲಿ ಆರೋಗ್ಯ ಇಲಾಖೆಯ ಹೊಣೆಯನ್ನು ನನ್ನ ಹೆಗಲಿಗೆ ಹಾಕಿ, ಯಶಸ್ವೀ ಕಾರ್ಯನಿರ್ವಹಣೆಗೂ ಬೆಂಗಾವಲಾದರು. ಅದರ ಪರಿಣಾಮ ಕೊರೊನಾ ನಿರ್ವಹಣೆಯಲ್ಲಿ ಕರ್ನಾಟಕ ದೇಶಕ್ಕೇ ಮಾದರಿಯಾಗಿ ಕರ್ಮಯೋಗಿ ಪ್ರಧಾನಿ ಮೋದಿಯವರಿಂದಲೂ ಭೇಷ್ ಎನಿಸಿಕೊಳ್ಳಲು ಸಾಧ್ಯವಾಯಿತು.

ಹೀಗೇ ಹೇಳುತ್ತ ಹೋದರೆ ದೊಡ್ಡ ಪಟ್ಟಿಯೇ ಬೆಳೆಯುತ್ತದೆ. ಎಷ್ಟೇ ಎತ್ತರಕ್ಕೆ ಬೆಳೆದರೂ ಬೇರನ್ನು ಮರೆಯದ ಯಡಿಯೂರಪ್ಪನವರ ಮಾತೃಹೃದಯ ಎಲ್ಲರನ್ನೂ ತಟ್ಟುತ್ತದೆ. ಅವರ ಮುಖದಲ್ಲಿನ ಕೆಂಡದಂತಹ ಕೋಪ ಬಡವರ ಮೇಲಿನ ದೌರ್ಜನ್ಯ ತಡೆಯಲೇ ಹೊರತು ಯಾರ ಮೇಲಿನ ದ್ವೇಷಕ್ಕಲ್ಲ. ಕೋಪಗೊಂಡ ಮರುಕ್ಷಣದಲ್ಲೇ ವಾತ್ಸಲ್ಯ ತೋರುವ, ಮನೆಗೆ ಬಂದವರಿಗೆ ದಾಸೋಹ ಮಾಡಿಸಿಯೇ ಕಳಿಸುವ, ನಿರಂತರ ಜನಸೇವೆಯಲ್ಲಿ ತೊಡಗುವ ಕಾಯಕ ವೃತ್ತಿಯೇ ಇಂದು ಅವರನ್ನು ನಾಡಿನ ಮಹಾನ್ ನಾಯಕನನ್ನಾಗಿಸಿದೆ.

ಡಾ.ಕೆ.ಸುಧಾಕರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸಚಿವ

ಪರಸ್ಪರ ಅಂತರ ಕಾಯ್ದುಕೊಳ್ಳಿ
ಪೌಷ್ಟಿಕ ಆಹಾರ ಸೇವಿಸಿ

ಕೇರಳ–ಮಹಾರಾಷ್ಟ್ರದಿಂದ ಬಂದವರ ಮೇಲೆ ನಿಗಾ

ಶಿಕ್ಷಣ ಸಂಸ್ಥೆಗಳಲ್ಲಿ ಕೋವಿಡ್ ಪರೀಕ್ಷೆ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇರಳ, ಮಹಾರಾಷ್ಟ್ರ ಸೇರಿದಂತೆ ಹೊರರಾಜ್ಯಗಳಿಂದ ಬಂದಿರುವ ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಕಾಣಿಸಿಕೊಳ್ಳುತ್ತಿದ್ದು, ಶಿಕ್ಷಣ ಸಂಸ್ಥೆಗಳಲ್ಲಿ ಕೋವಿಡ್ ಪರೀಕ್ಷೆ ಕಾರ್ಯವನ್ನು ತೀವ್ರಗೊಳಿಸಲಾಗಿದೆ' ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಹೇಳಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಗರದಲ್ಲಿರುವ ಎಲ್ಲ ವಿದ್ಯಾಸಂಸ್ಥೆಗಳಲ್ಲಿ ಪ್ರಮುಖವಾಗಿ ನರ್ಸಿಂಗ್ ಕಾಲೇಜುಗಳಲ್ಲಿ ಕೋವಿಡ್ ಪರೀಕ್ಷೆ ಕಾರ್ಯ ಹಮ್ಮಿಕೊಳ್ಳಲಾಗುತ್ತಿದೆ. ಕೇರಳ, ಮಹಾರಾಷ್ಟ್ರದಿಂದ ಬಂದಿರುವ ವಿದ್ಯಾರ್ಥಿಗಳನ್ನು ಪ್ರಮುಖವಾಗಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ' ಎಂದರು.

'ಯಲಹಂಕ ವಲಯದಲ್ಲಿನ ಅಟ್ಟೂರಿನಲ್ಲಿರುವ ಸಂಭ್ರಮ್ ಕಾಲೇಜಿನಲ್ಲಿ ಕಳೆದ ಎರಡು–ಮೂರು ದಿನಗಳಲ್ಲಿ 1,156 ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ ಮಾಡಲಾಗಿದೆ. ಇವರಲ್ಲಿ 9 ಜನರಿಗೆ ಕೋವಿಡ್ ಪಾಸಿಟಿವ್ ಬಂದಿದ್ದು, ಪ್ರತ್ಯೇಕವಾಗಿ ಇರಿಸಲಾಗಿದೆ. ಇವರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಗುರುತಿಸಿ ಕ್ವಾರಂಟೈನ್‌ನಲ್ಲಿ ಇಡಲಾಗಿದೆ' ಎಂದರು.

ಮಂಜುನಾಥ್ ಪ್ರಸಾದ್

'ಇದೇ ವಲಯದ ಎಂ.ಎಸ್. ಪಾಳ್ಯದಲ್ಲಿರುವ ಅಗ್ರಗಾಮಿ ಕಾಲೇಜಿನಲ್ಲಿ 217 ಜನರ ಪರೀಕ್ಷೆ ಮಾಡಲಾಗಿದ್ದು, ಐವರಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ' ಎಂದು ತಿಳಿಸಿದರು.

'ಕಾಲೇಜುಗಳಲ್ಲದೆ, ಪಿ.ಜಿ ಕಟ್ಟಡ ಅಥವಾ ವಸತಿ ನಿಲಯಗಳಲ್ಲಿ ಇರುವ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಹೊರರಾಜ್ಯಗಳಿಂದ ಬರುತ್ತಿರುವ ವಿದ್ಯಾರ್ಥಿಗಳ ಮೇಲೆ ಬಿಬಿಎಂಪಿ ಆರೋಗ್ಯಾಧಿಕಾರಿಗಳು ನಿಗಾ ಇಟ್ಟಿದ್ದಾರೆ' ಎಂದು ಹೇಳಿದರು.

'ಯಾವುದೇ ಶೈಕ್ಷಣಿಕ ಸಂಸ್ಥೆ ಅಥವಾ ವಸತಿ ಸಮುಚ್ಚಯದಲ್ಲಿ ಐದಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗಿದ್ದರೆ ಅದನ್ನು ಒಂದು ಕ್ಲಸ್ಟರ್ ಎಂದು ಗುರುತಿಸಲಾಗುತ್ತದೆ. ಸದ್ಯ ನಗರದಲ್ಲಿ ಐದು ಕ್ಲಸ್ಟರ್‌ಗಳಿವೆ. ಬೊಮ್ಮನಹಳ್ಳಿ –ಮಹದೇವಪುರದಲ್ಲಿ ವಸತಿ ಕ್ಲಸ್ಟರ್‌ಗಳಿದ್ದರೆ, ಕಾವಲ್ ಬೈರಸಂದ್ರ, ಅಟ್ಟೂರು, ಎಂ.ಎಸ್. ಪಾಳ್ಯ ಶೈಕ್ಷಣಿಕ ಸಂಸ್ಥೆ ಕ್ಲಸ್ಟರ್‌ಗಳಾಗಿವೆ' ಎಂದು ವಿವರಿಸಿದರು.

ಕೋವಿಡ್: ಪ್ರಕರಣಗಳ ಸಂಖ್ಯೆ ಏರಿಕೆ

ರಾಜ್ಯದಲ್ಲಿ ಇಳಿಮುಖ ಕಂಡಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ ಈಗ ಮತ್ತೆ ಏರುಗತಿ ಪಡೆದಿದ್ದು, ಶುಕ್ರವಾರ 571 ಪ್ರಕರಣಗಳು ವರದಿಯಾಗಿವೆ. ಕಳೆದ ಒಂದು ತಿಂಗಳಿನಲ್ಲಿ 24 ಗಂಟೆಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿದ್ದು, ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.50 ಲಕ್ಷ ದಾಟಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಮೂವರು ಹಾಗೂ ಹಾಸನದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,320ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 642 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಈವರೆಗೆ ಚೇತರಿಸಿಕೊಂಡವರ ಸಂಖ್ಯೆ 9.32 ಲಕ್ಷ ದಾಟಿದೆ. ಸೋಂಕಿತರಲ್ಲಿ 5,501 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 121 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಏರಿಕೆ ಕಂಡಿದ್ದು, ಒಂದು ದಿನದ ಅವಧಿಯಲ್ಲಿ 76 ಸಾವಿರ ಪರೀಕ್ಷೆಗಳನ್ನು ನಡೆಸಲಾಗಿದೆ. ಈವರೆಗೆ 1.86 ಕೋಟಿ ಮಂದಿ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಬ್ರಿಟನ್‌ನಿಂದ ಮತ್ತೆ 272 ಮಂದಿ ಬಂದಿದ್ದಾರೆ. ಕಳೆದ ನ.25ರ ಬಳಿಕ ಇಲ್ಲಿಗೆ ಬಂದವರ ಸಂಖ್ಯೆ 12,419ಕ್ಕೆ ತಲುಪಿದೆ. ಅವರಲ್ಲಿ ಈವರೆಗೆ 63 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. 25 ಮಂದಿಯಲ್ಲಿ ರೂಪಾಂತರ ವೈರಾಣು ಕಾಣಿಸಿಕೊಂಡಿದೆ.

ಬೆಂಗಳೂರಿನಲ್ಲಿ 368 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.04 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 36 ಪ್ರಕರಣಗಳು ವರದಿಯಾಗಿದೆ. ಅಲ್ಲಿ ಸೋಂಕಿತರ ಸಂಖ್ಯೆ 54,055ಕ್ಕೆ ಏರಿಕೆಯಾಗಿದೆ. ದಕ್ಷಿಣ ಕನ್ನಡದಲ್ಲಿ 22, ಕಲಬುರ್ಗಿಯಲ್ಲಿ 21, ತುಮಕೂರಿನಲ್ಲಿ 18, ಹಾಸನ ಹಾಗೂ ಬಳ್ಳಾರಿಯಲ್ಲಿ ತಲಾ 10 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ.

2 ದಿನ ಲಸಿಕೆ ವಿತರಣೆಯಿಲ್ಲ

ಬೆಂಗಳೂರು: ಕೋವಿನ್ 1.0 ಪೋರ್ಟಲ್ ಅನ್ನು ಕೋವಿನ್ 2.0ಕ್ಕೆ ಪರಿವರ್ತಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಸೂಚನೆಯ ಅನುಸಾರ ಶನಿವಾರ ಮತ್ತು ಭಾನುವಾರ ರಾಜ್ಯದಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆಯುವುದಿಲ್ಲ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಶುಕ್ರವಾರ ನಿಗದಿಪಡಿಸಲಾಗಿದ್ದ ಫಲಾನುಭವಿಗಳಲ್ಲಿ 21,888 ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ. ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯಲು 83,166 ಮಂದಿಯನ್ನು ಗುರುತಿಸಲಾಗಿತ್ತು. ಅವರಲ್ಲಿ ಶೇ 26 ರಷ್ಟು ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ರಾಜ್ಯದಲ್ಲಿ ಲಸಿಕೆ ವಿತರಣೆ ಪ್ರಾರಂಭವಾದಾಗಿನಿಂದ ಈವರೆಗೆ ನಿಗದಿಪಡಿಸಲಾಗಿದ್ದ 7,28,349 ಆರೋಗ್ಯ ಕಾರ್ಯಕರ್ತರಲ್ಲಿ 4,47,267 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಇವರಲ್ಲಿ 2.06 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ.

2,91,037 ಮುಂಚೂಣಿ ಯೋಧರನ್ನು ಈವರೆಗೆ ಲಸಿಕೆ ಪಡೆಯಲು ಗುರುತಿಸಲಾಗಿತ್ತು. ಅವರಲ್ಲಿ 1,58,575 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ. ಇದರಿಂದ ಶೇ 54 ರಷ್ಟು ಗುರಿ ತಲುಪಲು ಸಾಧ್ಯವಾಗಿದೆ.

ನಗರದ ಕೋವಿಡ್ ಪ್ರಕರಣಗಳು







ಶನಿವಾರದ ಉಷ್ಣಾಂಶ
32° ಗರಿಷ್ಠ 17° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮುಂಜಾನೆ ಮಂಜು ಕವಿದ ವಾತಾವರಣ ಇರಲಿದೆ. ನಂತರ ಶುಭ್ರ ಆಗಸ. ಬೆಂಗಳೂರು– ಮಂಗಳೂರು ಹೆದ್ದಾರಿಯಲ್ಲಿ ಒಣಹವೆ

ಮುನ್ಸೂಚನೆ

ಭಾನುವಾರ	ಸೋಮವಾರ	ಮಂಗಳವಾರ
33° 18°	33° 18°	32° 17°

ಸಾರಿಗೆ ನಿಗಮಗಳ ಕಾರ್ಗೋ ಸೇವೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳು ಆರಂಭಿಸಿರುವ ನೂತನ ಕಾರ್ಗೋ ಸೇವೆಗೆ ವಿಧಾನಸೌಧದ ಮುಂಭಾಗದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ಚಾಲನೆ ನೀಡಿದರು.

ಮೊದಲ ಹಂತದಲ್ಲಿ ರಾಜ್ಯದ 88 ಬಸ್ ನಿಲ್ದಾಣಗಳಲ್ಲಿ ಹಾಗೂ ಅಂತರರಾಜ್ಯದ 21 ನಿಲ್ದಾಣಗಳಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ. ಈ ಯೋಜನೆಯಿಂದ ನಿಗಮಕ್ಕೆ ವಾರ್ಷಿಕ ₹ 70 ಕೋಟಿಯಿಂದ ₹ 80 ಕೋಟಿ ಆದಾಯದ ನಿರೀಕ್ಷೆ ಇದೆ.

ಮುಖ್ಯಮಂತ್ರಿ ಮಾತನಾಡಿ, 'ಕೆಎಸ್‌ಆರ್‌ಟಿಸಿ 31 ಲಕ್ಷ ಪ್ರಯಾಣಿಕರಿಗೆ ನಿತ್ಯ ಸೇವೆ ನೀಡುತ್ತಿದೆ. ಸಾರಿಗೆ ಸಂಸ್ಥೆ ಆದಾಯ ಹೆಚ್ಚಿಸುವ ಕೆಲಸ ಆಗಬೇಕಿದೆ. ಈ ಉದ್ದೇಶದಿಂದ ಕಾರ್ಗೋ ಸೇವೆ ಲೋಕಾರ್ಪಣೆ ಮಾಡಿದ್ದೇವೆ. ಸರ್ಕಾರ ಬಸ್ ಸಂಚರಿಸುವ ವಿವಿಧೆಡೆ ಕಾರ್ಗೋ ಸೇವೆ ನೀಡಲಾಗುವುದು. ಕೋವಿಡ್‌ನಿಂದ ಸಾರಿಗೆ ಸಂಸ್ಥೆ ನಷ್ಟದಲ್ಲಿತ್ತು. ಅದಕ್ಕೆ ಪರ್ಯಾಯ ಆದಾಯ ಹುಡುಕಿಕೊಳ್ಳಲಾಗಿದೆ' ಎಂದರು.

ಸಾರಿಗೆ ಸಚಿವ ಲಕ್ಷ್ಮಣ್ ಸವದಿ ಮಾತನಾಡಿ, 'ಗ್ರಾಹಕರ ವಸ್ತುಗಳಿಗೆ ವಿಮಾ ಸೌಲಭ್ಯ ಅವಕಾಶ ನೀಡಲಾಗುವುದು. ಮುಂದಿನ ದಿನಗಳಲ್ಲಿ ಆಯ್ದ ನಗರಗಳಲ್ಲಿ ಮನೆ ಬಾಗಿಲಿಗೆ ಸೇವೆ ಎಂಬ ರೀತಿಯಲ್ಲಿ ವಿಸ್ತರಣೆ ಮಾಡಲಾಗುವುದು. ಸಾರ್ವಜನಿಕರಿಗೆ ಬೇರೆ ಬೇರೆ ಸೇವೆ ಕೊಡುವ ಉದ್ದೇಶದಿಂದ ಕಾರ್ಗೋ ಸೇವೆ ಆರಂಭಿಸಲಾಗಿದೆ. ರಾಜ್ಯದ ಮೂಲೆಮೂಲೆಗಳಿಗೆ ಹಾಗೂ ಅಂತರರಾಜ್ಯ ಮಟ್ಟಕ್ಕೂ ಈ ಸೇವೆ ವಿಸ್ತರಿಸಲಿದ್ದೇವೆ. ಇದರಿಂದ ಇಲಾಖೆಗೆ ಪರ್ಯಾಯ ಆದಾಯ ಸಿಗಲಿದೆ. ಸಾರ್ವಜನಿಕರು ಈ ಸೇವೆಯನ್ನು ಪಡೆದುಕೊಳ್ಳಬೇಕು' ಎಂದು ಮನವಿ ಮಾಡಿದರು.

ಇದೇ ವೇಳೆ ಕೋವಿಡ್‌ನಿಂದ ಮೃತಪಟ್ಟ ಸಾರಿಗೆ ನಿಗಮದ ನೌಕರರ ಕುಟುಂಬಕ್ಕೆ ₹ 30 ಲಕ್ಷ ಚೆಕ್ ಹಸ್ತಾಂತರಿಸಿದರು.

ಆಹಾರ ಸಚಿವ ಉಮೇಶ ಕತ್ತಿ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ಇದ್ದರು.

ಕಾರ್ಗೋ ಸೇವೆಗೆ ಚಾಲನೆ ನೀಡಿದ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಲಕ್ಷಣ ಸವದಿ ಮತ್ತು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಂ. ಚಂದ್ರಪ್ಪ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸ್ಮರಣಿಕೆ ನೀಡಿದರು

ಕುಡಿಯುವ ನೀರಿನ ಘಟಕ: ಜಂಟಿ ಸದನ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಕೆ ಮತ್ತು ನಿರ್ವಹಣೆಯಲ್ಲಿ ನಡೆದಿರುವ ಅವ್ಯವಹಾರದ ಕುರಿತು ವಿಚಾರಣೆ ನಡೆಸಲು ಶಾಸಕ ಆರಗ ಜ್ಞಾನೇಂದ್ರ ಅಧ್ಯಕ್ಷತೆಯಲ್ಲಿ ಜಂಟಿ ಸದನ ಸಮಿತಿ ರಚಿಸಲಾಗಿದೆ.

ಎಂ.ಪಿ.ಅಪ್ಪಚ್ಚು ರಂಜನ್, ಎ.ಎಸ್. ಪಾಟೀಲ ನಡಹಳ್ಳಿ, ವೀರಭದ್ರಯ್ಯ, ಕೆ.ಶಿವನಗೌಡ ನಾಯಕ್, ಬಿ.ಸಿ.ನಾಗೇಶ್, ಪಿ.ರಾಜೀವ್, ಹಾಲಪ್ಪ ಆಚಾರ್, ಯು.ರಾಜೇಶ್ ನಾಯ್ಕ, ಕೆ.ಜೆ.ಜಾರ್ಜ್, ಕೃಷ್ಣ ಬೈರೇಗೌಡ, ಯು.ಟಿ.ಖಾದರ್, ಈಶ್ವರ ಖಂಡ್ರೆ, ಎ.ಟಿ.ರಾಮಸ್ವಾಮಿ, ವೆಂಕಟರಾವ್ ನಾಡಗೌಡ, ಎಸ್.ರವಿ, ಎಚ್.ಎಂ.ರಮೇಶ್‌ಗೌಡ, ಅ.ದೇವೇಗೌಡ,ವಿಜಯ್ ಸಿಂಗ್, ಎಸ್.ವಿ.ಸಂಕನೂರು ಅವರು ಸದಸ್ಯರಾಗಿದ್ದಾರೆ. ಜೂನ್ 30 ರೊಳಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ.

WEEKEND CORNER ಕ್ಲಾಸಿಫೈಡ್ಸ್

BMRDA APPROVED 100% RELEASED VILLA SITES
GOOD TIME TO INVEST GOLDEN PROPERTY
Actual Site Photo
NAYANA GREENS
WHITEFIELD NEW EXTENSION
Few minutes drive from ITPL
READY TO CONSTRUCT YOUR VILLA
Just 500 Meters away from Satellite Town Ring Road and Well Connectivity
Loans from LIC
Personally Visit - Feel the Difference
Call : 81509 19999 / 81509 29999

ಚನ್ನಪಟ್ಟಣ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾದ ಗೃಹವಸತಿ ನಿವೇಶನಗಳು
ನಗರಸಭೆ ಖಾತೆ | CPA APPROVED LAO/02/2019-20/217
ಸ್ಥಳ : 12ನೇ ಮುಖ್ಯರಸ್ತೆ, ಕುವೆಂಪುನಗರ, ಮಂಗಳವಾರ ಪೇಟೆ, ಚನ್ನಪಟ್ಟಣ
ಮೂಲಭೂತ ಸೌಲಭ್ಯಗಳು:
- ಡಿ.ಸಿ ಕನ್ವರ್ಶನ್, ಪ್ರಾಧಿಕಾರ ಅನುಮೋದನೆ
- 30.40, 30.50 ಅಳತೆಯ ನಿವೇಶನಗಳು
- ಬ್ಲಾಕ್ ಟಾಪ್ ರಸ್ತೆಗಳು
- ವಿದ್ಯುತ್ ಸಂಪರ್ಕ
- ಕಾಂಕ್ರಿಟ್ ಬಾಕ್ಸ್ ಮಾದರಿ ಚರಂಡಿಗಳು
- ಉದ್ಯಾನವನ ಮತ್ತು ಸಿ.ಎ ಸೈಟ್
- ಪ್ರತಿ ನಿವೇಶನಕ್ಕೂ ನೀರು ಮತ್ತು ಒಳಚರಂಡಿ ಸಂಪರ್ಕ
- 30 ಮತ್ತು 40 ಅಡಿ ಅಗಲವಾದ ಟಾರ್ ರಸ್ತೆಗಳು

ಇವುಗಳಿಗೆ ಹತ್ತಿರವಿದೆ:
- ಹೊಸ ಕೋರ್ಟ್‌ನಿಂದ 1 ಕಿ.ಮಿ
- ಬಾಲಾಜಿ ಚಿತ್ರ ಮಂದಿರ ಮತ್ತು ವೆಬ್ ಸ್ಟಾರ್ ಶಾಲೆ ಹತ್ತಿರ
- ಬಸ್ ನಿಲ್ದಾಣದಿಂದ 2 ಕಿ.ಮಿ
- ರೈಲ್ವೆ ಸ್ಟೇಷನ್‌ನಿಂದ 2.5 ಕಿ.ಮಿ
- ಬೆಂಗಳೂರು-ಮೈಸೂರು ಹೆದ್ದಾರಿಗೆ 1 ಕಿ.ಮಿ
- ಬ್ಯಾಂಗಿನಿಂದ ಸಾಲ ಸೌಲಭ್ಯವಿದೆ

BOOKINGS OPEN PHASE 1
ಮೊ : 98803 06666, 86609 41866

॥ ಶ್ರೀ ದುರ್ಗಾ ಪರಮೇಶ್ವರಿ ಕೃಪೆ ॥
ಸೈಟುಗಳು ಮಾರಾಟಕ್ಕಿವೆ
PRM/KA/RERA/1251/309/PR/190219/002406
Only 2 Days Offer Hurry Up!!!
ತುಮಕೂರು ರಸ್ತೆ ನೆಲಮಂಗಲ ಹತ್ತಿರ
EASY EMI AVAILABLE
Spot Booking Gold Offer
ಕೇವಲ 4 ಲಕ್ಷಕ್ಕೆ 20x30 ನಿವೇಶನ
DTCP & RERA APPROVED SITES
PRM/KA/RERA/1254/464/PR/200515/003399
ದೇವನಹಳ್ಳಿ
ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ 30 ನಿಮಿಷಗಳ ಅಂತರದಲ್ಲಿ
ಕೇವಲ 2.5 ಲಕ್ಷಕ್ಕೆ 20x30 ನಿವೇಶನ
EASY EMI AVAILABLE
ಅಭಿವೃದ್ಧಿ ಹೊಂದಿದೆ ನೋಂದಣಿಗೆ ಸಿದ್ಧವಿದೆ
Condition Apply*
PRM/KA/RERA/1251/310/AG/180313/002023 | www.durgashreeventures.com
DURGA SHREE VENTURES
ದುರ್ಗಾಶ್ರೀ ವೆಂಚರ್ಸ್ 8880660099
ನಿವೇಶನ ನೋಡಲು ಉಚಿತ ವಾಹನ ಸೌಲಭ್ಯ ಇರುತ್ತದೆ ಸಂಪರ್ಕಿಸಿ

Nuts in a Jar
200+ Varieties of DRY FRUITS
Spices, Coffee, Chocolates etc.
WHOLESALE PRICING
HOME DELIVERED

Almonds 250gms ₹150	Cashews 250gms ₹210	Nuttle 250gms ₹158	Pistachio 250gms ₹228
Brazilnut 250gms ₹525	Macadamia 250gms ₹850	Pecannut 250gms ₹538	Hazelnut 250gms ₹278
Walnuts 250gms ₹285	Apricot Rich 250gms ₹250	Fig Fine 250gms ₹283	Turkel 200 gms ₹190
Papaya 250gms ₹145	Blueberry 250gms ₹388	Cranbery 250gms ₹145	Pineapple 250gms ₹175
Ajwa Dates 250gms ₹420	Medjoul Dates 250gms ₹375	Safavi 250gms ₹190	Kaima 250gms ₹170
Jeer 250gms ₹70	Khas Khas 250gms ₹383	Elaichi 250gms ₹600	Cloves 250gms ₹225
Chia Seeds 250gms ₹133	Sunflower 250gms ₹95	Alsi Plain 250gms ₹35	Pumpkin 250gms ₹158
Almond Coated 250gms ₹388	Cashew Coated 250gms ₹325	Black Current 250gms ₹310	Cashew Dipped 250gms ₹313

For Orders Call: 8686337373
FREE DELIVERY On Orders above ₹1000
Buy Online @ www.nutsinajar.in
Stores: #5, 1st Floor, BVK Iyengar Road, Chickpet Circle
1st Floor, Above Sreeraj Lassi Bar, Opp. Corel Tree, RT Nagar Main Road

DC CONVERTED SITES FOR SALE
₹ 2999/-* *Onwards Per Sq.ft.
Spot Booking 10gm Gold Coin Free
* T & C apply
BBMP A-Katha
TUMKUR ROAD
Near Nagasandra Metro Station
Upto 80% Bank Loan Available
Ready for Registration, Construction
70221 60615 / 80958 64045

CREDENCE IAS
An Institute for Civil Service Examination
PSI (Civil) Batch-2021
Starting from 5th March, 2021 Online/Offline
Kannada / English Medium
KAS-2021 Core Batch starting from 1st March, 2021
(80% Questions reflected in recently concluded KAS Exam)
CLASSES & TEST SERIES | CORE BATCH
More than PSI - 150+ & KAS - 165 + Selection-Since 2015
www.credenceias.com
Join Telegram : @Crispycurrentaffairs
Vijayanagar, Bengaluru - 96545 06161

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

TO LET

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Devanahalli

RESIDENTIAL PLOTS for sale on 6 lane road NH 207 near Rural DC office Devanahalli @889/-per sqft for limited bookings with 4 easy installments. 6362264034

Gnanabharathi

BDA COMMERCIAL North West Corner Site for Sale, 24X40, Jnanabharthi, 1st Block, Bangalore-56 Contact: 9845176489.

HBR Layout

SALE 40*60 NORTH FACING BDA SITE. HBR LAYOUT 5th BLOCK. Rs.14,000 (Neg) psft. 9606148954/9113581507

Hosur Road

"**SITE HOUSE** Sale 30x40, 30x50, 40x60 Electronic City, Rented Duplex House Nagarbhavi. Contact: 'ROBERT'- 9880080388"

APPROX. ONE Acre Industrial Land for Sale. Power, Water available. Papers upto date. Ideal for Pharma as well. Brokers Excuse. Contact: 9620938350/ 9342825263.

Intl Airport Road

INTERNATIONAL AIRPORT ROAD 30x40 Sites Sale Green Field Garden and Chandrashekar Kambara Layouts Near Stone Hill School: 9632549200

DH Classifieds
BOOK YOUR AD on SATURDAY & GET 50% OFF ON SUNDAY
For more information contact:
9880856233
9731810277 | 9901641752
9845114560 | 9886213331
*condition apply

PREMIUM TEACHERS LAYOUT @ ONLY 950/-SFT on NH-207, Near to Bangalore RURAL District Collector Office, Near BANGALORE International Airport & GITAM University Contact: 7813860860

BSNL HOUSING SOCIETY PREMIUM RESIDENTIAL/COMMERCIAL SITES NEAR BLORE INTL AIRPORT, ON 6LANE 300ft RING ROAD, 4 INSTALLMENTS. OPEN FOR GENERAL PUBLIC. CALL: 9071534000

Jakkur

BBMP DC-CONVERSION 9 Sites For Sale, Each 30X40, 4800/-Sft, Brigade Bricklane Apartment Back Side, Ragvendra Residency, Near Kogilu Cross, SBI Bank Loan Available, Direct Owner. 9980741687/ 9591600488

Jayanagar

SOUTH WEST corner 40x60 vacant site at RBI Layout, Jayanagar Third block east @ 15,000/- sft. owner : 9019521981

J P Nagar

J.P.NAGAR 1ST, 2nd Phase, Sites Sale 30x40, 30x50, 40x60, Residential/ Commercial, 10k, 12k, 22k. 9740148870.

JPNAGAR 6TH Phase, BDA Site for Sale 25x30, NorthFacing 13000/- Negotioble : Contact :9945801082

Kengeri

SMVL 1ST Block 30/40 West face Site for Sale good location near Metro Station, Kengeri Upanagar Railway Station. Contact 9620365924, 9663827594

Kalyan Nagar

KALYAN NAGAR CHELIKERE near Narayana school east facing 35x46 for sale Rs.6000 per/sft. negotiable. Contact Sudhakar Reddy- 9844899914 /9886822666

Kempegowda Layout

SALE 50X80 Commercial Site 300 Feet Pheripheral Ring Road in Kempegowda Layout, Good Location. 81978015605

Mysore Road

SUPER OFFER/ BASE RATES BMRDA & RERA Approved 60x90 Villa Plots for Sale, Mysore Road, Near Big Banyan Tree, only 2 Sites left, Contact: 9880577955

Nagarabhavi

BDA COMMERCIAL North West Corner Site Sale, 38X40, Manasanagar Nagarabhavi, Attached Ring Road, Contact: 9845753489.

SITE FOR SALE BBMP B-KHATHA Nagarabhavi Opp East West College Contact: 7676769294

Nelamangala

SULKUNTE NELAMANGALA Tq. East Facing 30x80, For Sale Rs.750/- Sqft. Negotiable, Contact: 8660810253/ 9481778628.

SULKUNTE NELAMANGALA Tq. East Facing 30x80, For Sale Rs.750/- Sqft. Negotiable, Contact: 8660810253/ 9481778628.

Peenya

LAGGERE AVAILABLE 20x30 BBMP 'A' Khata Sites at Rajiv Gandhinagar, Excellent Location, Clear Titles: 9342409878

Sarjapur Road

SARJAPUR ROAD TELECOM LAYOUT 2400 Sqft Site Sale with East and West Road Approaching: 9632549200

Vishweshwariah Layout

WANTED AVAILABLE BDA Sites Vishweshwaraiah Layout, Kempegowda Layout 20x30, 30x40, 40x60, 50x80.Contact Genuine Buyers/Sellers: 8892901567/ 9341733480

VISHVESHWARAIAH LAYOUT 6th Block 30x40 EF Allottee Site 6500/-, 8th Block 20x30 SF 51Lakhs. 9164089633/ 9663226688

VISVESWARAIAH LAYOUT 5th Block 30x40 East Facing Near 60 Feet Road Rate 7500/- PSft: 9845488488

""DIRECT OWNER"" 20x30 BDA3BHK DUPLEX HOUSE Sale, #1414 Vishveshwaraiah Layout 5th Block. 9886634578

BDA, VISHWESHWARAIAH Layout, 4th Block, 20X30,NF, Good Location, Ready to Construction, Direct Owner 7411101116

REAL ESTATE BUYING

Farm House/ Land/ Resorts

Mysore

FOR BUYING and Selling MUDA Sites, Houses, Apartments, Commercials, Alienated lands and Agriculture lands in Mysore Contact: Vishwanath Gowda Mysore Estates 9590911111

General

General

WE DO Agricultural Land Conversion, Change of Land use. Pody(A)(B) Kharab, Revenue related,KIADB liaison work. Verna Developers. MG-Road: 9620253180

Sites

Arkavathy Layout

BDA SITES WANTED ARKAVATHI (1-22 Blocks), Kempegowda, Any BDA Layout. Genuine Customers Contact: SAPTHAGIRI. 9900268073, 9448068073.

Multiple Locations

WANTED SITES Anjanapura, JP Nagar 8th & 9th phase, Banashankari 5th & 6th Stage and Vishweshwaraiah BDA Layouts. 9845132011, 9663554448

Vishweshwariah Layout

WANTED/ AVAILABLE BDA Sites Kempegowda, BSK, Viveswaraiah, NGF, Vidhanasoudha, Railway, ITI Layout: Immediate Registration: 9845488488

BUILDERS ESSENTIAL

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology- 9880916988

RENTAL PROPERTIES

Accommodation Available

Commercial

COMMERCIAL_PLOT GROUND_FLOOR 1700_sqft, 3rd Floor 1800_sqft, Basement_Parking. Suitable_for_Bank, Jewellery,Office.#22, 5th_Cross, Malleshwaram_Circle. 9448483065

3 ACRES of D.C. converted land for Rent, 9kms from Kolar Town, National Highway-4, Bangalore-Chennai, next to Mayya and Macdonald Hotels, Ajjapanahalli Village. 9448081434

KORAMANGALA COMMERCIAL Space with Fit 2300SFT, 3Floors Plug& Play Available For Rent Near Sony Signal with 30/35/40 Seat WSs. Contact Owner: 8904576631

COMMERCIAL SPACE available Ground and Mezzanine floor together 2800sft on Kengeri main road (100 feet) with spider glass. Contact- 9448193779

Flats

2-BHK/ 3-BHK 1st Floor FOR-RENT 3rd Main,OMBR Layout, near BESCOM office, Banasavadi, Bangalore. Contact:9008899028

PRESTIGE FALCON CITY, Kanakapura Road, ready to occupy apartment for Rent with all amenities. Call: 9108050577.

PRESTIGE LAKESIDE HABITAT, Varthur Road, 2/ 3/ 4 BHK ready to occupy apartment for Rent with all amenities. Call: 9900078809.

Industrial And Factory

RENT 12,400 Sqft Factory Lucky Shed with 45HP Power, Peeny 2nd Stage. Contact: 9019526108/ 9448654450

House

3BEDROOM INDEPENDENT Duplex House with Car Garae, Portoco Parking, Living Room, Dining,Modular Kitchen,Rent- 58000/- at Koramangala 6th Block near Club. 9845040234

Villas/Bunglows

AUGUSTA GOLF VILLAGE, Luxury villas for rent, 3 & 4BHK ready to occupy with all amenities, Off Hennur Road. Call: 9900085276.

OTHERS

For Sale

GUN FOR sale WW Greener DBBL 12 Bore Gun excellent condition, Immediate sale Contact- 9535102355

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

FOR SALE: Pearl River Piano. Wrought Iron Bed With Bedside Table and 4Burner Gas Stove. Contact: 9916137109.

BUSINESS

Business Offers

Machinery & Tools

TEXT: CLEARANCE Sale of VISL Case Hardening Steels 16MnSiCr5 Bars of Standard Lengths with Test Certificate 34.0 dia 6,600 Kg; 45.0 dia 3,800 Kg;60.0 dia 5,800 Kg. Attractive Prices. Interested Please Contact: 98440-43299

PERSONAL

Change of Name

I, NAGARAJA S/o. Muniappa R/at #177D, G.B. Palya, Madiwala, Blr-68, have changed my name from NAGARAJ. M to NAGARAJA & Date of Birth from 01/01/1978 to 12/01/1965 vide affidavit 17/02/2021 notary G. Kaspar, Bangalore.

14846688N, SEP/MT Palakshi Gouda 2ATC mother name Service record KASHIBAI instead of KASHIBAI PATIL notary K.V. Mani, Bangalore.

I, VIJAYALAKSHMI. R aged about 35 Years R/a #960, Samruddi, 12th Main, BSK 1st Stage, Srinivasanagar 2nd Phase, Bangalore-50 have changed my minor daughter name from Anjana to ANJANA VIJAYA. K vide affidavit dated 26.02.2021 before notary L.Shankaranarayana, Bangalore.

I, PAROMITA Dutta, R/o. C1-908 South City, Bannerghatta Road, Bengaluru, have changed my name to PAROMITA BHOWMIK after my marriage (both names refer to me only) vide Affidavit dated 25.02.2021 before Notary Ambareeshappa, Bangalore.

I DHANANJAYA. H.G R/a #.76, Skanda Nilaya, Nanjundeshwara Layout, J.P.Nagar 5th phase, Bangalore-78 Have Changed My Minor son's name from GAHAN AJAY. D to GAHAN DHANANJAYA vide Affidavit dated 22/02/2021 before notary MAHESHA J.J Bangalore

I, VINCENT GOPI S/o Rajendran R/at #585, 2nd main K.R. Garden, Koramangala, 8th block, Blr-95, have change my name from GOPI to VINCENT GOPI & Date of Birth from 17/03/1987 to 09/04/1987 vide affidavit 17/02/2021 notary G. Kaspar, Bangalore

I, INDRANI.R Residing at House #2, Door No.6, 4th 'E' Cross, B.Channasandra, Kasturinagar, Bangalore-43 have changed my name to INDU RANI.R. vide affidavit dated 27-01-2020 before Notary B.Seshagiri, Bangalore.

14838212M, HAV/MT, K. Hasan Valli, MT Wing, 2ATC, declare that my name service record K. HASSAN VALLI instead of K. HASAN VALLI notary K.V. Mani, Bangalore.

JC672187L, NB/SUB, Ajay Chandel ASC Centre & College mother name service record SAVITHRI DEVI instead of SAVITRI DEVI notary K.V. Mani, Bangalore.

JOB OPPORTUNITIES

Engg/ Production Technical

REQUIRED architects with minimum 1yr experience for keerthiconsultants. Email:raghavendra.arch@gmail.com. Contact 080-26712195.

General

REQUIRED TEAM leaders and data entry operators for address verification agency around Banashankari. 9742892551

Manager

TATA MOTORS Authorised Dealer, Visakhaptnam needs GM/AGM Sales & Services-1, 2 to 5Years Experience in Automobile Industry Candidates may send resume to hr.vishnucarriers@gmail.com , Ph: 8978386644, 9248094532

Teachers/ Professors

SRI AHAM_AATHMA VIDYALAYA-[ICSE], Gruhalakshmi layout, Nelagadaranahalli, Near Nagasandra metro-station, Dasarahalli, Bangalore-73 Invites applications for the following posts with good English vocabulary for the academic year 2020-21 onwards (1).Computer science- BCA/MCA/ GEOGRAPHY (2).Teachers to teach all the subjects for Nursery/ Primary/ Middle/ High-school. (3).Office Staff/ Clerk (4).Lab-Assistant/ Librarian. Offers Attractive Salary. 'Transportation provided". Call: 9880200172, 9663778869 Email: sriaavapplic@gmail.com

MORE Classifieds IN SUPPLEMENT

ಕಟ್ಟಿರುವ ಮನೆಗಳ ಬಗ್ಗೆ ದಾಖಲೆ ಸಲ್ಲಿಸಲು ವೆಬ್ ಪೋರ್ಟಲ್ • ಮಾ.1 ರಿಂದ ಪ್ರಾಯೋಗಿಕ ಸಹಾಯ ಕೇಂದ್ರ ಆರಂಭ

ಕಾರಂತ ಬಡಾವಣೆ: ದಾಖಲೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆಯಲ್ಲಿ 2008ರಿಂದ 2018ರ ಅವಧಿಯಲ್ಲಿ ನಿರ್ಮಾಣವಾಗಿರುವ ಕಟ್ಟಡಗಳ ಪರಿಶೀಲನೆ ಕಾರ್ಯವನ್ನು ಸುಪ್ರೀಂ ಕೋರ್ಟ್ ನೇಮಿಸಿರುವ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೇತೃತ್ವದ ಸಮಿತಿ ಆರಂಭಿಸಿದೆ.

ಎ.ವಿ. ಚಂದ್ರಶೇಖರ್

ಈ ಅವಧಿಯಲ್ಲಿ ಮನೆ ಮತ್ತು ಕಟ್ಟಡಗಳು ನಿರ್ಮಾಣ ಮಾಡಿಕೊಂಡಿದ್ದರೆ ಇದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ವೆಬ್ ಪೋರ್ಟಲ್(jcc-skl.in) ಅಭಿವೃದ್ಧಿಪಡಿಸಲಾಗಿದೆ. ಮಾ.1ರಿಂದ ದಾಖಲೆಗಳನ್ನು ಸಾರ್ವಜನಿಕರು ಸಲ್ಲಿಸಬಹುದು ಎಂದು ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾರ್ವಜನಿಕರಿಗೆ ಅನುಕೂಲ ಆಗುವಂತೆ ಬಡಾವಣೆಗೆ ಗುರುತಿಸಿರುವ ವ್ಯಾಪ್ತಿಯಲ್ಲೇ ಐದು ಕಡೆ ಸಹಾಯ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಮೊದಲ ಹಂತದಲ್ಲಿ ಪ್ರಾಯೋಗಿಕವಾಗಿ ವಡೇರಹಳ್ಳಿ ಪಂಚಾಯಿತಿ ವ್ಯಾಪ್ತಿಯ ಮೋಡಿ ಅಗ್ರಹಾರದ ಸರ್ಕಾರಿ ಉರ್ದು ಶಾಲೆಯಲ್ಲಿ ಮಾ.1ರಿಂದ ಸಹಾಯ ಕೇಂದ್ರ ಆರಂಭವಾಗಲಿದೆ. ಉಳಿದ ನಾಲ್ಕು ಕಡೆಗಳಲ್ಲಿ ನಂತರ ದಿನಗಳಲ್ಲಿ ಕೇಂದ್ರಗಳನ್ನು ತೆರೆಯಲಾಗುವುದು ಎಂದು ಹೇಳಿದರು.

ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಗೆ 17 ಹಳ್ಳಿಗಳ 3,546 ಎಕರೆ ಭೂಮಿ ಸ್ವಾಧೀನಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) 2008ರ ಡಿಸೆಂಬರ್ 30ರಂದು ಮೊದಲ ಅಧಿಸೂಚನೆ ಪ್ರಕಟಿಸಿತ್ತು. ಈ ಅಧಿಸೂಚನೆಯನ್ನು 2014ರ ನ.26ರಂದು ಹೈಕೋರ್ಟ್ ರದ್ದುಪಡಿಸಿತ್ತು. ಸುಪ್ರೀಂ ಕೋರ್ಟ್‌ಗೆ ಬಿಡಿಎ ಮೇಲ್ಮನವಿ ಸಲ್ಲಿಸಿತ್ತು. ಹೈಕೋರ್ಟ್ ಆದೇಶವನ್ನು 2018ರ ಆಗಸ್ಟ್ 3ರಂದು ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು.

ಪ್ರಾರಂಭಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದ ದಿನಾಂಕದ ನಡುವಿನ 10 ವರ್ಷಗಳ ಅವಧಿಯಲ್ಲಿ ಎಷ್ಟು ಮನೆಗಳು ನಿರ್ಮಾಣ ಆಗಿವೆ ಎಂಬುದನ್ನು ಪರಿಶೀಲಿಸಿ ವರದಿ ನೀಡಲು ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಜೈಕರ್ ಜರೋಮ್, ನಿವೃತ್ತ ಡಿಜಿಪಿ ಎಸ್‌.ಟಿ. ರಮೇಶ್ ಅವರನ್ನು ಒಳಗೊಂಡ ಸಮಿತಿಯನ್ನು ಸುಪ್ರೀಂ ಕೋರ್ಟ್ 2020ರ ಡಿ.3ರಂದು ರಚನೆ ಮಾಡಿದೆ.

‘ಆರು ತಿಂಗಳ ಅವಧಿಯಲ್ಲಿ ವರದಿ ನೀಡಲು ಸುಪ್ರೀಂ ಕೋರ್ಟ್ ತಿಳಿಸಿದೆ. ಸಾಧ್ಯವಾಗದಿದ್ದರೆ ಮತ್ತಷ್ಟು ಕಾಲಾವಕಾಶ ಕೇಳಲಾಗುವುದು’ ಎಂದು ಚಂದ್ರಶೇಖರ್ ತಿಳಿಸಿದರು.

7 ಸಾವಿರ ಹೊಸ ಕಟ್ಟಡ

‘ಬಿಡಿಎ ನಡೆಸಿರುವ ಏರಿಯಲ್ ಸರ್ವೆ ಪ್ರಕಾರ 2008ಕ್ಕೂ ಮುನ್ನ 2,500 ಮನೆಗಳಿದ್ದವು. ಈಗ 7 ಸಾವಿರಕ್ಕೂ ಹೆಚ್ಚು ಕಟ್ಟಡಗಳಿವೆ’ ಎಂದು ಎ.ವಿ. ಚಂದ್ರಶೇಖರ್ ಹೇಳಿದರು.

ಅಂದಾಜು ಎಷ್ಟು ಮನೆಗಳಿವೆ ಎಂದಷ್ಟೇ ಉಪಗ್ರಹ ಆಧಾರಿತ ಸರ್ವೆಯಲ್ಲಿ ತಿಳಿಯಲಿದೆ. ಖಚಿತ ಅಂಕಿ–ಅಂಶ ಮತ್ತು ಸ್ಥಿತಿಗತಿ ತಿಳಿದುಕೊಳ್ಳುವ ನಿಟ್ಟಿನಲ್ಲಿ ದಾಖಲೆಗಳನ್ನು ಪಡೆದುಕೊಳ್ಳಲು ಸಮಿತಿ ಮುಂದಾಗಿದೆ ಎಂದರು.

‘ಎಲ್ಲರೂ ಖುದ್ದು ಕಚೇರಿಗೆ ಬಂದು ದಾಖಲೆ ಸಲ್ಲಿಸಲು ಆಗುವುದಿಲ್ಲ. ಆದ ಕಾರಣಕ್ಕೇ ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲಾಗಿದೆ. ಮನೆಯಲ್ಲೇ ಕುಳಿತು ದಾಖಲೆ ಸಲ್ಲಿಸಬಹುದು. ತಿಳಿಯದಿದ್ದರೆ ಸಹಾಯ ಕೇಂದ್ರಕ್ಕೆ ಬರಬಹುದು. ಈ ಕೇಂದ್ರಗಳಲ್ಲಿ ಕಂಪ್ಯೂಟರ್, ಸ್ಕ್ಯಾನರ್, ಪ್ರಿಂಟರ್ ಸೇರಿದಂತೆ ನುರಿತ ಸಿಬ್ಬಂದಿ ಇರಲಿದ್ದಾರೆ. ಸಿ.ಎಂ.ಆರ್. ಕಾನೂನು ಕಾಲೇಜಿನ 42 ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಈ ಕಾರ್ಯಕ್ಕೆ ನೆರವಾಗಲು ಮುಂದೆ ಬಂದಿದ್ದಾರೆ. ಇವರು ದಾಖಲೆಗಳನ್ನು ಪೋರ್ಟಲ್‌ಗೆ ಅಪ್‌ಲೋಡ್ ಮಾಡಲು ಜನರಿಗೆ ನೆರವಾಗಲಿದ್ದಾರೆ’ ಎಂದು ವಿವರಿಸಿದರು.

ಎಲ್ಲೆಲ್ಲಿ ಸಹಾಯ ಕೇಂದ್ರ

- ಸಮುದಾಯಭವನ, ಸೋಮಶೆಟ್ಟಿಹಳ್ಳಿ
- ಸರ್ಕಾರಿ ಶಾಲೆ, ಬ್ಯಾಲಕೆರೆ
- ಅಂಬೇಡ್ಕರ್ ಭವನ, ಸಿಂಗನಾಯಕನಹಳ್ಳಿ
- ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ, ಮೋಡಿ ಅಗ್ರಹಾರ
- ಬಿಡಿಎ ಕೇಂದ್ರ ಕಚೇರಿ, ಬೆಂಗಳೂರು

2018ರ ನಂತರ ಮನೆ ಕಟ್ಟಿದ್ದರೆ ಅಕ್ರಮ

‘2018ರ ನಂತರವೂ ಮನೆ ಕಟ್ಟಿದ್ದರೆ ಅದು ಅಕ್ರಮವಾಗಲಿದೆ. ಅದನ್ನು ಸ್ವತಃ ಸುಪ್ರೀಂ ಕೋರ್ಟ್ ಹೇಳಿದೆ’ ಎಂದು ಎ.ವಿ. ಚಂದ್ರಶೇಖರ್ ಹೇಳಿದರು.

‘ಈ ಅಕ್ರಮ ಕಟ್ಟಡಗಳಿಗೂ ನಮ್ಮ ಸಮಿತಿಗೂ ಸಂಬಂಧ ಇಲ್ಲ. 10 ವರ್ಷಗಳ ಅವಧಿಯಲ್ಲಿ ನಿರ್ಮಾಣ ಆಗಿರುವ ಕಟ್ಟಡಗಳ ಬಗ್ಗೆಯಷ್ಟೇ ನಾವು ಪರಿಶೀಲನೆ ನಡೆಸಿ ವರದಿ ಸಲ್ಲಿಸುತ್ತೇವೆ. 2018ರ ನಂತರ ಕಟ್ಟಡಗಳು ನಿರ್ಮಾಣ ಆಗಿದ್ದರೆ ಅವುಗಳ ವಿರುದ್ಧ ಕ್ರಮ ಕೈಗೊಳ್ಳುವುದು, ಬಿಡುವುದು ಬಿಡಿಎಗೆ ಬಿಟ್ಟ ವಿಚಾರ. ಈ ವಿಷಯದಲ್ಲಿ ನಾವು ಮಧ್ಯ ಪ್ರವೇಶ ಮಾಡುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

17 ವಿಧದ ದಾಖಲೆ ಕೇಳಿದ ಸಮಿತಿ

ಹಕ್ಕು ಹೊಂದಿರುವ ಬಗ್ಗೆ ದಾಖಲೆ, ಕಟ್ಟಡದ ಚಿತ್ರ, ತೆರಿಗೆ ಪಾವತಿಸಿರುವ ರಸೀದಿ, ಖಾತಾ ಪ್ರತಿ, ವಿಳಾಸ ಪುರಾವೆ(ಆಧಾರ್), ಋಣಭಾರ ರಹಿತ ಪ್ರಮಾಣ ಪತ್ರ, ಮಂಜೂರಾದ ನಕ್ಷೆ, ಕಟ್ಟಡ ಪ್ರಾರಂಭಕ್ಕೆ ಪಡೆದ ಪ್ರಮಾಣ ಪತ್ರ, ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ, ವಿದ್ಯುತ್ ಸಂಪರ್ಕ ಮಂಜೂರಾತಿ ಪ್ರಮಾಣ ಪತ್ರ ಸೇರಿ 17 ವಿವಿಧ ದಾಖಲೆಗಳನ್ನು ಸಮಿತಿ ಕೇಳಿದೆ.

‘ಸಾರ್ವಜನಿಕರಲ್ಲಿ ಎಷ್ಟು ಲಭ್ಯವಿದೆಯೋ ಅಷ್ಟನ್ನು ಸಲ್ಲಿಸಬೇಕು. ಅವುಗಳನ್ನು ಕ್ರೋಡೀಕರಿಸಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸುತ್ತೇವೆ. ಮುಂದಿನ ನಿರ್ಧಾರ ನ್ಯಾಯಾಲಯಕ್ಕೆ ಬಿಟ್ಟದ್ದು’ ಎಂದು ನ್ಯಾಯಮೂರ್ತಿ ಸ್ಪಷ್ಟಪಡಿಸಿದರು.

ಧರಣಿ ವೇಳೆ ಶಾಸಕ ಪಿ.ಟಿ. ಪರಮೇಶ್ವರ್ ನಾಯ್ಕ್ ಮಾತನಾಡಿದರು. ಬಸವ ಜಯಮೃತ್ಯುಂಜಯ ಸ್ವಾಮೀಜಿ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಇದ್ದರು – ಪ್ರಜಾವಾಣಿ ಚಿತ್ರ

ಪಂಚಮಸಾಲಿ ಮೀಸಲಾತಿ: ಧರಣಿ ಮುಂದುವರಿಕೆ

ಬೆಂಗಳೂರು: ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿ ಪಂಚಮಸಾಲಿ ಕೂಡಲ ಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆಯುತ್ತಿರುವ ಧರಣಿ ಶುಕ್ರವಾರವೂ ಮುಂದುವರಿಯಿತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೆಳಿಗ್ಗೆ 9ಕ್ಕೆ ಪ್ರಾರಂಭವಾದ ಧರಣಿ ಸಂಜೆ 6ರವರೆಗೆ ನಡೆಯಿತು. ‘ಪ್ರವರ್ಗ 2ಎ ಮೀಸಲಾತಿ ಸಿಗುವವರೆಗೂ ಧರಣಿ ನಿಲ್ಲುವುದಿಲ್ಲ. ಮಾ.4ರವರೆಗೆ ಮುಂದುವರಿಯುತ್ತದೆ’ ಎಂದು ಸ್ವಾಮೀಜಿ ಹೇಳಿದರು.

ಬೆಳಿಗ್ಗೆ ಬಸವಣ್ಣನವರು ಹಾಗೂ ಅಕ್ಕಮಹಾದೇವಿ ವಚನಗಳನ್ನು ಹೇಳುವ ಮೂಲಕ ಧರಣಿ ಆರಂಭಿಸಲಾಯಿತು. ಪಂಚಮಸಾಲಿ ಸಮುದಾಯದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಮುಖಂಡರು, ಬೇಡಿಕೆಗೆ ಸ್ಪಂದಿಸದ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರಾಷ್ಟ್ರಗೀತೆ ಹಾಡಿ ದಿನದ ಧರಣಿ ಮುಕ್ತಾಯಗೊಳಿಸಲಾಯಿತು.

ಹಾವೇರಿ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಪಂಚಮಸಾಲಿ ಮುಖಂಡರು ಶುಕ್ರವಾರ ಧರಣಿಯಲ್ಲಿ ಪಾಲ್ಗೊಂಡಿದ್ದರು. ನಿತ್ಯವೂ ಒಂದೊಂದು ಜಿಲ್ಲೆಯ ಮುಖಂಡರು, ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಬೆಳಗಾವಿಯ ಸದಸ್ಯರು ಶನಿವಾರ ಧರಣಿ ನಡೆಸಲಿದ್ದಾರೆ. ಶಾಸಕ ಪಿ.ಟಿ. ಪರಮೇಶ್ವರ್ ನಾಯ್ಕ್ ಹಾಗೂ ಮಾಜಿ ಶಾಸಕ ಕೆ.ಬಿ. ಕೋಳಿವಾಡ ಸೇರಿದಂತೆ ಹಲವು ಮುಖಂಡರು ಧರಣಿ ಸ್ಥಳಕ್ಕೆ ಭೇಟಿ ನೀಡಿದರು.

ನ್ಯಾಯಮೂರ್ತಿ ಎಂ.ರಾಮಾ ಜೋಯಿಸ್‌ಗೆ ನುಡಿನಮನ

‘ಸರಳ ಸಜ್ಜನಿಕೆಯ ಮೂರ್ತಿಯಂತಿದ್ದರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಮಾ ಜೋಯಿಸ್ ಅವರು ಸರಳ ಸಜ್ಜನಿಕೆಯ ಮೂರ್ತಿಯಂತಿದ್ದರು. ಕಾನೂನು ತಜ್ಞರಾಗಿದ್ದ ಅವರು ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದರು. ಜ್ವಲಂತ ಸಮಸ್ಯೆಗಳು ಎದುರಾದಾಗಲೆಲ್ಲಾ ಅವರ ಮನೆಗೆ ಹೋಗಿ ಚರ್ಚಿಸುತ್ತಿದ್ದೆ. ಆಗ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು’ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಅಧಿವಕ್ತಾ ಪರಿಷತ್ ಕರ್ನಾಟಕ ಹಾಗೂ ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ನ್ಯಾಯಮೂರ್ತಿ ಎಂ.ರಾಮಾ ಜೋಯಿಸ್ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದರು.

ಬಿಜೆಪಿಯ ಹಿರಿಯ ಮುಖಂಡ ಎಸ್.ಎಂ.ಕೃಷ್ಣ ‘ರಾಮಾ ಜೋಯಿಸ್ ಅವರು ದೇಶ ಕಂಡ ಅಪರೂಪದ ವ್ಯಕ್ತಿ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕುರಿತು ಅಗಾಧ ವಿಚಾರಧಾರೆ ಹೊಂದಿದ್ದರು. ಯಾರ ಮುಲಾಜಿಗೂ ಬಗ್ಗದೆ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದರು’ ಎಂದು ನುಡಿದರು.

ದಿ.ರಾಮಾ ಜೋಯಿಸ್ ಭಾವಚಿತ್ರಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುಷ್ಪ ನಮನ ಸಲ್ಲಿಸಿದರು. (ಎಡದಿಂದ) ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಲ್. ಮಂಜುನಾಥ್ ಮತ್ತು ಬಿಜೆಪಿ ಮುಖಂಡ ಎಸ್.ಎಂ.ಕೃಷ್ಣ ಇದ್ದರು

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ.ಎಲ್.ಮಂಜುನಾಥ್, ‘ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ ಹಾಗೂ ಮಾಧ್ಯಮ ಈ ನಾಲ್ಕು ಅಂಗಗಳಲ್ಲೂ ಛಾಪು ಮೂಡಿಸಿದ ಏಕೈಕ ವ್ಯಕ್ತಿ ರಾಮಾ ಜೋಯಿಸ್. ಅವರು ಯುವ ವಕೀಲರ ಪಾಲಿನ ಆಶಾಕಿರಣವಾಗಿದ್ದರು. ಸದಾ ಹೊಸಬರ ಬೆನ್ನಿಗೆ ನಿಲ್ಲುತ್ತಿದ್ದರು. ಅವರಿಗೆ ಹಿಂದೂಗಳ ಬಗ್ಗೆ ವಿಶೇಷ ಒಲವು ಇತ್ತು’ ಎಂದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕ್ಷೇತ್ರೀಯ ಸಂಘ ಚಾಲಕ (ದಕ್ಷಿಣ ಮಧ್ಯ ಕ್ಷೇತ್ರ) ವಿ. ನಾಗರಾಜ್ ‘ಸಂಘವು ಹೇಳಿದ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡು ಆದರ್ಶ ಸ್ವಯಂ ಸೇವಕರಾಗಿ ಬದುಕಿದವರು ರಾಮಾ ಜೋಯಿಸ್’ ಎಂದರು.

9 ಟೆಂಡರ್ ಶ್ಯೂರ್ ರಸ್ತೆ ಶೀಘ್ರ ಸಂಚಾರಕ್ಕೆ ಮುಕ್ತ

ಸ್ಮಾರ್ಟ್ ಸಿಟಿ ರಸ್ತೆ ಕಾಮಗಾರಿ, ಪ್ರಗತಿ ಪರಿಶೀಲಿಸಿದ ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ 36 ರಸ್ತೆಗಳನ್ನು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಇವುಗಳ ಪೈಕಿ ಶೀಘ್ರವೇ ಇನ್ನೂ 9 ರಸ್ತೆಗಳು ಸಂಚಾರಕ್ಕೆ ಮುಕ್ತಗೊಳ್ಳಲಿವೆ’ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಗೌರವ್ ಗುಪ್ತ ಹೇಳಿದರು.

ಸ್ಮಾರ್ಟ್‌ಸಿಟಿ ಯೋಜನೆಯಡಿ ನಿರ್ಮಾಣವಾಗುತ್ತಿರುವ ರಸ್ತೆಗಳ ಕಾಮಗಾರಿಯನ್ನು ಶುಕ್ರವಾರ ಪರಿಶೀಲಿಸಿದ ಅವರು, ‘ಈಗಾಗಲೇ ಮುಖ್ಯಮಂತ್ರಿಯವರು ಇಂತಹ ಐದು ರಸ್ತೆಗಳನ್ನು ಲೋಕಾರ್ಪಣೆಗೊಳಿಸಿದ್ದಾರೆ’ ಎಂದರು.

ರಾಜಭವನ ರಸ್ತೆ, ನೆಹರು ತಾರಾಲಯ ರಸ್ತೆ, ಕಂಟೋನ್ ಮೆಂಟ್ ರಸ್ತೆ, ಕ್ವೀನ್ಸ್ ರಸ್ತೆ, ಕಸ್ತೂರ್ ಬಾ ರಸ್ತೆ ಹಾಗೂ ರಾಜಾರಾಮ್ ಮೋಹನ್ ರಾಯ್ ರಸ್ತೆಗಳಿಗೆ ಭೇಟಿ ನೀಡಿ ಪ್ರಗತಿ ಕಾಮಗಾರಿಗಳ ಪರಿಶೀಲನೆ ನಡೆಸಿದರು. ಬಾಕಿಯಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಾಣವಾಗುತ್ತಿರುವ ಟೆಂಡರ್ ಶ್ಯೂರ್ ರಸ್ತೆಗಳ ಕಾಮಗಾರಿಯನ್ನು ಗೌರವ್ ಗುಪ್ತಾ ಪರಿಶೀಲಿಸಿದರು. ಅಧಿಕಾರಿಗಳು ಇದ್ದಾರೆ

ಕೆಳಸೇತುವೆ ತೆರವಿಗೆ ಸೂಚನೆ: ರಾಜಭವನ ರಸ್ತೆ ಮಾರ್ಗದಲ್ಲಿ ಪಾದಚಾರಿ ಕೆಳಸೇತುವೆಯನ್ನು ಪರಿಶೀಲಿಸಿದ ಗೌರವ್ ಗುಪ್ತ, ’ಇದನ್ನು ಯಾರೂ ಬಳಕೆ ಮಾಡುತ್ತಿಲ್ಲ. ಅದನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು‘ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾದಚಾರಿ ಮಾರ್ಗದಲ್ಲಿ ಮರಗಳಲ್ಲಿ ತೂಗಾಡುತ್ತಿರುವ ಒಎಫ್‌ಸಿ ಕೇಬಲ್‌ಗಳನ್ನು ಕಂಡು ಅನಧಿಕೃತವಾಗಿ ಅಳವಡಿಸಿರುವ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಲು ಸೂಚನೆ ನೀಡಿದರು.

ಏಕಮಾದರಿ ವಿನ್ಯಾಸವಿರಲಿ: ಪಾದಚಾರಿ ಮಾರ್ಗದಲ್ಲಿ ಮರಗಳ ಸುತ್ತಲೂ ಕಟ್ಟೆಗಳನ್ನು ನಿರ್ಮಿಸಿರುವುದರಿಂದ ಪಾದಚಾರಿ ಮಾರ್ಗದ ಮಟ್ಟವು ಏರುಪೇರಾಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತದೆ. ಇತರೆ ಟೆಂಡರ್ ಶ್ಯೂರ್ ರಸ್ತೆಗಳಲ್ಲಿ ಪಾದಚಾರಿ ಮಾರ್ಗದ ಮಟ್ಟ ಮತ್ತು ಮರಗಳ ಸುತ್ತಲಿನ ಮಣ್ಣಿನ ಹೊದಿಕೆಯ ಮಟ್ಟ ಏಕರೂಪದಲ್ಲಿರುವಂತೆ ಸ್ಮಾರ್ಟ್ ಸಿಟಿ ರಸ್ತೆಗಳಲ್ಲೂ ಇದೇ ಮಾದರಿಯನ್ನು ಅಳವಡಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್, ಮುಖ್ಯ ಎಂಜಿನಿಯರ್ ರಂಗನಾಥ್ ನಾಯ್ಕ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯುತ್ ತಂತಿ ನೆಲದಡಿಯಿರಲಿ

ಕಂಟೋನ್ಮೆಂಟ್ ರಸ್ತೆ ಹಾಗೂ ಕ್ವೀನ್ಸ್ ರಸ್ತೆ ತಪಾಸಣೆ ನಡೆಸಿದ ಆಡಳಿತಾಧಿಕಾರಿ, ಪಾದಚಾರಿ ಮಾರ್ಗದಲ್ಲಿ ಆರ್.ಸಿ.ಸಿ ವಿದ್ಯುತ್ ಕಂಬಗಳಿರುವುದನ್ನು ಗಮನಿಸಿದರು. ತಕ್ಷಣ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಕರೆ ಮಾಡಿ, ’ಪಾದಚಾರಿ ಮಾರ್ಗಗಳಲ್ಲಿರುವ ಆರ್.ಸಿ.ಸಿ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಸ್ಮಾರ್ಟ್ ಸಿಟಿ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ನಡೆಸಿ ವಿದ್ಯುತ್ ತಂತಿಗಳನ್ನು ನೆಲದಡಿ ಅಳವಡಿಸಲು ಕ್ರಮ ವಹಿಸಬೇಕು‘ ಎಂದು ತಿಳಿಸಿದರು. ಕಾಮಗಾರಿ ಮುಗಿದಿರುವ ಕಡೆ ಕೂಡಲೇ ಡಾಂಬರೀಕರಣ ಮಾಡುವಂತೆಯೂ ತಿಳಿಸಿದರು.

ಚಿತ್ರಕಲಾ ಪರಿಷತ್ತಿನಲ್ಲಿ ‘ನೇಟಿವ್ ಬಜಾರ್’

ಬೆಂಗಳೂರು: 90ಕ್ಕೂ ಹೆಚ್ಚು ಕರಕುಶಲ ಗುಂಪುಗಳು, ಜವಳಿ ವಿನ್ಯಾಸಕರು, ನೇಕಾರರು ಹಾಗೂ ಸ್ವಸಹಾಯ ಸಂಘಗಳು ಜತೆಗೂಡಿ ‘ನೇಟಿವ್ ಬಜಾರ್’ ಶೀರ್ಷಿಕೆಯಡಿ ಸ್ಥಳೀಯ, ಬುಡಕಟ್ಟು ಕರಕುಶಲ ವಸ್ತುಗಳು, ವರ್ಣಚಿತ್ರಗಳು ಹಾಗೂ ಕರಕುಶಲ ಜವಳಿ ಪ್ರದರ್ಶನವನ್ನು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿವೆ.

ಒಂದು ವಾರದಿಂದ ಆರಂಭಗೊಂಡಿರುವ ಪ್ರದರ್ಶನವು ಫೆ. 28ರವರೆಗೆ ನಡೆಯಲಿದೆ. ಪ್ರದರ್ಶನದ ಸಮಯ ಬೆಳಿಗ್ಗೆ 11ರಿಂದ ಸಂಜೆ 7.30.

‘ಪ್ರದರ್ಶನದಲ್ಲಿ 18 ರಾಜ್ಯಗಳ ವಿವಿಧ ಸಂಸ್ಥೆಗಳು ಭಾಗವಹಿಸಿದ್ದು, ಆಯಾ ರಾಜ್ಯಗಳ ವಸ್ತ್ರವಿನ್ಯಾಸ ಹಾಗೂ ಕರಕುಶಲ ವಸ್ತುಗಳು ಮತ್ತು ಅಲ್ಲಿನ ಸಂಸ್ಕೃತಿಗಳು ಅನಾವರಣಗೊಂಡಿವೆ’.

‘ಕರಕುಶಲ ವಸ್ತುಗಳಿಗೆ ಉತ್ತೇಜನ ಹಾಗೂ ನೇಕಾರರು, ಕುಶಲಕರ್ಮಿಗಳಿಂದ ಗ್ರಾಹಕರು ನೇರವಾಗಿ ಉತ್ಪನ್ನಗಳನ್ನು ಖರೀದಿಸುವು ವ್ಯವಸ್ಥೆಯೂ ಇದೆ. ಕರಕುಶಲ ವಸ್ತುಗಳಿಗೆ ನಗರ ಮಾರುಕಟ್ಟೆ ಒದಗಿಸುವುದು ಇದರ ಉದ್ದೇಶ’ ಎಂದು ಪ್ರಕಟಣೆ ತಿಳಿಸಿದೆ.

ಸಚಿವ ಯೋಗೇಶ್ವರ್ ವಿರುದ್ಧ ಏಕವಚನದಲ್ಲಿ ಕುಮಾರಸ್ವಾಮಿ ವಾಗ್ದಾಳಿ

‘ಬಿಜೆಪಿಗೆ ಲೈಫ್ ಕೊಟ್ಟಿದ್ದೇ ನಾನು’

ಪ್ರಜಾವಾಣಿ ವಾರ್ತೆ

ರಾಮನಗರ: ‘ಕರ್ನಾಟಕದಲ್ಲಿ ಬಿಜೆಪಿಗೆ ಲೈಫ್ ಕೊಟ್ಟಿದ್ದು ನಾನೇ. ಅವರಿಂದ ನನ್ನನ್ನು ಏನೂ ಮಾಡಲು ಆಗುವುದಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಚನ್ನಪಟ್ಟಣದಲ್ಲಿ ಶುಕ್ರವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಯಡಿಯೂರಪ್ಪ ಮುಖ್ಯಮಂತ್ರಿಯಾದರೆ ಕೇವಲ ಆರು ತಿಂಗಳು ಅಧಿಕಾರದಲ್ಲಿ ಇರುತ್ತಾರೆ. ನಂತರ ನಾನೇ ಮುಖ್ಯಮಂತ್ರಿ ಆಗಬಹುದು ಎನ್ನುವ ದುರಾಸೆಯಿಂದ ಸಿದ್ದರಾಮಯ್ಯನವರೇ ಸಮ್ಮಿಶ್ರ ಸರ್ಕಾರ ಕೆಡವಿದರು. ಅದರ ಪ್ರತಿಫಲವನ್ನು ಇಂದು ಅವರೇ ಅನುಭವಿಸುತ್ತಿದ್ದಾರೆ’ ಎಂದರು.

‘ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಮುಖ್ಯಮಂತ್ರಿ ಆಗುವ ಕನಸು ಕಂಡಿದ್ದರು. ಆದರೆ, ಸಿದ್ದರಾಮಯ್ಯ ನಾನೇ ಮುಖ್ಯಮಂತ್ರಿ ಎಂದು ಹೆಗಲ ಮೇಲೆ ಬೋರ್ಡು ತಗುಲಿ ಹಾಕಿಕೊಂಡು ಓಡಾಡುತ್ತಿದ್ದಾರೆ’ ಎಂದು ಟೀಕಿಸಿದರು.

‘ರಾಮನಗರ ಜಿಲ್ಲೆಯಿಂದ ನನ್ನನ್ನು ಖಾಲಿ ಮಾಡಿಸಲು ಎಲ್ಲ ಒಟ್ಟಾಗಿ ನಿಂತಿದ್ದಾರೆ. ಆದರೆ ದೇವೇಗೌಡರ ಕುಟುಂಬದವರ ಕೊಡುಗೆ ಏನೆಂಬುದು ಜಿಲ್ಲೆಯ ಜನರಿಗೆ ಗೊತ್ತಿದೆ. ನಾನು ಬಂಡೆ ಒಡೆದಿಲ್ಲ. ಜನರ ಹಣ ಲೂಟಿ ಮಾಡಿಲ್ಲ. ನಾನು ಈ ಮಣ್ಣಿನ ಮಗ. ನನ್ನ ಅಂತಿಮ ಕಾಲ ರಾಮನಗರದಲ್ಲಿಯೇ’ ಎಂದು ಹೇಳಿದರು.

‘ಆತ ಜನರ ತಲೆ ಹೊಡೆದ ಹಣದಲ್ಲಿ ಮಂತ್ರಿ ಆಗಿದ್ದಾನೆ. ಮೆಗಾಸಿಟಿ ಹೆಸರಲ್ಲಿ ಸೈಟು ಕೊಡುತ್ತೇನೆ ಎಂದು ಹೇಳಿ ಜನರ ಹಣ ಲೂಟಿ ಮಾಡಿದ್ದಾನೆ’ ಎಂದು ಸಚಿವ ಸಿ.ಪಿ. ಯೋಗೇಶ್ವರ್ ವಿರುದ್ಧ ವಾಗ್ದಾಳಿ ನಡೆಸಿದರು.

‘ಯಡಿಯೂರಪ್ಪ ಮತ್ತು ಆರ್‌ಎಸ್‌ಎಸ್ ನಾಯಕರನ್ನು ಮೆಚ್ಚಿಸಲು ನನ್ನನ್ನು ಬಯ್ದುಕೊಂಡು ಹೊಟ್ಟೆಪಾಡು ಮಾಡ್ತಿದ್ದಾನೆ. ಚನ್ನಪಟ್ಟಣದಲ್ಲಿ ನನ್ನನ್ನು ಏನೂ ಮಾಡಲು ಆಗಲ್ಲ ಎನ್ನುವುದು ಆತನಿಗೆ ಚೆನ್ನಾಗಿ ಗೊತ್ತಿದೆ’ ಎಂದರು.

‘ದೇವೇಗೌಡರು ಇಗ್ಗಲೂರು ಜಲಾಶಯ ಕಟ್ಟಿಸಿದಾಗ ಈತ ಹುಟ್ಟಿದ್ದನೋ ಇಲ್ಲವೋ ಗೊತ್ತಿಲ್ಲ. ಆದರೆ ಅದೇ ಜಲಾಶಯದಿಂದ ನೀರು ತುಂಬಿಸಿ ಆಧುನಿಕ ಭಗೀರಥ ಎಂದು ಬೋರ್ಡು ಹಾಕಿಸಿಕೊಂಡಿದ್ದಾನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನನ್ನ ಮುಂದೆ ಯೋಗೇಶ್ವರ್ ಬಚ್ಚಾ’



ಕುಮಾರಸ್ವಾಮಿ

‘ನನ್ನ ಮುಂದೆ ನೀನಿನ್ನೂ ಬಚ್ಚಾ ಇದ್ದೀಯಾ. ನಿನಗಿಂತಲೂ ಚೆನ್ನಾಗಿ ಮಾತನಾಡಲು ನನಗೂ ಬರುತ್ತದೆ. ಸಚಿವ ಆಗಿದ್ದೀಯಾ. ಸುಮ್ಮನೆ ಕೆಲಸ ಮಾಡಿಕೊಂಡು ಹೋಗು. ನನ್ನ ವಿರುದ್ಧ ಮಾತನಾಡಿ ಲೀಡರ್ ಆಗುವ ಪ್ರಯತ್ನ ಮಾಡಬೇಡ’ ಎಂದು ಕುಮಾರಸ್ವಾಮಿ ಅವರು ಯೋಗೇಶ್ವರ್ ವಿರುದ್ಧ ಕಿಡಿಕಾರಿದರು.

‘ನೀನು ಕಲಾವಿದರ ಕೋಟಾದಲ್ಲಿ ಆಯ್ಕೆ ಆಗಿದ್ದೀಯಾ. ರಾಜ್ಯದಲ್ಲಿ ಸಾಕಷ್ಟು ಕಲಾವಿದರು ಸಂಕಷ್ಟದಲ್ಲಿ ಇದ್ದಾರೆ. ಮೊದಲು ಅವರ ಕಷ್ಟ ನೋಡಿಕೊ. ಚನ್ನಪಟ್ಟಣ ನೋಡಿಕೊಳ್ಳಲು ನಾನಿದ್ದೇನೆ’ ಎಂದು ಎಚ್ಚರಿಸಿದರು.

‘ಎಚ್‌ಡಿಕೆ ಹೇಳಿಕೆ ಹಾಸ್ಯಾಸ್ಪದ’

ಪ್ರಜಾವಾಣಿ ವಾರ್ತೆ

ಗೋವಿಂದ ಕಾರಜೋಳ

ಚಿಕ್ಕಮಗಳೂರು: ‘ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ಹಾಸ್ಯಾಸ್ಪದ. 23 ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದೆ. ಇದಕ್ಕೆಲ್ಲ ಕುಮಾರಸ್ವಾಮಿ ಕಾರಣವೇ’ ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಪ್ರಶ್ನಿಸಿದರು.

2006ರಲ್ಲಿ ಬಿಜೆಪಿಗೆ ‘ಲೈಫ್’ ಕೊಟ್ಟಿದ್ದಾಗಿ ಕುಮಾರಸ್ವಾಮಿ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಪ್ರಧಾನಿ ಮೋದಿ ನಾಯಕತ್ವದಲ್ಲಿ ದೇಶದಲ್ಲಿ ಬಿಜೆಪಿ ಮುಂಚೂಣಿಯಲ್ಲಿದೆ. ದೇಶ ಕಾಂಗ್ರೆಸ್ ಮುಕ್ತವಾಗಲಿದೆ ಎಂದು 2009ರಲ್ಲಿ ಮೋದಿ ಹೇಳಿದ್ದರು. ಪಂಜಾಬ್, ಅಲ್ಲಿ ಇಲ್ಲಿ ಸ್ವಲ್ಪ ಬಿಟ್ಟರೆ ಈಗ ಕಾಂಗ್ರೆಸ್ ಎಲ್ಲಿದೆ’ ಎಂದು ಕೇಳಿದರು.

‘ಕಾಂಗ್ರೆಸ್ ಒಡೆದ ಮನೆ. ಆ ಪಕ್ಷದಲ್ಲಿ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್ ಗುಂಪುಗಳಿವೆ. ಈ ಮೂರು ಗಂಪುಗಳ ನಡುವೆ 24 ಗಂಟೆಯೂ ಗುದ್ದಾಟ ಇದ್ದೇ ಇರುತ್ತದೆ. ಅದರಿಂದಾಗಿಯೇ ಕಾಂಗ್ರೆಸ್ ನೆಲಕಚ್ಚಿದೆ’ ಎಂದರು.

ಕುಮಾರಸ್ವಾಮಿ ಪಕ್ಷ ಜೋಕರ್ ಇದ್ದ ಹಾಗೆ: ಯೋಗೇಶ್ವರ್ ಲೇವಡಿ

ಸಿ.ಪಿ.ಯೋಗೇಶ್ವರ್

ಮಂಗಳೂರು: ‘ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಪಕ್ಷ ಜೋಕರ್ ಇದ್ದ ಹಾಗೆ. ಯಾರ ಜತೆ ಬೇಕಾದರೂ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ’ ಎಂದು ಸಚಿವ ಸಿ.ಪಿ.ಯೋಗೇಶ್ವರ್ ಲೇವಡಿ ಮಾಡಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕುಮಾರಸ್ವಾಮಿಯವರಿಗೆ ರಾಜಕೀಯ ನೈತಿಕತೆ, ಸಿದ್ಧಾಂತ ಏನೂ ಇಲ್ಲ. ಎಲ್ಲಿ ಅವಕಾಶ ಸಿಗುತ್ತದೆ ಅಲ್ಲಿ ಹೋಗುತ್ತಾರೆ. ಅವರದ್ದು ಅವಕಾಶವಾದಿ ರಾಜಕಾರಣ’ ಎಂದರು.

‘ಅವರು ಮುಖ್ಯಮಂತ್ರಿ ಆಗಿದ್ದಾಗ ಉದಾಸೀನದಿಂದ ಕಾಲ ಕಳೆದರು. ಈಗ ಆತಂಕ ಕಾಡುತ್ತಿದೆ. ಅದಕ್ಕಾಗಿ ಕ್ಷೇತ್ರದ ಭೇಟಿ ಮಾಡಿ ಗೋಳಾಡುತ್ತಿದ್ದಾರೆ. ಅಧಿಕಾರ ಇಲ್ಲದಾಗ ಜನರ ಬಳಿಗೆ ಹೋಗುವುದು ಅವರ ಗುಣ’ ಎಂದ ಅವರು, ‘ಮುಂದಿನ ಚುನಾವಣೆಯಲ್ಲಿ ಹಳೆ ಮೈಸೂರು ಭಾಗದಲ್ಲಿ ಬಿಜೆಪಿಯ ಬಹುಪಾಲು ಶಾಸಕರು ಆಯ್ಕೆಯಾಗಲಿದ್ದಾರೆ. ಜೆಡಿಎಸ್ ನೆಲಕಚ್ಚಲಿದೆ ಎಂಬ ಆತಂಕ ಕುಮಾರಸ್ವಾಮಿ ಅವರಿಗಿದೆ’ ಎಂದು ಹೇಳಿದರು.

ಕಾರಿನ ಟೈರ್ ಬದಲಾಯಿಸಿದ ರೋಹಿಣಿ ಸಿಂಧೂರಿ

ಮೈಸೂರು: ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಸ್ವತಃ ತಮ್ಮ ಕಾರಿನ ಟೈರ್ ಬದಲಾಯಿಸಿದ ವಿಡಿಯೊ, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಜಿಲ್ಲಾಧಿಕಾರಿ ಪ್ರಯಾಣಿಸುತ್ತಿದ್ದ ಎಸ್‌ಯುವಿಯ ಹಿಂಭಾಗದ ಟೈರ್ ಪಂಕ್ಚರ್ ಆಗಿದ್ದು, ಅದನ್ನು ಬದಲಾಯಿಸಲು ತಾವೇ ಜಾಕ್ ಹಾಕುತ್ತಿರುವ ದೃಶ್ಯ ವಿಡಿಯೊದಲ್ಲಿದೆ. ಸಾರ್ವಜನಿಕರೊಬ್ಬರು ಅವರನ್ನು ಗುರುತಿಸಿದ್ದು, ‘ಮೇಡಂ, ನೀವು ರೋಹಿಣಿ ಸಿಂಧೂರಿ ತಾನೇ, ನೀವು ಪಂಕ್ಚರ್ ಹಾಕ್ತಾ ಇದೀರಾ ಮೇಡಂ’ ಎಂದು ಕೇಳಿದ್ದಾರೆ.

ಈ ವೇಳೆ ರೋಹಿಣಿ ಅವರು ಯಾವುದೇ ಪ್ರತಿಕ್ರಿಯೆ ನೀಡದೆ, ನಗು ಬೀರುತ್ತಾ ತಮ್ಮ ಕೆಲಸ ಮುಂದುವರಿಸಿರುವುದು ವಿಡಿಯೊದಲ್ಲಿದೆ.

ಕಳೆದ ವಾರ ಕುಟುಂಬ ಸದಸ್ಯರ ಜತೆ ತೆರಳಿದ್ದ ವೇಳೆ ಈ ಘಟನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ತಪ್ಪು ಮಾಡಿಲ್ಲ– ನೋಟಿಸ್ ನೀಡಿದರೆ ಉತ್ತರಿಸುವೆ: ಶಾಸಕ ತನ್ವೀರ್ ಸೇಠ್

ಪ್ರಜಾವಾಣಿ ವಾರ್ತೆ

ಮೈಸೂರು: ‘ಮೈಸೂರು ಮೇಯರ್ ಚುನಾವಣೆಯ ಮೈತ್ರಿ ವಿಚಾರದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ. ಪಕ್ಷ ನೋಟಿಸ್ ನೀಡಿದರೆ ಅದಕ್ಕೆ ಸೂಕ್ತ ಉತ್ತರ ಕೊಡಲು ಸಿದ್ಧ’ ಎಂದು ಶಾಸಕ ತನ್ವೀರ್ ಸೇಠ್ ಶುಕ್ರವಾರ ಇಲ್ಲಿ ಹೇಳಿದರು.

ತನ್ವೀರ್ ಸೇಠ್

‘ಪಾಲಿಕೆ ಚುನಾವಣೆಗೆ ಸಂಬಂಧಿಸಿದಂತೆ ಎಲ್ಲವನ್ನೂ ಕೆಪಿಸಿಸಿ ಅಧ್ಯಕ್ಷರ ಗಮನಕ್ಕೆ ತಂದಿದ್ದು, ಅವರ ಸೂಚನೆಯಂತೆ ಕೆಲಸ ಮಾಡಿದ್ದೇನೆ. ಇದರಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲ. ಪಕ್ಷದ ಹಿತ ಕಾಯುವ ನಿಟ್ಟಿನಲ್ಲಿ ನಾನು ನಿರ್ಧಾರ ಮಾಡಿದ್ದೇನೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಈ ಸಲ ಮೇಯರ್ ಪಟ್ಟ ನಮಗೆ ಸಿಗಬೇಕು ಎಂದು ಪಕ್ಷದ ವರಿಷ್ಠರು ಸೂಚನೆ ಕೊಟ್ಟಿದ್ದರು. ಆದರೆ ಕೊನೆಯ ಕ್ಷಣದಲ್ಲಿ ಕೆಲವು ಬದಲಾವಣೆ ಮಾಡುವುದು ಅನಿವಾರ್ಯವಾಗಿದ್ದರಿಂದ ಬಿಟ್ಟುಕೊಟ್ಟೆವು. ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವುದು ನಮ್ಮ ಉದ್ದೇಶವಾಗಿತ್ತು’ ಎಂದು ಹೇಳಿದರು.

ಮೈಸೂರು ಭಾಗದಲ್ಲಿ ಸಿದ್ದರಾಮಯ್ಯ ಅವರ ಶಕ್ತಿಗುಂದಿಸುವ ಹುನ್ನಾರ ನಡೆದಿದೆಯೇ ಎಂಬ ಪ್ರಶ್ನೆಗೆ, ‘ಯಾರ ಶಕ್ತಿಯನ್ನು ಯಾರೂ ಕುಗ್ಗಿಸಲು ಸಾಧ್ಯವಿಲ್ಲ. ಈ ಕುರಿತು ಸಿದ್ದರಾಮಯ್ಯ ಜೊತೆ ಮಾತನಾಡುತ್ತೇನೆ’ ಎಂದು ಉತ್ತರಿಸಿದರು.

ಬೆಂಬಲಿಗರ ಆಕ್ರೋಶ: ತನ್ವೀರ್ ಸೇಠ್ ಅವರಿಗೆ ಕೆಪಿಸಿಸಿ ನೋಟಿಸ್ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಅವರ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದರು. ಶುಕ್ರವಾರ ಬೆಳಿಗ್ಗೆ ಶಾಸಕರ ಮನೆ ಬಳಿ ನೆರೆದ ಬೆಂಬಲಿಗರು, ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು.

ತಂದಿಡುವ ಕೆಲಸ– ಲಕ್ಷ್ಮಣ್ ಕಿಡಿ: ‘ಮೇಯರ್ ಚುನಾವಣೆ ನಡೆದ ಬಳಿಕವೂ ಎಚ್‌.ಡಿ.ಕುಮಾರಸ್ವಾಮಿ ಅವರು, ಸಿದ್ದರಾಮಯ್ಯ ವಿರುದ್ಧ ಲಘುವಾಗಿ ಮಾತನಾಡುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನಡುವೆ ತಂದಿಡುವ ಕೆಲಸ ಮಾಡುತ್ತಿದ್ದಾರೆ’ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

‘ಜೆಡಿಎಸ್ ಮುಖಂಡರ ತಂತ್ರಗಾರಿಕೆಯಿಂದಾಗಿ ಆ ಪಕ್ಷದ ಅಭ್ಯರ್ಥಿಯನ್ನೇ ಮೇಯರ್ ಮಾಡಲಾಗಿದೆ. ಇಷ್ಟಾದರೂ, ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಮುಖಂಡರಿಂದಲೇ ಹಿನ್ನಡೆಯಾಗುವಂತೆ ಮಾಡಿ, ಅವರಿಗೆ ಪಾಠ ಕಲಿಸಿದ್ದೇವೆಂದು ಹೇಳುತ್ತ ಎಚ್‌.ಡಿ. ಕುಮಾರಸ್ವಾಮಿ ತೊಡೆ ತಟ್ಟುತ್ತಿದ್ದಾರೆ’ ಎಂದು ಕಿಡಿಕಾರಿದರು.

ತನ್ವೀರ್ ಸೇಠ್ ವಿರುದ್ಧ ಕ್ರಮಕ್ಕೆ ಒತ್ತಾಯ

‘ಪಕ್ಷದ ನಾಯಕರಿಗೆ ವಿರುದ್ಧವಾಗಿ ತೀರ್ಮಾನ ತೆಗೆದುಕೊಂಡ ತನ್ವೀರ್ ಸೇಠ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು’ ಎಂದು ಪಾಲಿಕೆಯ ಕಾಂಗ್ರೆಸ್ ನಾಯಕ ಅಯೂಬ್ ಖಾನ್ ಮತ್ತು ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಆಗ್ರಹಿಸಿದರು.

‘ತನ್ವೀರ್ ಅವರ ಮನೆ ಮುಂದೆ ಕೆಲವರು ಸಿದ್ಧರಾಮಯ್ಯ ವಿರುದ್ಧ ಧಿಕ್ಕಾರ ಕೂಗಿದ್ದಾರೆ. ಇಂತಹ ಕೃತ್ಯವನ್ನು ಪಕ್ಷ ಸಹಿಸದು’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಪಾಲಿಕೆ ಚುನಾವಣೆಯಲ್ಲಿ ತನ್ವೀರ್ ಸೇಠ್ ಮತ್ತು ಎಚ್‌.ಡಿ.ಕುಮಾರಸ್ವಾಮಿ ನಡುವೆ ಡೀಲ್ ನಡೆದಿದೆ’ ಎಂದು ಕಾಂಗ್ರೆಸ್ ಸದಸ್ಯ ಆರಿಫ್ ಹುಸೇನ್ ಆರೋಪಿಸಿದರು.

ಸಂಸದ ಶ್ರೀನಿವಾಸ ಪ್ರಸಾದ್ ವಾಗ್ದಾಳಿ

‘ತಿದ್ದಿಕೊಳ್ಳದಿದ್ದಲ್ಲಿ ಜನರಿಂದ ತಕ್ಕ ಪಾಠ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಪಕ್ಷಕ್ಕಾಗಿ ದುಡಿಯೋದು ಯಾರೋ? ಸ್ವಾರ್ಥಕ್ಕೆ ಮಾಡಿಕೊಳ್ಳೋದು ಇನ್ಯಾರೋ? ತಮ್ಮ ಮನೆ ಬೆಳೆಸಿಕೊಳ್ಳೋದೇ ಆಯ್ತು. ತಮ್ಮ ಅವಧಿ ಮುಗಿಯಿತು ಎಂದು ತಪ್ಪು ಮಾಡಬಾರದು’ ಎಂದು ಬಿಜೆಪಿ ಸಂಸದ ವಿ.ಶ್ರೀನಿವಾಸ ಪ್ರಸಾದ್, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೆಸರು ಪ್ರಸ್ತಾಪಿಸದೇ ಶುಕ್ರವಾರ ಇಲ್ಲಿ ಕಿಡಿಕಾರಿದರು.

ಮೈಸೂರು ಗ್ರಾಮಾಂತರ ಜಿಲ್ಲಾ ಬಿಜೆಪಿ ವಿಶೇಷ ಕಾರ್ಯಕಾರಿಣಿ ಉದ್ಘಾಟಿಸಿ ಮಾತನಾಡಿದರು.

‘ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳುವುದಲ್ಲ. ನಮಗೆ ತೃಪ್ತಿ ಇರಬಹುದು. ಆದರೆ, ಜನರಲ್ಲಿ ಅತೃಪ್ತಿ ಇದೆ. ಅವರಲ್ಲಿ ಹತಾಶೆ, ನಿರಾಸೆ ಮೂಡಿದೆ. ಇದು ನನ್ನ ಅನುಭವಕ್ಕೂ ಬರುತ್ತಿದೆ. ಅಗತ್ಯ ವಸ್ತುಗಳ ಬೆಲೆ ಗಣನೀಯವಾಗಿ ಏರಿಕೆಯಾಗಿದ್ದು, ಇದು ಜನರಲ್ಲಿ ಆಡಳಿತ ವಿರೋಧಿ ಅಲೆ ಸೃಷ್ಟಿಯಾಗಲು ಕಾರಣವಾಗುತ್ತಿದೆ ಎಂಬ ವಿವೇಚನೆ ನಮ್ಮ ರಾಜ್ಯದ ಯಾವೊಬ್ಬ ನಾಯಕರಿಗೂ ಇಲ್ಲವಾಗಿದೆ. ಪಕ್ಷದ ಹಿತಕ್ಕಿಂತ ಸ್ವಾರ್ಥವೇ ಮುಖ್ಯವಾಗಿದೆ’ ಎಂದು ಅವರು ವಾಗ್ದಾಳಿ ನಡೆಸಿದರು.

ಚುನಾವಣೆಗೆ ಇನ್ನೂ ಸಮಯವಿದೆ ಎಂದುಕೊಂಡು ಜನರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದೇ ಕಣ್ಮುಚ್ಚಿ ಕುಳಿತಿದ್ದರೆ, ಅಧಿಕಾರದ ಅಮಲನ್ನು ತಲೆಗೇರಿಸಿಕೊಂಡರೆ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಶ್ರೀನಿವಾಸ ಪ್ರಸಾದ್ ಎಚ್ಚರಿಸಿದರು.

ರವಿಕುಮಾರ್‌ಗೆ ವೇದಿಕೆಯಲ್ಲೇ ತರಾಟೆ: ‘ನಾನೊಬ್ಬ ಬಿಜೆಪಿಯ ಸಕ್ರಿಯ ಕಾರ್ಯಕರ್ತ. ಕಾಂಗ್ರೆಸ್‌ನಲ್ಲಿದ್ದಾಗ ಕೆಪಿಸಿಸಿ ಅಧ್ಯಕ್ಷ ಆಗಲಿಲ್ಲ ಎಂಬುದೊಂದನ್ನು ಹೊರತುಪಡಿಸಿದರೆ ಇನ್ನುಳಿದ ಎಲ್ಲ ಜವಾಬ್ದಾರಿ ನಿಭಾಯಿಸಿ ಪಕ್ಷ ಸಂಘಟಿಸಿದವನು. ಇದುವರೆಗೆ, ನನ್ನನ್ನು ಒಂದೇ ಒಂದು ರಾಜ್ಯ ಕಾರ್ಯಕಾರಿಣಿಗೆ ಆಹ್ವಾನಿಸಿದ್ದೀರಾ? ನನ್ನ ಸಲಹೆ ಪಡೆದಿದ್ದೀರಾ?’ ಎಂದು ವೇದಿಕೆಯಲ್ಲಿದ್ದ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ವಿರುದ್ಧ ಹರಿಹಾಯ್ದರು.

ನನಗೆ ವಿಶ್ರಾಂತಿಯ ಕಾಲ: ಹಲವು ವಿಷಯವಾಗಿ ತಮಗೆ ಬೇಸರವಾಗಿದ್ದು, ಏನನ್ನೂ ಹೇಳಿಕೊಳ್ಳುವುದಿಲ್ಲ; ಏನನ್ನೂ ಕೇಳುವುದೂ ಇಲ್ಲ ಎಂದ ಸಂಸದ ಪ್ರಸಾದ್, ‘ಈಗಾಗಲೇ ಎಲ್ಲ ಅಧಿಕಾರ ಅನುಭವಿಸಿರುವೆ. ನನಗೆ ಇನ್ನು ವಿಶ್ರಾಂತಿಯ ಕಾಲ. ಗೌರವದಿಂದ ನಿವೃತ್ತನಾಗುತ್ತೇನೆ’ ಎಂದರು.

‘ಮೈಸೂರಿನಲ್ಲಿ ನಿಮಗೆ ಗೆಲ್ಲುವ ವಿಶ್ವಾಸವಿದೆಯೇನ್ರೀ? ಸಂಘಟನೆ ಎಲ್ಲಿದೆ?’ ಎಂದು ಮತ್ತೊಮ್ಮೆ ರವಿಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡರು.

ಕಾರ್ಯಕಾರಿಣಿಯಲ್ಲಿ ಹಾಜರಿದ್ದ ಪದಾಧಿಕಾರಿಗಳು ಸಂಸದರ ಮಾತಿಗೆ ಚಪ್ಪಾಳೆ ತಟ್ಟಿದರು.

‘ಮೀಸಲಾತಿ ಹೋರಾಟ: ಸಿ.ಎಂ ಏನು ಮಾಡುತ್ತಿದ್ದಾರೆ?’

‘ಬಿಜೆಪಿಯ ಬೆನ್ನೆಲುಬು ಆಗಿದ್ದವರೇ ಇದೀಗ ಮೀಸಲಾತಿಗಾಗಿ ಬೀದಿಗಿಳಿದಿದ್ದಾರೆ. ಪಕ್ಷದ ವಿರುದ್ಧವೇ ತಿರುಗಿ ಬಿದ್ದಿದ್ದಾರೆ. ಮುಖ್ಯಮಂತ್ರಿ, ಕಾನೂನು ಸಚಿವರು ಏನು ಮಾಡುತ್ತಿದ್ದಾರೆ? ಈ ವಿಷಯದಲ್ಲಿ ಮೊದಲು ಸ್ಪಷ್ಟನೆ ಕೊಡಲಿ’ ಎಂದು ಸಂಸದ ಶ್ರೀನಿವಾಸ ಪ್ರಸಾದ್ ಸಭೆಯಲ್ಲೇ ಆಗ್ರಹಿಸಿದರು.

‘ಒಬ್ಬ ಸಂಸದನಾಗಿ ಮೀಸಲಾತಿ ಎಲ್ಲಿ ನಿರ್ಧಾರವಾಗಲಿದೆ ಎಂಬುದು ಗೊತ್ತಿದೆ. ಆದರೆ ಸಚಿವ ಕೆ.ಎಸ್.ಈಶ್ವರಪ್ಪ, ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅಂಥವರೇ ಹೋರಾಟಕ್ಕಿಳಿದರೆ, ಪಕ್ಷದ ಕತೆ ಏನು’ ಎಂದು ಗುಡುಗಿದರು. ‘ಮೀಸಲಾತಿಗೆ ಅರ್ಥವೇ ಇಲ್ವಾ. ಮೀಸಲಾತಿಗಾಗಿ ಡೆಡ್‌ಲೈನ್ ನೀಡೋದು ಹೆಚ್ಚಿದೆ. ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸೋ ಕೆಲಸ ನಡೆದಿದೆ. ದಿನೇ ದಿನೇ ತಿರುಗಿ ಬೀಳೋ ಸಮಸ್ಯೆ ಸೃಷ್ಟಿಯಾಗಿದೆ. ಈ ಬಗ್ಗೆ ಯಾರೂ ಯೋಚಿಸ್ತಿಲ್ಲ. ಚುನಾವಣೆ ಮುಂದಿದೆ ಎಂದು ಕಣ್ಮುಚ್ಚಿ ಕುಳಿತುಕೊಂಡರೆ ಕಷ್ಟವಾಗಲಿದೆ’ ಎಂದು ಪ್ರಸಾದ್ ಹೇಳಿದರು.

ವಾಮ ಮಾರ್ಗದಿಂದ ಅಧಿಕಾರಕ್ಕೆ ಬಂದಿರುವುದನ್ನು ಒಪ್ಪಿಕೊಳ್ಳಬೇಕು. ಮತದಾರರು ಪ್ರಜ್ಞಾವಂತರಿದ್ದಾರೆ. ತಿದ್ದಿಕೊಳ್ಳದಿದ್ದರೆ ತಕ್ಕ ಪಾಠ ಕಲಿಸುತ್ತಾರೆ

ವಿ.ಶ್ರೀನಿವಾಸ ಪ್ರಸಾದ್, ಸಂಸದ

ಶ್ರೀನಿವಾಸ ಪ್ರಸಾದ್ ಬಿಜೆಪಿಯ ಸೌಭಾಗ್ಯ. ಅವರ ಭಾವನೆಗಳನ್ನು ವರಿಷ್ಠರ ಗಮನಕ್ಕೆ ತರುವೆ

ಎನ್.ರವಿಕುಮಾರ್

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಮಹಜರು ವೇಳೆ ಕಟ್ಟಡದಿಂದ ಹಾರಿ ಆರೋಪಿ ಆತ್ಮಹತ್ಯೆ

ಬೆಂಗಳೂರು:ಪೊಲೀಸ್ ಕಸ್ಟಡಿಯಲ್ಲಿದ್ದ ಆರೋಪಿ ಮಹಜರು ವೇಳೆ ಕಟ್ಟಡದಿಂದ ಕೆಳಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ನಡೆದಿದೆ.

ಸಿದ್ಧಲಿಂಗಸ್ವಾಮಿ (60) ಆತ್ಮಹತ್ಯೆ ಮಾಡಿಕೊಂಡಿರುವ ಆರೋಪಿ.

ಆರೋಪಿ ತಾನು ಬಿಡಿಎ ನೌಕರನೆಂದು ಹೇಳಿಕೊಂಡು ನಿವೇಶನ ಕೊಡಿಸುವುದಾಗಿ ಜನರನ್ನು ವಂಚಿಸುತ್ತಿದ್ದ. ಬಿಡಿಎ ನಿವೇಶನ ಮರು ಹಂಚಿಕೆಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ₹13 ಲಕ್ಷ ಹಣ ಪಡೆದಿದ್ದ. ಇದಕ್ಕೆ ಬಿಡಿಎ ನಕಲಿ ಮುದ್ರೆ ಬಳಕೆ ಮಾಡಿದ್ದ.

ವಂಚನೆ ಸಂಬಂಧ ಹನುಮಂತ ನಗರ ಠಾಣೆಯಲ್ಲಿ ಕಳೆದ ಡಿಸೆಂಬರ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಫೆ.24ರಂದು ಆರೋಪಿಯನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಲಯದ ಮೂಲಕ ಆರೋಪಿಯನ್ನು ಕಸ್ಟಡಿಗೆ ಪಡೆದಿದ್ದರು.

ಮಂಡ್ಯ ಮೂಲದ ಸಿದ್ಧಲಿಂಗಸ್ವಾಮಿ ವಿದ್ಯಾರಣ್ಯಪುರದ ಅಪಾರ್ಟ್‌ಮೆಂಟ್ ಸಮುಚ್ಛಯವೊಂದರಲ್ಲಿ ತನ್ನ ಕುಟುಂಬದೊಂದಿಗೆ ವಾಸವಿದ್ದ. ತನಿಖೆ ವೇಳೆ ತನ್ನ ಮನೆಯಲ್ಲಿ ಕೆಲವು ವಸ್ತುಗಳು ಇಟ್ಟಿರುವುದಾಗಿ ಹೇಳಿದ್ದ. ಇದಕ್ಕಾಗಿ ಪೊಲೀಸರು ಮಹಜರು ನಡೆಸಲು ಮನೆಗೆ ಕರೆ ತಂದಿದ್ದರು. ಮಹಜರು ವೇಳೆ ಅಡುಗೆ ಮನೆಯ ಮೂಲಕ ಕಟ್ಟಡದಿಂದ ಕೆಳಗೆ ಹಾರಿದ್ದಾನೆ.

ದೇಶವ್ಯಾಪಿ ಮುಷ್ಕರ ಬೆಂಬಲಿಸಿ ನಗರದಲ್ಲೂ ಟ್ರಕ್‌ಗಳ ಸಂಚಾರ ಸ್ಥಗಿತ

ಟ್ರಕ್: ಮತ್ತೆ ಮುಷ್ಕರದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೈಲ ದರ ಇಳಿಕೆ, ಇ-ವೇ ಬಿಲ್ ನಿಯಮಾವಳಿ ರದ್ದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಲಾರಿ ಮತ್ತು ಟ್ರಕ್ ಸೇರಿದಂತೆ ಸರಕು ಸಾಗಾಣಿಕೆ ವಾಹನ ಮಾಲೀಕರು ದೇಶವ್ಯಾಪಿ ಶುಕ್ರವಾರ ಹಮ್ಮಿಕೊಂಡಿದ್ದ ಮುಷ್ಕರ ಬೆಂಬಲಿಸಿ ನಗರದಲ್ಲೂ ಲಾರಿ ಹಾಗೂ ಟ್ರಕ್‌ಗಳು ಕಾರ್ಯಾಚರಣೆ ಸ್ಥಗಿತಗೊಳಿಸಿದ್ದವು.

ಬೆಂಗಳೂರು - ತುಮಕೂರು ಹೆದ್ದಾರಿಯ ಮಾದನಾಯಕನಹಳ್ಳಿ ನೈಸ್ ರಸ್ತೆ ಜಂಕ್ಷನ್‌ನಲ್ಲಿ ರಾಜ್ಯ ಲಾರಿ ಮಾಲೀಕರು ಹಾಗೂ ಏಜೆಂಟರ ಸಂಘಗಳ ಒಕ್ಕೂಟದ ವತಿಯಿಂದ ಲಾರಿಗಳನ್ನು ನಿಲ್ಲಿಸಿ ಪ್ರತಿಭಟನೆ ನಡೆಸಲಾಯಿತು. ಇದರಿಂದ ಕಿಲೋಮೀಟರ್‌ಗಟ್ಟಲೆ ವಾಹನಗಳು ನಿಲ್ಲಬೇಕಾಯಿತು. ಪ್ರತಿಭಟನೆಯಿಂದ ವಾಹನ ದಟ್ಟಣೆ ಹಾಗೂ ಸವಾರರು ಹೈರಾಣಾದರು.

ಬೇಡಿಕೆಗಳನ್ನು ಈಡೇರಿಸುವಂತೆ ಲಾರಿ ಮಾಲೀಕರು ಹೆದ್ದಾರಿ ತಡೆಗೂ ಮುಂದಾಗಿದ್ದರು. ಆದರೆ, ಪೊಲೀಸರು ಇದಕ್ಕೆ ಅವಕಾಶ ನೀಡಲಿಲ್ಲ. ಇದರಿಂದ ಮಾಲೀಕರು ಹಾಗೂ ಪೊಲೀಸರ ನಡುವೆ ವಾಗ್ವಾದ ನಡೆಯಿತು.

ಅಗತ್ಯ ವಸ್ತುಗಳನ್ನು ಪೂರೈಸುವ ವಾಹನಗಳನ್ನು ಹೊರತುಪಡಿಸಿ, ಉಳಿದೆಲ್ಲಾ ವಾಹನಗಳು ರಸ್ತೆಗೆ ಇಳಿಯಲಿಲ್ಲ. ರಾಜ್ಯದಾದ್ಯಂತ ಸುಮಾರು ಆರು ಲಕ್ಷ ಲಾರಿಗಳು ಸ್ತಬ್ಧವಾಗಿದ್ದವು.

ಮುಷ್ಕರದ ವೇಳೆ ಯಶವಂತಪುರದಲ್ಲಿ ಕಾರ್ಯಾಚರಣೆ ನಿಲ್ಲಿಸಿದ್ದ ಸರಕು ಸಾಗಾಣಿಕೆ ವಾಹನಗಳು –ಪ್ರಜಾವಾಣಿ ಚಿತ್ರ

‘ತೈಲ ದರ ಏರಿಕೆ, ಬಿಎಸ್ 6 ವಾಹನಗಳ ಬಿಡಿಭಾಗಗಳ ದರ ಹೆಚ್ಚಳ ಹಾಗೂ ತೆರಿಗೆ ಹೆಚ್ಚಳದಿಂದ ಸರಕು ಸಾಗಾಣಿಕೆ ಉದ್ಯಮಕ್ಕೆ ಬಹಳ ತೊಂದರೆಯಾಗಿದೆ. ಬೇರೆ ರಾಜ್ಯಗಳಲ್ಲಿ ತೈಲದರ ಇಳಿಸಲಾಗಿದೆ. ಡೀಸೆಲ್ ಮೇಲೆ ಪ್ರತಿ ಲೀಟರ್‌ಗೆ ₹3 ಕಡಿಮೆ ಮಾಡುವಂತೆ ಸರ್ಕಾರಕ್ಕೆ ಒತ್ತಾಯಿಸಿದ್ದೇವೆ’ ಎಂದು ರಾಜ್ಯ ಲಾರಿ ಮಾಲೀಕರು ಹಾಗೂ ಏಜೆಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಜಿ.ಆರ್.ಷಣ್ಮುಗಪ್ಪ ಆಗ್ರಹಿಸಿದರು.

‘ಇ-ವೇ ಬಿಲ್‌ನ ಪ್ರಮಾಣವನ್ನು ಕಡಿಮೆ ಮಾಡಬೇಕು. ರಾಜ್ಯದಲ್ಲಿ ಕೂಡಲೇ ಡೀಸೆಲ್ ದರ ಕಡಿಮೆ ಮಾಡಬೇಕು. ನೈಸ್ ರಸ್ತೆಯಲ್ಲಿ ಹಲವು ಟೋಲ್‌ಗಳಿದ್ದು, ಕೂಡಲೇ ಫಾಸ್ಟ್ ಟ್ಯಾಗ್ ಅಳವಡಿಸಬೇಕು. ಮರಳು ನೀತಿ ಜಾರಿ ಮಾಡಬೇಕು’ ಎಂದರು.

ಗುಜರಿ ನೀತಿ ಬೇಡ:‘ಕೇಂದ್ರ ಸರ್ಕಾರದ ಗುಜರಿ ನೀತಿ ಜಾರಿಗೆ ನಮ್ಮ ವಿರೋಧವಿದೆ. ವಾಹನ ಉತ್ಪಾದಕ ಕಂಪನಿಗಳಿಗೆ ಅನುಕೂಲವಾಗುವ ಉದ್ದೇಶದಿಂದ ಈ ನೀತಿ ರೂಪಿಸಲಾಗಿದೆ. ಈ ಹೊಸ ನೀತಿಯಿಂದ ಲಾರಿ ಮಾಲೀಕರೂ ಬೀದಿಗೆ ಬರಲಿದ್ದಾರೆ. ಒಂದು ವೇಳೆ ನೀತಿ ಜಾರಿಯಾದರೆ, ಹಳೆಯ ವಾಹನಗಳಿಗೆ ಸೂಕ್ತ ಬೆಲೆ ನೀಡಬೇಕು ಹಾಗೂ ಹೊಸ ವಾಹನಗಳ ಖರೀದಿಗೆ ಪೂರಕ ಕೊಡುಗೆಗಳನ್ನು ನೀಡಬೇಕು’ ಎಂದು ಒತ್ತಾಯಿಸಿದರು.

ಮಾ.15ರಿಂದ ಅನಿರ್ದಿಷ್ಟಾವಧಿ ಮುಷ್ಕರ:ಎಚ್ಚರಿಕೆ

‘ಸರ್ಕಾರಗಳ ಮುಂದೆ ಬೇಡಿಕೆಗಳನ್ನು ಮುಂದಿಟ್ಟು, ಸದ್ಯ ಒಂದು ದಿನ ಮಾತ್ರ ದೇಶದಾದ್ಯಂತ ಮುಷ್ಕರ ಮಾಡಿದ್ದೇವೆ. ಕೂಡಲೇ ಸರ್ಕಾರ ತೈಲ ದರ ಕಡಿಮೆ ಮಾಡಬೇಕು. ಇಲ್ಲದಿದ್ದರೆ, ಮಾರ್ಚ್ 5ರಂದು ಎಲ್ಲ ಸರಕು ಸಾಗಾಣಿಕೆ ವಾಹನ ಮಾಲೀಕರ ಸಂಘಟನೆಗಳ ನೇತೃತ್ವದಲ್ಲಿ ಸಭೆ ನಡೆಸಲಾಗುವುದು. ಮಾರ್ಚ್ 15ರಿಂದ ಲಾರಿ ಹಾಗೂ ಟ್ರಕ್‌ಗಳ ಕಾರ್ಯಾಚರಣೆ ಸಂಪೂರ್ಣವಾಗಿ ನಿಲ್ಲಿಸಿ, ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು’ ಎಂದು ಜಿ.ಆರ್.ಷಣ್ಮುಗಪ್ಪ ಎಚ್ಚರಿಸಿದರು.

ಹಳೆಯ ರೈಲು ನಿಲ್ದಾಣ ಮರು ನಿರ್ಮಾಣ

ಬೆಂಗಳೂರು: ಸ್ವಾತಂತ್ರ್ಯಪೂರ್ವದ ನಾಲ್ಕು ರೈಲ್ವೆ ನಿಲ್ದಾಣಗಳ ಪರಂಪರೆಯನ್ನು ಮರು ನಿರ್ಮಾಣದ ಕೆಲಸ ಆರಂಭವಾಗಿದ್ದು, ತಜ್ಞರು ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸ್ಥಳೀಯ ಪ್ರವಾಸಿ ತಾಣವಾಗಿಯೂ ನವೀಕರಣಗೊಳ್ಳುವ ನಿರೀಕ್ಷೆ ಇದೆ.

ದೊಡ್ಡಜಾಲ, ದೇವನಹಳ್ಳಿ, ಆವತಿಹಳ್ಳಿ ಮತ್ತು ನಂದಿ ನಿಲ್ದಾಣಗಳನ್ನು ನವೀಕರಣ, ಮರು ನಿರ್ಮಾಣ ಮತ್ತು ಸಂರಕ್ಷಣೆಗೆ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಆ್ಯಂಡ್ ಕಲ್ಚರಲ್ ಹೆರಿಟೇಜ್ (ಇಂಟೆಕ್) ಜತೆ ಒಪ್ಪಂದಕ್ಕೆ ನೈರುತ್ಯ ರೈಲ್ವೆ ಸಹಿ ಹಾಕಿದೆ. ಈ ನಿಲ್ದಾಣಗಳಲ್ಲಿ ಕೆಲವು 1915ಕ್ಕೂ ಹಳೆಯ ನಿಲ್ದಾಣಗಳಿವೆ.

‘ಇವುಗಳ ಅಭಿವೃದ್ಧಿಗೆ ₹10 ಕೋಟಿ ಬೇಕಾಗಲಿದೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಯೋಜನೆಯ(ಸಿಎಸ್‌ಆರ್) ನಿಧಿ ಪಡೆಯಲಾಗುವುದು’ ಎಂದು ರೈಲ್ವೆ ವಿಭಾಗೀಯ ವ್ಯವಸ್ಥಾಪಕ ಅಶೋಕ್ ವರ್ಮಾ ತಿಳಿಸಿದರು.

‘ಸಂಸ್ಕೃತಿ ಮತ್ತು ಪರಂಪರೆ ಸಂರಕ್ಷಣೆ ಜೊತೆಗೆ ಪ್ರವಾಸೋದ್ಯಮಕ್ಕೆ ಈ ಯೋಜನೆ ದಾರಿ ಮಾಡಿಕೊಡಲಿದೆ. ನವೀಕರಣ ಮತ್ತು ಮರು ನಿರ್ಮಾಣದ ಯೋಜನೆಯನ್ನು ಇಂಟೆಕ್ ಸಿದ್ಧಪಡಿಸಲಿದೆ’ ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ಕುಡಿದು ಜಗಳ: ಮಗನ ಕೊಲೆ

ಬೆಂಗಳೂರು: ನಿತ್ಯ ಕುಡಿದು ಬಂದು ಜಗಳವಾಡುತ್ತಿದ್ದ ಮಗನಿಗೆ ತಂದೆ ಕೊಡಲಿಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ಗಂಗಮ್ಮನಗುಡಿ ಠಾಣಾ ವ್ಯಾಪ್ತಿಯ ಅಬ್ಬಿಗೆರೆಯಲ್ಲಿ ನಡೆದಿದೆ.

30 ವರ್ಷದ ಬಾಬರ್ ಕೊಲೆಯಾದ ಮಗ. ಹುಸೇನ್ (68) ಕೊಲೆಗೈದ ತಂದೆ.

ಬಾಬರ್ ಗಾರೆ ಕೆಲಸ ಮಾಡಿಕೊಂಡಿದ್ದ. ತಂದೆ ಹುಸೇನ್ ಸೆಕ್ಯೂರಿಟಿ ಕೆಲಸ ಮಾಡಿಕೊಂಡಿದ್ದರು. ಪ್ರತಿನಿತ್ಯವೂ ಬಾಬರ್ ಪಾನಮತ್ತನಾಗಿ ಬಂದು, ಮನೆಯಲ್ಲಿ ತಂದೆಯೊಂದಿಗೆ ಜಗಳವಾಡುತ್ತಿದ್ದ.

‘ಗುರುವಾರ ಸಂಜೆಯೂ ತಂದೆ-ಮಗನ ನಡುವೆ ಜಗಳ ತಾರಕಕ್ಕೇರಿದ್ದು, ಈ ವೇಳೆ ಹುಸೇನ್ ಕೋಪದಲ್ಲಿ ಕೊಡಲಿಯಿಂದ ಮಗನ ತಲೆಗೆ ಹೊಡೆದಿದ್ದ. ಇದರಿಂದ ತೀವ್ರ ಗಾಯಗೊಂಡಿದ್ದ ಬಾಬರ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಆರೋಪಿ ತಂದೆಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಲಾ ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಗೋಡೆ ತೆರವು

ಕೆ.ಆರ್.ಪುರ: ಸರ್ಕಾರಿ ಶಾಲಾ ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಗೋಡೆಯನ್ನು ತಹಶೀಲ್ದಾರ್ ಅಜಿತ್ ಕುಮಾರ್ ಸಮ್ಮುಖದಲ್ಲಿ ಪಾಲಿಕೆಯ ಮಾಜಿ ಸದಸ್ಯ ಎಸ್.ಜಿ.ನಾಗರಾಜ್ ಹಾಗೂ ಕರುನಾಡ ರೈತಸಂಘದ ಅಧ್ಯಕ್ಷ ಮೆಹಬೂಬ್ ತೆರವುಗೊಳಿಸಿದರು.

ಕೆ.ಆರ್.ಪುರ ಕ್ಷೇತ್ರದ ವಿಜ್ಞಾನ ನಗರ ಸರ್ಕಾರಿ ಶಾಲೆಗೆ ಕೆಲವರು ರಾತ್ರೋ ರಾತ್ರಿ ಗೋಡೆ ನಿರ್ಮಿಸಿ ಮಕ್ಕಳು, ಶಿಕ್ಷಕರು ಒಳಗಡೆ ಹೋಗದಂತೆ ತಡೆದಿದ್ದರು. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತರಾಯಪ್ಪ ಅವರು ತಹಶೀಲ್ದಾರ್ ಗಮನಕ್ಕೆ ತಂದಿದ್ದರು. ತಹಶೀಲ್ದಾರ್ ಸ್ಥಳಕ್ಕೆ ಬಂದು ಗೋಡೆ ನಿರ್ಮಿಸಿಕೊಂಡಿದ್ದ ಭೂ ಮಾಲೀಕರೊಂದಿಗೆ ಮಾತುಕತೆ ನಡೆಸಿ ಗೋಡೆ ತೆರವುಗೊಳಿಸುವಂತೆ ಸೂಚಿಸಿದರು.

ಸಚಿವರ ಭೇಟಿ: ಇದಕ್ಕೆ ಮೊದಲು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರು ಶಾಲೆಗೆ ಭೇಟಿ ನೀಡಿ, ಇಂತಹ ಸನ್ನಿವೇಶ ಮತ್ತೆ ಎಲ್ಲಿಯೂ ಸೃಷ್ಟಿಯಾಗದಂತೆ ಎಚ್ಚರ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದರು.

ಬಿಎಂಆರ್‌ಸಿಎಲ್ ವಿರುದ್ಧ ಕೆಪಿಟಿಸಿಎಲ್ ದೂರು

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ (ಕೆಪಿಟಿಸಿಎಲ್) ಸೇರಿದ್ದ ಕೇಬಲ್‌ಗಳನ್ನು ಹಾನಿ ಮಾಡಲಾಗಿದೆ ಎಂದು ಆರೋಪಿಸಿ ಬಿಎಂಆರ್‌ಸಿಎಲ್ (ಮೆಟ್ರೊ), ಅಫ್ಕಾನ್ಸ್ ಹಾಗೂ ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ವಿರುದ್ಧ ಪೊಲೀಸರಿಗೆ ಕೆಪಿಟಿಸಿಎಲ್ ದೂರು ನೀಡಿದೆ.

‘ಬಿಎಂಆರ್‌ಸಿಎಲ್ ಸಂಸ್ಥೆಯು 11 ಕೆ.ವಿ ಸಾಮರ್ಥ್ಯದ ಕೇಬಲ್ ಅಳವಡಿಸಲು ನಿರ್ಮಾಣ ಸಂಸ್ಥೆಯಾಗಿರುವ ಅಫ್ಕಾನ್ಸ್ ಹಾಗೂ ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ಸಂಸ್ಥೆಗಳಿಗೆ ಗುತ್ತಿಗೆ ನೀಡಿತ್ತು. ನಿಮ್ಹಾನ್ಸ್ ಮುಖ್ಯದ್ವಾರದ ಬಳಿ ತಮ್ಮ ಕೇಬಲ್ ಅಳವಡಿಸುವ ವೇಳೆ ಕೆಪಿಟಿಸಿಎಲ್‌ಗೆ ಸೇರಿರುವ 220 ಕೆ.ವಿ.ಸಾಮರ್ಥ್ಯದ ಕೇಬಲ್‌ಗಳಿಗೆ ಹಾನಿ ಮಾಡಿದ್ದಾರೆ. ಫೆ.16ರಂದು ಪರಿಶೀಲನೆ ವೇಳೆ ಈ ವಿಚಾರ ತಿಳಿಯಿತು. ಸಂಸ್ಥೆಗೆ ಅಂದಾಜು ₹1.4 ಕೋಟಿಯಷ್ಟು ನಷ್ಟ ಉಂಟಾಗಿದೆ’ ಎಂದು ಕೆಪಿಟಿಸಿಎಲ್‌ನ ಕಿರಿಯ ಎಂಜಿನಿಯರ್ ಕಿಶೋರ್ ದೂರಿನಲ್ಲಿ ತಿಳಿಸಿದ್ದಾರೆ.

220 ಕೆ.ವಿ.ಸಾಮರ್ಥ್ಯದ ಒಂದು ಮೀಟರ್ ಕೇಬಲ್‌ನ ಬೆಲೆ ಅಂದಾಜು ₹23,493. ಹಾನಿಯಾಗಿರುವ ಸ್ಥಳದಲ್ಲಿ ಸುಮಾರು 60 ಮೀಟರ್‌ಗಳಷ್ಟು ಕೇಬಲ್ ದುರಸ್ತಿ ಮಾಡಬೇಕಿದೆ. ಜಾಯಿಂಟ್ ಕಿಟ್ ಕೇಬಲ್‌ಗೆ ₹8.14 ಲಕ್ಷ ಹಾಗೂ ಅಳವಡಿಕೆಗೆ ₹57 ಲಕ್ಷ ಹಾಗೂ ಉಳಿದ ಖರ್ಚು ₹11 ಲಕ್ಷ ಆಗಬಹುದು ಎಂದು ಅಂದಾಜಿಸಲಾಗಿದೆ. ಸಿದ್ದಾಪುರ ಪೊಲೀಸರು ಪ್ರಕರಣ ಕೈಗೆತ್ತಿಕೊಂಡಿದ್ದಾರೆ.

‘ದೂರು ಸಂಬಂಧ ಎನ್‌ಸಿಆರ್ (ಗಂಭೀರವಲ್ಲದ ಅಪರಾಧ) ದಾಖಲಿಸಿಕೊಳ್ಳಲಾಗಿದೆ. ಕೋರ್ಟ್‌ನಿಂದ ಅನುಮತಿ ಪಡೆದು ಎಫ್‌ಐಆರ್ ದಾಖಲಿಸಲಾಗುವುದು’ ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಸಹಕಾರ ಬ್ಯಾಂಕ್‌ಗಳಲ್ಲಿ ಏಕರೂಪ ತಂತ್ರಾಂಶ’

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜ್ಯದ ಎಲ್ಲ ಸಹಕಾರಿಗಳು, ಡಿಸಿಸಿ ಹಾಗೂ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಏಕರೂಪ ತಂತ್ರಾಂಶ ಅಳವಡಿಸಲು ಚಿಂತನೆ ನಡೆಸಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಸಂಘದ ರಾಜಾನುಕುಂಟೆ ಶಾಖೆಯ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ’ರೈತರಿಗೆ ಸಾಲ ವಿತರಣೆ, ಸಾಲಮನ್ನಾ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿರುವ ಬಗ್ಗೆ ಕೆಲವುಕಡೆ ಸಾರ್ವಜನಿಕರಿಂದ ದೂರುಗಳು ಬಂದಿವೆ. ಈ ನಿಟ್ಟಿನಲ್ಲಿ ಸಹಕಾರ ಕ್ಷೇತ್ರದಲ್ಲಿ ಸಂಪೂರ್ಣ ಪಾರದರ್ಶಕತೆ ತಂದು ಬದಲಾವಣೆ ಮಾಡಲು ಬ್ಯಾಂಕುಗಳನ್ನು ಏಕರೂಪ ತಂತ್ರಾಂಶದಲ್ಲಿ ತರಲು ಉದ್ದೇಶಿಸಲಾಗಿದೆ‘ ಎಂದರು.

ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಸಂಘದ ರಾಜಾನುಕಂಟೆಯ ಶಾಖೆಯನ್ನು ಸಹಕಾರ ಸಚಿವ ಎಸ್‌ಟಿ.ಸೋಮಶೇಖರ್ ಉದ್ಘಾಟಿಸಿದರು. ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಶಾಸಕ ಎಸ್‌ಆರ್‌ವಿಶ್ವನಾಥ್ ಇತರರು ಇದ್ದರು.

’ಮುಂದಿನ ವರ್ಷ ಕೇಂದ್ರ ಸರ್ಕಾರದ ಆತ್ಮನಿರ್ಭರ ಯೋಜನೆಯಡಿ ಹೈನುಗಾರಿಕೆಗೆ ಶೂನ್ಯ ಬಡ್ಡಿದರದಲ್ಲಿ ₹2ಲಕ್ಷ, ಮೀನುಗಾರರಿಗೆ ₹3 ಲಕ್ಷ ಸೇರಿದಂತೆ ಒಟ್ಟು 28 ಲಕ್ಷ ರೈತ ರಿಗೆ ₹20 ಸಾವಿರ ಕೋಟಿ ಸಾಲಸೌಲಭ್ಯ ನೀಡಲು ನಿರ್ಧರಿಸಲಾಗಿದೆ‘ ಎಂದರು.

ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್ ಮಾತನಾಡಿ, ’ಸಂಘದಲ್ಲಿ ₹800 ಕೋಟಿಯಷ್ಟು ವಹಿವಾಟು ನಡೆದಿದ್ದು, ಸದಸ್ಯರ ಠೇವಣಿ ₹150 ಕೋಟಿಯಷ್ಟಿದೆ. ₹90 ಕೋಟಿ ಸಾಲ ನೀಡಿದ್ದು, ಶೇ 90ರಷ್ಟು ಸಾಲ ಮರುಪಾವತಿಯಾಗುತ್ತಿರುವುದರಿಂದ ಬೆಳವಣಿಗೆಗೆ ಕಾರಣವಾಗಿದೆ‘ ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್, ಬೆಂಗಳೂರು ಜಿಲ್ಲಾ ಕೇಂದ್ರದ ಸಹಕಾರ ಬ್ಯಾಂಕಿನ ಅಧ್ಯಕ್ಷ ಡಿ.ಹನುಮಂತಯ್ಯ, ಸಹಕಾರ ಸಂಘಗಳ ಉಪನಿಬಂಧಕ ಶಶಿಧರ ಪಿ., ಸಹಾಯಕ ನಿಬಂಧಕ ಪ್ರೇಮಾನಂದ ಬಿ.ಪಿ, ದೊಡ್ಡಬಳ್ಳಾಪುರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿಬ್ಬೂರು ಜಯಣ್ಣ ಮತ್ತಿತರರು ಉಪಸ್ಥಿತರಿದ್ದರು.

ಚಿತ್ರಾವಳಿ

ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ನಗರದಲ್ಲಿ ಗುರುವಾರ ಆಯೋಜಿಸಿದ ‘ಪ್ರತಿಭಾನ್ವೇಷಣೆ 2020–21’ ಕಾರ್ಯಕ್ರಮವನ್ನು ಶಾಸಕ ರಿಜ್ವಾನ್ ಅರ್ಷದ್ ಉದ್ಘಾಟಿಸಿದರು. ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪ್ರದೀಪ್ ಪ್ರಭಾಕರ್, ಚಲನಚಿತ್ರ ಕಲಾವಿದರಾದ ಚಂದು ಗೌಡ ಹಾಗೂ ಅನಿತಾ ಭಟ್ ಇದ್ದರು.

ಕಂಠೀರವ ಸ್ಟುಡಿಯೊ ನಿಗಮದ ಅಧ್ಯಕ್ಷರಾಗಿ ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಶುಕ್ರವಾರ ಅಧಿಕಾರ ಸ್ವೀಕರಿಸಿದರು. ಪದಗ್ರಹಣಕ್ಕೂ ಮುನ್ನ ಕಚೇರಿಯಲ್ಲಿ ನಡೆದ ಪೂಜೆಯಲ್ಲಿ ಪಾಲ್ಗೊಂಡರು

ಶ್ರೀ ಸದ್ಗುರು ಸಾಯಿ ನಗರದಲ್ಲಿ (ದೊಡ್ಡ ಆಲದ ಮರದ ಬಳಿ) ಶ್ರೀ ಸಾಯಿ ಪ್ರಾಪರ್ಟಿಸ್ 30 ಎಕರೆ ಜಾಗದಲ್ಲಿ ನಿರ್ಮಿಸಿರುವ ನಿವೇಶನಗಳ ಬಡಾವಣೆಗೆ ಪೂಜೆಯನ್ನು ಶ್ರೀ ಸಾಯಿಗೋಲ್ಡ್ ಪ್ಯಾಲೇಸ್ ಮಾಲೀಕ ಟಿ.ಎ. ಶರವಣ ನೆರವೇರಿಸಿದರು.

‘ಯುವಜನ ನಿಗಮಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವಜನ ಸಬಲೀಕರಣ ನಿಗಮ ಸ್ಥಾಪನೆಯ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಮತ್ತು ಈ ನಿಟ್ಟಿನಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ’ಎಂದು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ರವೀಂದ್ರ ಭರವಸೆ ನೀಡಿದರು.

ನಗರದಲ್ಲಿ ಶುಕ್ರವಾರ ಸಂವಾದ ಸಂಸ್ಥೆ ಹಮ್ಮಿಕೊಂಡಿದ್ದ ರಾಷ್ಟ್ರೀಯ ಯುವಜನ ಹಕ್ಕುಗಳ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ‘ಯುವಜನರ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರ ಈಗಾಗಲೇ ಯುವ ನೀತಿಯನ್ನು ಅನುಷ್ಠಾನಗೊಳಿಸಿದ್ದು, ಇದಕ್ಕೆ ಅನುಗುಣವಾಗಿ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದೆ. ಮುಂದಿನ ಬಜೆಟ್ಟಿನಲ್ಲಿ ಯುವ ಬಜೆಟ್ ಸಹ ಮಂಡಿಸಲಾಗುತ್ತಿದ್ದು, ಅದಕ್ಕಾಗಿ ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ’ ಎಂದರು.

ರಾಜ್ಯದ ಎಂಟು ಜಿಲ್ಲೆಗಳ ಯುವಜನ ಹಕ್ಕುಗಳ ಕಾರ್ಯಕರ್ತರು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ರವೀಂದ್ರ ಅವರಿಗೆ ಮನವಿ ಸಲ್ಲಿಸಿದರು.

ನ್ಯಾಷನಲ್ ಲಾ ಸ್ಕೂಲ್ ವಿಶ್ವವಿದ್ಯಾಲಯದ ಕುಲಪತಿ ಡಾ.ಸುಧೀರ್ ಕೃಷ್ಣಮೂರ್ತಿ, ‘ಯುವಜನರ ಬದುಕಿನ ಎಲ್ಲ ನಿರ್ಧಾರಗಳನ್ನು ಸಮಾಜವೇ ನಿರ್ಧರಿಸುತ್ತಿದೆ. ಯುವ ಸಮೂಹವು ತಮ್ಮ ಶಿಕ್ಷಣ, ಆಹಾರ, ಬಟ್ಟೆ, ಉದ್ಯೋಗ ಮುಂತಾದ ವಿಷಯಗಳ ಬಗ್ಗೆ ಅವರೇ ನಿರ್ಧರಿಸುವಂತಾಗಬೇಕು’ ಎಂದರು.

‘ದೇಸಿ ದೀಪ’ ಬಿರುದು

ಹನುಮಂತನಗರ ಸಹಕಾರಿ ಬ್ಯಾಂಕ್ ವತಿಯಿಂದ ಉದಯಭಾನು ಕಲಾ ಸಂಘದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ದೊಡ್ಡರಂಗೇಗೌಡ ಅವರಿಗೆ ‘ದೇಸಿ ದೀಪ’ ಬಿರುದು ನೀಡಿ ಸನ್ಮಾನಿಸಲಾಯಿತು. ಇದೇ ವೇಳೆ ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಜಾನುವಾರು ಹತ್ಯೆ: ಸದ್ಯಕ್ಕೆ ಕಠಿಣ ಕ್ರಮ ಇಲ್ಲ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಜಾನುವಾರು ಸಾಗಣೆ ಮಾಡುವವರ ವಿರುದ್ಧ ಕರ್ನಾಟಕ ಜಾನುವಾರು ಹತ್ಯೆ ನಿಷೇಧ ಕಾಯ್ದೆ-2020 ಅನ್ನು ಸದ್ಯಕ್ಕೆ ಕಠಿಣವಾಗಿ ಅನ್ವಯ ಮಾಡುವುದಿಲ್ಲ’ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ನೀಡಿರುವ ತನ್ನ ಭರವಸೆ ಮುಂದುವರಿಸಿದೆ.

ಈ ಕಾಯ್ದೆಗೆ ರಾಜ್ಯಪಾಲರು ಅಂಕಿತ ಹಾಕಿರುವುದನ್ನು ಗಮನದಲ್ಲಿ ಇಟ್ಟುಕೊಂಡು ತಿದ್ದುಪಡಿ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಸಮಯ ನೀಡಿತು. ಇದೇ ವೇಳೆ ಆಕ್ಷೇಪಣೆ ಸಲ್ಲಿಸಲು ಹೆಚ್ಚಿನ ಸಮಯ ಬೇಕು ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ಕೋರಿದರು. ವಿಚಾರಣೆಯನ್ನು ಏಪ್ರಿಲ್ 5ಕ್ಕೆ ಪೀಠ ಮುಂದೂಡಿತು.

‘ಈ ಹಿಂದಿನ ವಿಚಾರಣೆ ವೇಳೆ ಮಧ್ಯಂತರ ತಡೆ ಕೋರಿಕೆಯನ್ನು ಪರಿಗಣಿಸುವುದಾಗಿ ಪೀಠ ಹೇಳಿದಾಗ, ನಿಯಮಾವಳಿ ರೂಪಿಸುವ ತನಕ ಹೊಸ ಕಾಯ್ದೆಯ ಸೆಕ್ಷನ್ 5ರ ಉಲ್ಲಂಘನೆಯನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ’ ಎಂದು ಸರ್ಕಾರ ಭರವಸೆ ನೀಡಿತ್ತು.

‘ಕೃಷಿ ಉದ್ದೇಶಕ್ಕಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಜಾನುವಾರು ಸಾಗಿಸಿದರೂ ರೈತರ ವಿರುದ್ಧ ಪ್ರಕರಣ ದಾಖಲಿಸಲು ಹೊಸ ಕಾಯ್ದೆಯಲ್ಲಿ ಅವಕಾಶ ನೀಡಲಾಗಿದೆ. ಜಾನುವಾರು ರಕ್ಷಣೆ ಹೆಸರಿನಲ್ಲಿ ಈ ಕಾಯ್ದೆಯನ್ನು ಕೆಲವರು ದುರ್ಬಳಕೆ ಮಾಡಿಕೊಳ್ಳಲಿದ್ದಾರೆ’ ಎಂಬುದು ಅರ್ಜಿದಾರರ ಆರೋಪ.

ಜೆಇಇ ಮೇನ್ಸ್: ಶೇ 95ರಷ್ಟು ವಿದ್ಯಾರ್ಥಿಗಳು ಹಾಜರು

ನವದೆಹಲಿ (ಪಿಟಿಐ): ದೇಶದಾದ್ಯಂತ ಮಂಗಳವಾರದಿಂದ ಆರಂಭವಾಗಿದ್ದ ಜಂಟಿ ಪ್ರವೇಶ ಪರೀಕ್ಷೆ (ಜೆಇಇ-ಮೇನ್ಸ್) ಶುಕ್ರವಾರ ಮುಗಿಯಿತು. ಪರೀಕ್ಷೆಗೆ ನೋಂದಾಯಿಸಿದ್ದವರ ಪೈಕಿ ಶೇ 95ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು. ಪರೀಕ್ಷೆಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಯಶಸ್ವಿಯಾಗಿ ನಡೆಸಿದೆ ಎಂದು ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೋಖ್ರಿಯಾಲ್ ನಿಶಾಂಕ್ ತಿಳಿಸಿದರು.

ಇದೇ ಮೊದಲ ಬಾರಿಗೆ ಕನ್ನಡವೂ ಸೇರಿದಂತೆ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗಿದೆ. ಈ ಬಾರಿಯಿಂದ ಜೆಇಇ ವರ್ಷದಲ್ಲಿ ನಾಲ್ಕು ಸಾರಿ ನಡೆಯಲಿದೆ. ಈ ಮೂಲಕ ವಿದ್ಯಾರ್ಥಿಗಳಿಗೆ ತಮ್ಮ ಅಂಕಗಳನ್ನು ಸುಧಾರಿಸಿಕೊಳ್ಳಲು ಅವಕಾಶ ಒದಗಿಸಲಾಗಿದೆ. ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿಯೂ ಪರೀಕ್ಷೆ ನಡೆಯಲಿದೆ.

277 ಅಕ್ರಮ ಧಾರ್ಮಿಕ ಕಟ್ಟಡ ನಿರ್ಮಾಣ

ಬೆಂಗಳೂರು: ‘ನಗರದ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಬಾರದು ಎಂದು ಸುಪ್ರೀಂ ಕೋರ್ಟ್ 2009ರಲ್ಲಿ ಆದೇಶ ನೀಡಿದ ನಂತರ ನಗರದಲ್ಲಿ 277 ಕಟ್ಟಡಗಳು ನಿರ್ಮಾಣವಾಗಿದೆ’ ಎಂದು ಹೈಕೋರ್ಟ್‌ಗೆ ಬಿಬಿಎಂಪಿ ಮಾಹಿತಿ ನೀಡಿತು. ಇವುಗಳ ವಿರುದ್ಧ ಕ್ರಮ ಕೈಗೊಂಡ ವರದಿಯನ್ನು ಮಾ.26ರೊಳಗೆ ಸಲ್ಲಿಸುವಂತೆ ನ್ಯಾಯಾಲಯ ನಿರ್ದೇಶನ ನೀಡಿತು.

‘ಸುಪ್ರೀಂ ಕೋರ್ಟ್ ಆದೇಶಕ್ಕೂ ಮುನ್ನ ನಗರದಲ್ಲಿ 1,893 ಧಾರ್ಮಿಕ ಕಟ್ಟಡಗಳು ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣವಾಗಿವೆ. ಇವುಗಳಲ್ಲಿ 1,548 ಕಟ್ಟಡಗಳನ್ನು ಕ್ರಮಬದ್ಧಗೊಳಿಸಬಹುದು. 105 ಕಟ್ಟಡಗಳನ್ನು ಸ್ಥಳಾಂತರ ಮಾಡಬಹುದು ಮತ್ತು 240 ಕಟ್ಟಡಗಳನ್ನು ತೆರವುಗೊಳಿಸಬೇಕಾಗುತ್ತದೆ. ನಾಲ್ಕು ಕಟ್ಟಡಗಳನ್ನು ತೆರವುಗೊಳಿಸಲಾಗಿದೆ’ ಎಂದು ಪಾಲಿಕೆ ಪ್ರಮಾಣಪತ್ರದಲ್ಲಿ ತಿಳಿಸಿದೆ.

ನಗರದಲ್ಲಿ ಕೇವಲ 70 ಅಕ್ರಮ ಧಾರ್ಮಿಕ ಕಟ್ಟಡಗಳಿವೆ ಎಂದು ಬಿಬಿಎಂಪಿ ಈ ಹಿಂದೆ ವಿವರ ಸಲ್ಲಿಸಿತ್ತು. ಪಾಲಿಕೆಯನ್ನು ನ್ಯಾಯಪೀಠ ತರಾಟೆಗೆ ತೆಗೆದುಕೊಂಡಿತ್ತು. ಅಫಿಡವಿಟ್ ಪರಿಶೀಲಿಸಿ ಪೀಠ, ಮಾ.26ಕ್ಕೆ ವಿಚಾರಣೆ ನಿಗದಿ ಮಾಡಿತು.

ಸರ್ಕಾರಿ ಜಾಗದಲ್ಲಿರುವ ಧಾರ್ಮಿಕ ಕೇಂದ್ರಗಳನ್ನು ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಎಲ್ಲ ರಾಜ್ಯ ಸರ್ಕಾರಗಳಿಗೆ 2009ರ ಸೆಪ್ಟೆಂಬರ್ 29ರಂದು ಆದೇಶ ನೀಡಿತ್ತು.

ಮದ್ದೂರಿನ ಪೌರಕಾರ್ಮಿಕ ನಾರಾಯಣ ಆತ್ಮಹತ್ಯೆ

₹10 ಲಕ್ಷ ಪರಿಹಾರ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ ಸ್ವಚ್ಛಗೊಳಿಸಲು ಪುರಸಭೆ ಅಧಿಕಾರಿಗಳು ನೀಡಿದ ಒತ್ತಡದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ಮದ್ದೂರಿನ ಪೌರಕಾರ್ಮಿಕ ನಾರಾಯಣ ಅವರ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳನ್ನು ವಜಾಗೊಳಿಸುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳ ಸದಸ್ಯರು ವಿಶ್ವೇಶ್ವರಯ್ಯ ಟವರ್ ಬಳಿಯ ಪೌರಾಡಳಿತ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಇತ್ತೀಚೆಗಷ್ಟೇ ಮದ್ದೂರಿನ ಪೌರಕಾರ್ಮಿಕ ನಾರಾಯಣ (40) ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ‘ಪುರಸಭೆ ಅಧಿಕಾರಿಗಳು ಬಲವಂತವಾಗಿ ಮಲಸ್ವಚ್ಛಗೊಳಿಸಲು ಒತ್ತಡ ಹೇರಿದ್ದರು. ನನ್ನ ಸಾವಿಗೆ ಅಧಿಕಾರಿಗಳೇ ಕಾರಣ’ ಎಂದು ಬರೆದಿದ್ದ ಡೆತ್‌ನೋಟ್ ಪತ್ತೆಯಾಗಿತ್ತು. ಆದರೆ, "ನಾರಾಯಣ ಆತ್ಮಹತ್ಯೆಗೂ ತಮಗೂ ಸಂಬಂಧವಿಲ್ಲ’ ಎಂದು ಅಧಿಕಾರಿಗಳು ಆರೋಪ ತಳ್ಳಿಹಾಕಿದ್ದರು.

ವಿವಿಧ ಸಂಘಟನೆಗಳ ಸದಸ್ಯರು ವಿಶ್ವೇಶ್ವರಯ್ಯ ಟವರ್ ಬಳಿ ಪ್ರತಿಭಟನೆ ನಡೆಸಿದರು.

‘ರಾಜ್ಯದಲ್ಲಿ ಮಲ ಹೊರುವ ಪದ್ಧತಿ ಇನ್ನೂ ಜೀವಂತವಾಗಿದೆ. ಅದಕ್ಕೆ ನಾರಾಯಣ ಅವರ ಆತ್ಮಹತ್ಯೆಯೇ ನಿದರ್ಶನ. ಮೇಲಧಿಕಾರಿಗಳ ಒತ್ತಡದಿಂದ ಮಲ ಸ್ವಚ್ಛ ಮಾಡುವ ಸ್ಥಿತಿ ಇದೆ. ಈ ನೀಚ ಪದ್ಧತಿಗೆ ಮತ್ತೊಂದು ಜೀವ ಬಲಿಯಾಗಿದೆ’ ಎಂದು ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ (ಎಐಸಿಸಿಟಿಯು) ರಾಜ್ಯ ಸಮಿತಿ ಸದಸ್ಯೆ ಮೈತ್ರಿ ಕೃಷ್ಣನ್ ಬೇಸರ ವ್ಯಕ್ತಪಡಿಸಿದರು.

‘ನಾರಾಯಣ ಅವರನ್ನು ಮಲ ಹೊರುವ ಪದ್ಧತಿಯ ಸಂತ್ರಸ್ತ ಎಂದು ಪರಿಗಣಿಸಬೇಕು. ಮೃತರ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡಬೇಕು. ಈ ಘಟನೆಗೆ ಕಾರಣಕರ್ತರಾದ ಮದ್ದೂರು ಪುರಸಭೆಯ ಅಧಿಕಾರಿಗಳನ್ನು ವಜಾಗೊಳಿಸಬೇಕು. ಈ ಪ್ರಕರಣ ಸಮಗ್ರ ತನಿಖೆ ನಡೆಸಬೇಕು’ ಎಂದೂ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ, ದಲಿತ ಸಂಘರ್ಷ ಸಮಿತಿ (ಭೀಮವಾದ), ಕಾರ್ಮಿಕ ಹಾಗೂ ಮಹಿಳಾ ಸಂಘಟನೆಗಳು ಭಾಗವಹಿಸಿದ್ದವು.

ನಗರದಲ್ಲಿ ಇಂದು

ಪ್ರಶಸ್ತಿ ಪ್ರದಾನ: ಬಾಂಬೆ ಆರ್ಟ್ ಸೊಸೈಟಿ, ಪ್ರಶಸ್ತಿ ಪುರಸ್ಕೃತರು: ಹಿರಿಯ ಕಲಾವಿದ ಬಿ.ಕೆ.ಎಸ್. ವರ್ಮಾ, ಸ್ಥಳ: ವರ್ಣ ಸಿಂಧು ಆರ್ಟ್ ಗ್ಯಾಲರಿ, ಎಂಸಿಇಸಿಎಚ್‌ಎಸ್ ಬಡಾವಣೆ, ಡಾ. ಶಿವರಾಮ ಕಾರಂತ ನಗರ, ಬೆಳಿಗ್ಗೆ 11

ಬಿ.ಕೆ..ಎಸ್. ವರ್ಮಾ

ತಾಂತ್ರಿಕ ಕಾರ್ಯಾಗಾರ: ರೈತರ ಹಿತರಕ್ಷಣೆಗೆ ಸರ್ಕಾರದ ಸಮರ್ಥ ಮಧ್ಯ ಪ್ರವೇಶ ಅಗತ್ಯ, ವಿಷಯ ಮಂಡಿಸುವವರು: ಕೃಷಿ ತಜ್ಞ ಡಾ. ಪ್ರಕಾಶ್ ಕಮ್ಮರಡಿ, ಡಾ. ಗ್ರೇಸಿ ಸಿ.ಪಿ., ರಘು ಡಿ.ಎಸ್., ಡಾ.ಎಂ.ಕೆ. ರಮೇಶ್, ವಿನಯ್ ಶ್ರೀನಿವಾಸ್, ಗೋಪಾಲ್ ನಾಯಕ್, ಮಹಾಬಲಗಿರಿ ಭಟ್, ಪ್ರತೀಕ್ ಅಬ್ರಾಹಂ, ಪನೀಶ್ ಕೃಷ್ಣಮೂರ್ತಿ, ಶಿಲ್ಪಾ ಕೆ., ಆಯೋಜನೆ: ಪೃತ್ವಿ ಪ್ರತಿಷ್ಠಾನ, ಮಳೆ ಆಶ್ರಿತ ಕೃಷಿ ಪುನರುಜ್ಜೀವನ ಜಾಲ, ಪರ್ಯಾಯ ಕಾನೂನು ವೇದಿಕೆ, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 10.30

ಸೈಬರ್ ಸೆಕ್ಯೂರಿಟಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ: ಡಾ. ಉದಯ್ ಶಂಕರ್ ಪುರಾಣಿಕ್, ಟಿ.ಜಿ. ಶ್ರೀನಿಧಿ, ಡಾ. ಕಾರ್ತಿಕ್ ಬಪ್ಪನಾಡ್, ಆಯೋಜನೆ: ಬಿ.ವಿ. ಜಗದೀಶ್ ವಿಜ್ಞಾನ ಕೇಂದ್ರ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 11

ಸಂಗೀತ ಕಛೇರಿ: ವಿದುಷಿ ಕನ್ಯಾಕುಮಾರಿ, ಆಯೋಜನೆ: ಸ್ಪಿಕ್ ಮ್ಯಾಕೆ ಕರ್ನಾಟಕ ಹಾಗೂ ಭಾರತೀಯ ವಿಜ್ಞಾನ ಸಂಸ್ಥೆ, ಸಂಜೆ 7, (ಆನ್‌ಲೈನ್ ಕಾರ್ಯಕ್ರಮ)

ಪುಸ್ತಕ ಬಿಡುಗಡೆ: ‘ಕರ್ನಾಟಕ ರಾಜ್ಯ ವಿವಾದ ಪರಿಹಾರ ನೀತಿ’ ಮತ್ತು ಕಾಫಿ ಟೇಬಲ್ ಪುಸ್ತಕ ಬಿಡುಗಡೆ: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿ: ಲೋಕಾಯುಕ್ತ ಪಿ. ವಿಶ್ವನಾಥ ಶೆಟ್ಟಿ, ಎಸ್. ಆರ್. ಬನ್ನೂರಮಠ, ಸ್ಥಳ: ಬ್ಯಾಕ್ವೆಂಟ್ ಹಾಲ್, ವಿಧಾನಸೌಧ, ಸಂಜೆ 5.30

ಬಿ.ಎಸ್. ಯಡಿಯೂರಪ್ಪ

ಕಾವ್ಯ ಚಿಂತನೆ ಹಾಗೂ ಸಂವಾದ: ರಾಷ್ಟ್ರಕವಿ ಕುವೆಂಪು ಮತ್ತು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಕಾವ್ಯ ಚಿಂತನೆ ಹಾಗೂ ಸಂವಾದ, ಅಧ್ಯಕ್ಷತೆ: ಲೇಖಕ ಪ್ರೊ.ಎಲ್.ಎನ್. ಮುಕುಂದರಾಜ್, ಮುಖ್ಯ ಅತಿಥಿ: ಪ್ರೊ. ನಾರಾಯಣ ಘಟ್ಟ, ಸಂವಾದ: ಮೃತ್ಯುಂಜಯ ದೊಡ್ಡವಾಡ, ನಿರ್ವಹಣೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಪರಿಷತ್ತು, ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ರಾಷ್ಟ್ರಕವಿ ಡಾ.ಜಿ. ಎಸ್. ಶಿವರುದ್ರಪ್ಪ ಪ್ರತಿಷ್ಠಾನ, ಸ್ಥಳ: ಆಪ್ತ ರಂಗ ಮಂದಿರ, ಗಾಂಧಿ ಪಾರ್ಕ್, ಭಾರತ್ ನಗರ 2ನೇ ಹಂತ, ಸಂಜೆ 5.30

ಮುಕುಂದರಾಜ್

ಕನಕದಾಸರು, ತ್ಯಾಗರಾಜರ ಆರಾಧನಾ ಪುಣ್ಯ ಮಹೋತ್ಸವ: ಪಂಚರತ್ನ ಕೃತಿಗಳ ಗೋಷ್ಠಿ ಗಾಯನ: ಶಿವಮೊಗ್ಗದ ಶಾರದಾ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು, ಸಂಗೀತ ಗಾನಾಮೃತ: ಜಿ. ಅರುಣ್ ಕುಮಾರ್, ಸಹಕಲಾವಿದರು: ಡಿ.ಆರ್. ರಾಘವೇಂದ್ರ, ನವನೀತ್ ಶರಣ್, ಆರ್. ರಮೇಶ್, ಆಯೋಜನೆ: ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ, ಸ್ಥಳ: ಸತ್ಯ ಗಣಪತಿ ದೇವಸ್ಥಾನ, ಪುಟ್ಟೇನಹಳ್ಳಿ ಕೆರೆ, ಜೆ.ಪಿ.ನಗರ, ಸಂಜೆ 5.30

ಉಪನ್ಯಾಸ: ಮರೆಯಬಾರದ ಶ್ರೇಷ್ಠ ಸಾಹಿತಿಗಳ ಮಾಲಿಕೆ, ವಿಷಯ: ಗಂಗಾಧರ ಚಿತ್ತಾಲರು: ವ್ಯಕ್ತಿ ಮತ್ತು ಕಾವ್ಯ, ಉಪನ್ಯಾಸ: ಲೇಖಕ ಪ್ರೊ.ಎಸ್. ಜಿ. ಸಿದ್ಧರಾಮಯ್ಯ, ಉಪಸ್ಥಿತಿ: ಡಾ.ಆರ್. ಲಕ್ಷ್ಮೀನಾರಾಯಣ, ಪ್ರೊ.ಎಂ.ಎಚ್. ಕೃಷ್ಣಯ್ಯ, ಎಚ್.ಎಸ್.ಎಂ. ಪ್ರಕಾಶ್, ಬಿ.ಸಿ. ರಾಜಕುಮಾರ್, ಎಸ್. ಅನಿಲ್ ಕುಮಾರ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)

ಪ್ರೊ.ಎಸ್.ಜಿ. ಸಿದ್ಧರಾಮಯ್ಯ,

ಬಜೆಟ್: ಪ್ರಸಕ್ತ ಸಾಲಿನ ಆಯವ್ಯಯ ಮಂಡನೆಗೆ ಸಲಹೆ ಕೋರಿದ ಬಿಬಿಎಂಪಿ

‘ಆದಾಯ ಕ್ರೋಢೀಕರಣವೇ ಆದ್ಯತೆಯಾಗಲಿ’

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 198ರಿಂದ 243ಕ್ಕೆ ಏರಿಕೆಯಾಗುತ್ತಿದೆ. ಈ ಸಂದರ್ಭದಲ್ಲಿ ಆದಾಯ ಕ್ರೋಢೀಕರಣಕ್ಕೆ ಆದ್ಯತೆ ನೀಡುವಂತಹ ಕ್ರಮಗಳನ್ನು ಮುಂದಿನ ಬಜೆಟ್‌ನಲ್ಲಿ ಘೋಷಿಸಬೇಕು ಎಂದು ಬಿಬಿಎಂಪಿ ವ್ಯಾಪ್ತಿಯ ಜನಪ್ರತಿನಿಧಿಗಳು ಸಲಹೆ ನೀಡಿದರು.

2021–22ನೇ ಸಾಲಿನ ಬಜೆಟ್‌ಗೆ ಸಂಬಂಧಿಸಿದಂತೆ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಶಾಸಕರು–ಸಚಿವರ ಸಭೆ ನಡೆಯಿತು. ‘ನಗರದಲ್ಲಿ ಪಾಲಿಕೆಗೆ ಬರುವ ಆದಾಯವನ್ನು ಗಮನದಲ್ಲಿಟ್ಟುಕೊಂಡು, ಆಸ್ತಿ ತೆರಿಗೆಯ ಸೋರಿಕೆ ತಡೆಗಟ್ಟಿ, ಸಮರ್ಪಕವಾಗಿ ತೆರಿಗೆ ಸಂಗ್ರಹಿಸಬೇಕು’ ಎಂದು ಸಲಹೆ ನೀಡಿದರು.

ಆಡಳಿತಾಧಿಕಾರಿ ಗೌರವ್ ಗುಪ್ತ, ‘ಬಿಬಿಎಂಪಿಯು ಸುಮಾರು 800 ಚದರ ಕಿ.ಮೀ ವ್ಯಾಪ್ತಿಯಲ್ಲಿದ್ದು, ನಗರದ ಅಭಿವೃದ್ಧಿ ಕಾರ್ಯಗಳನ್ನು ಗಮನಿಸುವುದು ಹಾಗೂ ಸುಸ್ಥಿರ ಆರ್ಥಿಕ ಪರಿಸ್ಥಿಯೊಂದಿಗೆ ಮುನ್ನಡೆಸಲು ಕ್ರಮವಹಿಸಬೇಕಿದೆ. ಹೊಸ ಕಾಯ್ದೆಯನ್ವಯ 243 ವಾರ್ಡ್‌ಗಳಲ್ಲಿ ಇನ್ನೂ ಹೆಚ್ಚು ಪ್ರದೇಶಗಳು ಸೇರ್ಪಡೆಯಾಗಲಿವೆ. ನಾಗರಿಕರಿಗೆ ಅವಶ್ಯಕ ಮೂಲಸೌಕರ್ಯಗಳನ್ನು ಒದಗಿಸುವುದು ಪಾಲಿಕೆಯ ಜವಾಬ್ದಾರಿ’ ಎಂದು ಹೇಳಿದರು.

ಆಯುಕ್ತ ಎನ್.ಮಂಜುನಾಥ್ ಪ್ರಸಾದ್, ಉಪಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವತ್ಥ ನಾರಾಯಣ, ಸಚಿವರಾದ ವಿ.ಸೋಮಣ್ಣ, ಅರವಿಂದ ಲಿಂಬಾವಳಿ, ಶಾಸಕರಾದ ಆರ್.ಮಂಜುನಾಥ್, ಸುರೇಶ್ ಬಿ.ಎಸ್, ಮುನಿರತ್ನ, ಕೆ.ಜೆ.ಜಾರ್ಜ್, ಅಖಂಡ ಶ್ರೀನಿವಾಸಮೂರ್ತಿ, ರಿಜ್ವಾನ್ ಆರ್ಷದ್, ಎನ್.ಎ. ಹ್ಯಾರಿಸ್, ಉದಯ್ ಬಿ. ಗರುಡಾಚಾರ್, ಸತೀಶ್ ರೆಡ್ಡಿ, ಸೌಮ್ಯಾ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಕೆ.ಗೋವಿಂದ ರಾಜು, ಅ.ದೇವೇಗೌಡ ಹಾಗೂ ಪಿ.ಆರ್. ರಮೇಶ್, ಎಚ್.ಎಂ. ರಮೇಶ್ ಗೌಡ ಸಲಹೆಗಳನ್ನು ನೀಡಿದರು.

ಸಭೆಯಲ್ಲಿ ಕೇಳಿಬಂದ ಪ್ರಮುಖ ಸಲಹೆಗಳು

- ‘ಬಿ’ ಯಿಂದ ‘ಎ’ ಖಾತಾ ವರ್ಗೀಕರಣ ಮಾಡಿ ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸುವುದು.
- ಪಾಲಿಕೆ ಭೋಗ್ಯಕ್ಕೆ ನೀಡಿರುವ ಆಸ್ತಿಗಳಿಂದ ಬಾಕಿ ಹಣ ಸಂಗ್ರಹಿಸಲು ಕ್ರಮವಹಿಸುವುದು.
- ತೆರಿಗೆ ವ್ಯಾಪ್ತಿಗೆ ಒಳಪಡದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರುವುದು.
- ಕಸ ನಿರ್ವಹಣೆ ಪ್ರಕ್ರಿಯೆ, ಉದ್ಯಾನ, ಶಾಲೆ, ಶೌಚಾಲಯಗಳ, ಬೀದಿ ದೀಪಗಳ ಸಮರ್ಪಕವಾಗಿ ನಿರ್ವಹಿಸುವುದು.
- ಈಗಾಗಲೇ ಕೈಗೊಂಡಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಆದ್ಯತೆ ನೀಡುವುದು.
- ಟಿಡಿಆರ್ ನೀಡುವ ಸಂಬಂಧ ಇರುವ ತೊಡಕುಗಳನ್ನು ನಿವಾರಿಸಿ ರಸ್ತೆ ವಿಸ್ತರಣೆಗೆ ಒತ್ತು ನೀಡುವುದು.
- ಬಿಬಿಎಂಪಿಗೆ ಸೇರ್ಪಡೆಗೊಂಡಿರುವ 110 ಹಳ್ಳಿಗಳಲ್ಲಿ ಅಭಿವೃದ್ಧಿ ಕೈಗೊಳ್ಳುವುದು.
- ಸುಧಾರಣಾ ಶುಲ್ಕ ಸಂಗ್ರಹಿಸಲು ಕ್ರಮವಹಿಸುವುದು.
- ಕೆರೆಗಳನ್ನು ಅಭಿವೃದ್ಧಿಗೊಳಿಸುವುದು. ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು

ಗುಟ್ಟೆ ಜಾತ್ರೆಯೆಂದೇ ಪ್ರಸಿದ್ಧವಾದ ನೆಲಮಂಗಲದ ಮಹಿಮಾಪುರದ ‘ಮಹಿಮ ರಂಗಸ್ವಾಮಿ’ ಬ್ರಹ್ಮರಥೋತ್ಸವವು ಶುಕ್ರವಾರ ಸಡಗರದಿಂದ ಸಂಪನ್ನಗೊಂಡಿತು.

ಸಂಕ್ಷಿಪ್ತ ಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 27ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ರಾಮಯ್ಯ ಬಡಾವಣೆ, ಹಾವನೂರು ಬಡಾವಣೆ, ಎನ್‌ಎಚ್–4, 8ನೇ ಮೈಲಿ, ಡಿಫೆನ್ಸ್ ಕಾಲೊನಿ, ಮುನಿಕೊಂಡಪ್ಪ ಬಡಾವಣೆ, ಮುನೇಶ್ವರ ನಗರ, ವಿಡಿಯಾ ಶಾಲೆ ಹಿಂಭಾಗ, ಹೆಸರಘಟ್ಟ ಮುಖ್ಯರಸ್ತೆ, ಮಂಜುನಾಥ ನಗರ, ಹರಿಕುಮಾರ ಬಡಾವಣೆ, ಸೋಪ್ ಫ್ಯಾಕ್ಟರಿ ಬಡಾವಣೆ, ಗಣಪತಿ ನಗರ ಹಾಗೂ ಸುತ್ತ–ಮುತ್ತಲಿನ ಪ್ರದೇಶ.

10ರಿಂದ ಮಧ್ಯಾಹ್ನ 2: ಎನ್‌ಜಿವಿ ಕಪಿಲಾ ಬ್ಲಾಕ್, ಗಂಗಾ, ಯಮುನಾ, ಕಾವೇರಿ, ಶರಾವತಿ, ನ್ಯಾಯಾಂಗ ಬ್ಲಾಕ್, ತುಂಗಭದ್ರಾ ಬ್ಲಾಕ್, ಮಂತ್ರಿ ವಾಣಿಜ್ಯ ಸಂಕೀರ್ಣ, ಜಲಮಂಡಳಿ ಘಟಕ, ಕೋರಮಂಗಲ, ಎಲ್. ಆರ್. ನಗರ, ರಾಜೇಂದ್ರ ನಗರ, ಅಂಬೇಡ್ಕರ್ ನಗರ, ಜಕ್ಕಸಂದ್ರ ಹಾಗೂ ಸುತ್ತ–ಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೆಟ್ರೊ ರೈಲು ಸಂಚಾರ ಭಾಗಶಃ ಸ್ಥಗಿತ ನಾಳೆ

ಬೆಂಗಳೂರು: ‘ನಮ್ಮ ಮೆಟ್ರೊ’ದಲ್ಲಿನ ನೇರಳೆ ಮಾರ್ಗದ ಟ್ರಿನಿಟಿ ಮತ್ತು ಹಲಸೂರು ನಿಲ್ದಾಣಗಳ ನಡುವೆ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 28ರ ಬೆಳಿಗ್ಗೆ 7ರಿಂದ 9ರವರೆಗೆ ಮೆಟ್ರೊ ರೈಲು ಸಂಚಾರದಲ್ಲಿ ಭಾಗಶಃ ವ್ಯತ್ಯಯವಾಗಲಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಹೇಳಿದೆ.

ಈ ಅವಧಿಯಲ್ಲಿ ಎಂ.ಜಿ. ರಸ್ತೆ ಮೆಟ್ರೊ ನಿಲ್ದಾಣದಿಂದ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದವರೆಗೆ ರೈಲು ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತದೆ. ಆದರೆ, ಎಂ.ಜಿ. ರಸ್ತೆ ನಿಲ್ದಾಣದಿಂದ ಮೈಸೂರು ರಸ್ತೆ ನಿಲ್ದಾಣದವರೆಗೆ ಸಂಚಾರ ಎಂದಿನಂತಿರುತ್ತದೆ.

ದುರಸ್ತಿ ಕಾರ್ಯ ಪೂರ್ಣಗೊಂಡ ನಂತರ, ಅಂದರೆ 28ರ ಬೆಳಿಗ್ಗೆ 9ರ ನಂತರ ನೇರಳೆ ಮಾರ್ಗದಲ್ಲಿ ಸಂಚಾರ ಪುನರಾರಂಭಗೊಳ್ಳಲಿದೆ.

ಹಸಿರು ಮಾರ್ಗದಲ್ಲಿ ಮೆಟ್ರೊ ರೈಲು ಸೇವೆಯಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ ಎಂದು ನಿಗಮ ಹೇಳಿದೆ.



ಸ್ಪರ್ಧಾವಾಣಿ ಸಂಚಿಕೆಯನ್ನು ’ಪ್ರಜಾವಾಣಿ‘ ಪತ್ರಿಕೆ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಬಿಡುಗಡೆ ಮಾಡಿದರು. ಡೆಪ್ಯುಟಿ ಎಡಿಟರ್ ಎಂ. ನಾಗರಾಜ್, ಸ್ಪರ್ಶ ಸಂಸ್ಥೆಯ ಗೋಪಿನಾಥ್, ಹಿತಚಿಂತನ ಟ್ರಸ್ಟ್‌ನ ಅಧ್ಯಕ್ಷ ವಿ.ರಾಮಸ್ವಾಮಿ, ಬಿಜಿಎಸ್ ಶಿಕ್ಷಣ ಸಂಸ್ಥೆಯ ಮುಖ್ಯಶಿಕ್ಷಕಿ ಪುಷ್ಪ ಮತ್ತು ಕೆಂಪಾಪುರ ಗ್ರಾಮ ಪಂಚಾಯಿತಿ ಸದಸ್ಯ ಕಿರಣ್ ಕುಮಾರ್ ಇದ್ದರು.

‘ಪ್ರಜಾವಾಣಿ ಸ್ಪರ್ಧಾವಾಣಿ’ ಬಿಡುಗಡೆ

ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸದ ಸೆಲೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಡೊಳ್ಳನ್ನು ಸೊಂಟಕ್ಕೆ ಕಟ್ಟಿಕೊಂಡು ಅಬ್ಬರಿಸಿದ ಚಿಣ್ಣರು, ಲವಲವಿಕೆಯ ಓಡಾಟ, ಹಬ್ಬದ ಸಡಗರ....

‘ಪ್ರಜಾವಾಣಿ’ ಪತ್ರಿಕೆ ಇಲ್ಲಿನ ಸ್ಪರ್ಶ ಟ್ರಸ್ಟ್‌ನ ಅಂಗಳದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಪ್ರಜಾವಾಣಿ ಸ್ಪರ್ಧಾವಾಣಿ’ ಬಿಡುಗಡೆ ಕಾರ್ಯಕ್ರಮದಲ್ಲಿ ಇವೆಲ್ಲವೂ ಮೇಳೈಸಿದವು.

ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮತ್ತು ಡೆಪ್ಯುಟಿ ಎಡಿಟರ್ ಎಂ.ನಾಗರಾಜ್ ಅವರು ಗಿಡ ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ರವೀಂದ್ರ ಭಟ್ಟ, ‘ವಿದ್ಯಾರ್ಥಿಗಳಲ್ಲಿ ಮುಂದೆ ಗುರಿ ಮತ್ತು ಹಿಂದೆ ಗುರುವಿರಬೇಕು. ಆಗ ಸಾಧನೆಯ ಕಡೆ ಧೈರ್ಯವಾಗಿ ಹೆಜ್ಜೆ ಹಾಕಬಹುದು. ಯಶಸ್ಸು ಆಗ ನಮ್ಮದಾಗುತ್ತದೆ. ಪ್ರಜಾವಾಣಿ ಪತ್ರಿಕೆಯು ವಿದ್ಯಾರ್ಥಿಗಳಿಗೆ ಗುರುವಿನ ಕೆಲಸ ಮಾಡುತ್ತದೆ. ಸಾಧನೆಗೆ ಮಾರ್ಗದರ್ಶಕನಂತೆ ಕೆಲಸ ನಿರ್ವಹಿಸುತ್ತದೆ’ ಎಂದರು.

ಡೊಳ್ಳು ಕುಣಿತಕ್ಕೆ ಬಿಡುವು ಕೊಟ್ಟು ಪತ್ರಿಕೆಯತ್ತ ವಿದ್ಯಾರ್ಥಿನಿಯರ ಗಮನ

ಹಿತಚಿಂತನಾ ಟ್ರಸ್ಟ್‌ನ ಅಧ್ಯಕ್ಷ ವಿ.ರಾಮಸ್ವಾಮಿ ಮಾತನಾಡಿ, ’ಪ್ರಜಾವಾಣಿ ಪತ್ರಿಕೆ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಒಳಿತಿಗಾಗಿ ಪ್ರಾರಂಭಿಸಿರುವ ಸ್ಪರ್ಧಾವಾಣಿ ನಿಜಕ್ಕೂ ಉಪಯುಕ್ತ. ಇದೊಂದು ಶ್ಲಾಘನೀಯ ಕೆಲಸ. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಲು ಇದು ಸಹಕಾರಿ. ಇವತ್ತಿನ ವಿದ್ಯಾರ್ಥಿಗಳಿಗೆ ಪತ್ರಿಕೆ ಕೊಡುತ್ತಿರುವ ಈ ಕೊಡುಗೆ ಅನನ್ಯ. ಪತ್ರಿಕೆಯ ಈ ಕೆಲಸದಿಂದ ನಮ್ಮ ಶೈಕ್ಷಣಿಕ ಮಟ್ಟ ಹೆಚ್ಚಾಗುತ್ತದೆ‘ ಎಂದು ಮೆಚ್ಚುಗೆ ಸೂಚಿಸಿದರು.

ಸ್ಪರ್ಶ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಗೋಪಿನಾಥ್, ಬಿಜಿಎಸ್ ಶಿಕ್ಷಣ ಸಂಸ್ಥೆಯ ಪುಷ್ಪ ಉಪಸ್ಥಿತರಿದ್ದರು.

ಪರಮೇಶ್‌ಗೆ ‘ಕನಕ ವೈದ್ಯ ವಿಭೂಷಣ’ ಪ್ರಶಸ್ತಿ

ಬೆಂಗಳೂರು: ‘ವೈದ್ಯ ಲೋಕದಲ್ಲಿ ಶ್ರೇಷ್ಠ ಸಾಧನೆ ಮಾಡಿರುವ ಶ್ವಾಸಕೋಶ ತಜ್ಞ ಡಾ.ಪರಮೇಶ್ ಅವರಿಗೆ ಕನಕ ವೈದ್ಯ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ’ ಎಂದು ಕಾಳಿದಾಸ ಆರೋಗ್ಯ ಮತ್ತು ಶಿಕ್ಷಣ ಟ್ರಸ್ಟ್ ತಿಳಿಸಿದೆ.

ಎಚ್.ಬಿ.ಆರ್.ಬಡಾವಣೆಯ ಮೊದಲನೇ ಹಂತದಲ್ಲಿರುವ ಕೋದಂಡ ರಾಮ ದೇವಸ್ಥಾನ ಸಂಕೀರ್ಣದಲ್ಲಿನ ಶ್ರೀ ಸಾಯಿ ಕಲಾ ಮಂದಿರದಲ್ಲಿ ಇದೇ 28ರಂದು ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಈ ವೇಳೆ ಮಹಾರಾಷ್ಟ್ರದ ಧನಗರ್ ಸಮಾಜದ ಡಾ.ಸಂಧ್ಯಾ ಸತೀಶ್ ಅವರಿಗೆ ‘ಅಹಿಲ್ಯಾ ವೈದ್ಯ ರತ್ನ’, ಐಎಂಎ ಅಧ್ಯಕ್ಷ ಡಾ.ವೀರಣ್ಣ ಎನ್.ಪೂರ್ವ ಅವರಿಗೆ ‘ಕನಕ ವೈದ್ಯ ರತ್ನ’, ಡಾ.ಎಸ್.ಸುರ್ಮೆ ಗೋವಾ ಹಾಗೂ ಶ್ರೀನಗರ ನರ್ಸಿಂಗ್ ಹೋಮ್‌ನ ಡಾ.ಲೀಲಾ ಅವರಿಗೆ ‘ಕನಕ ವೈದ್ಯಶ್ರೀ’ ಪ್ರಶಸ್ತಿ ವಿತರಿಸಲಾಗುತ್ತದೆ.

‘ಡಾ.ದೇವಕಿ ರಂಗಸ್ವಾಮಿ, ಡಾ.ಸೀಮಾ ಮತ್ತು ಕೆ. ಮಲ್ಲೇಶಪ್ಪ ಅವರಿಗೆ ‘ಕನಕ ವೈದ್ಯ ಗುರು’ ಪ್ರಶಸ್ತಿ ನೀಡಲಾಗುತ್ತದೆ’ ಎಂದು ಟ್ರಸ್ಟ್ ಹೇಳಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ನಾಗಾಭರಣ ಆಗ್ರಹ

‘ಕನ್ನಡದಲ್ಲಿಯೇ ತೀರ್ಪಿಗೆ ಕ್ರಮ ಕೈಗೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಎಲ್ಲ ಅಧೀನ ನ್ಯಾಯಾಲಯಗಳಲ್ಲಿ ಕನ್ನಡದಲ್ಲಿ ವಕಾಲತ್ತು ನಡೆಸಲು ಮತ್ತು ತೀರ್ಪುಗಳನ್ನು ನೀಡಲು ನಿರ್ದೇಶನ ನೀಡಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅಭಯ್ ಒಕಾ ಅವರಿಗೆ ಮನವಿ ಮಾಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಧೀನ ನ್ಯಾಯಾಲಯಗಳಲ್ಲಿ ಕನ್ನಡ ಅನುಷ್ಠಾನ ಕುರಿತಾದ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದ ಅವರು, ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ, ರಿಜಿಸ್ಟ್ರಾರ್ ಜನರಲ್ ಹಾಗೂ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷ ಶ್ರೀನಿವಾಸ ಬಾಬು ಅವರಿಗೆ ಮನವಿ ಪತ್ರ ಸಲ್ಲಿಸಿದರು.

‘ರಾಜ್ಯದ ಎಲ್ಲ ಅಧೀನ ನ್ಯಾಯಾಲಯಗಳಲ್ಲಿ ಪೀಠಾಧಿಕಾರಿಗಳು ಕನ್ನಡದಲ್ಲಿಯೇ ವ್ಯವಹರಿಸಬೇಕು. ವಿಶೇಷವಾಗಿ ತೀರ್ಪುಗಳು, ಆದೇಶಗಳು, ಜ್ಞಾಪನಾ ಪತ್ರಗಳು ಸೇರಿದಂತೆ ರಾಜ್ಯ ವ್ಯಾಪ್ತಿಯೊಳಗಿನ ಪತ್ರ ವ್ಯವಹಾರಗಳಲ್ಲಿ ಕನ್ನಡವನ್ನೇ ಸಂಪೂರ್ಣವಾಗಿ ಬಳಸುವಂತೆ 2003ರಲ್ಲಿ ಹೈಕೋರ್ಟ್ ಸುತ್ತೋಲೆ ಹೊರಡಿಸಿತ್ತು. ಆದರೆ, ಅಧೀನ ನ್ಯಾಯಾಲಯಗಳಲ್ಲಿ ಇನ್ನೂ ಸಂಪೂರ್ಣವಾಗಿ ಕನ್ನಡೀಕರಣವಾಗಿಲ್ಲ. ಸಾಕ್ಷಿಗಳನ್ನು ಕನ್ನಡದಲ್ಲಿ ಪಡೆದರೂ ತೀರ್ಪುಗಳು ಮತ್ತು ವಕಾಲತ್ತು ಆಂಗ್ಲ ಭಾಷೆಯಲ್ಲಿಯೇ ಇರುತ್ತಿವೆ. ಈ ಬಗ್ಗೆ ಮುಖ್ಯ ನ್ಯಾಯಮೂರ್ತಿಗಳ ಜತೆಗೆ ಚರ್ಚಿಸಿದ್ದೇನೆ’ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಮುಂಭಾಗ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಜಾಗೃತಿ ಅಭಿಯಾನ ನಡೆಸಿತು. ಟಿ.ಎಸ್ ನಾಗಾಭರಣ, ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ. ಮುರಳೀಧರ ಹಾಗೂ ಸದಸ್ಯರಿದ್ದರು.

‘ಕಾಳಜಿಯುಕ್ತ ಬಿಬಿಎಂಪಿ’ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಬೆಂಗಳೂರು ನಗರ ಘಟಕದಿಂದ ‘ಕಾಳಜಿಯುಕ್ತ ಬಿಬಿಎಂಪಿ’ ಅಭಿಯಾನವನ್ನು ಶುಕ್ರವಾರ ಆರಂಭಿಸಲಾಯಿತು.

ನಗರದ ದಕ್ಷಿಣ ಭಾಗದ ವಿವಿಧ ಕಚೇರಿಗಳಿಗೆ ಭೇಟಿ ನೀಡಿ ಕುಂದುಕೊರತೆಗಳ ಬಗ್ಗೆ ಪರಿಶೀಲನೆ ನಡೆಸುವ ಮೂಲಕ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣರೆಡ್ಡಿ ಅಭಿಯಾನಕ್ಕೆ ಚಾಲನೆ ನೀಡಿದರು. ಇದೇ ವೇಳೆ ಕಚೇರಿಗೆ ಬಂದಿದ್ದ ಜನರ ಸಮಸ್ಯೆಗಳನ್ನು ಅವರು ಆಲಿಸಿದರು. ನಂತರ ವಲಯ ಜಂಟಿ ಆಯುಕ್ತರನ್ನು ಭೇಟಿ ಮಾಡಿ ಸಮಸ್ಯೆಗಳ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಪಾಲಿಕೆಯ ಬೊಮ್ಮನಹಳ್ಳಿ ವಲಯ ಕಚೇರಿ, ಜಯನಗರದಲ್ಲಿರುವ ದಕ್ಷಿಣ ವಲಯ ಕಚೇರಿ, ಎಲೆಕ್ಟ್ರಾನಿಕ್ ಸಿಟಿ ಪ್ರಾದೇಶಿಕ ಸಾರಿಗೆ ಕಚೇರಿಗೆ ಅವರು ಭೇಟಿ ನೀಡಿದರು.

‘ಕಚೇರಿಯಲ್ಲಿ ಕುಡಿಯುವ ನೀರಿನ ಮತ್ತು ಶೌಚಾಲಯ ವ್ಯವಸ್ಥೆ ಇಲ್ಲದಿರುವುದು, ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗದೆ ಇರವುದು, ನಾಗರಿಕ ಸೇವೆಗಳ ಪಟ್ಟಿ, ಶುಲ್ಕದ ವಿವರ, ಸಕಾಲ, ಮಾಹಿತಿ ಹಕ್ಕು ಕಾಯ್ದೆ, ಎಸಿಬಿ ಮತ್ತು ಲೋಕಾಯುಕ್ತದ ಬಗ್ಗೆ ಮಾಹಿತಿ ಪ್ರಕಟಿಸದೆ ಇರುವುದು. ಸಾರ್ವಜನಿಕರೊಂದಿಗೆ ಸಿಬ್ಬಂದಿ ಅಸಭ್ಯವಾಗಿ ವರ್ತಿಸುವ ಮತ್ತು ಲಂಚ ಕೇಳುವ ದೂರುಗಳು ಬಂದವು’ ಎಂದು ಸಮಿತಿ ತಿಳಿಸಿದೆ.

ಬೈಕ್ ರ‍್ಯಾಲಿ ಮೂಲಕ ಬೇಗೂರು, ಕೋಡಿಚಿಕ್ಕನಹಳ್ಳಿ, ಬಿಳೇಕಹಳ್ಳಿಗೆ ತೆರಳಿ ಸಾರ್ವಜನಿಕರಿಗೆ ಅಭಿಯಾನದ ಬಗ್ಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ರವಿ ಕೃಷ್ಣರೆಡ್ಡಿ, ‘ಬಿಬಿಎಂಪಿ ಸಾರ್ವಜನಿಕರ ಬಗ್ಗೆ ಕಾಳಜಿ ಇಲ್ಲದೆ ವರ್ತಿಸುತ್ತಿದ್ದು, ಇದನ್ನು ಬದಲಿಸಲು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಪಣತೊಟ್ಟಿದೆ. ಜನ ನಮ್ಮನ್ನು ಬೆಂಬಲಿಸಬೇಕು’ ಎಂದು ಮನವಿ ಮಾಡಿದರು.

‘ಸಿಡಿಲ ಮರಿ’ ಯೂಸುಫ್ ವಿದಾಯ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ಯೂಸುಫ್ ಪಠಾಣ್ ಕ್ರಿಕೆಟ್‌ನ ಎಲ್ಲ ಮಾದರಿಗಳಿಗೂ ಶುಕ್ರವಾರ ವಿದಾಯ ಹೇಳಿದ್ದಾರೆ.

2007ರ ಟ್ವೆಂಟಿ–20 ವಿಶ್ವಕಪ್ ಮತ್ತು 2011ರ ಏಕದಿನ ವಿಶ್ವಕಪ್ ಪ್ರಶಸ್ತಿ ಗೆದ್ದ ಭಾರತ ತಂಡದಲ್ಲಿ ಯೂಸುಫ್ ಆಡಿದ್ದರು.

’ವೃತ್ತಿಜೀವನದ ಈ ಇನಿಂಗ್ಸ್‌ಗೆ ವಿದಾಯ ಹೇಳುವ ಸಮಯ ಬಂದಿದೆ. ಇವತ್ತು ನಾನು ಅಧಿಕೃತವಾಗಿ ಎಲ್ಲ ಮಾದರಿಗಳ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸುತ್ತಿದ್ದೇನೆ‘ ಎಂದು 38 ವರ್ಷದ ಯೂಸುಫ್ ಟ್ವೀಟ್ ಮಾಡಿದ್ದಾರೆ.

2012ರ ನಂತರ ಅವರು ಭಾರತ ತಂಡದಲ್ಲಿ ಆಡಲಿಲ್ಲ.

’ಮೊದಲ ಬಾರಿಗೆ ಭಾರತ ತಂಡದ ಪೋಷಾಕು ಧರಿಸಿದ ಆ ದಿನ ಇಂದಿಗೂ ನೆನಪಿದೆ. ಅದರೊಂದಿಗೆ ಕುಟುಂಬ, ಕೋಚ್, ಸ್ನೇಹಿತರು, ಇಡೀ ದೇಶದ ನಿರೀಕ್ಷೆಯ ಹೊಣೆಯನ್ನು ಹೊತ್ತುಕೊಂಡಂತೆ ಭಾಸವಾಗಿತ್ತು. ಅದಕ್ಕೆ ನ್ಯಾಯ ಸಲ್ಲಿಸುವ ರೀತಿಯಲ್ಲಿ ಆಡಿದೆ‘ ಎಂದಿದ್ದಾರೆ.

’ಭಾರತ ತಂಡದ ಎರಡು ವಿಶ್ವಕಪ್ ಗೆಲುವುಗಳಲ್ಲಿ ಪಾತ್ರ ವಹಿಸಿದ್ದು ಅವಿಸ್ಮರಣೀಯ. ಮುಂಬೈನಲ್ಲಿ ವಿಶ್ವಕಪ್ ಗೆದ್ದಾಗ ಸಚಿನ್ ತೆಂಡೂಲ್ಕರ್ ಅವರನ್ನು ನನ್ನ ಹೆಗಲ ಮೇಲೆ ಕೂರಿಸಿಕೊಂಡು ಸಂಭ್ರಮಿಸಿದ್ದು ಅವಿಸ್ಮರಣೀಯ. ಮಹೇಂದ್ರಸಿಂಗ್ ಧೋನಿ ನಾಯಕರಾಗಿದ್ದಾಗ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದೆ. ಐಪಿಎಲ್‌ನಲ್ಲಿ ಶೇನ್ ವಾರ್ನ್ ಮತ್ತು ರಣಜಿ ಟೂರ್ನಿಯಲ್ಲಿ ಜೇಕಬ್ ಮಾರ್ಟಿನ್ ಅವರ ನಾಯಕತ್ವದಲ್ಲಿ ಚೊಚ್ಚಲ ಪಂದ್ಯಗಳನ್ನು ಆಡಿದ್ದೆ. ನನ್ನಲ್ಲಿ ನಾನು ವಿಶ್ವಾಸವಿಡುವುದನ್ನು ಕಲಿಸಿದವರು ಅವರೆಲ್ಲರೂ.

ಬೆಳವಣಿಗೆಯಲ್ಲಿ ಅವರ ಪಾತ್ರ ದೊಡ್ಡದು. ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ‘ ಎಂದು ಬರೋಡಾದ ಯೂಸುಫ್ ಹೇಳಿದ್ದಾರೆ.

’ಐಪಿಎಲ್‌ನಲ್ಲಿ ಕೋಲ್ಕತ್ತ ನೈಟ್ ರೈಡರ್ಸ್‌ನಲ್ಲಿ ಗೌತಮ್ ಗಂಭೀರ್ ಜೊತೆಗೆ ಎರಡು ಬಾರಿ ಟ್ರೋಫಿ ಜಯಿಸಿದೆವು. ಸದಾಕಾಲ ನನ್ನ ಸಾಧನೆಗೆ ತಮ್ಮ ಇರ್ಫಾನ್ ಪಠಾಣ್ ಬೆನ್ನೆಲುಬಾಗಿದ್ದವರು. ಜೀವನದ ನೋವು, ನಲಿವಿನ ಎಲ್ಲ ಸಂದರ್ಭಗಳಲ್ಲಿಯೂ ಇರ್ಫಾನ್ ನನ್ನೊಂದಿಗಿದ್ದಾರೆ‘ ಎಂದು ಸ್ಮರಿಸಿದ್ದಾರೆ.

’ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮತ್ತು ಬರೋಡಾ ಕ್ರಿಕೆಟ್ ಸಂಸ್ಥೆಗಳಿಗೆ ಆಭಾರಿಯಾಗಿರುವೆ. ನನ್ನ ರಾಜ್ಯ ಮತ್ತು ದೇಶಕ್ಕಾಗಿ ಆಡುವ ಅವಕಾಶ ಕೊಟ್ಟ ಎಲ್ಲರಿಗೂ ಕೃತಜ್ಞನಾಗಿದ್ದೇನೆ‘ ಎಂದು ಬರೆದಿದ್ದಾರೆ.

’ಇನ್ನು ಮುಂದೆಯೂ ಕ್ರಿಕೆಟ್‌ನೊಂದಿಗೆ ಸದಾ ನಂಟು ಉಳಿಸಿಕೊಳ್ಳುತ್ತೇನೆ. ಭವಿಷ್ಯದಲ್ಲಿಯೂ ಯುವ ಆಟಗಾರರಿಗೆ ಉತ್ತೇಜನ ನೀಡುತ್ತೇನೆ. ಕ್ರಿಕೆಟ್‌ಗೆ ಮರಳಿ ಕೊಡುವ ಹೊತ್ತು ಇದು‘ ಎಂದು ಯೂಸುಫ್ ಹೇಳಿದ್ದಾರೆ.

ಸ್ಫೋಟಕ ಶೈಲಿಯ ಬಲಗೈ ಬ್ಯಾಟ್ಸ್‌ಮನ್ ಮತ್ತು ಆಫ್‌ಸ್ಪಿನ್ನರ್ ಯೂಸುಫ್ ಅವರನ್ನು ಕಳೆದೆರಡು ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಯಾವ ತಂಡವೂ ಖರೀದಿಸಿರಲಿಲ್ಲ.

ಯೂಸುಫ್ ಪಠಾಣ್ ಪಿಟಿಐ ಚಿತ್ರ

ಯೂಸುಫ್ ಪಠಾಣ್ ನಡೆದು ಬಂದ ಹಾದಿ

ಆಡಿದ ತಂಡಗಳು: ಭಾರತ, ಬರೋಡಾ, ಕೋಲ್ಕತ್ತ ನೈಟ್ ರೈಡರ್ಸ್, ರಾಜಸ್ಥಾನ ರಾಯಲ್ಸ್, ಸನ್‌ರೈಸರ್ಸ್ ಹೈದರಾಬಾದ್.

- **ಪದಾರ್ಪಣೆ**

ಏಕದಿನ: 2008, ಪಾಕಿಸ್ತಾನ ವಿರುದ್ಧ (ಢಾಕಾ)
ಟಿ20: 2007 –ಪಾಕಿಸ್ತಾನ ವಿರುದ್ಧ (ಜೋಹಾನ್ಸ್‌ಬರ್ಗ್)
ಪ್ರಥಮ ದರ್ಜೆ: 2001-02

- **ಕೊನೆಯ ಪಂದ್ಯ**

ಏಕದಿನ: 2012 – ಪಾಕಿಸ್ತಾನ ವಿರುದ್ಧ (ಢಾಕಾ)
ಟಿ20: 2012 –ದಕ್ಷಿಣ ಆಫ್ರಿಕಾ (ಜೋಹಾನ್ಸ್‌ಬರ್ಗ್)
ಪ್ರಥಮದರ್ಜೆ: 2020 –ತಮಿಳುನಾಡು ವಿರುದ್ಧ (ವಡೋದರಾ)

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ವಿಕೆಟ್	ಶ್ರೇಷ್ಠ
ಏಕದಿನ	57	810	123*	2	3	33	49ಕ್ಕೆ3
ಟಿ20	22	236	37*	00	00	13	22ಕ್ಕೆ2
ಪ್ರಥಮ ದರ್ಜೆ	100	4825	210*	11	20	201	40ಕ್ಕೆ6
ಐಪಿಎಲ್	174	3204	100	1	13	42	20ಕ್ಕೆ3

ದೇಹದಾರ್ಢ್ಯ ಸಂಸ್ಥೆಗೆ ಮಂಜುನಾಥ್ ಅಧ್ಯಕ್ಷ

ಬೆಂಗಳೂರು: ರಾಜ್ಯ ಅಮೆಚೂರ್ ದೇಹದಾರ್ಢ್ಯ ಸಂಸ್ಥೆಯ ಅಧ್ಯಕ್ಷರಾಗಿ ಟಿ.ಆರ್. ಮಂಜುನಾಥ್ ಹೆಗ್ಡೆ, ಕಾರ್ಯದರ್ಶಿ ಯಾಗಿ ವರ್ತೂರಿನ ರಾಕ್ ಜಿಮ್‌ನ ಎಂ. ಶ್ರೀನಿವಾಸ್ ಆಯ್ಕೆಯಾದರು.

ಪದಾಧಿಕಾರಿಗಳು: ಹಿರಿಯ ಉಪಾಧ್ಯಕ್ಷ: ಬಿ.ಕೃಷ್ಣ ರಾವ್. ಉಪಾಧ್ಯಕ್ಷರು: ರೇಮಂಡ್ ಡಿ ಸೋಜಾ, ವಿ. ಶ್ರೀನಿವಾಸ ಎಲ್.ಎಂ. ಕರಿಬಸಪ್ಪ, ಸಂತೋಷ್ ಶೆಟ್ಟಿ, ಶ್ರೀನಿವಾಸ ರೆಡ್ಡಿ, ದೀಪಕ್ ಕಾವೇರಪ್ಪ, ಮನೋಜ್ ಕುಮಾರ್, ರೋಷನ್ ಫೆರೋ. ಹಿರಿಯ ಜಂಟಿ ಕಾರ್ಯದರ್ಶಿ: ಕೆ. ವೆಂಕಟೇಶ್. ಜಂಟಿ ಕಾರ್ಯದರ್ಶಿಗಳು: ಕೆ. ರಾಜೇಶ್ ರಾವ್, ಎಸ್.ಪಿ. ಶ್ರೀನಿವಾಸ್ ಸ್ವಾಮಿ, ಜಿ. ಜೈರಾಮ, ರೇಖಾ ಕೆ.ರಾವ್, ಖಜಾಂಚಿ: ಕಾಮೇಶ್ ಎಸ್. ರಾವ್. **ಕಾರ್ಯಕಾರಿ ಸಮಿತಿ ಸದಸ್ಯರು:** ಬಿ. ಸ್ಟೀಫನ್, ವಿ. ಕೃಷ್ಣ, ಶಂಕರ್ ಗೌಡ, ಹೇಮಂತ್ ಕುಮಾರ್, ಶಿವಶಂಕರ್, ವಿಶ್ವಾಸಗೌಡ, ಪ್ರಸಾಂತ್ ಸಾಗರ್. ಜಿಲ್ಲಾ ಸಂಸ್ಥೆಗಳು: ಬೆಳಗಾವಿ, ದಕ್ಷಿಣ ಕನ್ನಡ, ಹಾಸನ, ಮೈಸೂರು, ತುಮಕೂರು, ವಿಜಯನಗರ, ಉಡುಪಿ.

ಪ್ಲೇ ಆಫ್‌ಗೆ ನಾರ್ತ್ ಈಸ್ಟ್

ವಾಸ್ಕೊ, ಗೋವಾ: ತಿಲಕ್ ಮೈದಾನದಲ್ಲಿ ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ವಿರುದ್ಧ 2–0ಯಿಂದ ಗೆದ್ದ ನಾರ್ತ್ ಈಸ್ಟ್ ಯುನೈಟೆಡ್ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪ್ಲೇ ಆಫ್ ಹಂತಕ್ಕೇರಿತು. 34ನೇ ನಿಮಿಷದಲ್ಲಿ ಸುಹೈರ್ ವಡಕ್ಕೇ ಪೀಡಿಗ ಮತ್ತು 45ನೇ ನಿಮಿಷ ದಲ್ಲಿ ಲಾಲೆಂಗ್‌ಮಾವಿಯಾ ಗಳಿಸಿದ ಗೋಲುಗಳು ನಾರ್ತ್ ಈಸ್ಟ್ ತಂಡದ ಕೈ ಹಿಡಿದವು.

ಬೆಂಗಳೂರು ಯುನೈಟೆಡ್, ಕಿಕ್‌ಸ್ಟಾರ್ಟ್‌ಗೆ ಗೆಲುವು

ಬೆಂಗಳೂರು: ಎದುರಾಳಿ ತಂಡಗಳಿಗೆ ಒಂದು ಗೋಲನ್ನೂ ಬಿಟ್ಟುಕೊಡದ ಬೆಂಗಳೂರು ಯುನೈಟೆಡ್ ಎಫ್‌ಸಿ ಮತ್ತು ಕಿಕ್ ಸ್ಟಾರ್ಟ್ ಎಫ್‌ಸಿ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಮಹಿಳಾ ಲೀಗ್‌ನಲ್ಲಿ ಶುಕ್ರವಾರ ಗೆಲುವು ಸಾಧಿಸಿದವು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ನಡೆದ ಪಂದ್ಯಗಳಲ್ಲಿ ಕಿಕ್ ಸ್ಟಾರ್ಟ್ 4–0ಯಿಂದ ಪರಿಕ್ರಮ ಎಫ್‌ಸಿಯನ್ನು ಮಣಿಸಿದರೆ ಬೆಂಗಳೂರು ಯುನೈಟೆಡ್ ಎಫ್‌ಸಿ 2–0ಯಿಂದ ಬೆಂಗಳೂರು ಬ್ರೇವ್ಸ್ ವಿರುದ್ಧ ಜಯ ಗಳಿಸಿತು. ಯುನೈಟೆಡ್ ಪರ ಪರೋಮಿತಾ ಸೇಠ್ 25 ಮತ್ತು 36ನೇ ನಿಮಿಷಗಳಲ್ಲಿ ಗೋಲು ಗಳಿಸಿದರು.

ಕಿಕ್‌ಸ್ಟಾರ್ಟ್‌ಗಾಗಿ ಸಿಬಿನಿ ಶರ್ಮಾ (15ನೇ ನಿಮಿಷ), ಮಾರ್ಗರೆಟ್ ದೇವಿ (59ನೇ ನಿ), ಸುಶ್ಮಿತಾ (67ನೇ ನಿ) ಮತ್ತು ಕಾವ್ಯ (83ನೇ ನಿ) ಗೋಲು ಗಳಿಸಿದರು. ಸೋಮವಾರ ಒಂಬತ್ತು ಗಂಟೆಗೆ ರೆಬೆಲ್ಸ್ ವಿಮೆನ್ಸ್ ಎಫ್‌ಸಿ ಮತ್ತು ಮಿಸಾಕ ಯುನೈಟೆಡ್, 11 ಗಂಟೆಗೆ ಸ್ಲ್ಯಾಂಮ್ಸರ್ಸ್ ಬೆಳಗಾಂ ಮತ್ತು ಇಂಡಿಯನ್ ಫುಟ್‌ಬಾಲ್ ಫ್ಯಾಕ್ಟರಿ ತಂಡಗಳು ಸೆಣಸಲಿವೆ.

ಬೆಂಗಳೂರು ರೇಸ್

‘ಕೆವಾಲಿನಿ’ ಗೆಲ್ಲುವ ನಿರೀಕ್ಷೆ

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದೆ. ‘ಕೆವಾಲಿನಿ’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಆರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಟಿಫ್ಘಾನಿ 10, ಬೆಳ್ಳಿ ದೀಪ 5, ಕಾರ್ಪಸನ್‌ರೈಸ್ 8
2ನೇ ರೇಸ್: ಸದಕಾತ್ 1, ಹಾಕಿಂಗ್ 4, ಪ್ಯಾರಡಿಸೊ 5
3ನೇ ರೇಸ್: ಬ್ರನ್‌ಹಿಲ್ಡ್ 6, ನೈಟ್ ಇನ್ ಹೂವ್ಸ್ 2, ಮೂನ್‌ಲೈಟ್ ಸೊನಟ 10
4ನೇ ರೇಸ್: ಓಷನ್ ಡ್ಯೂನ್ಸ್ 1, ಪ್ರೊಫೌಂಡ್ 5, ಪರ್ಫೆಕ್ಟ್ ಗೋಲ್ಡನ್ ಎರ 4
5ನೇ ರೇಸ್: ಹೈ ಪ್ರಿಸ್ಟೆಸ್ 9, ಕ್ವೀನ್ ರೆಗ್ನೆಂಟ್ 7, ಸ್ಟ್ರೀಕಿಂಗ್ ಆಫ್ ಸ್ಟಾರ್ಸ್ 8
6ನೇ ರೇಸ್: ಕಿಮೆರ 4, ಬಾಲ್ಟಿಮೋರ್ 12, ವೀನಸ್ ಬೇ 5
7ನೇ ರೇಸ್: ಕೆವಾಲಿನಿ 5, ಕ್ಯೂಬನ್ ಪೀಟ್ 1, ಸಿಲ್ವರ್ ಡ್ಯೂ 3
8ನೇ ರೇಸ್: ಸ್ಟಾರ್ ಕೆವಾಲ್ರಿ 1, ಅಲ್ಟಿಮೇಟ್ ಸ್ಟ್ರೈಕರ್ 3, ಸೆಲೆಸ್ಟಿಯಲ್ ಹೈವೇ 5
9ನೇ ರೇಸ್: ಮಿಷಿಗನ್ ಮೆಲೋಡಿ 1, ಮೋರ್ಗನ್‌ನೈಟ್ 5, ಬ್ಲೂಮ್ ಬಡ್ಡಿ 4

ಉತ್ತಮ ಬೆಟ್: ಕಿಮೆರ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ವಿಜಯ್ ಹಜಾರೆ ಟ್ರೋಫಿ: ಕೇರಳ ತಂಡಕ್ಕೆ ನಿರಾಸೆ

ದೇವದತ್ತ ಶತಕ: ಕರ್ನಾಟಕಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಗಿ ಅಭಿಮನ್ಯು ಮಿಥುನ್ ಮೊನಚಾದ ದಾಳಿಯ ಮೂಲಕ ಎದುರಾಳಿಗಳನ್ನು ದಿಕ್ಕು ತಪ್ಪಿಸಿದರೆ ಆರಂಭಿಕ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್ ಸತತ ಎರಡನೇ ಶತಕ ಸಿಡಿಸಿ ಮಿಂಚಿದರು. ನಾಯಕ ಆರ್.ಸಮರ್ಥ್ ಮತ್ತು ಮೂರನೇ ಕ್ರಮಾಂಕದ ಕೆ.ವಿ.ಸಿದ್ಧಾರ್ಥ್ ಕೂಡ ಬೌಲರ್‌ಗಳನ್ನು ಕಂಗೆಡಿಸಿದರು. ಸಂಘಟಿತ ಆಟಕ್ಕೆ ಫಲ ಕಂಡ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಗೆಲುವು ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕರ್ನಾಟಕ ಒಂಬತ್ತು ವಿಕೆಟ್‌ಗಳಿಂದ ಕೇರಳವನ್ನು ಮಣಿಸಿತು. ಈ ಮೂಲಕ ಕೇರಳ ಮತ್ತು ಉತ್ತರಪ್ರದೇಶ ತಂಡಗಳನ್ನು ಹಿಂದಿಕ್ಕಿ ಗುಂಪು ಹಂತದಲ್ಲಿ ಅಗ್ರ ಪಟ್ಟ ಅಲಂಕರಿಸಿತು.

ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ದೇಶಿ ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು 11 ಶತಕ ಸಿಡಿಸಿದ ದಾಖಲೆ ಹೊಂದಿರುವ ರಾಬಿನ್ ಉತ್ತಪ್ಪ ದಾಖಲೆಯ 78ನೇ ಪಂದ್ಯದಲ್ಲಿ ಕಣಕ್ಕೆ ಇಳಿದಿದ್ದರು. ಆದರೆ ತಮ್ಮ ಮಾಜಿ ಸಹ ಆಟಗಾರ ಅಭಿಮನ್ಯು ಮಿಥುನ್ ಅವರ ವೇಗದ ಅಸ್ತ್ರದ ಮುಂದೆ ಅವರ ಲೆಕ್ಕಾಚಾರ ತಪ್ಪಿತು. ಪಂದ್ಯದ ಮೊದಲ ಎಸೆತದಲ್ಲೇ ವಿಕೆಟ್ ಕೀಪರ್ ಶರತ್‌ಗೆ ಕ್ಯಾಚ್ ನೀಡಿ ಮರಳಿದರು.

ಆರಂಭಿಕ ಆಘಾತದಿಂದ ಚೇತರಿಸಿಕೊಂಡ ತಂಡ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ಉತ್ತಮ ಜೊತೆಯಾಟದಿಂದಾಗಿ 277 ರನ್ ಕಲೆ ಹಾಕಿತು. ಗುರಿ ಬೆನ್ನತ್ತಿದ ಕರ್ನಾಟಕ 27 ಎಸೆತಗಳು ಬಾಕಿ ಇರುವಾಗಲೇ ಜಯದ ನಗೆ ಬೀರಿತು.

ಹಾಲಿ ಚಾಂಪಿಯನ್ ಕರ್ನಾಟಕಕ್ಕೆ ಯುವ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್ (ಔಟಾಗದೆ 126;138 ಎಸೆತ, 13 ಬೌಂಡರಿ, 2 ಸಿಕ್ಸರ್) ಮತ್ತು ಆರ್.ಸಮರ್ಥ್ (62; 51 ಎ, 10 ಬೌಂ) ಉತ್ತಮ ಬುನಾದಿ ಹಾಕಿಕೊಟ್ಟರು. ಮೊದಲ ವಿಕೆಟ್‌ಗೆ ಇವರಿಬ್ಬರು 99 ರನ್ ಸೇರಿಸಿದರು.

ನಾಯಕ ಔಟಾದ ನಂತರ ಕ್ರೀಸ್‌ಗೆ ಬಂದ ಕೆ.ವಿ.ಸಿದ್ಧಾರ್ಥ್ (86; 84 ಎ, 5 ಬೌಂ, 3 ಸಿ) ಅಮೋಘ ಬ್ಯಾಟಿಂಗ್ ಮಾಡಿದರು. ದೇವದತ್ತ ಜೊತೆ ಮುರಿಯದ ಎರಡನೇ ವಿಕೆಟ್‌ಗೆ 180 ರನ್‌ಗಳನ್ನು ಸೇರಿಸಿದ ಅವರು ತಂಡ ಸುಲಭ ಜಯ ಗಳಿಸಲು ನೆರವಾದರು.

ಎರಡು ದಿನಗಳ ಹಿಂದೆ ಒಡಿಶಾ ಎದುರು 152 ರನ್ ಗಳಿಸಿದ್ದ ದೇವದತ್ತ ಅದೇ ಲಯದಲ್ಲಿ ಬ್ಯಾಟಿಂಗ್ ಮುಂದುವರಿಸಿದರು. ಅನುಭವಿಗಳಾದ ವೇಗಿ ಶ್ರೀಶಾಂತ್ ಮತ್ತು ಆಫ್ ಸ್ಪಿನ್ನರ್ ಜಲಜ್ ಸಕ್ಸೇನ ಒಳಗೊಂಡಂತೆ ಕೇರಳದ ಬೌಲರ್‌ಗಳನ್ನು ನಿರಾಯಾಸವಾಗಿ ಎದುರಿಸಿದ ಅವರು 13 ಬೌಂಡರಿ ಸಿಡಿಸಿದರು. ಎರಡು ಸಿಕ್ಸರ್‌ಗಳೂ ಅವರ ಇನಿಂಗ್ಸ್‌ನಲ್ಲಿ ಇದ್ದವು. ಈಗಾಗಲೇ ಎರಡು ಅರ್ಧಶತಕಗಳನ್ನು ಕೂಡ ಗಳಿಸಿರುವ ದೇವದತ್ತ ನಾಲ್ಕು ಪಂದ್ಯಗಳಿಂದ ಒಟ್ಟು 427 ರನ್ ಕಲೆ ಹಾಕಿ ಹೆಚ್ಚು ರನ್ ಗಳಿಸಿರುವವರ ಪಟ್ಟಿಯ ಅಗ್ರಸ್ಥಾನದಲ್ಲಿದ್ದಾರೆ.

ಮೊದಲು ಬ್ಯಾಟಿಂಗ್ ಮಾಡಿದ ಕೇರಳಕ್ಕೆ ವೇಗಿಗಳಾದ ಅಭಿಮನ್ಯು ಮಿಥುನ್ ಮತ್ತು ಪ್ರಸಿದ್ಧ ಕೃಷ್ಣ ಭಾರಿ ಪೆಟ್ಟು ನೀಡಿದರು. ಮಿಥುನ್ ಐದು ವಿಕೆಟ್ ಉರುಳಿಸಿದರು. ನಾಲ್ಕು ರನ್ ಗಳಿಸುವಷ್ಟರಲ್ಲಿ ಕೇರಳ ತಂಡ ರಾಬಿನ್ ಉತ್ತಪ್ಪ ಮತ್ತು ಸಂಜು ಸ್ಯಾಮ್ಸನ್ ಅವರ ವಿಕೆಟ್ ಕಳೆದುಕೊಂಡಿತ್ತು. 40ಕ್ಕೆ3 ವಿಕೆಟ್ ಉರುಳಿದ್ದಾಗ ವತ್ಸಲ್ ಗೋವಿಂದ್ (95;124ಎ, 7ಬೌಂ, 1ಸಿ) ಮತ್ತು ನಾಯಕ ಸಚಿನ್ ಬೇಬಿ (54; 63ಎ, 2 ಬೌಂ, 1 ಸಿ) 114 ರನ್‌ಗಳನ್ನು ಸೇರಿಸಿ ತಂಡವನ್ನು ರಕ್ಷಿಸಿದರು. ಆರನೇ ಕ್ರಮಾಂಕದ ಮೊಹಮ್ಮದ್ ಅಜರುದ್ದೀನ್ (ಔಟಾಗದೆ 59; 38ಎ, 2ಬೌಂ, 3ಸಿ) ಸ್ಫೋಟಕ ಬ್ಯಾಟಿಂಗ್ ಮಾಡಿ ತಂಡ ಸವಾಲಿನ ಮೊತ್ತ ಗಳಿಸಲು ನೆರವಾದರು.



ದೇವದತ್ತ ಪಡಿಕ್ಕಲ್ –ಪ್ರಜಾವಾಣಿ ಚಿತ್ರ

ಸ್ಕೋರ್‌ಕಾರ್ಡ್

ಕೇರಳ 8ಕ್ಕೆ 277 (50 ಓವರ್‌ಗಳಲ್ಲಿ)

ರಾಬಿನ್ ಉತ್ತಪ್ಪ ಸಿ ಶರತ್ ಬಿ ಅಭಿಮನ್ಯು ಮಿಥುನ್	0
ವಿಷ್ಣು ವಿನೋದ್ ಬಿ ಶ್ರೇಯಸ್ ಗೋಪಾಲ್	29
ಸಂಜು ಸ್ಯಾಮ್ಸನ್ ಸಿ ಮತ್ತು ಬಿ ಪ್ರಸಿದ್ಧ ಕೃಷ್ಣ	3
ವತ್ಸಲ್ ಗೋವಿಂದ್ ಸಿ ಮತ್ತು ಬಿ ಅಭಿಮನ್ಯು ಮಿಥುನ್	95
ಸಚಿನ್ ಬೇಬಿ ಸಿ ಶರತ್ ಬಿ ಅಭಿಮನ್ಯು ಮಿಥುನ್	54
ಮೊಹಮ್ಮದ್ ಅಜರುದ್ದೀನ್ ಔಟಾಗದೆ	59
ಜಲಜ್ ಸಕ್ಸೇನ ಸಿ ಶರತ್ ಬಿ ಅಭಿಮನ್ಯು ಮಿಥುನ್	5
ಎಂ.ಡಿ. ನಿದೀಶ್ ಸಿ ದೇವದತ್ತ ಪಡಿಕ್ಕಲ್ ಬಿ ಅಭಿಮನ್ಯು ಮಿಥುನ್	0
ಸುದೇಶನ್ ಮಿಥುನ್ ಬಿ ಪ್ರಸಿದ್ಧ ಕೃಷ್ಣ	13
ನೆಡುಂಕುಳಿ ಬಾಸಿಲ್ ಔಟಾಗದೆ	2
ಇತರೆ (ಲೆಗ್ ಬೈ 5, ವೈಡ್ 12)	17

ವಿಕೆಟ್ ಪತನ: 1-1 (ರಾಬಿನ್ ಉತ್ತಪ್ಪ, 0.1), 2-4 (ಸಂಜು ಸ್ಯಾಮ್ಸನ್, 1.4), 3-60 (ವಿಷ್ಣು ವಿನೋದ್, 15.2), 4-174 (ಸಚಿನ್ ಬೇಬಿ, 37.2), 5-224 (ವತ್ಸಲ್ ಗೋವಿಂದ್, 43.4), 6-242 (ಜಲಜ್ ಸಕ್ಸೇನ, 45.4), 7-242 (ಎಂ.ಡಿ.ನಿದೀಶ್, 45.5), 8-267 (ಸುದೇಶನ್ ಮಿಥುನ್, 48.5)

ಬೌಲಿಂಗ್: ಅಭಿಮನ್ಯು ಮಿಥುನ್ 10–0–52–5, ಪ್ರಸಿದ್ಧ ಕೃಷ್ಣ 10–0–65–2, ವೈಶಾಕ್ ವಿಜಯಕುಮಾರ್ 7–1–50–0, ಜೆ.ಸುಚಿತ್ 10–0–41–0, ಶ್ರೇಯಸ್ ಗೋಪಾಲ್ 10–0–46–1, ಕರುಣ್ ನಾಯರ್ 3–0–18–0

ಕರ್ನಾಟಕ 1ಕ್ಕೆ 279 (45.3 ಓವರ್‌ಗಳಲ್ಲಿ)

ಆರ್.ಸಮರ್ಥ್ ಸಿ ಮೊಹಮ್ಮದ್ ಅಜರುದ್ದೀನ್ ಬಿ ಜಲಜ್ ಸಕ್ಸೇನ	62
ದೇವದತ್ತ ಪಡಿಕ್ಕಲ್ ಔಟಾಗದೆ	126
ಕೆ.ವಿ.ಸಿದ್ಧಾರ್ಥ್ ಔಟಾಗದೆ	86
ಇತರೆ (ವೈಡ್ 5)	5

ವಿಕೆಟ್ ಪತನ: 1-99 (ಆರ್.ಸಮರ್ಥ್, 18.2)

ಬೌಲಿಂಗ್: ಶ್ರೀಶಾಂತ್ 8–0–40–0, ನೆಡುಂಕುಳಿ ಬಾಸಿಲ್ 6.3–0–46–0, ಎಂ.ಡಿ.ನಿದೀಶ್ 7–0–58–0, ಜಲಜ್ ಸಕ್ಸೇನ 10–0–34–1, ಸುದೀಶನ್ ಮಿಥುನ್ 9–0–62–0, ಸಚಿನ್ ಬೇಬಿ 5–0–39–0

ಫಲಿತಾಂಶ: ಕರ್ನಾಟಕಕ್ಕೆ 9 ವಿಕೆಟ್‌ಗಳ ಜಯ

ಕರ್ನಾಟಕದ ಮುಂದಿನ ಪಂದ್ಯ: 28ರಂದು, ರೈಲ್ವೇಸ್ ವಿರುದ್ಧ; ಬೆಂಗಳೂರಿನಲ್ಲಿ

ಎಫ್‌ಡಿಎ: ಕೇಂದ್ರದಲ್ಲಿ ಮೊಬೈಲ್ ಜಾಮರ್, ಕಿವಿಯೋಲೆಗೂ ನಿಷೇಧ • ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಎಚ್ಚೆತ್ತುಕೊಂಡ ಆಯೋಗ

ಯುಪಿಎಸ್‌ಸಿ ಮಾದರಿಯಲ್ಲಿಯೇ ಕೆಪಿಎಸ್‌ಸಿ ಪರೀಕ್ಷೆ!

• ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರಶ್ನೆಪತ್ರಿಕೆ ಸೋರಿಕೆಯಿಂದ ಎಚ್ಚೆತ್ತುಕೊಂಡಿರುವ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ), ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಗೆ ಇದೇ ಮೊದಲ ಬಾರಿಗೆ ಯುಪಿಎಸ್‌ಸಿ ಪರೀಕ್ಷೆಗಳ ಮಾದರಿಯ ಭದ್ರತಾ ವ್ಯವಸ್ಥೆ ಮಾಡಿಕೊಂಡಿದೆ!

ಜ. 24ರಂದು ನಡೆಯಬೇಕಿದ್ದ ಪರೀಕ್ಷೆಯನ್ನು ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣಕ್ಕೆ ಮುಂದೂಡಲಾಗಿದ್ದು, ಭಾನುವಾರ (ಫೆ. 28) ನಡೆಯಲಿದೆ. 1,253 ಎಫ್‌ಡಿಎ ಹುದ್ದೆಗಳಿಗೆ 3.74 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ರಾಜ್ಯದಾದ್ಯಂತ 1,057 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಈ ಪೈಕಿ, 433 ಕೇಂದ್ರಗಳನ್ನು ಸೂಕ್ಷ್ಮವೆಂದು ಗುರುತಿಸಿ, ಆ ಕೇಂದ್ರಗಳ ಪ್ರತಿ ಕೊಠಡಿಯಲ್ಲಿ ಮೊಬೈಲ್ ಜಾಮರ್ ಅಳವಡಿಸಲು ಕೆಪಿಎಸ್‌ಸಿ ತೀರ್ಮಾನಿಸಿದೆ.

> **ಜ. 24ರ ಪ್ರವೇಶಪತ್ರ ರದ್ದುಪಡಿಸಲಾಗಿದೆ. ಪರೀಕ್ಷೆ ದಿನ ಫೆ. 28 ಎಂದು ನಮೂದಿಸಿರುವ ಪ್ರವೇಶಪತ್ರ ಹೊಂದಿರುವವರಿಗೆ ಮಾತ್ರ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು**
> **ಜಿ. ಸತ್ಯವತಿ**, ಕಾರ್ಯದರ್ಶಿ, ಕೆಪಿಎಸ್‌ಸಿ

ಪ್ರಜಾವಾಣಿ ವಿಶೇಷ

ಪರೀಕ್ಷಾ ಕೇಂದ್ರದೊಳಗೆ ಸ್ಮಾರ್ಟ್‌ ಫೋನ್ ನಿಷೇಧಿಸಲಾಗಿದೆ. ಅಷ್ಟೇ ಅಲ್ಲ, ಮೈಕ್ರೋಚಿಪ್, ಬ್ಲೂ ಟೂಥ್, ವೈಫೈ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ಉಪಕರಣ, ಲೋಹದ ವಸ್ತುವನ್ನು ತೆಗೆದುಕೊಂಡು ಹೋಗದಂತೆ ಸೂಚಿಸಲಾಗಿದ್ದು, ಹೆಣ್ಣುಮಕ್ಕಳು ಕಿವಿಯೋಲೆ ಧರಿಸಿದ್ದರೆ, ಅದನ್ನು ಬಿಚ್ಚಿ ಹೊರಗಿಟ್ಟು ಪರೀಕ್ಷೆ ಬರೆಯಬೇಕು. ಈ ಬಗ್ಗೆ ಪೊಲೀಸ್ ಅಧಿಕಾರಿಗಳು ಪರಿಶೀಲನೆ ನಡೆಸಲಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಕೆಪಿಎಸ್‌ಸಿ ಕಾರ್ಯದರ್ಶಿ ಜಿ. ಸತ್ಯವತಿ, 'ಎಫ್‌ಡಿಎ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದ ನಮ್ಮ (ಕೆಪಿಎಸ್‌ಸಿ) 30 ಸಿಬ್ಬಂದಿಗೆ ನೀಡಿದ್ದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ರದ್ದುಪಡಿಸಲಾಗಿದೆ. ಹೀಗಾಗಿ, ಅವರು ಪರೀಕ್ಷೆ ಬರೆಯಲು ಅವಕಾಶ ಇಲ್ಲ. ಅಲ್ಲದೆ, ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಆರೋಪ ಎದುರಿಸುತ್ತಿರುವ 21 ಅಭ್ಯರ್ಥಿಗಳ ಪ್ರವೇಶಪತ್ರವನ್ನು ತಡೆಹಿಡಿಯಲಾಗಿದ್ದು, ಅವರಿಗೂ ಅವಕಾಶ ಇಲ್ಲ' ಎಂದರು.

'ಮೊದಲ ಬಾರಿಗೆ 'ಎ' ಅಥವಾ 'ಬಿ' ವೃಂದದ ಅಧಿಕಾರಿಯೊಬ್ಬರನ್ನು ಪ್ರತಿ ಪರೀಕ್ಷಾ ಕೇಂದ್ರಕ್ಕೆ ನಿರೀಕ್ಷಕರನ್ನಾಗಿ ನೇಮಿಸಲಾಗಿದೆ. ಕೇಂದ್ರ ಕಚೇರಿಯಲ್ಲಿ (ಬೆಂಗಳೂರು) 24X7 ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿ ತೆರೆಯಲಾಗಿದ್ದು, 'ಇದು ಮೂರು ಪಾಳಿಗಳಲ್ಲಿ ಕೆಲಸ ನಿರ್ವಹಿಸಲಿದೆ' ಎಂದರು.

'ಪರೀಕ್ಷಾ ಸಾಮಗ್ರಿಗಳನ್ನು ಗೌಪ್ಯವಾಗಿಡಲು ಪಿಯುಸಿ ಪರೀಕ್ಷಾ ಮಂಡಳಿಯ ಕರ್ನಾಟಕ ಸೆಕ್ಯೂರ್ ಎಕ್ಸಾಮಿನೇಷನ್ ಸಿಸ್ಟಂ ಅಳವಡಿಸಿಕೊಂಡಿದ್ದೇವೆ. ಪರೀಕ್ಷಾ ಸಾಮಗ್ರಿ ಸಾಗಿಸುವ ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಪ್ರತ್ಯೇಕ ಸಂಚಾರಿ ಪೊಲೀಸ್ ದಳಗಳನ್ನು ನಿಯೋಜಿಸಲು ಸೂಚಿಸಲಾಗಿದೆ' ಎಂದು ತಿಳಿಸಿದರು.

ಹೈಕೋರ್ಟ್‌, ಕೆಎಟಿ ಮೆಟ್ಟಿಲೇರಿದ ಆರೋಪಿ!

'ಹಾಲ್ ಟಿಕೆಟ್ ಬ್ಲಾಕ್ ಮಾಡುವ ಮೂಲಕ ಪರೀಕ್ಷೆ ಬರೆಯುವ ಸಾಂವಿಧಾನಿಕ ಹಕ್ಕಿಗೆ ತಡೆ ನೀಡಲಾಗಿದೆ' ಎಂದು ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಆರೋಪಿ ಬಸವರಾಜ ಕುಂಬಾರ ಹೈಕೋರ್ಟ್ ಮೊರೆ ಹೋಗಿದ್ದ. 'ಅರ್ಜಿ ತನ್ನ ವ್ಯಾಪ್ತಿಗೆ ಬರುವುದಿಲ್ಲ, ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ (ಕೆಎಟಿ) ಹೋಗಬಹುದು' ಎಂದು ಹೇಳಿದ್ದ ಹೈಕೋರ್ಟ್ ಶುಕ್ರವಾರ ಬೆಳಿಗ್ಗೆ ಅರ್ಜಿ ವಜಾಗೊಳಿಸಿತ್ತು. ತಕ್ಷಣವೇ ಕೆಎಟಿ ಮೊರೆ ಹೋಗಿದ್ದ. ಆದರೆ, ಕೆಎಟಿ ಕೂಡಾ ಅರ್ಜಿಯನ್ನು ತಿರಸ್ಕರಿಸಿದೆ. ಬಸವರಾಜ ಜ.17ರಂದು ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ. ಕೆಪಿಎಸ್‌ಸಿಯಲ್ಲಿ ಎಸ್‌ಡಿಎ ಆಗಿರುವ ಬಸವರಾಜ, ಬೇರೆ ಇಲಾಖೆಗೆ ಹೋಗುವ ಉದ್ದೇಶದಿಂದ ಮತ್ತೆ ಎಫ್‌ಡಿಎ ಪರೀಕ್ಷೆ ಬರೆಯಲು ಮುಂದಾಗಿದ್ದ' ಎಂದು ಸತ್ಯವತಿ ತಿಳಿಸಿದರು.

ಕಾಡಾನೆ ತುಳಿತ: ಇಬ್ಬರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಸಿದ್ದಾಪುರ/ ಸಕಲೇಶಪುರ: ಕೊಡಗು ಹಾಗೂ ಹಾಸನ ಜಿಲ್ಲೆಯಲ್ಲಿ ಕಾಡಾನೆ ತುಳಿತದಿಂದ ಶುಕ್ರವಾರ ಇಬ್ಬರು ಮೃತಪಟ್ಟಿದ್ದಾರೆ.

ಕೊಡಗಿನ ಸಿದ್ದಾಪುರ ಸಮೀಪದ ಬೀಟಿಕಾಡು ಕಾಫಿತೋಟದ ಕಣದಲ್ಲಿ ಒಣಗಲು ಹಾಕಿದ್ದ ಕಾಫಿಬೀಜವನ್ನು ಕಾವಲು ಕಾಯುತ್ತಿದ್ದ ಸಂದೀಪ್ (22) ಹಾಗೂ ಹಾಸನದ ಸಕಲೇಶಪುರ ತಾಲ್ಲೂಕಿನ ಮಾರನಹಳ್ಳಿ ಬಳಿ ಬಹಿರ್ದೆಸೆಗೆ ತೆರಳಿದ್ದ ಕಂಟೇನರ್ ಚಾಲಕ ವಾಕಿಲ್ (26) ಅವರು ಆನೆ ದಾಳಿಗೆ ಬಲಿಯಾದವರು.

ಸಂದೀಪ್ ಅವರೊಂದಿಗೆ ರಾಜು ಎಂಬುವವರು ಕೂಡ ಕಾಫಿ ಕಣದಲ್ಲಿ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ಬೆಳಗಿನ ಜಾವ ಇಬ್ಬರೂ ನಿದ್ರೆಯಲ್ಲಿದ್ದಾಗ, ಕಾಡಾನೆ ಸಂದೀಪ್ ಅವರ ತಲೆಯನ್ನು ತುಳಿದು ಛಿದ್ರಗೊಳಿಸಿತು. ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾಜು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಾರನಹಳ್ಳಿಯ ರಾಷ್ಟ್ರೀಯ ಹೆದ್ದಾರಿ 75ರ ಕೆಂಪುಹಳ್ಳದ ಬಳಿಯ ರಸ್ತೆ ಪಕ್ಕದಲ್ಲಿ ಗುರುವಾರ ರಾತ್ರಿ ಕಂಟೇನರ್ ನಿಲ್ಲಿಸಿದ್ದ ಚಾಲಕ ವಾಕಿಲ್, ಬಹಿರ್ದೆಸೆಗೆ ತೆರಳಿದ್ದರು. ಈ ವೇಳೆ, ಸಲಗ ಅವರನ್ನು ತುಳಿದು ಸಾಯಿಸಿದ್ದು, ಶುಕ್ರವಾರ ಬೆಳಿಗ್ಗೆ ರಸ್ತೆ ಪಕ್ಕ ಶವ ಪತ್ತೆಯಾಗಿದೆ. ಮೃತಪಟ್ಟ ಚಾಲಕ ರಾಜಸ್ಥಾನದ ಭರತ್‌ಪುರದವರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ತುಮಕೂರು
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗ, ತುಮಕೂರು

ಕ್ರ.ಸಂ:ಕಾಇಂ/ಲೋಇವಿ/ತುಮ/ಸಇಂ-1/ಟೆಂಡರ್ 25/2020-21 ದಿನಾಂಕ: 22-02-2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಚೇರಿ ಟೆಂಡರ್ ಸಂಖ್ಯೆ: 25/2020-21 **ದಿನಾಂಕ: 22.02.2021** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ 01 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ.88-00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.88-00 ಲಕ್ಷಗಳು,** ಅರ್ಹ ಗುತ್ತಿಗೆದಾರರು ; 3ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 ತಿಂಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷೀಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 09.03.2021 ರ 16.00 ಗಂಟೆಗೆ,** ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು **ದಿನಾಂಕ 25.02.2021 ರಿಂದ 10.03.2021ರ 16.00 ಗಂಟೆಯವರೆಗೆ** ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 10.03.2021ರ ಸಂಜೆ 16.00 ಗಂಟೆವರೆಗೆ,** ತಾಂತ್ರಿಕ ಬಿಡ್ಡ್‌ಗಳನ್ನು ತೆರೆಯುವ **ದಿನಾಂಕ 11.03.2021 ಸಂಜೆ 16.30 ಗಂಟೆಗೆ,** ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 12.03.2021 ಸಂಜೆ 11.00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ **www.eproc.karnataka.gov.in** ಪಡೆಯಬಹುದಾಗಿದೆ.

ಸಹಿ/-
ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ,ತುಮಕೂರು.

ವಾಸಾಸಂಇ/ತುಮಕೂರು/ಶಿರಡಿ ಸಾಯಿ/211/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಲೋಕ ಸೇವಾ ಆಯೋಗ
''ಉದ್ಯೋಗ ಸೌಧ'' ಬೆಂಗಳೂರು - 560 001

ಸಂಖ್ಯೆ : ಪಿಎಸ್‌ಸಿ ಇ(2)4099/2020-21 ದಿನಾಂಕ: 20.02.2021

ಪತ್ರಿಕಾ ಪ್ರಕಟಣೆ

ಆಯೋಗವು 2019ನೇ ಸಾಲಿನ ರಾಜ್ಯದ ವಿವಿಧ ಇಲಾಖೆಗಳಲ್ಲಿನ ಮತ್ತು ಕರ್ನಾಟಕ ಭವನ ದೆಹಲಿಯ ಉಳಿಕೆ ಮೂಲ ವೃಂದದ ಮತ್ತು ಹೈದ್ರಾಬಾದ್ ಕರ್ನಾಟಕ ವೃಂದದ ಸಹಾಯಕ/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, **ದಿನಾಂಕ: 24.01.2021(ಭಾನುವಾರ)ರ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಜಾರಿಗೊಳಿಸಲಾಗಿದ್ದ ಪ್ರವೇಶಪತ್ರವನ್ನು ರದ್ದುಪಡಿಸಿದೆ** ಎಂದು ಈ ಮೂಲಕ ತಿಳಿಸಿದೆ.

ಪ್ರಸ್ತುತ, ಸದರಿ ಪರೀಕ್ಷೆಯ ಅಭ್ಯರ್ಥಿಗಳಿಗೆ ಮರು ನಿಗದಿಯಾದ ದಿನಾಂಕ: **28.02.2021**ರ ಸ್ಪರ್ಧಾತ್ಮಕ ಪರೀಕ್ಷೆಗೆ ಪ್ರವೇಶಪತ್ರಗಳನ್ನು ಬಿಡುಗಡೆಗೊಳಿಸಿದ್ದು, ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್ **http://kpsc.kar.nic.in** ನಲ್ಲಿ **''ಸಹಾಯಕರು/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ದಿನಾಂಕ: 28.02.2021(ಭಾನುವಾರ)ಕ್ಕೆ ಪರಿಷ್ಕೃತ ಪ್ರವೇಶಪತ್ರಗಳು''** ಎಂಬ ಶೀರ್ಷಿಕೆಯಡಿಯಲ್ಲಿ User Name & password ಅನ್ನು ಉಪಯೋಗಿಸಿಕೊಂಡು ಪರಿಷ್ಕೃತ ಪ್ರವೇಶ ಪತ್ರವನ್ನು Download ಮಾಡಿಕೊಳ್ಳಲು ದಿನಾಂಕ: **21.02.2021**ರಿಂದ ಅವಕಾಶ ಕಲ್ಪಿಸಲಾಗಿದೆ.

ಯಾವುದೇ ಕಾರಣಕ್ಕೂ ದಿನಾಂಕ: 24.01.2021ರ ಪ್ರವೇಶಪತ್ರವನ್ನು ಸದರಿ ಸ್ಪರ್ಧಾತ್ಮಕ ಪರೀಕ್ಷೆಗೆ ಪರಿಗಣಿಸಲಾಗುವುದಿಲ್ಲ. ಒಂದುವೇಳೆ ಅಭ್ಯರ್ಥಿಗಳು ಪರಿಷ್ಕೃತ ಪ್ರವೇಶಪತ್ರವನ್ನು ಹಾಜರುಪಡಿಸದಿದ್ದಲ್ಲಿ ಅಥವಾ ದಿನಾಂಕ: **24.01.2021**ರ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶಪತ್ರವನ್ನು ಹಾಜರುಪಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ದಿನಾಂಕ: **28.02.2021**ರ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ. ಆದ್ದರಿಂದ, **ಅಭ್ಯರ್ಥಿಗಳು ಕಡ್ಡಾಯವಾಗಿ ದಿನಾಂಕ: 28.02.2021ರ ಸ್ಪರ್ಧಾತ್ಮಕ ಪರೀಕ್ಷೆಗೆ ಜಾರಿಗೊಳಿಸಲಾದ ಪರಿಷ್ಕೃತ ಪ್ರವೇಶ ಪತ್ರಗಳೊಂದಿಗೆ ಮಾತ್ರ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕು.** ಪ್ರವೇಶಪತ್ರ Download ಮಾಡಿಕೊಳ್ಳಲು ತಾಂತ್ರಿಕ ಸಮಸ್ಯೆ / ತೊಂದರೆ ಎದುರಾದಲ್ಲಿ ಸಹಾಯವಾಣಿ ಸಂಖ್ಯೆ : 18005728707 (Tollfree) ಸಂಪರ್ಕಿಸುವಂತೆ ಸೂಚಿಸಿದೆ. ಉಳಿದಂತೆ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಆಯೊಗದ ವೆಬ್‌ಸೈಟ್‌ನಲ್ಲಿ ಭಿತ್ತರಿಸಿರುವ ದಿನಾಂಕ: **20.02.2021**ರ ಪ್ರಕಟಣೆಯನ್ನು ಅವಲೋಕಿಸಬಹುದೆಂದು ಈ ಮೂಲಕ ಸೂಚಿಸಿದೆ.

ಸಹಿ/-
(ಜಿ. ಸತ್ಯವತಿ)
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಭದ್ರಾವತಿ ವಿಭಾಗ, ಲೋಯರ್ ಹುತ್ತಾ, ಭದ್ರಾವತಿ-577301
Phone : 08282-266355 Fax: 08282-266647
Email:dcfbdvt@yahoo.in

ಸಂಖ್ಯೆ: ಬಿ1.ಟಿಂಬರ್ ಹರಾಜು.ಸಿಆರ್-6/2020-21 ದಿನಾಂಕ: 19.02.2021

ಸಂಕ್ಷಿಪ್ತ ಹರಾಜು ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ, ತರೀಕೆರೆ ಸರ್ಕಾರಿ ನಾಟಾ ಸಂಗ್ರಹಾಲಯದಲ್ಲಿನರುವ ನಾಟಾ ಹಾಗೂ ಇತರೆ ಅರಣ್ಯ ಉತ್ಪನ್ನಗಳನ್ನು ಅನುಸೂಚಿಯಲ್ಲಿ ಸೂಚಿಸಿರುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಅಥವಾ ಇವರಿಂದ ಅಧಿಕಾರ ಪಡೆದ ಇತರೆ ಅಧಿಕಾರಿಗಳು ದಿನಾಂಕ: 20.03.2021 ರಂದು ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಮತ್ತು ದಿನಾಂಕ: 22.03.2021 ರಂದು ಬೆಳಿಗ್ಗೆ 10.00 ಗಂಟೆಯಿಂದ 10.45 ಗಂಟೆಯವರೆಗೆ ಇ-ಹರಾಜು ಮೂಲಕ ನಾಟಾ ಹಾಗೂ ಇತರೆ ಅರಣ್ಯ ಉತ್ಪನ್ನಗಳನ್ನು ಹರಾಜು ಮಾಡಲಾಗುವುದು ಎಂದು ತಿಳಿಸಲಾಗಿದೆ.

ಅನುಸೂಚಿ

ನಾಟಾ ಸಂಗ್ರಾಲಯದ ಹೆಸರು : ಸರ್ಕಾರಿ ನಾಟಾ ಸಂಗ್ರಹಾಲಯ, ತರೀಕೆರೆ. **ನಾಟಾ, ಪೋಲ್ಸ್, ಸೌದೆ, ಆರ್.ಕೆ.ಬಿ. ವಿವರ ಹಾಗೂ ಅಂದಾಜು ಪರಿಮಾಣ (ಘನ. ಮೀ.ಗಳಲ್ಲಿ) :** 1) ಸಾಗುವನಾನಿ - 41.458 2) ಬೀಟೆ - 22.785 3) ಅಕೇಶಿಯಾ - 41.804 4) ಹುನಾಲು - 0.791 5) ಮತ್ತಿ - 4.330 6) ಕೆಂದಾಳು - 3.246 7) ನಂದಿ - 3.377 8) ಬೇವು - 4.043 9) ಕಾಡುಜಾತಿ - 14.518 10) ಬಿಲ್ವಾರ - 1.483 11) ಹೊನ್ನೆ - 2.086 12) ಮಾವು - 4.491 13) ನೇರಲು - 2.516 14) ನೀಲಗಿರಿ -62.239 15) ರೈನ್ ಟ್ರೀ - 34.683 16) ಹಲಸು - 0.466 17) ತಾರೆ - 1.036 18) ಬೂರುಗ - 0.165 19) ಸಿಲ್ವರ್ - 5.817 20) ಬೊಂಬು - 249 21) ಅಕೇಶಿಯಾ ಸೌದೆ - 0.400 22) ಬೀಟೆ ಸೌದೆ- 9.050 23) ಕಾಡುಜಾತಿ ಸೌದೆ - 36.650 24) ನೀಲಗಿರಿ ಸೌದೆ - 24.950 25) ಸಾಗುವಾನಿ ಸೌದೆ - 6.150 26) ಸಿಲ್ವರ್ ಸೌದೆ- 0.400 27) ಸಾಗುವಾನಿ ಪೋಲ್ಸ್- 547 ಸಂಖ್ಯೆ 28) ನೀಲಗಿರಿ ಪೋಲ್ಸ್- 76 ಸಂಖ್ಯೆ 29) ಕಾಡುಜಾತಿ ಪೋಲ್ಸ್ - 105 ಸಂಖ್ಯೆ 30) ಅಕೇಶಿಯಾ ಪೋಲ್ಸ್ - 9 ಸಂಖ್ಯೆ 31) ಬೀಟೆ ಪೋಲ್ಸ್ - 6 ಸಂಖ್ಯೆ 32) ಬೇವು ಪೋಲ್ಸ್ - 9 ಸಂಖ್ಯೆ 33) ಸಿಲ್ವರ್ ಪೋಲ್ಸ್- 619 ಸಂಖ್ಯೆ 34) ಅಕೇಶಿಯಾ ಬಳ್ಳೀಸ್ - 1 ಸಂಖ್ಯೆ 35) ಸಿಲ್ವರ್ ಬಳ್ಳೀಸ್- 21 ಸಂಖ್ಯೆ 36) ಸುಬಾಬುಲ್ ಬಳ್ಳೀಸ್ - 17 ಸಂಖ್ಯೆ 37) ಸಾಗುವಾನಿ ಬಳ್ಳೀಸ್ - 32 ಸಂಖ್ಯೆ **ಇ-ಹರಾಜು ದಿನಾಂಕ: Dt: 20.03.2021 1st Session** 10:00 hrs to 10:45 hrs **2nd Session** 12:00 hrs to 12:45 hrs **3rd Session** 14:00 hrs to 14:45 hrs **4th Session** 16:00 hrs to 16:45 hrs And **Dt:22.03.2021 1st Session** 10:00hrs to 10:45 hrs.

ಟಿಪ್ಪಣಿ: 1. ಈ ಟೆಂಡರ್ ಹರಾಜಿನ ಮೂಲಕ ವಿಲೇ ಆಗುವ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ. ಹೆಚ್ಚಿನ ಮಾಹಿತಿಯನ್ನು ವಲಯ ಅರಣ್ಯಾಧಿಕಾರಿ, ಜೆಟಿಡಿ, ತರೀಕೆರೆ ಇವರ ಮೊಬೈಲ್ ನ: 9448024972/7338559254 ಗೆ ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08282-266355 ಗೆ ಸಂಪರ್ಕಿಸಿ ಹೆಚ್ಚಿನ ಮಾಹಿತಿನ್ನು ಪಡೆಯಲು ತಿಳಿಸಿದೆ.

ಸಹಿ/- (ಕೆ.ಎಂ.ಗಾಮನಗಟ್ಟಿ, ಕಅಸೇ.,)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ-133/02/ಎಂಸಿಎ/20-21

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂ: ಕಾಇಂ:ಗ್ರಾಕುನೀ&ನೈವಿ:ದಾ:ಸ.ಇಂ.-2/ಜೆ.ಜೆ.ಎಂ ಟೆಂಡರ್::2020-21 /1191
ದಿನಾಂಕ: 24.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

2020-21 ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿಗೆ ಅನುಮೋದನೆಯಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ (ಮನೆಗಳಿಗೆ ನಳ ಸಂಪರ್ಕ ಕಲ್ಪಿಸುವ) ಇ-ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 11/03/2021 ರ ಸಂಜೆ 5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192-262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ದಾವಣಗೆರೆ/716/ಎಂಸಿಎ/2020-21 ಸಹಿ/- ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2020-21/6682 ದಿನಾಂಕ:24/02/2021

ಅಲ್ಪಾವಧಿ ಇ-ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2020-21 ನೇ ಸಾಲಿನ ಲೆಕ್ಕ ಶಿರ್ಷಿಕೆ 3054-ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ 1 ಕಾಮಗಾರಿ ಗುತ್ತಿಗೆ ಇಟ್ಟ ಮೊತ್ತ ರೂ. 175.44 ಲಕ್ಷಗಳು ಇರುತ್ತವೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು 1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:08-03-2021 ರಂದು (11.00 ಗಂಟೆಗೆ), 2)ಆಕ್ಷೇಪಣೆ -ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:10-03-2021(ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:12-03-2021 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):15-03-2021 (ಸಾಯಂಕಾಲ 4.30 ಗಂಟೆಗೆ),5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1453/MCA/2020-21

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ
ಆಕಾಶವಾಣಿ ರಸ್ತೆ, ಸಿ.ಕೆ.ಪುರ, ಚಿತ್ರದುರ್ಗ - 577 201
ದೂರವಾಣಿ ಸಂ: 08194-222984 | e-mail: cuda.cta@rediffmail.com

ಸಂ. ಚಿನಪ್ರಾ/ಸಕಾಅ/ಅ.ಕೆ/2020-21 ದಿನಾಂಕ:23.02.2021

ಇ-ಪ್ರೊಕ್ಯೂರ್‌ಮೆಂಟ್ ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ-ಲಕೋಟೆ ಪದ್ಧತಿ)

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.) ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮಠದ ಕುರುಬರ ಹಟ್ಟಿಯ ಮುರುಘಾ ಮಠದ ಮುಂಭಾಗದಲ್ಲಿರುವ ಅರಸನ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ದ್ವಿಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಕರೆಯಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ https://eproc.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ, ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. **"ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ದಾಖಲಾತಿಯನ್ನು ಅಪ್‌ಲೋಡ್ ಮಾಡುವಾಗ ಅನವಶ್ಯಕವಾದ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಸಂಬಂಧಿಸಿದ ದಾಖಲಾತಿಯನ್ನು ಸಂಬಂಧಪಟ್ಟ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣುವಂತೆ ಅಪ್‌ಲೋಡ್ ಮಾಡತಕ್ಕದ್ದು".** ಅರ್ಜಿ ಶುಲ್ಕ (ಹಿಂತಿರುಗಿಸಲಾಗುವುದಿಲ್ಲ) e-Procurement ನಿಯಮಾನುಸಾರ, ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಾಂಕಗಳು ರಜಾ ದಿನಗಳನ್ನಾಗಿ ಘೋಸಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯಲ್ಲಿ ವಿಚಾರಿಸಬಹುದು ಜಿ.ಎಸ್.ಟಿ. ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು.

ಇಂಡೆಂಟ್ ಸಂಖ್ಯೆ: CUDA/2020-21/OW/Work_Indent-45/call-3 **ಟೆಂಡರಿಗಿಟ್ಟ ಮೊತ್ತ:** ರೂ. 470.30 ಲಕ್ಷಗಳು. **ಟೆಂಡರ್ ಪೂರ್ವಭಾವಿ ಸಭೆ ದಿನಾಂಕ:** 01.03.2021. **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 10.03.2021ರ ಸಂಜೆ 5:30 ಗಂಟೆಯವರೆಗೆ. **ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 12.03.2021ರ ಸಂಜೆ 5:30 ಗಂಟೆಗೆ. **ಆರ್ಥಿಕ ಬಿಡ್ ತೆರೆಯುವ ದಿನಾಂಕ:** 16.03.2021ರ ಸಂಜೆ 5:30 ಗಂಟೆಗೆ.

ಸಹಿ/- ಆಯುಕ್ತರು,
ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ

ವಾಸಾಸಂಇ/ಚಿತ್ರದುರ್ಗ/ಜಿಎ/804/2020-21

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಛೇರಿ ಕಾಂಪ್ಲೆಕ್ಸ್, 9ನೇ ಮೈನ್, 9ನೇ ಕ್ರಾಸ್, ಜಯನಗರ 2ನೇ ಬ್ಲಾಕ್, ಬೆಂಗಳೂರು-560011.

ಸಂ. ಕಾಅಪ್ರಾ(ಎಸ್)/ಇ-ಪ್ರೊಕ್ಯೂರ್/52/2020-21 ದಿನಾಂಕ : 25.02.2021

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
ದ್ವಿಲಕೋಟೆ ಪದ್ಧತಿ (ಟೆಂಡರ್ ಅಧಿಸೂಚನೆ) (2ನೇ ಕರೆ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬಿಬಿಎಂಪಿ ಇವರು ಆಯುಕ್ತರು, ಬಿಬಿಎಂಪಿ, ಬೆಂಗಳೂರಿನ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಿದ್ದಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.https://eproc.karnataka.gov.in) ಮೂಲಕ ಕೆಳಗೆ ನೀಡಲಾದ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಬಹುದು. ಟೆಂಡರ್‌ದಾರರು ಅರ್ಹತೆ ಪಡೆಯಲು ಟೆಂಡರ್‌ಗಳಿಗೆ ಸೂಚನೆಗಳ ಷರತ್ತು 3ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮನಿಸಲು ಟೆಂಡರ್‌ಗಳಿಗೆ ಸೂಚಿಸಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ)
1	ವಾರ್ಡ್ ಸಂಖ್ಯೆ 142 (ಕೆಡಬ್ಲ್ಯೂ-4ರ ಪ್ರಕಾರ) ರಲ್ಲಿರುವ ಗಾಂಧಿ ಬಜಾರ್ ಮಲ್ಟಿ ಲೆವೆಲ್ ಕಾರ್ ಪಾರ್ಕಿಂಗ್ ನಿರ್ಮಾಣ.	2095.00

(1) ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **17.03.2021 ರಂದು 16.00 ಗಂಟೆಗೆ.** (2) ಬಿಡ್ ಪೂರ್ವ ಸಭೆ ದಿನಾಂಕ ಮತ್ತು ಸಮಯ : **10.03.2021 ರ ಸಂಜೆ 3.00 ಗಂಟೆಗೆ,** ಕಾರ್ಯಪಾಲಕ ಅಭಿಯಂತರರ ಕಚೇರಿ-ಯೋಜನೆ (ದಕ್ಷಿಣ) ಇಲ್ಲಿ ನಡೆಯುತ್ತದೆ. (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **17.03.2021 ರ ಸಂಜೆ 4.00 ಗಂಟೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **19.03.2021 ರ ಸಂಜೆ 4.30 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **23.03.2021 ರ ಸಂಜೆ 4.00 ಗಂಟೆಗೆ.** ಅಥವಾ ತಾಂತ್ರಿಕ ಬಿಡ್ ಅನುಮೋದನೆಯ ನಂತರ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಉಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು-1

ಸಂಖ್ಯೆ: ಹೆಚ್‌ಸಿಆರ್‌ಬಿ/ಸಿಜೆಆರ್-1/2020 ದಿನಾಂಕ : 26.02.2021

ಪ್ರಕಟಣೆ

ಈ ಕಛೇರಿಯ ಸಮ ಸಂಖ್ಯೆಯ ಪ್ರಕಟಣೆ ದಿನಾಂಕ: 25.02.2020ರ ಪ್ರಕಾರ ಸಿವಿಲ್ ನ್ಯಾಯಾಧೀಶರುಗಳ 53 ಹುದ್ದೆಗಳನ್ನು ಕರ್ನಾಟಕ ನ್ಯಾಯಿಕ ಸೇವೆ (ನೇಮಕಾತಿ) ನಿಯಮಗಳು 2004 ಮತ್ತು ತಿದ್ದುಪಡಿ ನಿಯಮಗಳು 2011, 2015 ಮತ್ತು 2016ರ ಅನುಸಾರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸಿವಿಲ್ ನ್ಯಾಯಾಧೀಶರ ಹುದ್ದೆಗೆ ಆಯ್ಕೆಯಾದ 31 ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ: 25.02.2021 ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕೃತ ಜಾಲತಾಣ **https://karnatakajudiciary.kar.nic.in/recruitment.php** ನಲ್ಲಿ ಪ್ರಕಟಿಸಲಾಗಿದೆ.

ಆದೇಶದ ಮೇರೆಗೆ
(ಮಂಜುನಾಥ ನಾಯಕ್)
ರಿಜಿಸ್ಟ್ರಾರ್ (ನೇಮಕಾತಿ)

ವಾಸಾಸಂಇ/ಉನಿ.ನ/81/ಎಂಸಿಎ/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ
ಕಾರ್ಯನಿರ್ವಾಹಣಾಧಿಕಾರಿಗಳ ಕಾರ್ಯಾಲಯ, ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ
ಹುಲಿಗಿ-583 234 ತಾ:ಜಿ:ಕೊಪ್ಪಳ
E-mail:eosrihuligemmadevi@gmail.com Ph: 9482771699

ಸಂಖ್ಯೆ:ಹುದೇ:ಸಿಆರ್: 2020-21 ದಿನಾಂಕ: 25-02-2021

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ ಹುಲಿಗಿಯ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ **ಎಕ್ಸ್‌ಪ್ರೆಶನ್ ಆಫ್ ಇಂಟರೆಸ್ಟ್ ಟು ಐಡೆಂಟಿಫೈ ಆರ್ಕಿಟೆಕ್ಟ್ (Expression of Interest to identify Architect)** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಸರ್ವೀಸ್ ಟೆಂಡರ್ ಕರೆಯಲಾಗಿದೆ. ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಈ ಕೆಳಗಿನ ಕೋಷ್ಟಕದಲ್ಲಿ ಸೂಚಿಸಿರುವ ವೇಳಾಪಟ್ಟಿಯಂತೆ ಭಾಗವಹಿಸಬಹುದಾಗಿದೆ.

ಇ-ಟೆಂಡರ್‌ಗಾಗಿ ನಿಗಧಿಪಡಿಸಿದ ವೇಳಾ ಪಟ್ಟಿ ಈ ಕೆಳಗಿನಂತಿದೆ

1.	ಟೆಂಡರ್ ಸಂಖ್ಯೆ	HRICE_HDT ED/EO/EI/CONSULTANCY/HULIGI/2020-21
2.	ಟೆಂಡರ್ ಪ್ರಾರಂಭದ ದಿನಾಂಕ	25-02-2021 ಸಾಯಂಕಾಲ 13.59 ಗಂಟೆಗೆ
3.	ಟೆಂಡರ್‌ನಲ್ಲಿ ನೊಂದಾಯಿಸಲು ಮತ್ತು ಭಾಗವಹಿಸಲು ಕೊನೆ ದಿನಾಂಕ	10-03-2021 ಸಾಯಂಕಾಲ 16.30 ಗಂಟೆಗೆ
4.	ತಾಂತ್ರಿಕ ಟೆಂಡರ್‌ನ್ನು ತೆರೆಯುವ ದಿನಾಂಕ	12-03-2021 ಸಾಯಂಕಾಲ 16.30 ಗಂಟೆಗೆ
5.	ಆರ್ಥಿಕ ಟೆಂಡರ್‌ನ್ನು ತೆರೆಯುವ ದಿನಾಂಕ	14-03-2021 ಸಾಯಂಕಾಲ 16.30 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ ಸರ್ಕಾರದ ವೆಬ್‌ಸೈಟ್ https://www.eproc.karntaka.gov.in ಮೂಲಕ ಮಾತ್ರ, ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ. **8095864999, 9482771699**

ಸಹಿ/-
ಕಾರ್ಯನಿರ್ವಾಹಣಾಧಿಕಾರಿಗಳು,
ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ, ಹುಲಿಗಿ.

ವಾಸಾಸಂಇ/ಕೊಪ್ಪಳ/422/ಅಲಕ್‌ನಂದ/2020-21

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು-1ರವರ ಕಛೇರಿ, ಕೆರೆಗಳು ವಿಭಾಗ,
3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್. ಆರ್. ವೃತ್ತ, ಬೆಂಗಳೂರು-560 002.

ಸಂ: ಕಾಪಾಅ-1(ಕೆರೆಗಳು)/ಟೆಂಡ್/16/2020-21 ದಿನಾಂಕ:26.02.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು-1, ಕೆರೆಗಳು ವಿಭಾಗ ಇವರು ಬೃ.ಬೆಂ.ಮ.ಪಾ ಆಯುಕರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನೆ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ (ರೂ. ಲಕ್ಷಗಳಲ್ಲಿ)
1	ಬೃಬೆಂಮಪಾ ಅಭಿವೃದ್ಧಿಪಡಿಸಿದ ಕೆರೆಗಳಿಗೆ ಸಿಸಿಟಿವಿ ಕ್ಯಾಮೆರಗಳನ್ನು ಒದಗಿಸುವ ಕಾಮಗಾರಿ.	500.00

ಇಎಂಡಿ ಘೋಷಣೆ: ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : FD675 Expenditure - 12/2020, ದಿನಾಂಕ:22.12.2020ರಂತೆ. (1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ದಿನಾಂಕ **28.02.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಪೂರ್ವಭಾವಿ ಸಭೆ: **09.03.2021ರ ಸಂಜೆ 3.00 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **15.03.2021 ರ ಸಂಜೆ 4.00 ಗಂಟೆಯವರೆಗೆ** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **16.03.2021 ರ ಸಂಜೆ 4.30ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು-1, ಕೆರೆಗಳು ವಿಭಾಗ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
E.S.I.S.M. SERVICES KARNATAKA
ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು-560010.
ಟೆಲಿಫ್ಯಾಕ್ಸ್: (080) 23324216 ವೆಬ್‌ಸೈಟ್: https://esisms.karnataka.gov.in

ಸಂ.: ESIS/EGS/07/2020-21 ದಿನಾಂಕ: 25.02.2021

ಅಲ್ಪಾವಧಿ ಟೆಂಡರ್‌ಗಳ ಪ್ರಕಟಣೆ

ಕಾರಾವಿ ನಿಗಮದ ಪಿಐಪಿ-2020-21ರ ಅಡಿಯಲ್ಲಿ ಅನುಮೋದನೆ ಅನ್ವಯ ಕಾರಾವಿಯೋ ಸೇವೆಗಳ ಇಲಾಖೆಯ ವಿವಿಧ ಕಾರಾವಿ ಆಸ್ಪತ್ರೆಗಳಿಗೆ ಮತ್ತು ರೋಗ ಪತ್ತೆ ಹಚ್ಚುವ ಕೇಂದ್ರಗಳಿಗೆ ವಿವಿಧ ವಿಭಾಗವಾರು ಉಪಕರಣಗಳ ಖರೀದಿಗಾಗಿ ಅಲ್ಪಾವಧಿ ಟೆಂಡರ್‌ಗಳ ಪ್ರಕಟಣೆ.
(ಟೆಂಡರ್-ಎ, ಟೆಂಡರ್-ಬಿ, ಟೆಂಡರ್-ಸಿ, ಟೆಂಡರ್-ಡಿ)

(1) ಟೆಂಡರ್ ಉಲ್ಲೇಖ: **ESIS/EGS/07(Tender-A)/2020-21,** ದಿನಾಂಕ: **25.02.2021.**
ESIS/EGS/07(Tender-B)/2020-21, ದಿನಾಂಕ: **25.02.2021.**
ESIS/EGS/07(Tender-C)/2020-21, ದಿನಾಂಕ: **25.02.2021.**
ESIS/EGS/07(Tender-D)/2020-21, ದಿನಾಂಕ: **25.02.2021.**

(2) ಇ-ಪೋರ್ಟಲ್‌ನಲ್ಲಿ ಟೆಂಡರ್ ವಿವರಗಳ ಲಭ್ಯತೆಯ ದಿನಾಂಕ: **01.03.2021, ಬೆಳಗ್ಗೆ 11:00 ಗಂಟೆಯಿಂದ**

(3) ಪೂರ್ವಭಾವಿ ಸಭೆ: ಕಾರಾವಿಯೋ ವೈ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು-560010 ಇಲ್ಲಿ ದಿನಾಂಕ: **02.03.2021**ರ **ಬೆಳಗ್ಗೆ 11:00 ಗಂಟೆಗೆ** ನಡೆಯಲಿದೆ.

(4) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮೂಲಕ ಮಾತ್ರ ಟೆಂಡರ್ ದಸ್ತಾವೇಜು / ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: **08.03.2021ರ ಸಂಜೆ 4:30 ಗಂಟೆವರೆಗೆ.**

(5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: ಕಾರಾವಿಯೋ ವೈ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು-560010 ಇಲ್ಲಿ ದಿನಾಂಕ: **10.03.2021**ರ **ಬೆಳಗ್ಗೆ 11:30 ಗಂಟೆಗೆ.**

(6) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ತೆರೆಯುವ ಸ್ಥಳ: **ಕಾರಾವಿಯೋ ವೈ ಸೇವೆಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು-560010.**

(7) ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮತ್ತು ಇಲಾಖೆಯ ವೆಬ್‌ಸೈಟ್ **https://esisms.karnataka.gov.in** ಗೆ ಭೇಟಿ ನೀಡಿ.

(8) ಸಂಪರ್ಕಿಸಬೇಕಾದ ವಿಳಾಸ: ನಿರ್ದೇಶಕರು, ಕಾರಾವಿಯೋ ವೈ ಸೇವೆಗಳು, ರಾಜಾಜಿನಗರ, ಬೆಂಗಳೂರು-560010.

ಸಹಿ/-, ನಿರ್ದೇಶಕರು
ಕಾರಾವಿಯೋ ವೈ ಸೇವೆಗಳು

ವಾಸಾಸಂಇ/ಉನಿನ/ಎಲ್‌ಸಿ/2934/2020-21

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು - 560001. ದೂರವಾಣಿ: 080-22215601, 22211246 ಫ್ಯಾಕ್ಸ್: 22215602

ಸಂ. ಡಿವೈಇಎಸ್/ಖೇ.ಇ/48/2020-21 ದಿನಾಂಕ: 23.02.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ) (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001, ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವಜನ ಕೇಂದ್ರ, ವಿದ್ಯಾನಗರಕ್ಕೆ ಫಿಜಿಯೋಥೆರಪಿ ಉಪಕರಣಗಳನ್ನು ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನೇಮಿಸುವ ಸಂಬಂಧ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿ ವಿವರ : ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ ಶ್ರೀ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವಜನ ಕೇಂದ್ರ, ವಿದ್ಯಾನಗರಕ್ಕೆ ಫಿಜಿಯೋಥೆರಪಿ ಉಪಕರಣಗಳನ್ನು ಸರಬರಾಜು ಮಾಡುವುದು

ಟೆಂಡರ್ ಮೊತ್ತ : ರೂ. 31.15 ಲಕ್ಷ

ಇಎಂಡಿ ಮೊತ್ತ : ರೂ. 50,000/-

ಆಸಕ್ತ ಟೆಂಡರ್‌ದಾರರು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 03.03.2021 ಸಮಯ 16.30 ಗಂಟೆ.
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.03.2021 ಸಮಯ 16.30 ಗಂಟೆ.
3) ಹಣಕಾಸು ಬಿಡ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/-
ಉಪ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/DDU/ZEN/R.O:2950/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಹಿರಿಯ ಭೂ ವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಉಪ ವಿಭಾಗಾಧಿಕಾರಿಗಳ ಕಛೇರಿ ಕಟ್ಟಡಗಳ ಸಂಕೀರ್ಣ, ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ
Fax :08182-221647 E-Mail sgshi-dmg-ka@nic.in

ಅಧಿಸೂಚನೆ ಸಂಖ್ಯೆ/ಗಭೂಇ/ಹಿಭೂಶಿ/ಕ.ಗ.ಗು/ಡ್ರೋಣ್&ಡಿ.ಜಿ.ಪಿ.ಎಸ್ ಸರ್ವೆ-1/2020-21/3575 ದಿನಾಂಕ: 25.02.2021

ಇ-ಟೆಂಡರ್ ಅಧಿಸೂಚನೆ ಆಹ್ವಾನ

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ-1994 ಹಾಗೂ ತಿದ್ದುಪಡಿ ನಿಯಮಗಳು 2020 ರ ಸಂಖ್ಯೆಯ: ಸಿಐ:115:ಎಂಎಂಎಸ್ ದಿನಾಂಕ: 30.06.2020 ನಿಯಮ 40 ರಡಿ ಸುತ್ತೋಲೆ ಮತ್ತು ತಿದ್ದೋಲೆ ದಿನಾಂಕ: 30.12.2020 ರಂತೆ ಸಕ್ಷಮ ಪ್ರಾಧಿಕಾರದಿಂದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಅಂತಿಮಗೊಳಿಸಬೇಕೆಂದು ಅಧಿಸೂಚಿಸಿರುತ್ತಾರೆ. ಅದರಂತೆ ಮಾನ್ಯ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಪತ್ರ ಸಂಖ್ಯೆ: ಗಭೂಇ/ಉನಿ(ಖ.ಆ)/ಕಗಗುಶಾ/ಡ್ರೋಣ್ ಸರ್ವೆ-01/ಟೆಂಡರ್ ಡಾಕ್ಯೂಮೆಂಟ್/2020-21/4680 ದಿನಾಂಕ: 07.12.2020 ರನ್ವಯ ಜಿಲ್ಲಾ ವ್ಯಾಪ್ತಿಯಲ್ಲಿ ಮಂಜೂರು ಮಾಡಿರುವ ಕಟ್ಟಡ ಕಲ್ಲು ಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗುತ್ತಿಗೆದಾರರು ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ತಗೆದಿರುವ ಉಪ ಖನಿಜದ ಪ್ರಮಾಣವನ್ನು ಅಂದಾಜಿಸಿ Drone/DGPS ಇ ಇ-ಪ್ರೊಕ್ಯುರ್‌ಮೆಂಟ್ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಲು ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ವಹಿಸಲಾಗಿರುತ್ತದೆ. ಈ ಸಂಬಂಧ ಕಟ್ಟಡ ಕಲ್ಲು/ ಅಲಂಕಾರಿಕ ಶಿಲೆ ಗಣಿ ಗುತ್ತಿಗೆ ಪ್ರದೇಶಗಳ ಡ್ರೋಣ್ ಮತ್ತು ಡಿಜಿಪಿಎಸ್ ಸಮೀಕ್ಷೆ ನಡೆಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಇ-ಪ್ರೊಕ್ಕುರ್‌ಮೆಂಟ್ ಪೋರ್ಟಲ್ (http://eproc.karnataka.gov.in) ರಲ್ಲಿ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಪ್ರೀ ಕ್ವಾಲಿಫಿಕೇಷನ್ ಟೆಂಡರ್‌ಗೆ ಅರ್ಜಿ ನಮೂನೆ, ಬಿಡ್ ಡಾಕ್ಯುಮೆಂಟ್ ಹಾಗೂ ಇತರೆ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 02.03.2021, ಪ್ರಿ ಬಿಡ್ ಮೀಟಿಂಗ್ ದಿನಾಂಕ: 09.03.2021 ಸ್ಥಳ: ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಎರಡನೇ ಮಹಡಿ, ಉಪ ವಿಭಾಗಾಧಿಕಾರಿಗಳ ಕಛೇರಿ ಕಟ್ಟಡ ಸಂಕೀರ್ಣ, ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ, ಪ್ರೀ-ಕ್ವಾಲಿಫಿಕೇಷನ್ ಟೆಂಡರ್‌ಗಳನ್ನು ಇ-ಪ್ರೋಕ್ಯುರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ: 16.03.2021. ಪ್ರೀ-ಕ್ಯಾಲಿಫಿಕೇಷನ್ ಟೆಂಡರ್‌ಗಳನ್ನು ಇ-ಪ್ರೋಕ್ಯುರ್‌ಮೆಂಟ್ ಮೂಲಕ ತೆರೆಯುವ ದಿನಾಂಕ: 19.03.2021. ಹೆಚ್ಚಿನ ಮಾಹಿತಿಗಾಗಿ ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಎರಡನೇ ಮಹಡಿ, ಉಪ ವಿಭಾಗಾಧಿಕಾರಿಗಳ ಕಛೇರಿ ಕಟ್ಟಡ ಸಂಕೀರ್ಣ, ಬಾಲರಾಜ್ ಅರಸ್ ರಸ್ತೆ, ಶಿವಮೊಗ್ಗ ದೂರವಾಣಿ ಸಂಖ್ಯೆ: 08182-221647 ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಿದೆ.

ಸಹಿ/- ಹಿರಿಯ ಭೂವಿಜ್ಞಾನಿ ಹಾಗೂ ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ(ಗಣಿ), ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ-147/02/ಎಂಸಿಎ/20-21

ಸೂಕ್ಷ್ಮ ವಲಯದ ವ್ಯಾಪ್ತಿ ಕುಗ್ಗಿಸಲು ಯತ್ನ: ಪರಿಶೀಲನಾ ಹಂತದಲ್ಲಿ ಅರಣ್ಯ ಇಲಾಖೆ ಪ್ರಸ್ತಾವ

ಪರಿಸರ ಸೂಕ್ಷ್ಮ ವಲಯದಲ್ಲೇ ಗಣಿಗಾರಿಕೆ!

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಲ್ಲು ಗಣಿಗಾರಿಕೆಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಜೋಗಿಮಟ್ಟಿ ವನ್ಯಧಾಮದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯನ್ನು 10 ಕಿ.ಮೀ.ನಿಂದ ಒಂದು ಕಿ.ಮೀ.ಗೆ ಕುಗ್ಗಿಸುವ ಪ್ರಯತ್ನ ನಡೆಯುತ್ತಿದೆ. ಈ ಸಂಬಂಧ ಅರಣ್ಯ ಇಲಾಖೆ ಸಲ್ಲಿಸಿರುವ ಪ್ರಸ್ತಾವ ಸರ್ಕಾರದ ಪರಿಶೀಲನಾ ಹಂತದಲ್ಲಿದೆ.

ಜೋಗಿಮಟ್ಟಿ ವನ್ಯಧಾಮದ ವ್ಯಾಪ್ತಿಯನ್ನು ಪರಿಸರ ಸೂಕ್ಷ್ಮ ವಲಯ ಗುರುತಿಸುವಂತೆ ಸುಪ್ರೀಂ ಕೋರ್ಟ್ 2018ರಲ್ಲಿ ಸರ್ಕಾರಕ್ಕೆ ಸೂಚಿಸಿತ್ತು. 10 ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ಸೇರಿದಂತೆ ಪರಿಸರಕ್ಕೆ ಹಾನಿಯಾಗುವ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸುವಂತೆಯೂ ತಾಕೀತು ಮಾಡಿತ್ತು. ಆರು ತಿಂಗಳು ಇದನ್ನು ಪಾಲಿಸಿದ ಸರ್ಕಾರ, ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯನ್ನೇ ಕುಗ್ಗಿಸಲು ಮುಂದಾಯಿತು.

ಸೂಕ್ಷ್ಮ ವಲಯದ ಘೋಷಣೆಗೂ ಮೊದಲೇ ಜೋಗಿಮಟ್ಟಿ ವನ್ಯಧಾಮದ ಸುತ್ತ ಕಲ್ಲು ಕ್ವಾರಿಗಳು ತಲೆಯತ್ತಿದ್ದವು. ಪರವಾನಗಿ ನವೀಕರಣ, ಸ್ಫೋಟ, ಕಲ್ಲು ಸಾಗಣೆಗೆ ತೊಂದರೆಯಾಗುತ್ತಿದ್ದಂತೆ ಕ್ವಾರಿ ಮಾಲೀಕರು ಸರ್ಕಾರದ ಮೇಲೆ ಒತ್ತಡ ಹೇರಿದರು. ಇದಕ್ಕೆ ಮಣಿದ ಸರ್ಕಾರ ವನ್ಯಧಾಮದ ವ್ಯಾಪ್ತಿಯಲ್ಲಿಯೂ ಗಣಿಗಾರಿಕೆಗೆ ಅವಕಾಶ ಕಲ್ಪಿಸಿದೆ.

ಚಿತ್ರದುರ್ಗ, ಹೊಳಲ್ಕೆರೆ ಹಾಗೂ ಹಿರಿಯೂರು ತಾಲ್ಲೂಕಿನ 10,049 ಹೆಕ್ಟೇರ್‌ನಲ್ಲಿ ಹರಡಿಕೊಂಡಿರುವ ಜೋಗಿಮಟ್ಟಿ, ಗಿರಿಧಾಮವೂ ಹೌದು. ಅತಿಹೆಚ್ಚು ಗಾಳಿ ಬೀಸುವ ತಾಣವೆಂದು ಖ್ಯಾತಿ ಪಡೆದಿದೆ. ಅಪರೂಪದ ಕೊಂಡುಕುರಿಯ (ಫೋರ್ ಹಾರ್ನ್ಡ್ ಆಂಟಿಲೋಪ್) ಆವಾಸ ಸ್ಥಾನವೂ ಇದಾಗಿದೆ. ವಿಶ್ವದಲ್ಲಿಯೇ ನಾಲ್ಕು ಕೊಂಬುಗಳುಳ್ಳ ಜಿಂಕೆ ಜಾತಿಗೆ ಸೇರಿದ ಈ ಪ್ರಾಣಿಗೆ ಬೆಟ್ಟಾಡು, ಚೌಸಿಂಗ ಎಂದೂ ಕರೆಯುತ್ತಾರೆ. ಅತ್ಯಂತ ಸೂಕ್ಷ್ಮ ಸ್ವಭಾವದ ಇದು ಅಳಿವಿನಂಚಿನ ಪಟ್ಟಿಯಲ್ಲಿದೆ.

ವನ್ಯಧಾಮವು ಕೃಷ್ಣಮೃಗ, ಚಿರತೆ, ಕರಡಿ, ನವಿಲು, ಕಾಡು ಬೆಕ್ಕು, ಕಾಡು ಹಂದಿ, ನರಿ, ಮೊಲ ಸೇರಿ ಹಲವು ವನ್ಯಜೀವಿಗಳಿಗೆ ಆಶ್ರಯ ತಾಣವಾಗಿದೆ. ಗಣಿಗಾರಿಕೆ ಪರಿಣಾಮ ಇಲ್ಲಿನ ಆನೆ ಕಾರಿಡಾರ್‌ಗೂ ಕಂಟಕ ಎದುರಾಗಿದೆ.

ಪ್ರಜಾವಾಣಿ ವಿಶೇಷ

ಸೂಕ್ಷ್ಮ ವಲಯದಲ್ಲಿ ಹೊಸ ಕ್ವಾರಿಗಳಿಗೆ ಅನುಮತಿ ನೀಡಲು ಅವಕಾಶ ಕಲ್ಪಿಸುವಂತೆ ಅರಣ್ಯ ಇಲಾಖೆಯು ರಾಷ್ಟ್ರೀಯ ವನ್ಯಜೀವಿ ಮಂಡಳಿಯನ್ನು ಕೋರಿದೆ. ಚಿತ್ರದುರ್ಗ ತಾಲ್ಲೂಕಿನ ಮಲ್ಲನಕಟ್ಟೆ ಗ್ರಾಮದ ಸರ್ಕಾರಿ ಖರಾಬು ಜಮೀನಿನಲ್ಲಿ ಗಣಿಗಾರಿಕೆಗೆ ಅನುಮತಿ ಕೋರಲಾಗಿದೆ.

‘ಗಣಿಗಾರಿಕೆಗೆ ಉದ್ದೇಶಿಸಿದ ಸ್ಥಳದಲ್ಲಿ ಅಳಿವಿನಂಚಿನ ಯಾವುದೇ ವನ್ಯಜೀವಿ ಇರುವ ಬಗ್ಗೆ ಪುರಾವೆ ಸಿಕ್ಕಿಲ್ಲ’ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸರ್ಕಾರಕ್ಕೆ ನೀಡಿದ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಇದು ವನ್ಯಜೀವಿ ತಜ್ಞರಲ್ಲಿ ಆತಂಕ ಮೂಡಿಸಿದೆ.

– ಜಿ.ಬಿ.ನಾಗರಾಜ್, ಆರ್.ಜಿತೇಂದ್ರ, ಖಲೀಲ್ ಅಹ್ಮದ್ ಶೇಖ್ (ಶಿರಹಟ್ಟಿ)

ಇನ್ನಷ್ಟು ವಿಶೇಷ ನಾಳೆ



ಚಿತ್ರದುರ್ಗದ ಜೋಗಿಮಟ್ಟಿ ವನ್ಯಧಾಮ

ಕಾಯ್ದಿಟ್ಟ ಅರಣ್ಯದಲ್ಲೂ ಸ್ಫೋಟದ ಸದ್ದು

ಶಿರಹಟ್ಟಿ: ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ನೈಸರ್ಗಿಕವಾಗಿ ದೊರೆಯುವ ಹೇರಳ ಕಲ್ಲಿನ ನಿಕ್ಷೇಪಗಳಿವೆ. ಪ್ರಭಾವಿಗಳ ಬೆಂಬಲದಿಂದ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆ ಎಂಬುದು ಸಾರ್ವಜನಿಕರ ಆರೋಪ.

ತಾಲ್ಲೂಕಿನಲ್ಲಿ ಒಟ್ಟು 48 ಕ್ವಾರಿಗಳು ಮತ್ತು 22 ಕ್ರಷರ್‌ಗಳು ಕಾರ್ಯ ನಿರ್ವಹಿಸುತ್ತಿವೆ. ತಾಲ್ಲೂಕಿನ ಮಾಗಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 11 ಕಲ್ಲಿನ ಕ್ವಾರಿಗಳು ಹಾಗೂ 9 ಕ್ರಷರ್‌ಗಳಿವೆ. ಪರಸಾಪೂರ ಗ್ರಾಮದ ಸುತ್ತಮುತ್ತ ವ್ಯಾಪಕವಾಗಿ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಮನೆಯ ಗೋಡೆಗಳು ಬಿರುಕು ಬಿಟ್ಟಿವೆ.

ಕಪ್ಪತ್ತಗುಡ್ಡವನ್ನು ಸಂರಕ್ಷಿತ ವನ್ಯಜೀವಿಧಾಮವನ್ನಾಗಿ ಘೋಷಣೆ ಮಾಡಲಾಗಿದೆ. ಕಪ್ಪತಗುಡ್ಡವನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ತಾಲ್ಲೂಕಿನಲ್ಲಿ ಬರುವ ಮೂರು ಮತ್ತು ನಾಲ್ಕನೇ ಭಾಗದಲ್ಲಿ ಪ್ರಭಾವಿಗಳ ಬೆಂಬಲದಿಂದ ಕ್ವಾರಿ ಮತ್ತು ಕ್ರಷರ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎನ್ನುತ್ತಾರೆ ಪರಿಸರವಾದಿಗಳು.

ಚಿಕ್ಕಸವಣೂರ ಮತ್ತು ಚನ್ನಪಟ್ಟಣ ಗ್ರಾಮಗಳ ವ್ಯಾಪ್ತಿಯ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಸರ್ಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳ ಜಾಣ ಮೌನ ಪರಿಸರಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ರಣಹದ್ದುಗಳಿಗೆ ಸಂಚಕಾರ

ರಾಮನಗರ: ಜಿಲ್ಲೆಯ 84 ಗಣಿಗಳಲ್ಲಿ ಸದ್ಯ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಸರ್ಕಾರದ ನಿಯಮಾವಳಿಗಳನ್ನು ಗಾಳಿಗೆ ತೂರಿರುವುದೇ ಹೆಚ್ಚು.

ಜಿಲ್ಲೆಯಲ್ಲಿ 22 ಅಲಂಕಾರಿಕ ಶಿಲೆ ಗಣಿಗಳು ಸಕ್ರಿಯವಾಗಿವೆ. ಇಲ್ಲಿ ಶಿಲೆಗಳನ್ನು ನಾಜೂಕಿನಿಂದ ತೆಗೆಯಬೇಕಾದ ಕಾರಣ ತೀವ್ರ ಸ್ವರೂಪದ ಸ್ಫೋಟಕಗಳನ್ನು ಬಳಸುತ್ತಿಲ್ಲ. ಆದರೆ, ಉಳಿದ ಗಣಿಗಳಲ್ಲಿ ಸ್ಫೋಟದ ತೀವ್ರತೆ ಹೆಚ್ಚಿದೆ. ಇದು ರಣಹದ್ದುಗಳ ಆವಾಸಕ್ಕೂ ಸಂಚಕಾರ ತಂದಿದೆ.

ಸಂರಕ್ಷಿತ ಅರಣ್ಯ ಪ್ರದೇಶವಾಗಿರುವ ರಾಮದೇವರ ಬೆಟ್ಟದ ಬಳಿಯೇ ಹೆದ್ದಾರಿಗಾಗಿ ಬಂಡೆಗಳನ್ನು ಸ್ಫೋಟಿಸಲಾಗುತ್ತಿದೆ. ಇದರಿಂದ ಬೆರಳಣಿಕೆಯಷ್ಟಿರುವ ರಣಹದ್ದುಗಳೂ ವಲಸೆ ಹೋಗುತ್ತಿವೆ ಎಂಬ ಆರೋಪ ಪರಿಸರಪ್ರಿಯರದ್ದು.

ಹೆದ್ದಾರಿ ಕಾಮಗಾರಿ ಗುತ್ತಿಗೆ ಪಡೆದ ಕಂಪನಿಯು ನಿಯಮಗಳನ್ನು ಗಾಳಿಗೆ ತೂರಿ ಹಗಲು ಹೊತ್ತಿನಲ್ಲೇ ಸ್ಫೋಟಗಳನ್ನು ನಡೆಸುತ್ತಿದೆ. ಈ ಸಂಬಂಧ ಜಿಲ್ಲಾಡಳಿತದ ಎಚ್ಚರಿಕೆಯ ನೋಟಿಸ್‌ಗಳಿಗೂ ಗುತ್ತಿಗೆ ಕಂಪನಿ ಸ್ಪಂದಿಸಿಲ್ಲ. ಬದಲಾಗಿ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ನಡೆಸುವ ನೆಪವೊಡ್ಡಿ ಹಗಲು ಹೊತ್ತು ಕಲ್ಲು ಬಂಡೆಗಳನ್ನು ಒಡೆಯುವ ಕಾರ್ಯ ನಡೆಸಿದೆ ಎಂದು ಸ್ಥಳೀಯರು ಆರೋಪಿಸುತ್ತಾರೆ.

‘ಜಿಲ್ಲೆಯಲ್ಲಿರುವ ಎಲ್ಲ ಗಣಿಗಳ ಶೋಧಕ್ಕೆ ನಿರ್ಧರಿಸಿದ್ದೇವೆ. ಅಲ್ಲಿನ ಸ್ಫೋಟಕಗಳ ಸಂಗ್ರಹ, ಆ ಕಾರ್ಯ ಮಾಡುವ ಕಾರ್ಮಿಕರ ವಿವರ ಕಲೆ ಹಾಕುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಜಿಲ್ಲಾಧಿಕಾರಿ ಎಂ.ಎಸ್. ಅರ್ಚನಾ ಹೇಳುತ್ತಾರೆ.

ಚಿರತೆ ಆವಾಸಕ್ಕೆ ಅಪಾಯ

ಬೆಂಗಳೂರು: ಚಿರತೆಗಳಿಗೆ ಬೆಟ್ಟ, ಗುಡ್ಡಗಳೇ ಆವಾಸ. ಆದರೆ, ಮಿತಿ ಮೀರಿದ ಅಕ್ರಮ ಕಲ್ಲು ಗಣಿಗಾರಿಕೆಯ ಪರಿಣಾಮ ಬೆಟ್ಟಗಳು ಕರಗುತ್ತಿವೆ. ಮತ್ತೊಂದೆಡೆ ಗಣಿ ಸ್ಫೋಟಕ್ಕೆ ಪ್ರಾಣಿಗಳೂ ದಿಕ್ಕೆಟ್ಟಿವೆ.

ಆಹಾರದ ಮೂಲ ಬರಿದಾಗುತ್ತಿರುವ ಪರಿಣಾಮ ಚಿರತೆಗಳು ಊರಿನತ್ತ ಲಗ್ಗೆ ಇಡುತ್ತಿವೆ. ಇದು ಮಾನವ ಮತ್ತು ಅವುಗಳ ನಡುವಿನ ಸಂಘರ್ಷಕ್ಕೆ ಮುನ್ನುಡಿ ಬರೆದಿದೆ. ಕೆಲವೊಮ್ಮೆ ಚಿರತೆಯ ಹತ್ಯೆಯೊಂದಿಗೆ ಈ ಸಂಘರ್ಷ ಪರ್ಯಾವಸಾನಗೊಳ್ಳುತ್ತಿರುವುದು ವಿಪರ್ಯಾಸ. ರಾಜ್ಯದ ಮೈಸೂರು, ತುಮಕೂರು, ರಾಮನಗರ, ಮಂಡ್ಯ, ಹಾಸನ, ಉಡುಪಿ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಈ ಸಂಘರ್ಷ ಉಲ್ಬಣಕ್ಕೆ ಅಕ್ರಮ ಗಣಿಗಾರಿಕೆಯೇ ಮೂಲ ಕಾರಣವಾಗಿದೆ ಎನ್ನುತ್ತಾರೆ ವನ್ಯಜೀವಿ ತಜ್ಞರು. ತುಮಕೂರು ಜಿಲ್ಲೆಯಲ್ಲಿ ಚಿರತೆ ಹಾವಳಿ ಎಲ್ಲೆ ಮೀರಿದೆ. ವನ್ಯಜೀವಿ ವಿಜ್ಞಾನಿಗಳು ನಡೆಸಿರುವ ಅಧ್ಯಯನದ ಪ್ರಕಾರ ಈ ಜಿಲ್ಲೆಯ 93 ಗ್ರಾಮಗಳಲ್ಲಿ ಮಾನವ ಮತ್ತು ಚಿರತೆ ಸಂಘರ್ಷ ಇದೆ.

ಸ್ಫೋಟಕ ಪತ್ತೆ: ದಾಖಲೆ ಪರಿಶೀಲನೆ

ಬೀದರ್: ತಾಲ್ಲೂಕಿನ ಸುಲ್ತಾನಪುರ ಬಳಿ ತೆಲಂಗಾಣ ಗಡಿಯಲ್ಲಿ 16 ಕ್ವಿಂಟಲ್ ಜಿಲೆಟಿನ್ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ.

‘ಜಿ.ಕೆ.ಕನ್‌ಸ್ಟ್ರಕ್ಷನ್ ಅಧಿಕಾರಿಗಳಿಂದ ಕೆಲ ದಾಖಲೆಗಳನ್ನು ತರಿಸಿಕೊಂಡು ಜಿಲೆಟಿನ್ ಎಲ್ಲಿಂದ ಖರೀದಿಸಲಾಗಿದೆ? ಯಾವ ಕೆಲಸಕ್ಕೆ ಬಳಸಲಾಗುತ್ತಿತ್ತು? ಯಾವಾಗ ಅನುಮತಿ ಪಡೆಯಲಾಗಿದೆ ಇತ್ಯಾದಿ ಮಾಹಿತಿ ಕಲೆ ಹಾಕಿದ್ದೇವೆ. ಈ ವೇಳೆ ಸುರಕ್ಷತಾ ನಿಯಮ ಅನುಸರಿಸದಿರುವುದು ಕಂಡು ಬಂದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ

ಜಸ್ಟ್ ಮ್ಯೂಸಿಕ್– ಹಿತಾನುಭವ

ಅವರು ಬದುಕಿದ್ದು ಕೇವಲ 39 ವರ್ಷ

ಪಾಶ್ಚಾತ್ಯರಿಗೆ ತಬಲ ಪರಿಚಯಿಸಿದ ಮೊದಲ ಭಾರತೀಯ. ಫ್ರೆಂಚ್, ಜರ್ಮನ್ ಚಿತ್ರಗಳಿಗೆ ತಬಲ ಸಾಥಿ. ಅವರು ಯಾರು ಗೊತ್ತಾ?

https://bit.ly/2ZQVKYT

ಪ್ರಜಾವಾಣಿ ಕನ್ನಡ ಧ್ವನಿ

‘ಕನ್ನಡ ಧ್ವನಿ’ ಪಾಡ್‌ಕಾಸ್ಟ್ ಚಾನೆಲ್‌ನ

ಪ್ರತಿ ಶನಿವಾರದ ‘ಹರಟೆ ಕಟ್ಟೆ’

ಕಲ್ಲು ಕ್ವಾರಿಗಳಲ್ಲಿ ಕಾರ್ಮಿಕರ ಸುರಕ್ಷತೆ ಹಾಗೂ ಮೂಲಸೌಕರ್ಯ

ವಿಷಯ ಕುರಿತ ಈ ದಿನದ ಚರ್ಚೆಯಲ್ಲಿ

ಎಸ್. ದತ್ತಾತ್ರಿ
ರಾಜ್ಯ ಕ್ವಾರಿ ಮಾಲೀಕರ ಸಂಘದ ಅಧ್ಯಕ್ಷ

ಡಾ. ಕಿರಣ ಕಮಲ ಪ್ರಸಾದ್
ವಿಮುಕ್ತಿ ಟ್ರಸ್ಟ್ ಹಾಗೂ ಜೀತ ವಿಮುಕ್ತಿ ಕರ್ನಾಟಕ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಮಧ್ಯಾಹ್ನ 4 ಗಂಟೆಗೆ
ನೀವೂ ಆಲಿಸಿರಿ,
ಸ್ನೇಹಿತರಿಗೂ ಕೇಳಿಸಿರಿ

https://www.prajavani.net/podcast

ಬಿಜೆಪಿ ಮಡಿಲಿಗೆ ತುಮಕೂರು ಪಾಲಿಕೆ

ಪ್ರಜಾವಾಣಿ ವಾರ್ತೆ

ತುಮಕೂರು: ಬಹುಮತ ಇಲ್ಲದಿದ್ದರೂ ಹತ್ತು ವರ್ಷಗಳ ನಂತರ ಮತ್ತೊಮ್ಮೆ ತುಮಕೂರು ಮಹಾನಗರ ಪಾಲಿಕೆಯ ಅಧಿಕಾರ ಹಿಡಿಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.

ಶುಕ್ರವಾರ ನಡೆದ ಚುನಾವಣೆಯಲ್ಲಿ ಪಾಲಿಕೆ ಮೇಯರ್ ಆಗಿ ಬಿಜೆಪಿಯ ಬಿ.ಜಿ.ಕೃಷ್ಣಪ್ಪ, ಉಪಮೇಯರ್ ಆಗಿ ಜೆಡಿಎಸ್‌ನ ನಾಜೀಮಾಬಿ ಅವರು ಅವಿರೋಧವಾಗಿ ಆಯ್ಕೆಯಾದರು.

ಪಾಲಿಕೆಯಲ್ಲಿ ಯಾವುದೇ ಪಕ್ಷಕ್ಕೂ ಬಹುಮತವಿಲ್ಲ. ಹಿಂದಿನ ಬಾರಿ ಕಾಂಗ್ರೆಸ್– ಜೆಡಿಎಸ್ ಒಟ್ಟಾಗಿ ಅಧಿಕಾರ ಹಿಡಿದಿದ್ದವು. ಆದರೆ ಈ ಬಾರಿ ಮೇಯರ್ ಸ್ಥಾನ ಪರಿಶಿಷ್ಟ ಪಂಗಡಕ್ಕೆ, ಉಪಮೇಯರ್ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಬಿಜೆಪಿಯ ಕೃಷ್ಣಪ್ಪ ಅವರೊಬ್ಬರೇ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಿಂದ ಆಯ್ಕೆ ಆಗಿದ್ದ ಏಕೈಕ ಸದಸ್ಯರು. ಹಾಗಾಗಿ ಯಾವುದೇ ಶ್ರಮ, ಹೊಂದಾಣಿಕೆ ಇಲ್ಲದೆ ಬಿಜೆಪಿಗೆ ಅಧಿಕಾರ ಒಲಿದು ಬಂತು.

10 ಲೇಖಕರಿಗೆ ‘ಸಾಹಿತ್ಯಶ್ರೀ ಪ್ರಶಸ್ತಿ’ • ಮಾರ್ಚ್ ಕೊನೆಯ ವಾರದಲ್ಲಿ ಪ್ರಶಸ್ತಿ ಪ್ರದಾನ

ಐವರಿಗೆ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡುವ 2020ನೇ ಸಾಲಿನ ‘ವಾರ್ಷಿಕ ಗೌರವ ಪ್ರಶಸ್ತಿ’ಗೆ ದಕ್ಷಿಣ ಕನ್ನಡದ ಪ್ರೊ. ಅಮೃತ ಸೋಮೇಶ್ವರ, ಗದಗದ ಷಣ್ಮುಖಯ್ಯ ಅಕ್ಕೂರಮಠ ಸೇರಿದಂತೆ ಐವರು ಆಯ್ಕೆಯಾಗಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿಯ ಅಧ್ಯಕ್ಷ ಬಿ.ವಿ. ವಸಂತಕುಮಾರ್, ‘ಕನ್ನಡ ಸಾಹಿತ್ಯಕ್ಕೆ ನೀಡಿದ ಗಮನಾರ್ಹ ಕೊಡುಗೆಯನ್ನು ಪರಿಗಣಿಸಿ ಸಾಹಿತಿಗಳಾದ ಡಾ.ಕೆ. ಕೆಂಪೇಗೌಡ (ರಾಮನಗರ), ಡಾ.ಕೆ.ಆರ್. ಸಂಧ್ಯಾರೆಡ್ಡಿ (ಚಿತ್ರದುರ್ಗ) ಹಾಗೂ ಅಶೋಕಪುರಂ ಕೆ. ಗೋವಿಂದರಾಜು (ಮೈಸೂರು) ಅವರನ್ನು ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಬಹುಮಾನ ಒಳಗೊಂಡಿದೆ’ ಎಂದು ತಿಳಿಸಿದರು.

‘ಸಾಹಿತ್ಯ ಕೃಷಿಯನ್ನು ಪರಿಗಣಿಸಿ 50ರಿಂದ 60 ವರ್ಷದೊಳಗಿನ 10 ಸಾಹಿತಿಗಳನ್ನು 2019ನೇ ಸಾಲಿನ ‘ಸಾಹಿತ್ಯಶ್ರೀ ಪ್ರಶಸ್ತಿ’ಗೆ ಆಯ್ಕೆ ಮಾಡಲಾಗಿದೆ. ಪ್ರೇಮಶೇಖರ್ (ಚಾಮರಾಜನಗರ), ರಾಜಪ್ಪ ದಳವಾಯಿ (ಚಿಕ್ಕಮಗಳೂರು), ಬಿ.ಟಿ. ಜಾಹ್ನವಿ (ದಾವಣಗೆರೆ), ಪ್ರೊ. ಕಲ್ಯಾಣ ರಾವ್ ಜಿ. ಪಾಟೀಲ್ (ಕಲಬುರ್ಗಿ), ಡಾ.ಜೆ.ಪಿ. ದೊಡ್ಡಮನಿ (ಬೆಳಗಾವಿ), ಡಾ. ಮೃತ್ಯುಂಜಯ ರುಮಾಲೆ (ಹೊಸಪೇಟೆ), ಡಿ.ವಿ. ಪ್ರಹ್ಲಾದ್ (ಬೆಂಗಳೂರು), ಡಾ.ಎಂ.ಎಸ್. ಆಶಾದೇವಿ (ಬೆಂಗಳೂರು), ಶಿವಾನಂದಕಳವೆ (ಉತ್ತರ ಕನ್ನಡ) ಹಾಗೂ ವೀಣಾ ಬನ್ನಂಜೆ (ಉಡುಪಿ) ಅವರು ‘ಸಾಹಿತ್ಯಶ್ರೀ ಪ್ರಶಸ್ತಿ’ಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ ₹ 25 ಸಾವಿರ ಒಳಗೊಂಡಿದೆ’ ಎಂದರು.

ಮಾರ್ಚ್‌ನಲ್ಲಿ ಪ್ರಶಸ್ತಿ ಪ್ರದಾನ: ‘ಕೋವಿಡ್ ಕಾರಣ 2019ನೇ ಸಾಲಿನಲ್ಲಿ ಘೋಷಿಸಲಾಗಿದ್ದ ‘ಸಾಹಿತ್ಯಶ್ರೀ ಪ್ರಶಸ್ತಿ’, 2018ರ ಪುಸ್ತಕ ಬಹುಮಾನ ಹಾಗೂ ದತ್ತಿ ಬಹುಮಾನದ ವಿತರಣೆ ಕೂಡ ನಡೆದಿಲ್ಲ. ಮುಂಬರುವ ಮಾರ್ಚ್ ಕೊನೆಯ ವಾರದಲ್ಲಿ ಎರಡು ವರ್ಷದ ಪ್ರಶಸ್ತಿಗಳ ಪ್ರದಾನ ಸಮಾರಂಭವನ್ನು ರಾಯಚೂರಿನಲ್ಲಿ ಹಮ್ಮಿಕೊಳ್ಳಲಾಗುವುದು’ ಎಂದು ವಿವರಿಸಿದರು.

‘ಅಖಿಲ ಭಾರತ ಯುವ ಬರಹಗಾರರ ಸಮಾವೇಶ ನಡೆಸಲು ಹಾಗೂ ಶಾಸನ ಸಾಹಿತ್ಯ ಸಿರಿ ಸಂಪುಟ ಹೊರ ತರಲು ಚಿಂತನೆ ನಡೆಸಲಾಗಿದೆ. ಈ ಎರಡು ಯೋಜನೆಗಳಿಗೆ ತಲಾ ₹ 1 ಕೋಟಿ ಅನುದಾನ ಬೇಕಾಗುತ್ತದೆ. ಈ ಸಂಬಂಧ ಮುಂಬರುವ ಬಜೆಟ್‌ನಲ್ಲಿ ಅನುದಾನ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ’ ಎಂದು ತಿಳಿಸಿದರು.

ರಘುನಾಥ ಚ.ಹ. ಕೃತಿಗೆ ಬಹುಮಾನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ 2019ರ ಪುಸ್ತಕ ಬಹುಮಾನಕ್ಕೆ ‘ಸುಧಾ’ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಅವರ ‘ಬೆಳ್ಳಿತೊರೆ’ ಲಲಿತ ಪ್ರಬಂಧ ಕೃತಿ ಮತ್ತು ಇತರ 18 ಕೃತಿಗಳು ಭಾಜನವಾಗಿವೆ. ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗೆ ನೀಡುವ ಪುಸ್ತಕ ಬಹುಮಾನಕ್ಕೆ 800ಕ್ಕೂ ಅಧಿಕ ಕೃತಿಗಳು ಬಂದಿದ್ದವು. ಈ ಬಹುಮಾನವು ತಲಾ ₹ 25 ಸಾವಿರ ನಗದು ಬಹುಮಾನ ಒಳಗೊಂಡಿದೆ. 2019ರ 9 ದತ್ತಿ ಬಹುಮಾನಗಳನ್ನೂ ಪ್ರಕಟಿಸಲಾಗಿದೆ.



ಪ್ರೊ.ಅಮೃತ ಸೋಮೇಶ್ವರ



ಕೆ. ಕೆಂಪೇಗೌಡ

ಅಶೋಕಪುರಂ ಕೆ.ಗೋವಿಂದರಾಜು

ಷಣ್ಮುಖಯ್ಯ ಅಕ್ಕೂರಮಠ

ಡಾ.ಕೆ.ಆರ್. ಸಂಧ್ಯಾರೆಡ್ಡಿ

2019ರ ಪುಸ್ತಕ ಬಹುಮಾನ ಪುರಸ್ಕೃತರು

ಪ್ರಕಾರ	ಕೃತಿಯ ಹೆಸರು	ಲೇಖಕರು
ಕಾವ್ಯ	ಪಂಚವರ್ಣದ ಹಂಸ	ಸತ್ಯಮಂಗಲ ಮಹಾದೇವ
ನವಕವಿಗಳ ಪ್ರಥಮ ಸಂಕಲನ	ಥಟ್ ಅಂತ ಬರೆದುಕೊಡುವ ರಶೀದಿಯಲ್ಲ ಕವಿತೆ	ಸುಮಿತ್ ಮೇತ್ರಿ
ಕಾದಂಬರಿ	ತೇಜೋ ತುಂಗಭದ್ರಾ	ವಸುಧೇಂದ್ರ
ಸಣ್ಣಕತೆ	ಒಂದು ಚಿಟಿಕೆ ಮಣ್ಣು	ಲಕ್ಷ್ಮಣ ಬಾದಾಮಿ
ನಾಟಕ	ಕಂಬುಗನ್ನಡಿ	ಉಷಾ ನರಸಿಂಹನ್
ಲಲಿತ ಪ್ರಬಂಧ	ಬೆಳ್ಳಿತೊರೆ	ರಘುನಾಥ ಚ.ಹ.
ಪ್ರವಾಸ ಸಾಹಿತ್ಯ	ಯೋರ್ದಾನ್ ಪಿರಮಿಸ್	ಡಿ.ಜಿ. ಮಲ್ಲಿಕಾರ್ಜುನ
ಜೀವನ ಚರಿತ್ರೆ/ಆತ್ಮಕಥೆ	ನಾಗಂದಿಗೆಯೊಳಗಿಂದ	ಬಿ.ಎಂ. ರೋಹಿಣಿ
ಸಾಹಿತ್ಯ ವಿಮರ್ಶೆ	ಪೊದೆಯಿಂದಿಳಿದ ಎದೆಯ ಹಕ್ಕಿ	ಡಾ. ಗುರುಪಾದ ಮರಿಗುದ್ದಿ
ಮಕ್ಕಳ ಸಾಹಿತ್ಯ	ಅಭಿಜಿತನ ಕತೆಗಳು	ವಸುಮತಿ ಉಡುಪ
ವಿಜ್ಞಾನ ಸಾಹಿತ್ಯ	ಆತಂಕ ಮತ್ತು ಭಯಕ್ಕೆ ಸಂಬಂಧಿಸಿದ ಕಾಯಿಲೆಗಳು	ಡಾ.ಕೆ.ಎಸ್. ಪವಿತ್ರ
ಮಾನವಿಕ	ಶಿಕ್ಷಣದಲ್ಲಿ ಭಾಷೆ ಮತ್ತು ಮಾಧ್ಯಮದ ಸಮಸ್ಯೆಗಳು	ಡಾ. ಮಹಾಬಲೇಶ್ವರ ರಾವ್
ಸಂಶೋಧನೆ	ಅನಾವರಣ	ಡಾ. ಚನ್ನಬಸವಯ್ಯ ಹಿರೇಮಠ
ಅನುವಾದ–1 (ಭಾರತೀಯ ಭಾಷೆಯಿಂದ ಕನ್ನಡಕ್ಕೆ)	ಕಾಳಿಗಂಗಾ	ಗೀತಾ ಶೆಣೈ
ಅನುವಾದ–2 (ಕನ್ನಡದಿಂದ ಭಾರತೀಯ ಭಾಷೆಗೆ)	ಜ್ವಾಲಾಮುಖಿ ಪರ್	ಧರಣೇಂದ್ರ ಕುರಕುರಿ
ಅಂಕಣ ಬರಹ/ವೈಚಾರಿಕ ಬರಹ	ಬಕುಲದ ಬಾಗಿಲಿನಿಂದ	ಸುಧಾ ಆಡುಕಳ
ಸಂಕೀರ್ಣ	ನೊಳಂಬರ ಶಾಸನಗಳು	ಪ್ರೊ.ಡಿ.ವಿ. ಪರಮಶಿವಮೂರ್ತಿ, ಡಿ.ಸಿದ್ಧಗಂಗಯ್ಯ
ಲೇಖಕರ ಮೊದಲ ಸ್ವತಂತ್ರ ಕೃತಿ	ಹಾಣಾದಿ	ಕಪಿಲ ಪಿ. ಹನುಮಬಾದೆ

2019ರ ದತ್ತಿ ಬಹುಮಾನ ಪುರಸ್ಕೃತರು

ಪ್ರಕಾರ	ದತ್ತಿನಿಧಿ ಬಹುಮಾನ	ಕೃತಿಯ ಹೆಸರು	ಲೇಖಕರು
ಕಾದಂಬರಿ	ಚದುರಂಗ ದತ್ತಿನಿಧಿ ಬಹುಮಾನ	ಪಕ್ಕಿ ಹಳ್ಳದ ಹಾದಿಗುಂಟ	ಅನುಪಮಾ ಪ್ರಸಾದ್
ಲಲಿತ ಪ್ರಬಂಧ	ವಿ. ಸೀತಾರಾಮಯ್ಯ ಸೋದರಿ ಇಂದಿರಾ ದತ್ತಿ ಬಹುಮಾನ	ಹತ್ತನೆ ಕ್ಲಾಸಿನ ಹುಡುಗಿಯರು	ನೀತಾ ರಾವ್
ಜೀವನಚರಿತ್ರೆ	ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನ	ಬೊಗಸೆ ತುಂಬಾ ಕನಸು	ಡಾ.ಬಿ. ಪ್ರಭಾಕರ ಶಿಶಿಲ
ಸಾಹಿತ್ಯ ವಿಮರ್ಶೆ	ಪಿ. ಶ್ರೀನಿವಾಸರಾವ್ ದತ್ತಿನಿಧಿ ಬಹುಮಾನ	ಕನ್ನಡ ಮ್ಯಾಕ್‌ಬೆತ್‌ಗಳು	ಡಾ.ಎಂ. ಉಷಾ
ಅನುವಾದ–1	ಎಲ್. ಗುಂಡಪ್ಪ ಮತ್ತು ಶಾರದಮ್ಮ ದತ್ತಿನಿಧಿ ಬಹುಮಾನ	ಮಹಾಭಾರತ ಸಂಪುಟ 1,2,3 ಮತ್ತು 4	ಜಿ.ಎನ್. ರಂಗನಾಥ್ ರಾವ್
ಲೇಖಕರ ಮೊದಲ ಸ್ವತಂತ್ರ ಕೃತಿ	ಮಧುರಚೆನ್ನ ದತ್ತಿನಿಧಿ ಬಹುಮಾನ	ಪಾದಗಂಧ	ಭಾಗ್ಯಜ್ಯೋತಿ ಹಿರೇಮಠ
ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ	ಅಮೆರಿಕನ್ನಡ ದತ್ತಿನಿಧಿ ಬಹುಮಾನ	ಬಿಯಾಂಡ್ ಲೈಫ್	ಪ್ರಮೋದ್ ಮುತಾಲಿಕ್
ವೈಚಾರಿಕ/ಅಂಕಣ ಬರಹ	ಬಿ.ವಿ. ವೀರಭದ್ರಪ್ಪ ದತ್ತಿನಿಧಿ ಬಹುಮಾನ	ಯಡ್ರಾಮಿ ಸೀಮೆ ಕಥನಗಳು	ಮಲ್ಲಿಕಾರ್ಜುನ ಕಡಕೋಳ
ದಾಸ ಸಾಹಿತ್ಯ	ಜಲಜಾ ಶ್ರೀಪತಿ ಆಚಾರ್ಯ ಗಂಗೂರ್ ದತ್ತಿನಿಧಿ ಬಹುಮಾನ	ಶ್ರೀ ಪ್ರಸನ್ನವೆಂಕಟ ದಾಸರ್ಯಕೃತ ಶ್ರೀ ಲಕ್ಷ್ಮೀದೇವಿ ಅಪ್ರಕಟಿತ ಸ್ತುತಿರತ್ನಗಳು	ಲಕ್ಷ್ಮೀಕಾಂತ್ ಪಾಟೀಲ್

ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು 2018, 2019 ಹಾಗೂ 2020 ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಾರ್ಚ್ 7 ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಅಕಾಡೆಮಿ ಅಧ್ಯಕ್ಷ ದಯಾನಂದ ಕತ್ತಲ್‌ಸಾರ್ ತಿಳಿಸಿದ್ದಾರೆ.

ಗೌರವ ಪ್ರಶಸ್ತಿ 2020: ರಾಮಚಂದ್ರ ಬೈಕಂಪಾಡಿ (ಸಾಹಿತ್ಯ), ತುಂಗಪ್ಪ ಬಂಗೇರ (ನಾಟಕ), ಆನಂದ ಪೂಜಾರಿ ಹಳೆಯಂಗಡಿ (ಜಾನಪದ). ಪುಸ್ತಕ ಬಹುಮಾನ 2020: ಡಾ. ಕೆ. ಚಿನ್ನಪ್ಪ ಗೌಡ (ಕಾವ್ಯ), ಯುವ ಸಾಧಕ ಪ್ರಶಸ್ತಿ: ಯೋಗೀಶ ಶೆಟ್ಟಿ ಜೆಪ್ಪು (ಸಂಘಟನೆ), ನವೀನ್ ಶೆಟ್ಟಿ ಎಡ್ಮೆಮಾರ್ (ನಿರೂಪಣೆ), ರಮೇಶ ಪಿ. ಮೆತ್ತಿನಡ್ಕ (ಜಾನಪದ ಕಲೆ ಸಂಘಟನೆ), ನಾಗರಾಜ ಭಟ್ (ದೈವ ಕ್ಷೇತ್ರದ ಮೇಲಿನ ಸಂಶೋಧನೆ), ಭರತ್ ಸೌಂದರ್ಯ (ಕಲಾ ಪೋಷಕ), ಸುಭಾಷ್ ನಾಯ್ಕ್ (ಶಾಸನ ಸಂಶೋಧನೆ), ದೀಪಕ್ ಪಡುಕೋಣೆ (ತುಳು ಲಿಪಿ ಮೇಲಿನ ಸಂಶೋಧನೆ), ಮಕ್ಕಳ ಪ್ರಶಸ್ತಿ: ತನುಶ್ರೀ ಪಿತ್ರೋಡಿ (ಯೋಗ), ಸನ್ನಿಧಿ ಟಿ. ರೈ ಪೆರ್ಲ (ಕಲೆ), ತಕ್ಷಿಲ್ ದೇವಾಡಿಗ (ಜಾನಪದ), ಸಂಘಟನೆಗಳ ಪ್ರಶಸ್ತಿ: ತುಳುಕೂಟ ಕುವೈಟ್, ತುಳು ಸಂಘ ಬರೋಡ, ಬೆಂಗಳೂರು ತುಳುಕೂಟ, ತುಳುಕೂಟ ಉಡುಪಿ, ಸುಬ್ರಹ್ಮಣ್ಯ ಮಹಾಗಣಪತಿ ಕ್ರೀಡಾ ಸಂಘ ತೋಕೂರು, ಹಳೆಯಂಗಡಿ.

ಗೌರವ ಪ್ರಶಸ್ತಿ 2019: ಡಾ. ಎಸ್.ಆರ್. ವಿಘ್ನರಾಜ ಧರ್ಮಸ್ಥಳ (ಸಾಹಿತ್ಯ), ತಿಮ್ಮಪ್ಪ ಗುಜರನ್ ತಲಕಾಲ (ಯಕ್ಷಗಾನ–ಮರಣೋತ್ತರ), ಗುರುವ ಕೊರಗ ಹಿರಿಯಡಕ (ಜಾನಪದ). ಪುಸ್ತಕ ಬಹುಮಾನ 2019: ಕುಶಾಲಾಕ್ಷಿ ವಿ. ಕುಲಾಲ್ ಕಣ್ವತೀರ್ಥ (ಕಾವ್ಯ)

ಗೌರವ ಪ್ರಶಸ್ತಿ 2018: ಲಲಿತಾ ರೈ (ಸಾಹಿತ್ಯ), ರತ್ನಾಕರ ರಾವ್ ಕಾವೂರು (ನಾಟಕ), ಎ.ಕೆ.ವಿಜಯ ಕೋಕಿಲಾ (ಸಿನಿಮಾ), ಪುಸ್ತಕ ಬಹುಮಾನ 2018: ಶಾಂತಾರಾಮ ಶೆಟ್ಟಿ (ಕಾವ್ಯ), ರಾಜಶ್ರೀ ಟಿ. ರೈ ಪೆರ್ಲ (ಕಾದಂಬರಿ).

‘ಸುಮಾರ್ಗ’ ಹಂಚಿಕೆ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರನ್ನು ಓಲೈಸಿಕೊಳ್ಳಲು ತಮಗೆ ಬೇಕಾದವರಿಗೆ ಅನುದಾನ ಹಂಚಿಕೆ ಮಾಡಿರುವ ಕ್ರಮಕ್ಕೆ ಶಾಸಕರು ಸೇರಿದಂತೆ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ರೂಪಿಸಿರುವ ‘ಸುಮಾರ್ಗ’ ಯೋಜನೆಯಡಿ, ಗ್ರಾಮೀಣಾಭಿವೃದ್ಧಿ ಇಲಾಖೆಯ ಗಮನಕ್ಕೂ ತರದೇ ಮುಖ್ಯಮಂತ್ರಿ ಕಚೇರಿಯೇ ಅನುದಾನ ಹಂಚಿಕೆ ಮಾಡಿರುವುದರ ಬಗ್ಗೆ ‘ಪ್ರಜಾವಾಣಿ’ ವರದಿ ಪ್ರಕಟಿಸಿತ್ತು. ಈ ಯೋಜನೆಯ ಹೆಸರಿನಲ್ಲಿ 81 ಶಾಸಕರಿಗೆ ಒಟ್ಟು ₹775 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿತ್ತು.

ಅಧಿವೇಶನದಲ್ಲಿ ಚರ್ಚೆ

ರಾಜ್ಯದ ಜನರ ತೆರಿಗೆ ಹಣವನ್ನು ಬೇಕಾ ಬಿಟ್ಟಿ ಹಂಚಲಾಗಿದೆ. ಸರ್ಕಾರವನ್ನು ಉಳಿಸಿಕೊಳ್ಳಲು ತಮ್ಮ ಪಕ್ಷದ ಶಾಸಕರನ್ನು ಓಲೈಸಿ, ತೃಪ್ತಿ ಪಡಿಸಲು ಮುಖ್ಯಮಂತ್ರಿಯವರು ಹಣ ಹಂಚಿಕೆ ಮಾಡಿದ್ದಾರೆ. ಇದರ ವಿರುದ್ಧ ಹೋರಾಟ ಮಾಡುತ್ತೇವೆ. ವಿಧಾನಮಂಡಲ ಅಧಿವೇಶನದಲ್ಲೂ ಪ್ರಸ್ತಾಪಿಸುತ್ತೇವೆ. ಬಿಜೆಪಿಯವರಿಗೆ ₹20 ಕೋಟಿ ಕೊಟ್ಟರೆ ನಮಗೆ ಕನಿಷ್ಠ ₹10 ಕೋಟಿ ಆದರೂ ಕೊಡಬಹುದಿತ್ತು. ಯಡಿಯೂರಪ್ಪ ಅವರಿಂದ ಇಂತಹ ತಾರತಮ್ಯ ನಿರೀಕ್ಷಿಸಿರಲಿಲ್ಲ.

ಎಚ್.ಕೆ.ಕುಮಾರಸ್ವಾಮಿ
ಜೆಡಿಎಸ್ ಶಾಸಕ, ಸಕಲೇಶಪುರ

ಅನ್ಯಾಯ ಸಹಿಸಲ್ಲ

ಕರಾವಳಿ ಪ್ರದೇಶದಲ್ಲಿ ಪ್ರವಾಹದ ಸಂದರ್ಭದಲ್ಲಿ ರಸ್ತೆ ಮತ್ತು ಸೇತುವೆಗಳು ಸಂಪೂರ್ಣ ಹಾಳಾಗಿದ್ದವು. ಅದಕ್ಕಾಗಿ ಅನುದಾನ ಕೇಳಿದ್ದೆವು. ಆದರೆ, ನನ್ನ ಕ್ಷೇತ್ರಕ್ಕೆ ಹಣ ಹಂಚಿಕೆ ಮಾಡಿಲ್ಲ. ಕ್ಷೇತ್ರಕ್ಕೆ ಆದ ಅನ್ಯಾಯವನ್ನು ನಾನು ಸಹಿಸುವ ಪ್ರಶ್ನೆಯೇ ಇಲ್ಲ. ಇತರ ಕ್ಷೇತ್ರಗಳಿಗೆ ಯಾವ ರೀತಿ ಅನುದಾನ ನೀಡಲಾಗಿದೆಯೋ ಅದೇ ರೀತಿ ನನ್ನ ವಿಧಾನಸಭಾ ಕ್ಷೇತ್ರಕ್ಕೂ ನೀಡಬೇಕು.

ವಿ. ಸುನಿಲ್ ಕುಮಾರ್
ಬಿಜೆಪಿ ಶಾಸಕ, ಕಾರ್ಕಳ

ತಾರತಮ್ಯ ಖಂಡನೀಯ

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಹೊಸ ಅನುದಾನ ನೀಡುತ್ತಿಲ್ಲ. ಹಿಂದಿನ ಸರ್ಕಾರಗಳ ಅವಧಿಯಲ್ಲಿ ಮಂಜೂರಾಗಿದ್ದ ಅನುದಾನವನ್ನು ಹಿಂಪಡೆಯಲಾಗಿದೆ. ಇದರಿಂದ ಕ್ಷೇತ್ರದ ಹಲವು ಕಾಮಗಾರಿಗಳು ಅರ್ಧಕ್ಕೆ ಸ್ಥಗಿತವಾಗಿವೆ. ಮುಖ್ಯಮಂತ್ರಿ ಸ್ಥಾನದಲ್ಲಿರುವವರು ರಾಜ್ಯದ ಎಲ್ಲ ಕ್ಷೇತ್ರಗಳನ್ನು ಸಮಾನ ದೃಷ್ಟಿಯಿಂದ ಕಾಣಬೇಕು. ಅನುದಾನ ಹಂಚಿಕೆಯಲ್ಲಿ ಆಗುತ್ತಿರುವ ತಾರತಮ್ಯವನ್ನು ಖಂಡಿಸುತ್ತೇವೆ.

ಟಿ.ರಘುಮೂರ್ತಿ
ಕಾಂಗ್ರೆಸ್ ಶಾಸಕ, ಚಳ್ಳಕೆರೆ

ಧ್ವನಿ ಎತ್ತದಂತೆ ‘ಲಂಚ’

ಕಳೆದೊಂದು ವರ್ಷದಿಂದ ಅನುದಾನ ಹಂಚಿಕೆಯಲ್ಲಿನ ತಾರತಮ್ಯದ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪಿಸುತ್ತಲೇ ಇದ್ದೇವೆ. ಆದರೆ, ಮುಖ್ಯಮಂತ್ರಿ ನಮ್ಮ ಮಾತಿಗೆ ಬೆಲೆ ಕೊಟ್ಟಿಲ್ಲ. ಇದೀಗ ‘ಸುಮಾರ್ಗ’ ಯೋಜನೆಯನ್ನು ಈ ರೀತಿ ಹಂಚಿರುವುದು ಸರಿಯಾದ ಕ್ರಮವಲ್ಲ. ಹೀಗಾದರೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಹೇಗೆ ಸಾಧ್ಯ. ಇಲಾಖೆಯ ಗಮನಕ್ಕೆ ಬಾರದೆ ಅನುದಾನ ಹಂಚಿಕೆಯಾಗಿದೆ ಎಂದರೆ ಯಾವ ಲೆಕ್ಕ ಶೀರ್ಷಿಕೆಯಲ್ಲಿ ಹಣ ನೀಡುತ್ತಾರೆ ಎನ್ನುವುದು ಅರ್ಥವಾಗುತ್ತಿಲ್ಲ. ಇದೊಂದು ರೀತಿಯಲ್ಲಿ ತಮ್ಮ ವಿರುದ್ಧ ಧ್ವನಿ ಎತ್ತದಂತೆ ಶಾಸಕರಿಗೆ ನೀಡುವ ‘ಲಂಚ’ವಲ್ಲದೆ ಇನ್ನೇನೂ ಅಲ್ಲ.

ಪ್ರಿಯಾಂಕ್ ಖರ್ಗೆ
ಕಾಂಗ್ರೆಸ್ ಶಾಸಕ, ಚಿತ್ತಾಪುರ

ಬ್ಲ್ಯಾಕ್‌ಮೇಲ್‌ಗೆ ಜಗ್ಗುವುದಿಲ್ಲ: ಶರಣರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹಣ, ನಿವೇಶನ ಸೇರಿ ಹಲವು ಅನುಕೂಲಗಳಿಗೆ ಕೆಲವರು ಬ್ಲ್ಯಾಕ್‌ಮೇಲ್ ಮಾಡುತ್ತಾರೆ. ಇದಕ್ಕೆ ಜಗ್ಗದಿದ್ದಾಗ ದೂರು ದಾಖಲಿಸುತ್ತಾರೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ವಿಶ್ವಾಸವಿದ್ದು, ಇಂತಹ ವಿಚಾರಗಳಿಗೆ ಭಕ್ತರು ಅಧೀರರಾಗಬಾರದು ಎಂದು ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಮನವಿ ಮಾಡಿದ್ದಾರೆ.

‘ಮಠಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನಮ್ಮನ್ನು ಪ್ರತಿವಾದಿಯನ್ನಾಗಿ ಮಾಡುವಂತೆ ಸಲ್ಲಿಕೆಯಾದ ಅರ್ಜಿಯನ್ನು ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯ ವಜಾ ಮಾಡಿದೆ. ಹೀಗಾಗಿ, ದೂರುದಾರರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ನಿಯಮದಂತೆ ಸಂಬಂಧಿಸಿದವರಿಗೆ ಹೈಕೋರ್ಟ್ ನೋಟಿಸ್ ನೀಡಿದೆ. ಇದನ್ನು ವಿಶೇಷ ರೀತಿಯಲ್ಲಿ ಪರಿಗಣಿಸುವ ಅಗತ್ಯವಿಲ್ಲ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಲಿಂಗಾಯತ ಸ್ವತಂತ್ರ ಧರ್ಮ ಹೋರಾಟಕ್ಕೆ ಮೌನವಹಿಸಿದ್ದಾರೆಂಬ ಅಸಹನೆಯಿಂದ ಅವಮಾನವಾಗುವಂತಹ ಸಂದೇಶಗಳನ್ನು ಕೆಲವರು ಸಾಮಾಜಿಕ ಜಾಲತಾಣದಲ್ಲಿ ರವಾನಿಸಿದ್ದಾರೆ. ಅಂಥವರ ವಿರುದ್ಧ ಈಗಾಗಲೇ ದೂರು ನೀಡಲಾಗಿದೆ’ ಎಂದು ಹೇಳಿದ್ದಾರೆ.

‘ತಮಿಳುನಾಡು ಯೋಜನೆ ಪ್ರಶ್ನಿಸಿ ಕಾನೂನು ಹೋರಾಟ’

ಒಂದನೇ ಪುಟದಿಂದ...

‘ಈ ಯೋಜನೆಯ ಮೂಲಕ 45 ಟಿಎಂಸಿ ಅಡಿ ನೀರು ಬಳಕೆಗೆ ತಮಿಳುನಾಡು ಮುಂದಾಗಿರುವುದು ಖಂಡನೀಯ. ಇದನ್ನು ವಿರೋಧಿಸಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ಯೋಜನೆ ಅಂತರರಾಜ್ಯ ನದಿ ನೀರು ಕಾಯ್ದೆಗೂ ವಿರುದ್ಧವಾಗಿದೆ’ ಎಂದರು.

‘ಹೆಚ್ಚುವರಿ ನೀರು ಬಳಸುವುದನ್ನು ಸ್ವೇಚ್ಛಾಚಾರವೆಂದು ತಮಿಳುನಾಡು ಭಾವಿಸಿದೆ. ಇದಕ್ಕೆ ನಾವು ಅವಕಾಶ ನೀಡುವುದಿಲ್ಲ. ರಾಜ್ಯದ ನೀರಾವರಿ ಯೋಜನೆಗಳಿಗೆ ತಮಿಳುನಾಡಿನಿಂದ ನಿರಂತರ ಅನ್ಯಾಯವಾಗುತ್ತಿದೆ. ನಾವು ಕಾನೂನು ಹೋರಾಟ ಮಾಡುತ್ತೇವೆ. ಅಂತಿಮ ನಿರ್ಧಾರ ಆಗುವವರೆಗೆ ಕಾವೇರಿ ಹೆಚ್ಚುವರಿ ನೀರು ಬಳಕೆಗೆ ಅವಕಾಶ ನೀಡದಂತೆ ವಾದ ಮಂಡಿಸುತ್ತೇವೆ’ ಎಂದು ಬೊಮ್ಮಾಯಿ ಪ್ರತಿಪಾದಿಸಿದರು.

‘ಮಹದಾಯಿ ಯೋಜನೆ ಬಗ್ಗೆ ಗೋವಾ ಕ್ಯಾತೆ ತೆಗೆದ ಕಾರಣ ಮೂರು ರಾಜ್ಯಗಳ ಪ್ರತಿನಿಧಿಗಳು ಪರಿಶೀಲನೆ ನಡೆಸಲಿದ್ದಾರೆ. ನದಿ ಪಾತ್ರ ಕೆಳಗಡೆ ಇದೆ, ಗೋಡೆ ಎತ್ತರದಲ್ಲಿದೆ. ನೀರನ್ನು ತಿರುಗಿಸಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ಆದೇಶದ ರೀತಿ ರಾಜ್ಯ ನಡೆದುಕೊಳ್ಳುತ್ತಿದೆ. ಯಾವುದೇ ರೀತಿಯಲ್ಲೂ ನದಿಯನ್ನು ತಿರುಗಿಸಿಲ್ಲ. ಮಹದಾಯಿ ಯೋಜನೆ ಮುಂದೂಡಲು ಗೋವಾ ಈ ರೀತಿ ಮಾಡುತ್ತಿದೆ. ಪರಿಶೀಲನೆ ಆದ ತಕ್ಷಣವೇ ಯೋಜನೆಗೆ ಅವಕಾಶ ನೀಡಬೇಕು. ಕಾಮಗಾರಿಗೆ ಯಾವುದೇ ಅಡೆತಡೆ ಮಾಡದಂತೆ ತಿಳಿಸಿದ್ದೇವೆ. ಮಹದಾಯಿ ಯೋಜನೆಯ ನಮ್ಮ ಪಾಲಿನ ನೀರು ಬಳಸಲು ಎಲ್ಲ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ರಮೇಶ ಜಾರಕಿಹೊಳಿ ಮಾತನಾಡಿ, ‘ತಮಿಳುನಾಡು ಯೋಜನೆಗೆ ನಮ್ಮ ವಿರೋಧವಿದೆ. ರಾಜ್ಯದ ಹಿತಕಾಯಲು ಮುಖ್ಯಮಂತ್ರಿ ನೇತೃತ್ವದಲ್ಲಿ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ’ ಎಂದರು. ರಾಜ್ಯದ ಅಡ್ವೊಕೇಟ್ ಜನರಲ್ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಹಿರಿಯ ವಕೀಲರು ಸಭೆಯಲ್ಲಿದ್ದರು.

ರಾಜ್ಯಕ್ಕೆ ನೀರು ಒದಗಿಸದಂತೆ ತಡೆಯುವ ಹುನ್ನಾರ: ದೇವೇಗೌಡ

ಒಂದನೇ ಪುಟದಿಂದ...

‘ಮೇಕೆದಾಟಿನಲ್ಲಿ ಅಣೆಕಟ್ಟೆ ನಿರ್ಮಿಸಿದರೆ ನಾವು ಸುಮಾರು 45 ಟಿಎಂಸಿ ಅಡಿ ನೀರು ಸಂಗ್ರಹಿಸಬಹುದು. ಇದು ನಮ್ಮ ನೀರಾವರಿ ಯೋಜನೆ ಹಾಗೂ ಕುಡಿಯುವ ನೀರಿಗೆ ಅನುಕೂಲವಾಗಲಿದೆ. ಆದರೆ, ತಮಿಳುನಾಡು ಸರ್ಕಾರವು ಇದಕ್ಕೆ ವ್ಯತಿರಿಕ್ತವಾಗಿ ಯೋಜನೆ ಕೈಗೊಂಡಿದೆ’ ಎಂದು ಹೇಳಿದರು.

‘ಬೆಂಗಳೂರು ನಗರ ಸೇರಿದಂತೆ ಸುಮಾರು 9 ಜಿಲ್ಲೆಗಳಿಗೆ 5.3 ಟಿಎಂಸಿ ಅಡಿ ಕುಡಿಯುವ ನೀರು ಬೇಕಿದೆ. ಹೀಗಾಗಿ ತಮಿಳುನಾಡಿನ ನದಿ ಜೋಡಣೆ ಯೋಜನೆಯನ್ನು ವಿರೋಧಿಸಬೇಕಿದೆ’ ಎಂದರು.

ಮುಂದೆ ಹೋರಾಟ ಮಾಡುವವರು ಯಾರು?: ‘ರಾಜ್ಯಕ್ಕೆ ಅನ್ಯಾಯವಾದಾಗ ನಾನು ಹೋರಾಡುತ್ತಲೇ ಬಂದಿದ್ದೇನೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ, ಕಾವೇರಿ ನೀರಿನ ವಿಚಾರದಲ್ಲಿ ಕೇಂದ್ರದಿಂದ ಅನ್ಯಾಯವಾಗಿತ್ತು. ನಾನು ಬೆಂಗಳೂರಿನಲ್ಲಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದಾಗ ಪ್ರಧಾನಿ ನರೇಂದ್ರ ಮೋದಿ ಅವರು ಉಪವಾಸ ಕೈಬಿಡುವಂತೆ ಮನವಿ ಮಾಡಿದ್ದರು. ಹಾಗಾಗಿ ರಾಜ್ಯಕ್ಕೆ ಅನ್ಯಾಯವಾಗುವುದು ತಪ್ಪಿತು. ಈಗಲೂ ಹೋರಾಟ ಮಾಡಬೇಕಿದೆ. ಮುಂದೆ ಕಾವೇರಿ ಹೋರಾಟ ಮಾಡುವವರು ಯಾರು ಎಂಬ ಪ್ರಶ್ನೆ ಕಾಡುತ್ತಿದೆ’ ಎಂದರು.

K RIDE

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ

(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಡಾ. ರಾಜಕುಮಾರ್ ರಸ್ತೆ (ಓರಿಯನ್ ಮಾಲ್ ಎದುರು), ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು – 560010 ದೂ: 06364890817
CIN: U60100KA2000PLC028171 ಇ–ಮೇಲ್: md@kride.in

Tender Notice No. : KRIDE/DL/10/2021. **Date:** 27.02.2021.

ಟೆಂಡರ್ ಸೂಚನೆ

ಯಶವಂತಪುರ – ಚನ್ನಸಂದ್ರ ವಿಭಾಗದ ದ್ವಿಪಥೀಕರಣದ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಅನುಭವಿ ಏಜೆನ್ಸಿಗಳಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರ. ಸಂ.	ಕಾಮಗಾರಿಯ ಹೆಸರು	ಮೊತ್ತ (ಕೋಟಿ ರೂ.ಗಳಲ್ಲಿ)
1	ಕಾಮಗಾರಿಯ ಹೆಸರು: ಬೆಂಗಳೂರು ವಿಭಾಗದ ಯಶವಂತಪುರ – ಚನ್ನಸಂದ್ರ ವಿಭಾಗದ ದ್ವಿಪಥೀಕರಣಕ್ಕೆ ಸಂಬಂಧಿಸಿದಂತೆ ಲೊಟ್ಟೆಗೊಲ್ಲಹಳ್ಳಿ, ಹೆಬ್ಬಾಳ ಮತ್ತು ಬಾಣಸವಾಡಿಯಲ್ಲಿ ಎಲೆಕ್ಟ್ರಾನಿಕ್ ಇಂಟರ್ಲಾಕಿಂಗ್‌ನೊಂದಿಗೆ ಒಳಾಂಗಣ ಸಿಗ್ನಲಿಂಗ್ ಕಾಮಗಾರಿಗಳು (ಒಂದು ಪ್ಯಾಕೇಜ್)	9.25

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30–03–2021.**
ವಿವರಗಳಿಗಾಗಿ www.kride.in ಗೆ ಭೇಟಿ ನೀಡಿ ‘Tenders’ ಮೇಲೆ ಕ್ಲಿಕ್ ಮಾಡಿ

ಸಹಿ/–
ಜನರಲ್ ಮ್ಯಾನೇಜರ್ (ಎಸ್&ಟಿ) / ಕೆ–ರೈಡ್

DIPR/DDU/2933/SPAN/2020-21

ಸುಭಾಷಿತ

ದ್ವೇಷ ಸಾಧನೆ, ವದಂತಿ, ನಿರ್ಲಕ್ಷ್ಯ, ಅಪಹಾಸ್ಯ ಅಥವಾ ಹಾನಿಯುಂಟು ಮಾಡುವ ವಿಷಯಗಳು ಬಂದಾಗ, ದಯವಿಟ್ಟು ಈ ಮಾರ್ಗವನ್ನು ಅನುಸರಿಸಿ. ಅದೆಂದರೆ: ನಿಲ್ಲಿಸಿ!

–ಡೀಟರ್ ಎಫ್. ಉಕ್‌ಡಾರ್ಫ್

ಮಾಧ್ಯಮ ಕಡಿವಾಣದ ನಿಯಮ ಎರಡು ಅಲಗಿನ ಕತ್ತಿ

ಸಾಮಾಜಿಕ ಜಾಲತಾಣಗಳು, ಒಟಿಟಿ ವೇದಿಕೆಗಳು ಮತ್ತು ಡಿಜಿಟಲ್ ಸುದ್ದಿ ಪೋರ್ಟಲ್‌ಗಳನ್ನು ನಿಯಂತ್ರಿಸಲು ಸಾಧ್ಯವಾಗುವಂತಹ ‘ಮಾಹಿತಿ ತಂತ್ರಜ್ಞಾನ (ಮಧ್ಯಸ್ಥ ಸಂಸ್ಥೆಗಳಿಗೆ ಮಾರ್ಗಸೂಚಿ ಮತ್ತು ಡಿಜಿಟಲ್ ಮಾಧ್ಯಮಕ್ಕೆ ನೀತಿ ಸಂಹಿತೆ) ನಿಯಮಗಳು- 2021’ ಅನ್ನು ಕೇಂದ್ರ ಸರ್ಕಾರವು ಪ್ರಕಟಿಸಿದೆ. ಈ ಮಾಧ್ಯಮಗಳ ದುರ್ಬಳಕೆಯ ಬಗ್ಗೆ ಸರ್ಕಾರಕ್ಕೆ ಹಲವು ದೂರುಗಳು ಬಂದಿದ್ದವು. ಹಾಗಾಗಿ, ನಿಯಂತ್ರಣದ ನಿಯಮಗಳನ್ನು ರೂಪಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಹೊಸ ನಿಯಮಗಳಿಂದಾಗಿ ಈ ರೀತಿಯ ಮಾಧ್ಯಮಗಳ ಕಾರ್ಯನಿರ್ವಹಣೆಯಲ್ಲಿ ಗಣನೀಯವಾದ ಬದಲಾವಣೆ ಆಗುವ ಸಾಧ್ಯತೆ ಇದೆ. ಬಳಕೆದಾರರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ವೇದಿಕೆ ಒದಗಿಸುವ ಕೆಲಸವನ್ನಷ್ಟೇ ಸಾಮಾಜಿಕ ಜಾಲತಾಣಗಳು ಮಾಡುತ್ತವೆ. ಹಾಗಾಗಿ, ಈ ಸಂಸ್ಥೆಗಳಿಗೆ ‘ರಕ್ಷಣೆಯ ಸೌಲಭ್ಯ’ ಈವರೆಗೆ ಇತ್ತು. ಅಂದರೆ, ಬಳಕೆದಾರರು ವ್ಯಕ್ತಪಡಿಸಿದ ಅನಿಸಿಕೆಗಳಿಗೆ ಸಾಮಾಜಿಕ ಜಾಲತಾಣ ಸಂಸ್ಥೆಯನ್ನು ಹೊಣೆ ಮಾಡಲು ಅವಕಾಶ ಇರಲಿಲ್ಲ. ಆದರೆ, ಈಗ ರೂಪಿಸಿರುವ ನಿಯಮಗಳನ್ನು ಪಾಲಿಸದೇ ಇದ್ದರೆ ಸಾಮಾಜಿಕ ಜಾಲತಾಣ ಸಂಸ್ಥೆಗಳಿಗೆ ಈ ರಕ್ಷಣೆಯು ಇನ್ನು ಮುಂದೆ ದೊರೆಯುವುದಿಲ್ಲ ಎಂದು ನಿಯಮದಲ್ಲಿ ಹೇಳಲಾಗಿದೆ. ಇದು ಸಾಮಾಜಿಕ ಜಾಲತಾಣಗಳ ಸ್ವರೂಪವನ್ನೇ ಬದಲಿಸಬಹುದು. ಆಕ್ಷೇಪಾರ್ಹ ಕಂಟೆಂಟ್‌ಗಳನ್ನು (ಆಡಿಯೊ, ವಿಡಿಯೊ, ಚಿತ್ರ, ಫೋಟೊ, ಬರಹ ಇತ್ಯಾದಿ) 24 ತಾಸುಗಳಲ್ಲಿ ಅಳಿಸಿ ಹಾಕುವ ವ್ಯವಸ್ಥೆ, ದೂರು ನಿರ್ವಹಣಾ ವ್ಯವಸ್ಥೆ, ನಿಯಮಗಳ ಪಾಲನೆಗೆ ಅಧಿಕಾರಿ ನೇಮಕದಂತಹ ಅಂಶಗಳು ನಿಯಮಗಳಲ್ಲಿ ಸೇರಿವೆ. ಹೊಸ ನಿಯಮಗಳಿಂದಾಗಿ, ತಾವು ಪ್ರಸಾರ ಮಾಡುವ ಕಾರ್ಯಕ್ರಮಗಳಿಗೆ ಸ್ವಯಂಪ್ರೇರಿತ ಸೆನ್ಸಾರ್‌ನಂತಹ ವ್ಯವಸ್ಥೆಯೊಂದನ್ನು ಒಟಿಟಿ ವೇದಿಕೆಗಳು ಜಾರಿಗೆ ತರಬೇಕಾಗುತ್ತದೆ. ಡಿಜಿಟಲ್ ಸುದ್ದಿ ಪೋರ್ಟಲ್‌ಗಳು, ಭಾರತೀಯ ಪತ್ರಿಕಾ ಮಂಡಳಿಯ ನಡವಳಿಕೆ ಸಂಹಿತೆ ಮತ್ತು ಕೇಬಲ್ ಟಿ.ವಿ. ಜಾಲಗಳ ನಿಯಂತ್ರಣ ಕಾಯ್ದೆಯ ಕಾರ್ಯಕ್ರಮ ಸಂಹಿತೆಗೆ ಅನುಗುಣವಾಗಿಯೇ ಕೆಲಸ ಮಾಡಬೇಕಾಗುತ್ತದೆ.

ಮಾಧ್ಯಮಗಳ ನಿಯಂತ್ರಣವು ಜನರ ಅಭಿವ್ಯಕ್ತಿಯ ಮೇಲೆ ಸದಾ ತೂಗುಗತ್ತಿಯಂತೆ ಇರುವುದಿಲ್ಲ ಎಂಬುದನ್ನು ಖಾತರಿಪಡಿಸುವುದು ಸರ್ಕಾರದ ಹೊಣೆ

ಕೇಂದ್ರ ಸರ್ಕಾರ ಪ್ರಕಟಿಸಿರುವ ನಿಯಮಗಳ ಬಗ್ಗೆ ಸಹಮತ ಮತ್ತು ಭಿನ್ನಮತಗಳೆರಡೂ ವ್ಯಕ್ತವಾಗಿವೆ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ಹೋರಾಟಗಾರರು, ಇದು ಅಭಿವ್ಯಕ್ತಿ ಸ್ವಾತಂತ್ರ್ಯ ದಮನದ ಯತ್ನ ಎಂಬ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತರ ಪರವಾಗಿ ಪ್ರಕಟವಾದ ‘ಪ್ರಚೋದನಕಾರಿ’ ಎಂದು ಸರ್ಕಾರ ಹೇಳಿದ್ದ 1500 ಟ್ವೀಟ್ ಅಥವಾ ಟ್ವಿಟರ್ ಖಾತೆಗಳನ್ನು ಅಳಿಸುವಂತೆ ನೀಡಿದ ಸೂಚನೆಯನ್ನು ಪಾಲಿಸಲು ಟ್ವಿಟರ್ ಸಂಸ್ಥೆಯು ಆರಂಭದಲ್ಲಿ ಹಿಂದೇಟು ಹಾಕಿತ್ತು. ಇದು, ಸರ್ಕಾರ ಮತ್ತು ಟ್ವಿಟರ್ ನಡುವೆ ಜಟಾಪಟಿಗೆ ಕಾರಣವಾಗಿತ್ತು. ರೈತರ ಪ್ರತಿಭಟನೆಗೆ ಬೆಂಬಲವಾಗಿ ರೂಪಿಸಿದ ಟೂಲ್‌ಕಿಟ್ ಅನ್ನು ತಿದ್ದಿ ಕೊಟ್ಟ ಬೆಂಗಳೂರಿನ ಪರಿಸರ ಕಾರ್ಯಕರ್ತೆ ದಿಶಾ ರವಿ ಅವರ ಬಂಧನವೂ ಇತ್ತೀಚೆಗೆ ಆಗಿತ್ತು. ಈ ಸಂದರ್ಭದಲ್ಲಿಯೇ ನಿಯಂತ್ರಣ ನಿಯಮಗಳು ಪ್ರಕಟವಾಗಿರುವುದು ಸರ್ಕಾರದ ಉದ್ದೇಶದ ಬಗ್ಗೆ ಅನುಮಾನ ಮೂಡಿಸಬಹುದು. ಯಾವುದೇ ರೀತಿಯ ಮಾಧ್ಯಮದ ಮೇಲೆ ನಿಯಂತ್ರಣ ಹೇರುವ ಪ್ರಯತ್ನವು ಎರಡು ಅಲಗಿನ ಕತ್ತಿ. ಬಾಹ್ಯವಾದ ಯಾವ ನಿಯಂತ್ರಣವೂ ಇಲ್ಲದ ಸಾಮಾಜಿಕ ಜಾಲತಾಣ, ಒಟಿಟಿ, ಡಿಜಿಟಲ್ ಸುದ್ದಿ ಪೋರ್ಟಲ್‌ಗಳ ಅತಿರೇಕದ ವರ್ತನೆಗೆ ಕಡಿವಾಣ ಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ದ್ವೇಷ ಕಾರಿದ, ಜನರನ್ನು ಪ್ರಚೋದಿಸಿದ, ಹಿಂಸೆಗೆ ಕಾರಣವಾದ ವಸ್ತು-ವಿಷಯಗಳು ಈ ಮಾಧ್ಯಮಗಳಲ್ಲಿ ಪ್ರಕಟವಾಗಿವೆ ಎಂಬುದು ಕಡಿವಾಣ ಬೇಕು ಎನ್ನುವ ವಾದಕ್ಕೆ ಪುಷ್ಟಿ ಕೊಡುತ್ತವೆ. ಆದರೆ, ಅಪರಿಮಿತವಾದ ಅಧಿಕಾರ ಸಿಕ್ಕಾಗ, ಜನರೆಲ್ಲರೂ ತಾವು ಬಯಸುವಂತಹ ರೀತಿಯಲ್ಲೇ ಚಿಂತಿಸಬೇಕು ಮತ್ತು ವರ್ತಿಸಬೇಕು ಎಂಬಂತೆ ಸರ್ಕಾರ ನಡೆಸುವವರು ವರ್ತಿಸಿದ ಉದಾಹರಣೆಗಳು ಜಗತ್ತಿನ ಎಲ್ಲೆಡೆಯಲ್ಲಿಯೂ ಇವೆ. ಹಾಗಾಗಿಯೇ, ಮಾಧ್ಯಮಗಳ ನಿಯಂತ್ರಣವು ಜನರ ಅಭಿವ್ಯಕ್ತಿಯ ಮೇಲೆ ಸದಾ ತೂಗುಗತ್ತಿಯಂತೆ ಇರುವುದಿಲ್ಲ ಎಂಬುದನ್ನು ಖಾತರಿಪಡಿಸುವುದು ಸರ್ಕಾರದ ಹೊಣೆ. ಎಲ್ಲೆಡೆಯೂ ಬಳಕೆಯಾಗುತ್ತಿರುವ ಈ ಮೂರೂ ರೀತಿಯ ಮಾಧ್ಯಮಗಳಿಗೆ ನಿಯಂತ್ರಣ ಹೇರುವ ಮುನ್ನ ರಾಷ್ಟ್ರವ್ಯಾಪಿ ಸಮಾಲೋಚನೆ ನಡೆಸುವುದು ಸರ್ಕಾರದ ಕರ್ತವ್ಯ; ಸಾಮಾಜಿಕ ಜಾಲತಾಣದ ನಿಯಂತ್ರಣದ ಸಂಬಂಧ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಸಾರ್ವಜನಿಕರ ಅಭಿಪ್ರಾಯವನ್ನು ಕೋರಿತ್ತು. ‘ನಿಯಂತ್ರಣದ ಪರವಾಗಿ 171 ಮತ್ತು ವಿರುದ್ಧವಾಗಿ 80 ಪ್ರತಿಕ್ರಿಯೆಗಳು ಬಂದಿವೆ. ಒಟಿಟಿ ನಿಯಂತ್ರಣಕ್ಕೆ ಸಂಬಂಧಿಸಿ ದೆಹಲಿ, ಮುಂಬೈ ಮತ್ತು ಚೆನ್ನೈಯಲ್ಲಿ ಸಮಾಲೋಚನೆ ನಡೆಸಲಾಗಿದೆ’ ಎಂದು ಹೇಳಲಾಗಿದೆ. 130 ಕೋಟಿಗೂ ಹೆಚ್ಚು ಜನಸಂಖ್ಯೆಯ ಈ ದೇಶದಲ್ಲಿ ಈ ಪ್ರತಿಕ್ರಿಯೆ ಮತ್ತು ಸಮಾಲೋಚನೆ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತೆ ಆಗಲಿಲ್ಲವೇ?

ದಿನದ ಟ್ವೀಟ್

ಜಿಎಸ್‌ಟಿ ವ್ಯಾಪ್ತಿಗೆ ತಂದರೆ...

ಪೆಟ್ರೋಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದರೆ ಬೆಲೆ ಕಡಿಮೆಯಾಗಬಹುದು. ಆದರೆ, ಪೆಟ್ರೋಲ್ ಮೇಲಿನ ತೆರಿಗೆ ಅಧಿಕಾರವನ್ನು ರಾಜ್ಯ ಕಳೆದುಕೊಳ್ಳುತ್ತದೆ. ಈಗಾಗಲೇ ದುಡ್ಡಿಲ್ಲದ ರಾಜ್ಯ ಸರ್ಕಾರಕ್ಕೆ ತೆರಿಗೆ ಸಂಗ್ರಹದಲ್ಲಿ ಮತ್ತಷ್ಟು ಕಡಿಮೆಯಾಗುತ್ತದೆ. ತೆರಿಗೆ ಸಂಗ್ರಹಕ್ಕೆ ಸರ್ಕಾರ ಹೊಸ ದಾರಿ ಹುಡುಕಬೇಕಾಗುತ್ತದೆ. ಹೊಸ ತೆರಿಗೆಯನ್ನು ನಾವೇ ಕಟ್ಟಬೇಕು.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 27-2-1996

● **ಪಾಕ್ ಸಮರ ಮನೋಭಾವ ರಾಷ್ಟ್ರಪತಿ ಖಂಡನೆ**

ನವದೆಹಲಿ, ಫೆ. 26– ಪಾಕಿಸ್ತಾನ ನಿರಂತರವಾಗಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಜಮಾವಣೆ ಮಾಡಿಕೊಳ್ಳುವ ಮತ್ತು ಯುರೇನಿಯಂ ತಾಂತ್ರಿಕತೆಯನ್ನು ಅಭಿವೃದ್ಧಿ ಪಡಿಸಿಕೊಳ್ಳುವ ಕಾರ್ಯವನ್ನು ಮುಂದುವರಿಸಿರುವುದು ಆತಂಕಕಾರಿಯಾಗಿದೆ. ಪಾಕಿಸ್ತಾನದ ಈ ಯತ್ನವು ಗಡಿ ಭಾಗದಲ್ಲಿ ಉದ್ವಿಗ್ನ ಪರಿಸ್ಥಿತಿಯನ್ನು ಉಂಟು ಮಾಡುವುದರಿಂದ ಶಸ್ತ್ರಾಸ್ತ್ರ ಪೈಪೋಟಿಗೆ ಎಡೆಕೊಡುವ ಸಂಭವ ಇದೆ ಎಂದು ರಾಷ್ಟ್ರಪತಿ ಡಾ. ಶಂಕರ ದಯಾಳ ಶರ್ಮಾ ಅವರು ಇಂದು ಪಾಕ್‌ನ ಸಮರ ಉನ್ಮತ್ತ ಮನೋಭಾವವನ್ನು ತರಾಟೆಗೆ ತೆಗೆದುಕೊಂಡರು.

ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಅವರು ಇಂದು ಹತ್ತನೇ ಲೋಕಸಭೆಯ ಕೊನೆಯ ಮತ್ತು ಸಂಕ್ಷಿಪ್ತ ಬಜೆಟ್ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

● **ಹವಾಲ: ರಾವ್ ಹೆಸರು ಬಹಿರಂಗ ಅರ್ಜಿ ತಿರಸ್ಕೃತ**

ನವದೆಹಲಿ, ಫೆ. 26 (ಯುಎನ್‌ಐ)– ಹವಾಲ ಹಗರಣದಲ್ಲಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರ ಬಗ್ಗೆ ಎಸ್.ಕೆ. ಜೈನ್ ನೀಡಿರುವ ಹೇಳಿಕೆಯನ್ನು ಬಹಿರಂಗಪಡಿಸುವಂತೆ ಸಿಬಿಐಗೆ ನಿರ್ದೇಶನ ನೀಡಬೇಕೆಂದು ಕೋರಿದ್ದ ಅರ್ಜಿಯನ್ನು ಪುರಸ್ಕರಿಸಲು ಸುಪ್ರೀಂ ಕೋರ್ಟ್ ಇಂದು ನಿರಾಕರಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 27-2-1971

● **ಬಳ್ಳಾರಿಯಲ್ಲಿ ಗುಪ್ತ ಶಸ್ತ್ರಾಸ್ತ್ರ ತಯಾರಿಕೆ ಕಾರ್ಖಾನೆ ಪತ್ತೆ**

ಬೆಂಗಳೂರು, ಫೆ. 26– ರಾಜ್ಯದ ಸಿಐಡಿ ಅಧಿಕಾರಿಗಳು ಭಾರೀ ಪ್ರಮಾಣದಲ್ಲಿ ಅಕ್ರಮ ದೇಶಿ ಮತ್ತು ವಿದೇಶಿ ಶಸ್ತ್ರಾಸ್ತ್ರ ಮದ್ದು-ಗುಂಡುಗಳನ್ನು ವಶಪಡಿಸಿಕೊಂಡು, ಗುಪ್ತವಾಗಿ ಶಸ್ತ್ರಾಸ್ತ್ರ ಉತ್ಪಾದಿಸುತ್ತಿದ್ದ ಕಾರ್ಖಾನೆಯೊಂದನ್ನು ಬಳ್ಳಾರಿಯಲ್ಲಿ ಪತ್ತೆ ಮಾಡಿದ್ದಾರೆ.

ಲೈಸೆನ್ಸ್ ಇಲ್ಲದೇ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆಂಬ ಆಪಾದನೆ ಮೇಲೆ 37 ಮಂದಿಯನ್ನು ಬಂಧಿಸಲಾಗಿದೆ.

● **ಮತದಾನದ ಚೀಟಿ ಕನ್ನಡದಲ್ಲಿ**

ನವದೆಹಲಿ, ಫೆ. 26– ಮೈಸೂರು ರಾಜ್ಯದ ಬೆಳಗಾವಿ ಕ್ಷೇತ್ರದಲ್ಲಿನ ಮತದಾನದ ಚೀಟಿಗಳು ಕನ್ನಡ ಹಾಗೂ ಮರಾಠಿ ಭಾಷೆಯಲ್ಲಿ ರುವುವು.

ಕೇರಳ ರಾಜ್ಯದ ಕಾಸರಗೋಡು ಕ್ಷೇತ್ರದಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳ ಹೆಸರು ಕನ್ನಡ ಹಾಗೂ ಮಲಯಾಳಿ ಭಾಷೆಯಲ್ಲಿರುವುವು.

ಮೈಸೂರು ರಾಜ್ಯದ ಕೋಲಾರ ಕ್ಷೇತ್ರದಲ್ಲಿನ ಮತದಾನದ ಚೀಟಿಗಳು ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಮುದ್ರಿತವಾಗಿರುವುವು.

ಬೀದರ್ ಮತ್ತು ಚಿಕ್ಕೋಡಿ ಕ್ಷೇತ್ರಗಳ ಮತದಾನದ ಚೀಟಿಗಳು ಕನ್ನಡ ಹಾಗೂ ಮರಾಠಿಯಲ್ಲಿದ್ದರೆ ಉಳಿದ ಕ್ಷೇತ್ರಗಳ ಮತದಾನದ ಚೀಟಿಗಳು ಕನ್ನಡದಲ್ಲಿ ಮಾತ್ರ ಇರುವುವು.

ಗೂಟದ ಕಾರು, ಪೇಟದ ಆಳು, ತೋಟದ ಮನೆ ಆಸೆ ಬಿಟ್ಟರಷ್ಟೇ ಉಳಿಗಾಲ

ಮೌಲ್ಯ: ಕಳೆದಲ್ಲೇ ಹುಡುಕೋಣ

ಅನುಸಂಧಾನ

ರವೀಂದ್ರ ಭಟ್ಟ

‘ಗೂಟದ ಕಾರು, ಪೇಟದ ಆಳು, ತೋಟದ ಮನೆ’ ಇವುಗಳಿಗಾಗಿಯೇ ರಾಜಕಾರಣಿಗಳು ಹಪಹಪಿಸುತ್ತಿದ್ದರೆ ಕುಸಿದ ಸಂಸದೀಯ ಮೌಲ್ಯ ಹೆಚ್ಚುವುದು ಹೇಗೆ? ಆತ್ಮವಂಚನೆ ಬಿಟ್ಟು ನಿಜವಾದ ಅರ್ಥದಲ್ಲಿ ಆತ್ಮಾವಲೋಕನವಾಗಬೇಕು. ನಿಜಮೌಲ್ಯ ಕಳೆದುಹೋಗಿದೆ. ಕಳೆದುಹೋದ ಮೌಲ್ಯವನ್ನು ಅದು ಎಲ್ಲಿ ಕಳೆದಿದೆಯೋ ಅಲ್ಲಿಯೇ ಹುಡುಕಬೇಕು. ಅದಕ್ಕಾಗಿಯೇ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಇಂತಹ ಯತ್ನಕ್ಕೆ ಮೊದಲ ಹೆಜ್ಜೆ ಇಟ್ಟಿದ್ದಾರೆ. ಸಂಸದೀಯ ಮೌಲ್ಯಗಳ ಕುಸಿತ ತಡೆಗೆ ಆತ್ಮಾವಲೋಕನ ಸಭೆಯನ್ನೂ ನಡೆಸಿದ್ದಾರೆ. ಇದೊಂದು ಒಳ್ಳೆಯ ಯತ್ನ.

ರಾಜಕಾರಣಿಗಳು ಅಲ್ಲದೆ ಇತರ ಕ್ಷೇತ್ರಗಳ ಗಣ್ಯರೂ ಈ ಸಭೆಯಲ್ಲಿ ಭಾಗಿಯಾಗಿ ಸಲಹೆಗಳನ್ನು ನೀಡಿದ್ದಾರೆ. ರಾಜಕಾರಣಿಗಳು ನಿಜವಾದ ಅರ್ಥದಲ್ಲಿ ಆತ್ಮಾವಲೋಕನವನ್ನೂ ಮಾಡಿಕೊಂಡಿದ್ದಾರೆ. ಆ ಮಟ್ಟಿಗೆ ಅದು ಯಶಸ್ವಿ ಸಭೆ.

ಸಂಸದೀಯ ಮೌಲ್ಯ ಕುಸಿತಕ್ಕೆ ಚುನಾವಣೆ ವ್ಯವಸ್ಥೆಯೇ ಪ್ರಮುಖ ಕಾರಣ ಎಂಬ ಅಭಿಪ್ರಾಯವನ್ನು ಬಹಳಷ್ಟು ಗಣ್ಯರು ವ್ಯಕ್ತಪಡಿಸಿದ್ದಾರೆ. ಚುನಾವಣೆಯ ವೆಚ್ಚ ಕಡಿಮೆಯಾದರೆ ವ್ಯವಸ್ಥೆ ಸುಧಾರಣೆಯಾಗುತ್ತದೆ ಎಂಬ ಆಶಾವಾದವನ್ನೂ ಕೆಲವರು ವ್ಯಕ್ತಪಡಿಸಿದ್ದಾರೆ. ಆದರೆ ಇದು ಬರೀ ಆತ್ಮಾವಲೋಕನದ ಕಾಲ ಅಲ್ಲ. ಸುಧಾರಣೆಯತ್ತ ಗಂಭೀರ ಹೆಜ್ಜೆ ಇಡುವ ಕಾಲ. ಇಲ್ಲವಾದರೆ ಸಂಸದೀಯ ವ್ಯವಸ್ಥೆ ಮೇಲೆಯೇ ನಂಬಿಕೆ ಹೊರಟು ಹೋಗುತ್ತದೆ. ಈಗಾಗಲೇ ಜನರು ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ಮತ್ತೊಂದು ತುರ್ತು ಪರಿಸ್ಥಿತಿ ಅಥವಾ ಸರ್ವಾಧಿಕಾರಿ ಆಡಳಿತ ಬರಬಹುದೆಂಬ ಆತಂಕ ಜನರ ಮನಸ್ಸಿನ ಮೂಲೆಯಲ್ಲಿ ಕಾಡುತ್ತಿದೆ.

ಅದಕ್ಕಾಗಿಯೇ ಆತ್ಮಾವಲೋಕನ ಎನ್ನುವುದು ಕೇವಲ ಪ್ರಚಾರದ ಸರಕಾಗದೆ ಸುಧಾರಣೆಗೆ ಹಾದಿಯಾಗಬೇಕು. ಒಂದು ದಿನ ಎಲ್ಲರೂ ಭಾಷಣ ಮಾಡಿ ಅವರವರ ಮನೆಗೆ ಹೋಗಿ ಮತ್ತೆ ತಮ್ಮ ತಮ್ಮ ರಾಜಕಾರಣದಲ್ಲಿಯೇ ಮುಳುಗಿಬಿಟ್ಟರೆ, ಕುಸಿದ ಮೌಲ್ಯ ಇನ್ನಷ್ಟು ಪಾತಾಳಕ್ಕೆ ಸೇರುತ್ತದೆ. ಯಾರು ಎಷ್ಟೇ ಸಲಹೆಗಳನ್ನು ನೀಡಿದರೂ ಬದಲಾಗಬೇಕಾಗಿದ್ದು ರಾಜಕೀಯ ಪಕ್ಷಗಳು ಮತ್ತು ರಾಜಕಾರಣಿಗಳು ಎನ್ನುವುದರಲ್ಲಿ ಅನುಮಾನ ಇಲ್ಲ. ಜನರು ಕರಪ್ಟ್ ಆಗಿದ್ದರಿಂದ ಚುನಾವಣೆಗೆ ಹೆಚ್ಚು ಹೆಚ್ಚು ಹಣ ವೆಚ್ಚವಾಗುತ್ತಿದೆ, ಮೌಲ್ಯ ಕುಸಿಯಲು ಇದೇ ಪ್ರಮುಖ ಕಾರಣ ಎಂದು ಹೇಳಿ ರಾಜಕಾರಣಿಗಳು ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ. ಜನರನ್ನು ಭ್ರಷ್ಟರನ್ನಾಗಿ ಮಾಡಿದ್ದು ಯಾರು ಎನ್ನುವುದರ ಬಗ್ಗೆಯೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸುಧಾರಣೆಗೆ ಅವರು ಎರಡು ಹೆಜ್ಜೆ ಮುಂದಿಟ್ಟರೆ ಸಾಮಾನ್ಯರೂ ಅದನ್ನು ಅನುಸರಿಸುತ್ತಾರೆ. ಅದಕ್ಕೆ ತಕ್ಕಂತೆ ಕಾನೂನುಗಳನ್ನೂ ಸುಧಾರಿಸಬೇಕು. ಕಾಲಕ್ಕೆ ತಕ್ಕಂತೆ ನಿಯಮಗಳೂ ಬದಲಾಗಬೇಕು. ಸೌಲಭ್ಯ ಪಡೆಯಲು ಬೇಕಾದ ಕಾನೂನುಗಳನ್ನು ಮಾತ್ರ ಬದಲು ಮಾಡಿಕೊಂಡು ಉಳಿದ ಓಬಿರಾಯನ ಕಾನೂನುಗಳನ್ನು ಹಾಗೆಯೇ ಇಟ್ಟುಕೊಳ್ಳುವುದು ತರವಲ್ಲ.

ಸ್ವಾತಂತ್ರ್ಯ ಬರುವುದಕ್ಕಿಂತ ಮೊದಲು ಮತ್ತು ನಂತರದ ಕೆಲವು ವರ್ಷ ನಮ್ಮ ರಾಜಕಾರಣಿಗಳಿಗೆ ದೇಶ ಮತ್ತು ಜನರ ಹಿತವೇ ಮುಖ್ಯವಾಗಿತ್ತು. ಆನಂತರದ ವರ್ಷಗಳಲ್ಲಿ ದೇಶ ಇರುವುದೇ ನಮಗಾಗಿ ಎಂಬ ಭಾವನೆ ಬೆಳೆದುಬಿಟ್ಟಿದೆ ಎಂದು ಆತ್ಮಾವಲೋಕನ ಸಭೆಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಇದು ಕೇಳುವುದಕ್ಕೆ ಹಿತವಾದ ಮಾತು. ನಿಜವಾದ ಮಾತು ಕೂಡ. ಆದರೆ ಈ ಪರಿಸ್ಥಿತಿಯನ್ನು ಸುಧಾರಿಸುವವರು ಯಾರು? ಹಣ ಮತ್ತು ಜಾತಿ ಬಲ ಇದ್ದವರಿಗೆ ಮಾತ್ರ ಚುನಾವಣೆಯಲ್ಲಿ ಟಿಕೆಟ್ ನೀಡುವ ಪದ್ಧತಿ ಜಾರಿಗೆ ತಂದಿದ್ದು ಯಾರು? ಹಣ ಇದ್ದವರಿಗೇ ಪಕ್ಷದ ಅಧ್ಯಕ್ಷ ಸ್ಥಾನವನ್ನು ಕೊಡುವ ಸಂಪ್ರದಾಯವನ್ನು ಆರಂಭಿಸಿದ್ದು ಯಾರು?

‘ಮಾತಿನ ಮನೆ’ ಎಂದೇ ಪ್ರಸಿದ್ಧವಾಗಿದ್ದ ಮೇಲ್ಮನೆಗೆ ಮಾತನಾಡಲು ಬಾರದವರನ್ನು ನಾಮಕರಣ ಮಾಡುವ ವ್ಯವಸ್ಥೆ ತಂದಿದ್ದು ಯಾರು? ಉತ್ತಮ ಸಂಸದೀಯ ಪಟುಗಳು ನಿವೃತ್ತರಾದಾಗ ಅವರ ಸ್ಥಾನಕ್ಕೆ ಅವರಷ್ಟೇ ಮೌಲ್ಯವುಳ್ಳ ವ್ಯಕ್ತಿಯನ್ನು ಆಯ್ಕೆ ಮಾಡುವ ಬದಲು ಹಣದ ಚೀಲ ಹೊತ್ತು ತಂದ ಉದ್ಯಮಿಯನ್ನು ಪಟ್ಟಕ್ಕೇರಿಸುವ ಅನಿವಾರ್ಯ ಬಂದಿದ್ದು ಯಾಕೆ? ದನಿ ಇಲ್ಲದ ಜಾತಿಯ ವ್ಯಕ್ತಿಯೊಬ್ಬನ ವಿಧಾನಸಭೆ ಪ್ರವೇಶ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣ ಮಾಡಿದ್ದು ಯಾರು? ಮತ್ತು ಇದಕ್ಕೆಲ್ಲಾ ಕಾರಣವಾದ ಅಂಶಗಳು ಯಾವುವು ಎನ್ನುವುದನ್ನು ಬಹಿರಂಗವಾಗಿ ಒಪ್ಪಿಕೊಳ್ಳಬೇಕು. ಯಾಕೆಂದರೆ ಇದಕ್ಕೆಲ್ಲಾ ಮೂಲ ಕಾರಣ ಏನು ಎಂಬುದು ಎಲ್ಲರಿಗೂ ಗೊತ್ತಿದೆ. ಕೆಲವರು ಅದನ್ನು ಬಹಿರಂಗವಾಗಿ ಹೇಳಲು ಹಿಂಜರಿಯುವುದಿಲ್ಲ. ಆದರೆ ಸರಿಪಡಿಸಿಕೊಳ್ಳಲು ಯತ್ನಿಸುವುದಿಲ್ಲ ಅಷ್ಟೆ.

ನಮ್ಮ ತನುವ, ನಮ್ಮ ಮನವ ಸಂತೈಸಿಕೊಳ್ಳಲು ಮುಂದಾಗುವವರೆಗೂ ಈ ಸ್ಥಿತಿ ಹೀಗೆಯೇ ಮುಂದುವರಿಯುತ್ತದೆ ಮತ್ತು ವ್ಯವಸ್ಥೆ ಇನ್ನಷ್ಟು ಕುಸಿಯುತ್ತದೆ. ಮಾತಿನ ಮಂಟಪವಾಗಿದ್ದ ವಿಧಾನ ಮಂಡಲ ಈಗ ಬಂಡವಾಳದ ಮಾಲ್‌ಗಳಾಗಿವೆ ಎಂದು ಹಿರಿಯ ರಾಜಕಾರಣಿ ಎಚ್.ಕೆ. ಪಾಟೀಲ್ ಹೇಳಿದ್ದಾರೆ. ಬಂಡವಾಳ ಹೂಡಿ ಲಾಭವನ್ನು ಕೊಳ್ಳೆಹೊಡೆಯುವ ಉದ್ಯಮವನ್ನಾಗಿ ರಾಜಕಾರಣವನ್ನು ಬದಲಾಯಿಸಿದ್ದು ಯಾರು? ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳೇ ಇದರ ಹೊಣೆಯನ್ನು ಹೊರಬೇಕಾಗುತ್ತದೆ. ಎಲ್ಲ ಕ್ಷೇತ್ರಗಳಲ್ಲಿಯೂ ಮೌಲ್ಯಗಳ ಕುಸಿತವಾಗಿದೆ. ರಾಜಕಾರಣ ಅಥವಾ ರಾಜಕಾರಣಿಗಳನ್ನು ಮಾತ್ರ ಶೂಲಕ್ಕೆ ಏರಿಸಲು ಸಾಧ್ಯವಿಲ್ಲ ಎಂಬ ವಾದ ಇದೆ. ಇದು ಒಪ್ಪಬಹುದಾದ ವಾದವಾದರೂ ರಾಜಕಾರಣ ಮತ್ತು ರಾಜಕಾರಣಿಗಳು ಬದಲಾದರೆ ವ್ಯವಸ್ಥೆ ಸಾಕಷ್ಟು ಸುಧಾರಿಸುತ್ತದೆ ಎನ್ನುವುದೂ ಸುಳ್ಳಲ್ಲ.

ಒಮ್ಮೆ ನೆನಪು ಮಾಡಿಕೊಳ್ಳಿ. ಕರ್ನಾಟಕದಲ್ಲಿ ಎಂತೆಂತಹ ಸಂಸದೀಯಪಟುಗಳಿದ್ದರು. ನಮ್ಮ ಪರಂಪರೆ ಎಷ್ಟು ಉಜ್ವಲವಾಗಿತ್ತು. ಶಾಂತವೇರಿ ಗೋಪಾಲಗೌಡ, ಕೆ.ಎಚ್.ಪಾಟೀಲ್, ಎಸ್. ಶಿವಪ್ಪ, ಡಿ.ದೇವರಾಜ ಅರಸು, ಬಸವಲಿಂಗಪ್ಪ, ಕೆ.ಎಚ್.ರಂಗನಾಥ್, ಅಜೀಜ್ ಸೇಠ್, ಎಚ್.ಎನ್. ನಂಜೇಗೌಡ, ಎ.ಕೆ.ಸುಬ್ಬಯ್ಯ, ಜಗಳೂರು ಮಹಮ್ಮದ್ ಇಮಾಂಸಾಬ್, ಎ.ಲಕ್ಷ್ಮೀಸಾಗರ ಇನ್ನೂ ಮುಂತಾದವರು ವಿಧಾನ ಮಂಡಲಕ್ಕೆ ಘನತೆ ತಂದಿದ್ದರು. ಅಧ್ಯಯನ ಮಾಡಿ ಬಂದು ಸದನದಲ್ಲಿ ಮಾತನಾಡಿ ಸರ್ಕಾರಗಳನ್ನು ಸರಿದಾರಿಗೆ ತಂದಿದ್ದರು. ತಪ್ಪು ಮಾಡಿದ ಸಚಿವರು ರಾಜೀನಾಮೆ ನೀಡುವಂತೆ ಮಾಡಿದ್ದರು. ಮುಖ್ಯಮಂತ್ರಿಯನ್ನೂ ಬಿಟ್ಟಿರಲಿಲ್ಲ. ತಪ್ಪು ಮಾಡಿದಾಗ ಮುಖದ ಮೇಲೆ ಹೇಳುವ ಎದೆಗಾರಿಕೆ ಇತ್ತು.

ಈಗಲೂ ಅಂತಹ ಕೆಲವರಾದರೂ ಇದ್ದಾರೆ ಎಂಬುದು ಸಮಾಧಾನದ ಅಂಶ. ಅಂತಹ ಘನತೆ ದಿನದಿಂದ ದಿನಕ್ಕೆ ಕುಸಿತ ಕಾಣಲು ಮುಖ್ಯ ಕಾರಣ, ಜನಪರ ಹೋರಾಟವೇ ರಾಜಕಾರಣದ ಬಂಡವಾಳ ಎನ್ನುವುದು ಬಂಡವಾಳವೇ ರಾಜಕಾರಣದ ಮೊದಲ ಮೆಟ್ಟಿಲು ಎಂದು ಬದಲಾಗಿದ್ದು. ರಾಸಾಯನಿಕ ಗೊಬ್ಬರವನ್ನು ಮಿತಿಮೀರಿ ಬಳಸಿದ್ದರಿಂದ ಕೃಷಿ ಭೂಮಿ ಬರಡಾದ ಹಾಗೆ ಮಿತಿಮೀರಿದ ಬಂಡವಾಳ ಹೂಡಿಕೆಯಿಂದ ರಾಜಕೀಯ ಭೂಮಿಯೂ ಈಗ ಬರಡಾಗುತ್ತಿದೆ. ಕೃಷಿಯಲ್ಲಿ ಸಾವಯವ ಕೃಷಿ, ನೈಸರ್ಗಿಕ ಕೃಷಿ ಮತ್ತೆ ಮುನ್ನೆಲೆಗೆ ಬಂದ ಹಾಗೆ ಇಲ್ಲಿಯೂ ಅಂತಹ ಒಂದಿಷ್ಟು ಪ್ರಯೋಗಗಳಾಗಬೇಕಿದೆ. ಇಲ್ಲವಾದರೆ ಬರಡು ಭೂಮಿಯಲ್ಲಿ ಬಂಪರ್ ಬೆಳೆ ಬೆಳೆಯಲಾಗದು.

ಮಾಸ್ತರ್ ಹಿರಣ್ಣಯ್ಯ ಯಾವಾಗಲೂ ಹೇಳುತ್ತಿದ್ದರು. ‘ಜನರಲ್ಲಿ ಎರಡು ವಿಧ. ಸತ್ತೂ ಬದುಕಿದವರು ಕೆಲವರು. ಬದುಕಿದ್ದೂ ಸತ್ತವರು ಹಲವರು. ಕುವೆಂಪು, ಬೇಂದ್ರೆ, ಡಾ. ರಾಜಕುಮಾರ್ ಮುಂತಾದವರು ಸತ್ತ ಮೇಲೂ ನಮ್ಮೊಳಗೆ ಬದುಕಿದ್ದಾರೆ. ಬದುಕಿದ್ದೂ ಸತ್ತವರು ವಿಧಾನಸೌಧದಲ್ಲಿ ಇದ್ದಾರೆ. ಲಂಚಕ್ಕೆ ಕೈಒಡ್ಡುವಾಗ ಅವರ ಕೈ ಅಲ್ಲಾಡುತ್ತದೆ. ತಮ್ಮವರ ಪರವಾಗಿ ಓಡಾಡುವಾಗ ಅವರ ಕಾಲು ಚಲಿಸುತ್ತದೆ. ಆಗ ಅವರು ಬದುಕಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಆದರೆ ಅವರು ಯಾರ ಪರವಾಗಿ ಕೆಲಸ ಮಾಡಬೇಕಿತ್ತೋ ಅವರ ಪಾಲಿಗೆ ಸತ್ತಿದ್ದಾರೆ. ಅದಕ್ಕಾಗಿ ಅವರು ಬದುಕಿದ್ದೂ ಸತ್ತವರು’ ಎಂದು ಟೀಕಿಸುತ್ತಿದ್ದರು.

ಸತ್ತಮೇಲೂ ಬದುಕಬೇಕು ಎಂದರೆ, ಬದುಕಿದ್ದಾಗ ನಾಲ್ಕು ಜನಕ್ಕೆ ಒಳ್ಳೆಯದಾಗುವ ಕೆಲಸವನ್ನು ಮಾಡಬೇಕು.

ಚುರುಮುರಿ

ವೈರೀಸ್ ವೈರಾಣು

● ಮಣ್ಣೆರಾಜು

‘ಪಕ್ಕದ ಮನೆ ಡಾಕ್ಟರ್ ಕೋವಿಡ್ ಲಸಿಕೆ ಚುಚ್ಚಿಸಿಕೊಂಡು ಆರೋಗ್ಯವಾಗಿದ್ದಾರೆ. ಅವರ ಹೆಂಡ್ತಿ ಆನಂದವಾಗಿದ್ದಾರೆ ಕಣ್ರೀ...’ ಅಂದಳು ಸುಮಿ.

‘ಹೋಗ್ಲಿಬಿಡು, ಡಾಕ್ಟರ್ ಆರೋಗ್ಯವಾಗಿದ್ದರೆ ಜನಸಾಮಾನ್ಯರೂ ಆರೋಗ್ಯವಾಗಿರ್ತಾರೆ’ ಎಂದ ಶಂಕ್ರಿ.

‘ವೈರಸ್ ವೈರಿ ದಾಳಿ ಮಾಡಬಾರದು ಅಂತ ನಾವು ಕೋಟೆ ಕಟ್ಟಿದಂತೆ ಮಾಸ್ಕ್ ಕಟ್ಟಿಕೊಂಡು, ಪಿಪಿಇ ಕಿಟ್ ತೊಟ್ಟುಕೊಂಡರೂ ಅದರ ಕಾಟ ತಪ್ಪಲಿಲ್ಲ, ಯುದ್ಧ ಸಾರಿ ಕೊರೊನಾ ವಂಶ ಧ್ವಂಸ ಮಾಡಬೇಕು’.

‘ಆಗುತ್ತೆಬಿಡು, ನಮಗೆ ಯುದ್ಧ ಹೊಸದಲ್ಲ. ಹಿಂದಿನ ಅದೆಷ್ಟೋ ರಾಜಮಹಾರಾಜರು ಯುದ್ಧ ಗೆದ್ದು ಸಾಮ್ರಾಜ್ಯ ಸ್ಥಾಪಿಸಿದ ಇತಿಹಾಸ ನಮ್ಮದು’.

‘ನಿಜ, ಇತಿಹಾಸದ ಪುಟ ತೆರೆದರೆ ಪುಟಪುಟದಲ್ಲೂ ರಕ್ತದ ಕಲೆ. ದೇಶದ ಯುದ್ಧ ಭೂಮಿಗಳಲ್ಲಿ ಕೋಡಿ ಹರಿದ ಸೈನಿಕರ ರಕ್ತ ಲೆಕ್ಕಹಾಕಿದರೆ ಕಾವೇರಿ ಗಾತ್ರದ ರಕ್ತದ ನದಿಯಾಗುತ್ತಿತ್ತೇನೋ, ಎಲ್ಲಾ ರಕ್ತ ಸಂಗ್ರಹಿಸಿದ್ದರೆ ಪೆಟ್ರೋಲ್ ಬಂಕ್ ಥರಾ ಊರೂರಲ್ಲೂ ಬ್ಲಡ್ ಬ್ಯಾಂಕ್ ಸ್ಥಾಪಿಸಬಹುದಿತ್ತು’ ಎಂದಳು ಸುಮಿ.

‘ಹೌದು, ಯುದ್ಧವೆಂದರೆ ರಕ್ತ, ಬೆವರು ಹರಿಸಲೇಬೇಕು’.

‘ಇವತ್ತಿಗೂ ಯುದ್ಧ ತಪ್ಪಿಲ್ಲ, ಶತ್ರುಗಳು, ಆಯುಧಗಳ ಸ್ವರೂಪ ಬದಲಾಗಿದೆ ಅಷ್ಟೇ’.

‘ಪುಟ ತಿರುಗಿಸಿ ನೋಡಿದರೆ, ನಾವು ಅಭಿವೃದ್ಧಿಗಿಂತ ಶತ್ರು ಸಂಹಾರಕ್ಕೆ ಸಂಪತ್ತನ್ನು ಖರ್ಚು ಮಾಡಿದ್ದೇ ಜಾಸ್ತಿ. ಈಗಲೂ ಅಷ್ಟೇ, ಖಜಾನೆ ಹಣವನ್ನು ಶತ್ರು ಕೊರೊನಾ ನುಂಗಿಬಿಟ್ಟಿದೆಯಂತೆ’.

‘ಈಗಲಾದರೂ ವ್ಯಾಕ್ಸಿನ್‌ನಿಂದ ವೈರಿ ವೈರಸ್ ದಮನ ಮಾಡಿ, ಅಭಿವೃದ್ಧಿಗೆ ಗಮನ ಕೊಡಬಹುದು’.

‘ಆದರೆ, ಮಾರಕ ರೋಗ ವೈರೀಸ್ ವೈರಾಣುಗೆ ವ್ಯಾಕ್ಸಿನ್ ಸಿಕ್ಕಿಲ್ಲವಲ್ಲ...’

‘ವೈರೀಸ್ ವೈರಾಣುನಾ?’

‘ಆಡಳಿತವನ್ನು ಅಧ್ವಾನಗೆಡಿಸುತ್ತಿರುವ ಲೋಕಲ್ ರೋಗ, ವಿರೋಧ ಪಕ್ಷದವರ ಟೀಕೆ, ಸ್ವಪಕ್ಷದವರ ತೀಟೆ ಎಂಬ ವ್ಯಾಕ್ಸಿನ್ ಇಲ್ಲದ ವೈರೀಸ್ ರೋಗಬಾಧೆಯಿಂದ ಆಡಳಿತ ಕಂಗೆಟ್ಟಿದೆಯಂತೆ...’ ಅಂದ ಶಂಕ್ರಿ.

ಸಂಗತ

ಒಂಟಿತನ ನಿರ್ವಹಣೆಗೊಬ್ಬ ಸಚಿವ!

ವೈಯಕ್ತಿಕ ಸಮಸ್ಯೆಯಾಗಿದ್ದ ಒಂಟಿತನ, ಇಂದು ಬೃಹತ್ ಸಾಮಾಜಿಕ ಪಿಡುಗಾಗಿದೆ

● ಡಾ. ಜ್ಯೋತಿ

ಸಮುದಾಯ ಜೀವಿಯಾದ ಮನುಷ್ಯ ಜನಾಂಗಕ್ಕೆ ಮುಂದೊಂದು ದಿನ ಒಂಟಿತನ ನಿರ್ವಹಣೆಗೆ ಒಂದು ಸಚಿವಾಲಯದ ಅಗತ್ಯ ಬರಬಹುದೆಂದು ಹಳೆಯ ತಲೆಮಾರಿನವರು ಬಹುಶಃ ಅಂದುಕೊಂಡಿರಲಿಕ್ಕಿಲ್ಲ. ಪ್ರಸ್ತುತ, ಅದರ ಅನಿವಾರ್ಯವನ್ನು ಕಂಡುಕೊಂಡ ಜಗತ್ತಿನ ಎರಡನೇ ದೇಶ ಜಪಾನ್.

ಜಪಾನಿನ ಪ್ರಧಾನಿ ಈ ತಿಂಗಳ ಆರಂಭದಲ್ಲಿ, ಜನರ ಒಂಟಿತನ ನಿರ್ವಹಣೆ ಎನ್ನುವ ಹೊಸ ಖಾತೆ ಸೃಷ್ಟಿಸಿ, ಮಂತ್ರಿಯೊಬ್ಬರನ್ನು (ಲೋನ್‌ಲಿನೆಸ್ ಮಿನಿಸ್ಟರ್) ನಿಯೋಜಿಸಿದರು. 2018ರಲ್ಲಿ, ಒಂಟಿತನ ನಿರ್ವಹಣೆಗೆ ಖಾತೆ ರಚಿಸಿದ ಮೊದಲ ದೇಶ ಬ್ರಿಟನ್. ಪ್ರಸಕ್ತ ಕೊರೊನಾ ಕಾಲಘಟ್ಟದಲ್ಲಿ, ದೇಶದಲ್ಲಿ ಹೆಚ್ಚುತ್ತಿರುವ ಆತ್ಮಹತ್ಯೆಗಳನ್ನು ತಡೆಯಲು ಜಪಾನ್ ಈ ಕ್ರಮ ಕೈಗೊಂಡಿದೆ.

ಇಡೀ ಜಗತ್ತನ್ನೇ ತಲ್ಲಣಗೊಳಿಸುತ್ತಿರುವ ಕೊರೊನಾ ಜನಸಾಮಾನ್ಯರಿಗೆ ತಮ್ಮ ಬದುಕನ್ನು ಪುನರ್ ವಿಮರ್ಶಿಸುವಂತೆ ಮಾಡಿರುವುದಂತೂ ನಿಜ. ಇದರೊಂದಿಗೆ, ಜಪಾನಿನ ಸಾಮಾಜಿಕ ವ್ಯವಸ್ಥೆ ಮತ್ತು ಅದರ ಸಮಸ್ಯೆಗಳು ಬಹಳ ಸಂಕೀರ್ಣವಾದವು. ಬಹುಶಃ, ಆಧುನಿಕತೆ ಮತ್ತು ತಂತ್ರಜ್ಞಾನದ ಉತ್ತುಂಗದಲ್ಲಿರುವ ಜಪಾನ್, ವಸ್ತುನಿಷ್ಠತೆ ಮತ್ತು ಬಾಹ್ಯ ಜಗತ್ತಿನ ಯಶಸ್ಸಿನ ಮಾನದಂಡಗಳನ್ನು ಗಂಭೀರವಾಗಿ ಪರಿಗಣಿಸುವ ದೇಶಗಳಲ್ಲಿ ಮುಂಚೂಣಿಯಲ್ಲಿದೆ. ಅಲ್ಲಿ ವಿವಾಹಿತರ ಸಂಖ್ಯೆ ಮತ್ತು ಜನನ ಪ್ರಮಾಣ ಗಂಭೀರ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ. ಜೊತೆಗೆ, ತಂತ್ರಜ್ಞಾನದ ಅತೀವ ಅವಲಂಬನೆಯಿಂದಾಗಿ ಮನುಷ್ಯರ ನಡುವೆ ಸಾಮಾಜಿಕ ಅಂತರ ಹೆಚ್ಚಾಗುತ್ತಿದೆ. ವಿಸ್ಮಯವೆಂದರೆ, ತಂತ್ರಜ್ಞಾನ ಎನ್ನುವುದು ಮನುಷ್ಯನ ಹೆಚ್ಚಿನ ಕೆಲಸಗಳನ್ನು ತಾನೇ ನಿರ್ವಹಿಸುವುದರ ಮೂಲಕ, ಅವನಿಗೆ ಉಳಿದವರೊಂದಿಗೆ ಸಮಯ ಕಳೆಯುವ ಸಾಧ್ಯತೆಯನ್ನು ಹೆಚ್ಚಿಸಬೇಕಿತ್ತು. ತದ್ವಿರುದ್ಧವಾಗಿ, ವೈಜ್ಞಾನಿಕ ಆವಿಷ್ಕಾರಗಳು ಹೆಚ್ಚಾದಂತೆ ಜನ ಒಂಟಿ ದ್ವೀಪಗಳಾಗುತ್ತಿದ್ದಾರೆ.

2019ರ ವರದಿಯೊಂದರ ಪ್ರಕಾರ, ಜಪಾನಿನಲ್ಲಿ 5 ಲಕ್ಷ ಆಧುನಿಕ ಸನ್ಯಾಸಿಗಳಿದ್ದಾರೆ (ಮಾಡರ್ನ್ ಹರ್ಮಿಟ್). ಅವರನ್ನು ಜಪಾನಿ ಭಾಷೆಯಲ್ಲಿ ‘ಹಿಕಿಕೊಮೊರಿ’ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ, ಅವರು ಎಲ್ಲಾ ಸಾಮಾಜಿಕ ಸಂಪರ್ಕಗಳನ್ನು ಕಡಿದುಕೊಂಡು ವರ್ಷಾನುಗಟ್ಟಲೆ ಮನೆಯಲ್ಲಿಯೇ ಇರುತ್ತಾರೆ. ಅವರ ಜೀವನದ ಏಕೈಕ ಗುರಿ, ಯಶಸ್ಸಿನ ಹಿಂದೆ ನಾಗಾಲೋಟ. ಇತ್ತೀಚೆಗೆ, ಈ ವಿಶಿಷ್ಟ ಮನುಷ್ಯಸ್ಥಿತಿ ಅಭಿವೃದ್ಧಿ ಹೊಂದಿದ ಹೆಚ್ಚಿನ ದೇಶಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದೆ. ಉದಾಹರಣೆಗೆ, ದಕ್ಷಿಣ ಕೊರಿಯಾ, ಅಮೆರಿಕ, ಸ್ಪೇನ್, ಇಟಲಿ, ಫ್ರಾನ್ಸ್...

ಮೊದಲನೆಯದಾಗಿ, ಜಪಾನಿನಲ್ಲಿ ಜೀವನದ ಯಶಸ್ಸಿನ ಕುರಿತಾದ ವೈಯಕ್ತಿಕ ನಿರೀಕ್ಷೆಗಳು, ಹೆತ್ತವರು ಮತ್ತು ಸಮಾಜದ ಅತಿಯಾದ ನಿರೀಕ್ಷೆಗಳು ಬದುಕಿನ ಪ್ರತೀ ಕ್ಷಣದಲ್ಲಿಯೂ ಮುಖಾಮುಖಿಯಾಗುತ್ತಾ ಮನಸ್ಸನ್ನು ತೀವ್ರ ಒತ್ತಡಕ್ಕೆ ಸಿಲುಕಿಸುತ್ತವೆ. ಉಳಿದ ದೇಶಗಳಿಗೆ ಹೋಲಿಸಿದರೆ, ಇಲ್ಲಿ ವೃತ್ತಿಯಾಧಾರಿತ ಯಶಸ್ಸಿಗೆ ಅತಿಯಾದ ಮಹತ್ವ ಕೊಡಲಾಗುತ್ತದೆ. ಇದರ ಜೊತೆಗೆ ಇಂಟರ್ನೆಟ್, ಸಾಮಾಜಿಕ ಜಾಲತಾಣ ಮತ್ತು ವಿಡಿಯೊ ಗೇಮ್‌ಗಳ ಪ್ರಭಾವಗಳಿಂದಾಗಿ ಮನುಷ್ಯ ಹೆಚ್ಚು ಅಂತರ್ಮುಖಿಯಾಗುತ್ತಿರುವುದಂತೂ ನಿಜ. ಈ ವಿಷಯವಾಗಿ ಸಂಶೋಧಕರು ಗಮನಿಸಿದ ಬಹಳ ಸೂಕ್ಷ್ಮ ಅಂಶವೆಂದರೆ- ಬಾಹ್ಯ ಜಗತ್ತು ಮತ್ತು ವರ್ಚುವಲ್ ಪರಿಸರದ ನಡುವಿನ ಅಜಗಜಾಂತರ. ನಮ್ಮ ದೈನಂದಿನ ಬದುಕು ಸಾಗಿಸುವ ವಾಸ್ತವದ ಪ್ರಪಂಚದಲ್ಲಿ ಪ್ರತಿಕ್ಷಣವೂ ಅನಿಶ್ಚಿತತೆ ಪ್ರಕಟವಾದರೆ, ಇಂಟರ್ನೆಟ್ ಜಗತ್ತು ಹೆಚ್ಚು ನಿಯಂತ್ರಿತವಾಗಿ ಕಂಡುಬಂದು ತಕ್ಕಮಟ್ಟಿಗೆ ನಮ್ಮ ನಿರೀಕ್ಷೆಯಂತೆ ಕೆಲಸ ಮಾಡುತ್ತದೆ. ಅಂದರೆ, ವರ್ಚುವಲ್ ಪ್ರಪಂಚದಲ್ಲಿ, ಎಲ್ಲವನ್ನೂ ಬಟನ್ ಒತ್ತುವುದರ ಮೂಲಕ ನಿಯಂತ್ರಿಸಬಹುದು. ಇಲ್ಲಿ ಸೋಲಿನ ಭಯ, ಮುಖಾಮುಖಿ ಮತ್ತು ಅನುಭವ ಕಡಿಮೆ. ಸೋತರೂ ತಿದ್ದಿಕೊಳ್ಳಲು ಅವಕಾಶಗಳಿವೆ. ಜೊತೆಗೆ, ನೇರ ಸಂವಹನಗಳು ಕಡಿಮೆ. ಅಂದರೆ, ಬಾಹ್ಯ ಪ್ರಪಂಚದೊಂದಿಗಿನ ಮಾತುಕತೆಗಳ ಅಗತ್ಯ ಬಹಳ ವಿರಳ. ಇಂತಹ ಅನುಕೂಲಕರ, ಯಶಸ್ಸಿನ ಅನುಭವ ಕೊಡುವ ಮತ್ತು ಸಂಪೂರ್ಣ ನಮ್ಮ ನಿಯಂತ್ರಣವಿರುವ ವರ್ಚುವಲ್ ಪ್ರಪಂಚಕ್ಕೆ ಹೋಲಿಸಿದರೆ ವಾಸ್ತವ ಜಗತ್ತು ಅತ್ಯಂತ ನಿಷ್ಠುರವಾಗಿ ಕಾಣಿಸುತ್ತದೆ.



ಯಾಕೆಂದರೆ, ವಾಸ್ತವ ಜಗತ್ತಿನ ಪ್ರತಿಕ್ಷಣವೂ ಆತಂಕದಿಂದ ಕೂಡಿದ್ದು, ಹೆಚ್ಚಿನ ಬಾಹ್ಯ ಸಂಗತಿಗಳು ನಮ್ಮ ನಿಯಂತ್ರಣದಿಂದ ಹೊರಗಿರುತ್ತವೆ. ಜೊತೆಗೆ, ಇಲ್ಲಿ ಯಶಸ್ಸು ಕಡಿಮೆ, ಸೋಲು ಹೆಚ್ಚು. ಹಾಗಾಗಿ, ನಿತ್ಯದ ಸೋಲನ್ನು ಸ್ವೀಕರಿಸಲು ಸ್ಥಿತಪ್ರಜ್ಞೆ ಮತ್ತು ಸಂಯಮ ಬಹಳ ಮುಖ್ಯ. ಈ ಭಿನ್ನ ಪ್ರಪಂಚಗಳ ದ್ವಂದ್ವಗಳನ್ನು ಎದುರಿಸಲಾಗದ, ಸದಾ ಯಶಸ್ಸಿನ ಹಂಬಲದ ಒತ್ತಡದಲ್ಲಿರುವ ಮನಸ್ಸು, ಹತಾಶೆಯಿಂದ ಆತ್ಮಹತ್ಯೆಯತ್ತ ವಾಲುವ ಸಾಧ್ಯತೆಯಿದೆ.

ವರ್ತಮಾನ ಜಗತ್ತಿನ ಈ ಸಮಸ್ಯೆಗೆ ಪರಿಹಾರವಾಗಿ, ಜಪಾನ್ ಸರ್ಕಾರ ಒಂಟಿ ಜನರ ಸಾಂಗತ್ಯಕ್ಕಾಗಿ ಪ್ರಾಣಿಗಳನ್ನು ಸಾಕುವುದನ್ನು ಪ್ರೋತ್ಸಾಹಿಸತೊಡಗಿದೆ. ಇದರೊಂದಿಗೆ, ಆಧುನಿಕ ತಂತ್ರಜ್ಞಾನದಲ್ಲಿ ಅತೀವ ಭರವಸೆಯಿರುವ ಜಪಾನ್, ಇದಕ್ಕೂ ತಂತ್ರಜ್ಞಾನದ ಮೊರೆ ಹೊಕ್ಕು, ಒಂಟಿತನ ಹೋಗಲಾಡಿಸಲು ನೆರವಾಗುವ ರೋಬೊಟ್‌ಗಳನ್ನು ಮಾರುಕಟ್ಟೆಗೆ ತರುತ್ತಿದೆ. ಅಂತೂ, ಅತಿಯಾದ ತಂತ್ರಜ್ಞಾನದಿಂದಾದ ಸಮಸ್ಯೆಗೆ ಪರಿಹಾರವನ್ನು ಕೂಡ ತಂತ್ರಜ್ಞಾನದಿಂದಲೇ ಪಡೆಯಲೆತ್ನಿಸುತ್ತಿರುವುದು ವಿಸ್ಮಯವೇ ಸರಿ.

ಒಟ್ಟಿನಲ್ಲಿ, ಒಂದು ಕಾಲದಲ್ಲಿ ಮನುಷ್ಯನ ವೈಯಕ್ತಿಕ ಸಮಸ್ಯೆಯೆಂದು ಪರಿಗಣಿಸಲ್ಪಟ್ಟಿದ್ದ ಒಂಟಿತನ, ಇಂದು ಬೃಹತ್ ಸಾಮಾಜಿಕ ಪಿಡುಗಾಗಿ, ಅದನ್ನು ನಿವಾರಿಸಲು ಸರ್ಕಾರಗಳು ಖಾತೆಯೊಂದನ್ನು ಆರಂಭಿಸಬೇಕಾದ ಅನಿವಾರ್ಯ ಕಾಲಘಟ್ಟದಲ್ಲಿದ್ದೇವೆ.

ವಾಚಕರ ವಾಣಿ

ಶೋಭೆ ತರದ ನಾಮಕರಣ

‘ಸಾಧಕರ ಹೆಸರು ಮುನ್ನೆಲೆಗೆ ಬರಲಿ, ಪ್ರದರ್ಶನಪ್ರಿಯತೆ ಕೊನೆಗೊಳ್ಳಲಿ’ ಎಂಬ ಸಂಪಾದಕೀಯ (ಪ್ರ.ವಾ., ಫೆ. 26) ಕಟು ಸತ್ಯವಾದುದು. ನಮ್ಮಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಒಂದು ಕೆಟ್ಟ ಪರಿಪಾಟವೆಂದರೆ, ಯಾರೇ ಅಧಿಕಾರದಲ್ಲಿರಲಿ ಎಲ್ಲಕ್ಕೂ ಆಡಳಿತ ಪಕ್ಷದ ನಾಯಕರ ಹೆಸರುಗಳನ್ನೇ ನಾಮಕರಣ ಮಾಡುವುದು. ಅದು ಒಂದು ಜನಪರ ಯೋಜನೆಯಾಗಲಿ, ಕ್ರೀಡಾಂಗಣವಾಗಲಿ, ಕಟ್ಟಡ, ಸೇತುವೆಯೇ ಆಗಿರಲಿ, ಯಾರದೋ ಸಾಧನೆಗೆ ಮತ್ಯಾರದೋ ಹೆಸರು ಇರಿಸುವುದು ಎಷ್ಟು ಸರಿ?

ಕೆಲವು ಜನಪರ ಯೋಜನೆಗಳು ಹೆಚ್ಚು ಸಫಲವಾಗಿರುತ್ತವೆ. ಅಂತಹ ಯೋಜನೆಗಳು ವಿರೋಧ ಪಕ್ಷಗಳ ಮೆಚ್ಚುಗೆಗೆ ಪಾತ್ರವಾಗುವಂತೆ ಇದ್ದರೂ ಮುಂದೆ ಅಧಿಕಾರಕ್ಕೆ ಬರುವ ಪಕ್ಷವು ಅವುಗಳ ಹೆಸರಿನ ಕಾರಣದಿಂದ ಅವುಗಳನ್ನು ಮುಂದುವರಿಸಲು ಆಸಕ್ತಿ ತೋರುವುದಿಲ್ಲ. ಏಕೆಂದರೆ ಅವು ಹೊಂದಿರುವುದು ಬೇರೊಂದು ಪಕ್ಷದ ನಾಯಕರ ಹೆಸರುಗಳನ್ನು. ಇಂತಹ ಮನಃಸ್ಥಿತಿಯಿಂದಾಗಿ ಆ ಯೋಜನೆಗಳು ಅಲ್ಲಿಗೇ ಸ್ಥಗಿತವಾಗಬೇಕಾಗುತ್ತದೆ ಇಲ್ಲವೇ ಕುಂಟುತ್ತಾ ಸಾಗುವಂತಹ ಸ್ಥಿತಿ ಉಂಟಾಗುತ್ತದೆ. ಅದರ ಬದಲು ಈ ದೇಶದ ಉದ್ದಗಲಕ್ಕೂ ಸಾಧನೆ ಮಾಡಿದ, ಎಲ್ಲರೂ ಒಪ್ಪುವಂತಹ ಕ್ರೀಡಾಳುಗಳು, ಪರಿಸರ ಪ್ರೇಮಿಗಳು, ಸಮಾಜ ಸೇವಕರು, ಸಂಗೀತ, ಸಾಹಿತ್ಯ, ಚಿತ್ರರಂಗದ ದಿಗ್ಗಜರು, ಕವಿಗಳು, ಜಲ ಸಂರಕ್ಷಕರು, ಇಲ್ಲದವರಿಗೆ ಅನ್ನ ದಾಸೋಹ, ಶಿಕ್ಷಣ, ವಸತಿ ವ್ಯವಸ್ಥೆ ಕಲ್ಪಿಸಿ ಎಲೆ ಮರೆಯ ಕಾಯಿಯಂತೆ ಸೇವೆ ಮಾಡಿರುವ ಎಷ್ಟೋ ಮಹನೀಯರಿಲ್ಲವೇ? ಅಂತಹವರ ಹೆಸರು ಇಡುವುದು ಔಚಿತ್ಯಪೂರ್ಣ.

ಚೆಲುವರಾಜು ಕೆ., ಧನಗೆರೆ, ಕೊಳ್ಳೇಗಾಲ

ಏರುತ್ತಿದೆ ಧಗೆ

ಬೆವರಿಳಿಸುತ
ನಿಧಾನವಾಗಿ ಏರುತ್ತಿದೆ
ಬಿಸಿಲಿನ ಧಗೆ...
ಬಸವಳಿಯುತ
ಜನಜೀವನ ತತ್ತರಿಸುತ್ತಿದೆ
ಬೆಲೆ ಏರಿಕೆಯ ಬಿಸಿಗೆ...
ಮೀಸಲಾತಿ ಕೂಗಿಗೆ ಕಳಚುತ್ತಿದೆ
ಸಮುದಾಯದ ಬೆಸುಗೆ...

ಮಹಾಂತೇಶ್ ಬಿ. ನಿಟ್ಟೂರ್
ದಾವಣಗೆರೆ

ಇಂಧನ ಬೆಲೆ ಏರಿಕೆಯಿಂದ ಹಣದುಬ್ಬರದ ಭೀತಿ

ಪೆಟ್ರೋಲ್ ಮತ್ತು ಡೀಸೆಲ್ ದೈನಂದಿನ ಅಗತ್ಯಗಳಾಗಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆ ಮತ್ತು ಇಂಧನದ ಮೇಲೆ ಸರ್ಕಾರ ವಿಧಿಸುತ್ತಿರುವ ಅಧಿಕ ಸುಂಕವು ಇವುಗಳ ಬೆಲೆ ಏರಿಕೆಗೆ ಪ್ರಮುಖ ಕಾರಣ. ಈ ಬೆಲೆ ಏರಿಕೆಯು ಆರ್ಥಿಕತೆಯಲ್ಲಿ ಇತರ ಸರಕು ಮತ್ತು ಸೇವೆಗಳ ಬೆಲೆ ಏರಿಕೆಗೆ ಕಾರಣವಾಗುವುದರ ಮೂಲಕ ಹಣದುಬ್ಬರವನ್ನು ಸೃಷ್ಟಿಸುವ ಅಪಾಯವಿದೆ.

ಆರ್ಥಿಕತೆ ಈಗಷ್ಟೇ ಚೇತರಿಕೆ ಕಾಣುತ್ತಿದೆ. ಅದು ವೇಗ ಪಡೆಯಬೇಕಾದರೆ ಜನರ ಕೈಯಲ್ಲಿ ಹಣ ಓಡಾಡಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ಹಣದುಬ್ಬರದ ಪರಿಣಾಮವಾಗಿ ಜನರ ಜೇಬು ಖಾಲಿಯಾದರೆ ವಸ್ತುಗಳ ಬೇಡಿಕೆ ಕುಸಿಯುತ್ತದೆ. ಆರ್‌ಬಿಐ ಲೆಕ್ಕಾಚಾರವನ್ನು ತಲೆಕೆಳಗಾಗಿಸುತ್ತದೆ. ಹಣದುಬ್ಬರದಿಂದ ಬಡವರು ಇನ್ನಷ್ಟು ಬಡವರಾಗುತ್ತಲೇ ಹೋಗುವ ಅಪಾಯ ಇದ್ದೇ ಇರುತ್ತದೆ.

ನಿರ್ಮಲ ನಾಗೇಶ್, ಧಾರವಾಡ

ಕಾರು ಖರೀದಿ: ಪ್ರಸ್ತಾವ ಮರುಪರಿಶೀಲಿಸಿ

ರಾಜ್ಯದ ಸಂಸದರು ಮತ್ತು ಸಚಿವರ ಉಪಯೋಗಕ್ಕೆ, ₹ 22 ಲಕ್ಷದ ಮಿತಿಯನ್ನು ₹ 23 ಲಕ್ಷಕ್ಕೆ ಏರಿಸಿ ಹೊಸ ಕಾರುಗಳನ್ನು ಖರೀದಿಸಲು ಸರ್ಕಾರ ಅನುಮತಿ ನೀಡಿದೆ. ಕೊರೊನಾ ಪಿಡುಗಿನಿಂದ ರಾಜ್ಯದ ಆರ್ಥಿಕ ಸ್ಥಿತಿ ಸಂಕಷ್ಟದಲ್ಲಿದ್ದು, ಸಾರಿಗೆ ನಿಗಮಗಳ ನೌಕರರಿಗೆ ಸಕಾಲದಲ್ಲಿ ವೇತನ ನೀಡಲೂ ಸರ್ಕಾರ ಹೆಣಗಾಡುತ್ತಿದೆ. ಇನ್ನೊಂದೆಡೆ, ದಿನೇ ದಿನೇ ಏರುತ್ತಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಿಂದಾಗಿ ಅಗತ್ಯ ವಸ್ತುಗಳ ಬೆಲೆಯೂ ಏರಿಕೆಯಾಗಿ ಸಾಮಾನ್ಯ ಜನ ಪರಿತಪಿಸುತ್ತಿದ್ದಾರೆ.

ರಾಜ್ಯದ ಕೆಲವೆಡೆ ಪ್ರವಾಹದಿಂದ ತತ್ತರಿಸಿದ್ದ ಪ್ರದೇಶಗಳ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಇನ್ನೂ ಸಾಧ್ಯವಾಗಿಲ್ಲ. ಈ ಕೆಲಸಕ್ಕೆ ಕೇಂದ್ರದಿಂದ ನಿರೀಕ್ಷಿತ ಮಟ್ಟದಲ್ಲಿ ನೆರವು ಸಹ ದೊರೆತಿಲ್ಲ. ಈ ನಡುವೆ ರಾಜ್ಯಕ್ಕೆ ದೊರಕಬೇಕಾದ ಜಿಎಸ್‌ಟಿ ಪರಿಹಾರವೂ ಕೈಸೇರಲಿಲ್ಲ. ರಾಜ್ಯ ಇಂತಹ ಕಠಿಣ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ, ಜನಸೇವಕರೆನಿಸಿಕೊಂಡವರು ಹೊಸ ಐಷಾರಾಮಿ ಕಾರುಗಳನ್ನು ಖರೀದಿಸುವ ತುರ್ತು ಅಗತ್ಯ ಕಾಣುವುದಿಲ್ಲ. ಸರ್ಕಾರ ಈ ಪ್ರಸ್ತಾವವನ್ನು ಮರುಪರಿಶೀಲಿಸುವುದು ಒಳಿತು.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಆಪ್ತವಾಗದ ಹಾಡು; ಅರ್ಥವಿಲ್ಲದ ಸಾಹಿತ್ಯ

ಸಿನಿಮಾಗಳಲ್ಲಿ ಚಿತ್ರಕಥೆ, ಸಾಹಿತ್ಯದ ಜೊತೆಗೆ ಹಾಡುಗಳೂ ಅಷ್ಟೇ ಮುಖ್ಯವಾಗಿರುತ್ತವೆ. ಕೆಲವು ಮತ್ತೆ ಮತ್ತೆ ಕೇಳಬೇಕು ಅನಿಸಿದರೆ ಇನ್ನು ಕೆಲವು ಕರ್ಣ ಕಠೋರವಾಗಿರುತ್ತವೆ. ಅಬ್ಬರದ ದನಿ ಒಂದೆಡೆಯಾದರೆ ಅರ್ಥವಿಲ್ಲದ ಸಾಹಿತ್ಯ ಮತ್ತೊಂದೆಡೆ. ಮತ್ತೆ ಕೆಲವು ಹಾಡುಗಳು ಭಯಾನಕವಾದ ಪದಪುಂಜಗಳನ್ನು ಒಳಗೊಂಡಿದ್ದು ಅವನ್ನು ಕೆಲವು ಸೆಲೆಬ್ರಿಟಿಗಳು ಹಾಡಿರುವುದಕ್ಕೋ ಏನೋ ಹೆಚ್ಚು ಪ್ರಾಮುಖ್ಯ ಪಡೆಯುತ್ತವೆ. ಹಿಂಸೆಯನ್ನು ಬಿಂಬಿಸುವುದರ ಜೊತೆಗೆ ವಿಶೇಷವಾಗಿ ಹೆಣ್ಣುಮಕ್ಕಳ ಕುರಿತು ಅವಹೇಳನಕಾರಿ, ಪ್ರಚೋದನಕಾರಿ ಶಬ್ದಗಳನ್ನು ಬಳಸಲಾಗುತ್ತಿದೆ. ಇಂತಹ ಹಾಡುಗಳನ್ನು ಕೇಳಿದಾಗ ವೇದನೆಯಾಗುವುದರ ಜೊತೆಗೆ ಕೆಲವು ಪ್ರಶ್ನೆಗಳು ಮೂಡುತ್ತವೆ. ಇಂತಹ ಹಾಡುಗಳ ಉದ್ದೇಶವೇನು? ಅವನ್ನು ರಚಿಸಿದವರು ಹಾಗೂ ಹಾಡಿದವರ ಮನಃಸ್ಥಿತಿ ಎಂಥದ್ದಿರಬಹುದು? ಆ ಹಾಡುಗಳ ಅವಶ್ಯಕತೆ ಇತ್ತೇ? ಒಂದು ವೇಳೆ ಹಾಗಿದ್ದರೆ ಆ ಸಿನಿಮಾಗಳು ಯಾವ ಸಂದೇಶ ಸಾರುತ್ತಿವೆ ಎಂಬಂಥ ಪ್ರಶ್ನೆಗಳಿಗೆ ಕಾರಣವಾಗುತ್ತವೆ.

ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳು ದಿನೇ ದಿನೇ ಹೆಚ್ಚುತ್ತಿರುವ ಸಂದರ್ಭದಲ್ಲಿ ಇಂತಹ ಹಾಡುಗಳು ಕ್ರೌರ್ಯವನ್ನು ಮತ್ತಷ್ಟು ಉತ್ತೇಜಿಸುವುದಿಲ್ಲವೇ? ಮನರಂಜನೆಯ ಜೊತೆಗೆ ಒಂದಷ್ಟು ಸಾಮಾಜಿಕ ಬದ್ಧತೆಯೂ ಇದ್ದಾಗ ಅದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನಮಾನಸದಲ್ಲಿ ಉಳಿಯುತ್ತದೆ. ಈ ಕಾರಣದಿಂದಲೇ ಅಲ್ಲವೇ ಹಳೆಯ ಮಧುರ ಗೀತೆಗಳು ಜನರಿಗೆ ಇಂದಿಗೂ ಆಪ್ತವಾಗಿ ಇರುವುದು.

ಡಾ. ಗಿರಿಜಾ ಕೆ.ಎಸ್., ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇರಳ: ಎಲ್ಲ ರಂಗಗಳಿಗೂ ನಿರ್ಣಾಯಕ ಚುನಾವಣೆ

• ಅರ್ಜುನ್ ರಘುನಾಥ್



ತಿರುವನಂತಪುರ: ಕೇರಳ ವಿಧಾನಸಭಾ ಚುನಾವಣೆಗೆ ಇನ್ನು ಐದು ವಾರಗಳಷ್ಟೇ ಇವೆ. ಆಡಳಿತಾರೂಢ ಸಿಪಿಎಂ ನೇತೃತ್ವದ ಎಲ್‌ಡಿಎಫ್, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎಗೆ ಇದು ಅತ್ಯಂತ ಮಹತ್ವದ ಚುನಾವಣೆ. ಹಾಗಾಗಿ, ಎಲ್ಲ ಪಕ್ಷಗಳೂ ಆಗಲೇ ಚುನಾವಣಾ ಕಣಕ್ಕೆ ಇಳಿದಿವೆ.

ಸಿಪಿಎಂ ಅಧಿಕಾರದಲ್ಲಿರುವ ಭಾರತದ ಏಕೈಕ ರಾಜ್ಯ ಕೇರಳ. ಹಾಗಾಗಿ, ದೇಶದಲ್ಲಿ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳಲು ಕೇರಳದಲ್ಲಿನ ಅಧಿಕಾರ ಕೈಬಿಟ್ಟು ಹೋಗದಂತೆ ಸಿಪಿಎಂ ನೋಡಿಕೊಳ್ಳಲೇಬೇಕಿದೆ. ಕಳೆದ ಚುನಾವಣೆಯಲ್ಲಿ, 140 ಸ್ಥಾನಗಳ ಪೈಕಿ 91ರಲ್ಲಿ ಗೆದ್ದು ಭಾರಿ ಬಹುಮತದೊಂದಿಗೆ ಪಿಣರಾಯಿ ವಿಜಯನ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಹಲವು ವರ್ಷಗಳಿಂದ ಇಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್ ಪರ್ಯಾಯವಾಗಿ ಆಳ್ವಿಕೆ ನಡೆಸಿಕೊಂಡು ಬಂದಿವೆ. ಈ ಬಾರಿ, ಅದನ್ನು ತಪ್ಪಿಸಿ ಅಧಿಕಾರ ಉಳಿಸಿಕೊಳ್ಳುವ ಉತ್ಸಾಹದಲ್ಲಿ ಪಿಣರಾಯಿ ವಿಜಯನ್ ಇದ್ದಾರೆ.

ಜನರ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಕ್ರಮಗಳನ್ನು ಸರ್ಕಾರವು ಜನರ ಮುಂದೆ ಇರಿಸುತ್ತಿದೆ. ಸ್ಥಳೀಯ ಸಂಸ್ಥೆಗಳಿಗೆ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಎಲ್‌ಡಿಎಫ್‌ಗೆ ಮೇಲುಗೈ ಸಿಕ್ಕಿದೆ. ಚುನಾವಣಾಪೂರ್ವದಲ್ಲಿ ನಡೆದ ಒಂದೆರಡು ಸಮೀಕ್ಷೆಗಳು ಕೂಡ ಎಲ್‌ಡಿಎಫ್ ಅಧಿಕಾರಕ್ಕೆ ಮರಳಲಿದೆ ಎಂದಿವೆ. ಇವೆಲ್ಲವೂ ಸಿಪಿಎಂನಲ್ಲಿ ಹುಮ್ಮಸ್ಸು ಮೂಡಿಸಿದೆ.

ಒಂದೊಂದೇ ರಾಜ್ಯಗಳನ್ನು ಕಳೆದುಕೊಳ್ಳುತ್ತಿರುವ ಕಾಂಗ್ರೆಸ್‌ಗೆ ಈ ಚುನಾವಣೆ ನಿರ್ಣಾಯಕ. ಕಾಂಗ್ರೆಸ್ ಮತ್ತು ಸಿಪಿಎಂ ಪರ್ಯಾಯವಾಗಿ ಅಧಿಕಾರಕ್ಕೆ ಬರುವ ಪ್ರವೃತ್ತಿ ಈ ಬಾರಿಯೂ ಬದಲಾಗದು ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ಇತ್ತು. ಆದರೆ, ಸ್ಥಳೀಯ ಸಂಸ್ಥೆ ಚುನಾವಣೆಯ ಫಲಿತಾಂಶವು ಈ ಭರವಸೆಗೆ ತಣ್ಣೀರೆರಚಿದೆ. ಕ್ರೈಸ್ತ ಮತಬ್ಯಾಂಕ್ ಎಲ್‌ಡಿಎಫ್ ಪರವಾಗಿ ನಿಂತದ್ದೇ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾಂಗ್ರೆಸ್ ಹಿನ್ನಡೆಗೆ ಕಾರಣ ಎನ್ನಲಾಗುತ್ತಿದೆ. ಹಾಗಾಗಿಯೇ ಕ್ರೈಸ್ತ ಸಮುದಾಯದ ಪ್ರಭಾವಿ ನಾಯಕ ಉಮ್ಮನ್ ಚಾಂಡಿ ಅವರನ್ನು ಕಾಂಗ್ರೆಸ್ ಪಕ್ಷವು ಮುನ್ನೆಲೆಗೆ ತಂದು, ಆ ಸಮುದಾಯದ ಮತಗಳನ್ನು ಸೆಳೆಯುವ ಯತ್ನ ನಡೆಸಿದೆ.

ಶಬರಿಮಲೆಗೆ ಎಲ್ಲ ವಯೋಮಾನದ ಮಹಿಳೆಯರ ಪ್ರವೇಶ ವಿಷಯವನ್ನು ಕಾಂಗ್ರೆಸ್ ಮತ್ತೆ ಕೆದಕಿದೆ. ಈ ವಿಚಾರದಲ್ಲಿ ಬಿಜೆಪಿಯೂ ಕಾಂಗ್ರೆಸ್ ಜತೆಗೂಡಿದೆ. ಅಯ್ಯಪ್ಪ ದೇವಾಲಯಕ್ಕೆ 10ರಿಂದ 50 ವರ್ಷದೊಳಗಿನ ಮಹಿಳೆಯರ ಪ್ರವೇಶವನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ್ದ ಸಾವಿರಾರು ಭಕ್ತರ ಮೇಲೆ ಹಾಕಲಾಗಿದ್ದ ಪ್ರಕರಣಗಳನ್ನು ವಿಜಯನ್ ನೇತೃತ್ವದ ಸರ್ಕಾರವು ಹಿಂದಕ್ಕೆ ಪಡೆದಿದೆ.

ವಿಧಾನಸಭೆಗೆ ಕಳೆದ ಬಾರಿ ನಡೆದ ಚುನಾವಣೆಯಲ್ಲಿ ಅದೇ ಮೊದಲ ಬಾರಿಗೆ ಬಿಜೆಪಿ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ ತನ್ನ ಸ್ಥಿತಿಯನ್ನು ಇನ್ನಷ್ಟು ಉತ್ತಮಪಡಿಸಿಕೊಳ್ಳಲು ಬಿಜೆಪಿ ಎಲ್ಲ ಪ್ರಯತ್ನಗಳನ್ನೂ ನಡೆಸುತ್ತಿದೆ. ಕೇಂದ್ರದ ಬಜೆಟ್‌ನಲ್ಲಿ ಕೇರಳಕ್ಕೆ ಗಣನೀಯ ಮೊತ್ತವನ್ನು ಮಂಜೂರು ಮಾಡಲಾಗಿದೆ. ಮಹತ್ವದ ಹಲವು ಮೂಲಸೌಕರ್ಯ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ಕಳೆದ ವಾರ ಉದ್ಘಾಟಿಸಿದ್ದಾರೆ. ಶಬರಿಮಲೆಗೆ ಮಹಿಳೆಯರ ಪ್ರವೇಶ ಮತ್ತು ಅಭಿವೃದ್ಧಿಯು ಇಲ್ಲಿ ಬಿಜೆಪಿಯ ಮೂಲ ಮಂತ್ರವಾಗಿದೆ. 'ಮೆಟ್ರೊಮ್ಯಾನ್' ಎಂದೇ ಖ್ಯಾತರಾಗಿರುವ ತಂತ್ರಜ್ಞ ಇ.ಶ್ರೀಧರನ್ ಅವರನ್ನು ಬಿಜೆಪಿಗೆ ಸೇರಿಸಿಕೊಳ್ಳಲಾಗಿದೆ. ಕ್ರೈಸ್ತ ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಆ ಧರ್ಮದ ನಾಯಕರ ಜತೆಗೆ ಪಕ್ಷವು ಮಾತುಕತೆ ನಡೆಸಿದೆ. ಮುಸ್ಲಿಂ ಸಮುದಾಯದ ಮುಖಂಡರನ್ನೂ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ. ಈ ಮೂಲಕ ಹಿಂದುತ್ವವಾದಿ ಪಕ್ಷ ಎಂಬ ಹಣೆಪಟ್ಟಿ ಕಳಚಿಕೊಳ್ಳಲು ಬಿಜೆಪಿ ಯತ್ನಿಸುತ್ತಿದೆ.

'ಕಾಂಗ್ರೆಸ್‌ಮುಕ್ತ ಭಾರತ' ಎಂಬ ರಾಷ್ಟ್ರೀಯ ಕಾರ್ಯಸೂಚಿಯೇ ಈ ಚುನಾವಣೆಯಲ್ಲಿಯೂ ಬಿಜೆಪಿಯ ಗಮನ ಕೇಂದ್ರ; ಹಾಗಾಗಿಯೇ ರಾಜಕೀಯ ಒಳಸುಳಿಗಳು ಮಹತ್ವ ಪಡೆಯಲಿವೆ ಎನ್ನಲಾಗುತ್ತಿದೆ. ಕೇರಳದಲ್ಲಿ ಕಾಂಗ್ರೆಸ್ ಸೋತರೆ ಆ ಪಕ್ಷದ ಇನ್ನಷ್ಟು ಮುಖಂಡರು ಬಿಜೆಪಿ ಸೇರುವ ಸಾಧ್ಯತೆ ಹೆಚ್ಚು. 35-40 ಕ್ಷೇತ್ರಗಳಲ್ಲಿ ಗೆಲುವು ದೊರೆತರೂ ಕೇರಳದಲ್ಲಿ ಬಿಜೆಪಿ ಸರ್ಕಾರ ಖಚಿತ ಎಂದು ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಇತ್ತೀಚೆಗೆ ಹೇಳಿದ್ದಾರೆ. ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೂ ಎನ್‌ಡಿಎ ಬಾಗಿಲು ತೆರೆದಿದೆ ಎಂದು ಕೇರಳ ಬಿಜೆಪಿ ಘಟಕದ ಉಪಾಧ್ಯಕ್ಷೆ ಶೋಭಾ ಸುರೇಂದ್ರನ್ ಹೇಳಿದ್ದಾರೆ. ಹಾಗಾಗಿ, ಚುನಾವಣಾ ಫಲಿತಾಂಶದ ಬಳಿಕ, ಒಳಸುಳಿಗಳು ಯಾವೆಲ್ಲ ತಿರುವು ಪಡೆದುಕೊಳ್ಳಬಹುದು ಎಂದು ಹೇಳುವುದು ಕಷ್ಟ.

ನರೇಂದ್ರ ಮೋದಿ
ರಾಹುಲ್ ಗಾಂಧಿ
ಪಿಣರಾಯಿ ವಿಜಯನ್

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಬಾಂಧವ್ಯಕ್ಕೆ ವಿಶ್ವಾಸವೇ ಹಂದರ

ಕಾಲ ಕೆಟ್ಟಿದೆ ಅನ್ನೋ ಮಾತಿದೆ. ನಿಜಕ್ಕು ಕೆಟ್ಟಿರುವುದು ಮನುಷ್ಯನೇ ಹೊರತು ಕಾಲವಲ್ಲ. ಕಾಲ ತನ್ನ ಕೆಲಸ ಸರಿಯಾಗೇ ಮಾಡುತ್ತಿದೆ. ಆದರೆ ಈ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುವ ಮನುಷ್ಯ ಮಾತ್ರ ಹಾದಿ ತಪ್ಪುತ್ತಿದ್ದಾನೆ. ತಾನು ದಾರಿತಪ್ಪಿದ್ದೆಲ್ಲಿ ಅನ್ನೋ 'ಸತ್ಯ' ಅರಿವಾಗುವ ಮುನ್ನವೆ, ಅವನ ಬಯಕೆಯ ದಾರಿ ವಿಸ್ತಾರವಾಗಿ ಕಂಗಾಲಾಗಿದ್ದಾನೆ. ಹೀಗಾಗಿ ಜೀವ ತಣಿಯುವಷ್ಟು ಎಷ್ಟೆಲ್ಲಾ ಸುಖ ಸಿಕ್ಕರೂ ಮನುಷ್ಯನ ಮುಖದಲ್ಲಿ ತೃಪ್ತಿಯ ನಗೆ ಅರಳದೆ, ಅತೃಪ್ತಿಯ ಹಗೆಯೇ ಹೊರಳುತ್ತಿದೆ. ಅಂದರೆ ಕೆಟ್ಟಿರುವುದು ಕಾಲವಲ್ಲ, ಮನುಷ್ಯನ ಬದುಕೂ ಅಲ್ಲ. ಕೆಟ್ಟಿರುವುದು ಸದಾ ಬೇಕು-ಬೇಕು ಅನ್ನುವ ಅವನ ಮನಸ್ಸು ಎಂಬುದು ನಿಚ್ಚಳವಾಗುತ್ತದೆ.

ಮನುಷ್ಯ ತನ್ನ ಸುಖಕ್ಕಾಗಿ ಪ್ರಕೃತಿಯಲ್ಲಿರುವ ಎಲ್ಲಾ ಸಂಪತ್ತನ್ನು ಉಪಯೋಗಿಸುವುದನ್ನು ಕಲಿತ. ಆದರೆ, ತನ್ನೊಳಗಿನ ಸಂಪತ್ತನ್ನು ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಕಲಿಯಲಿಲ್ಲ. ಹೀಗಾಗಿ ಹೊರ ಪ್ರಪಂಚದಲ್ಲಿ ಆತ ಸುಖಿಯಾಗಿದ್ದರೂ, ಆಂತರಿಕ ಪ್ರಪಂಚದಲ್ಲಿ ಅಸುಖಿಯಾದ. ಹಣ ಗಳಿಕೆಗೆ ಕೊಟ್ಟಷ್ಟು ಗಮನವನ್ನ, ಗುಣ ಮೌಲ್ಯಗಳ ಕಡೆಗೆ ಕೊಡಲಿಲ್ಲ. ಅಂತಸ್ತುಗಳ ಮೇಲೆ ಅಂತಸ್ತು ಕಟ್ಟಲು ಕೊಟ್ಟಷ್ಟು ಸಮಯವನ್ನ ಬಾಂಧವ್ಯಗಳ ಕಟ್ಟಲು ಪ್ರಯತ್ನಿಸಲಿಲ್ಲ. ಇದರಿಂದಾಗಿ ಮನುಷ್ಯನ ಸುಮಧುರ ಸಂಬಂಧಗಳು ಹಾಳಾಗಿ ಅಂತರಗಳು ಹೆಚ್ಚಾದವು. ಸಂಬಂಧಗಳು ದೂರವಾದಂತೆ ಅವನು ಬಾಹ್ಯದಲ್ಲಿ ಮಾತ್ರವಲ್ಲದೆ, ಆಂತರಿಕವಾಗಿಯೂ ಒಬ್ಬಂಟಿಯಾದ. ನಾನೇನು ಕಳೆದುಕೊಂಡೆ? ನಾನೆಲ್ಲಿ ಕಳೆದು ಹೋದೆ? ಅನ್ನೋ 'ಸತ್ಯ' ಈಗಲೂ ಅವನಿಗೆ ಅರಿವಾಗುತ್ತಿಲ್ಲ.

ಋಗ್ವೇದದ ಪುರುಷ ಸೂಕ್ತಿಯಲ್ಲಿ ವಿಶ್ವ ಸೃಷ್ಟಿ ಬಗ್ಗೆ ಹೇಳುವಾಗ, ವಿಶ್ವದಲ್ಲಿ ಖಭೌತಿಕವಾಗಿ ಎಷ್ಟು ಅಗೋಚರ ಶಕ್ತಿ ಇದೆಯೋ, ಅಷ್ಟೇ ಅಗೋಚರ ಶಕ್ತಿ ಮನುಷ್ಯನ ಭೌತಿಕ ಶರೀರದೊಳಗು ಇದೆ ಎಂದು ಉಲ್ಲೇಖಿಸಿದೆ. ನಮ್ಮ ಹೊರ ಪ್ರಪಂಚ ಎಷ್ಟು ವಿಸ್ಮಯಗಳ ಬೀಡೋ, ನಮ್ಮೊಳಗು ಅಂಥದೆ ವಿಸ್ಮಯಗಳ ಆಗರವಿದೆ. ನಮ್ಮೊಳಗೆ ಸುಪ್ತವಾಗಿರುವ ಇಂದ್ರಿಯಾತೀತ ಶಕ್ತಿಗಳನ್ನು ಬಳಸಿಕೊಂಡರೆ ಏನು ಬೇಕಾದರೂ ಸಾಧಿಸಬಹುದು ಎಂಬುದು ಅದರರ್ಥ. ಅಂದರೆ ನಮ್ಮ ಬುದ್ಧಿ ಶಕ್ತಿಯಿಂದ ಒಂದು ಆಯುಧವನ್ನು ವಿನಾಶಕ್ಕೂ ಬಳಸಬಹುದು, ವಿಕಾಸಕ್ಕೂ ಬಳಸಬಹುದು. ಅದು ನಾವು ಬಳಸುವ ವಿಧಾನದ ಮೇಲೆ ನಿರ್ಧರಿತವಾಗುತ್ತದೆ. ಹಾಗೆಯೇ, ಮನುಷ್ಯ ತನ್ನ ಒಂದು ಜೀವಿತದ ಆಯುಷ್ಯವನ್ನು ಒಳ್ಳೆಯದಕ್ಕು ವಿನಿಯೋಗಿಸಬಹುದು, ಕೆಟ್ಟದ್ದಕ್ಕು ವಿನಿಯೋಗಿಸಬಹುದು. ಅದು ಅವನ ಆಂತರ್ಯದಲ್ಲಿನ ಗುಣಾವಗುಣಗಳನ್ನು ಅವಲಂಬಿಸಿರುತ್ತದೆ.

ಇದಕ್ಕಾಗೇ, ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯವೇ ಶ್ರೇಷ್ಠ ಅಂತ ಪ್ರಾಜ್ಞರು ಋಗ್ವೇದ ಕಾಲದಿಂದಲೂ ಹೇಳುತ್ತಿದ್ದಾರೆ. ಆದರೆ ಮನುಷ್ಯ ಮಾತ್ರ ಹೊರ ಜಗತ್ತಿನ ತೋರಿಕೆಗಷ್ಟೆ ಮಹತ್ವ ಕೊಡುತ್ತಾ ಬಂದಿದ್ದಾನೆ. ಇದರಿಂದ ತಾನೇ ಸೃಷ್ಟಿಸಿಕೊಂಡ ಕೃತ್ರಿಮ ಜಂಭದ ಬದುಕಲ್ಲಿ ಬಂಧಿಯಾಗಿ ಪರಿತಪಿಸುತ್ತಿದ್ದಾನೆ. ಅವನ ಢಾಂಬಿಕ ಬದುಕಲ್ಲಿ ಒಂದಿಷ್ಟು ತಲ್ಲಣವಾದರೂ ಹತಾಶನಾಗುತ್ತಿದ್ದಾನೆ. ತಾನೇ ಕಟ್ಟಿಕೊಂಡ ಅಪನಂಬಿಕೆಯ ಸಂಕೋಲೆಯಿಂದ ಹೊರಬರಲಾಗದೆ ತೊಳಲಾಡುತ್ತಿದ್ದಾನೆ. ಬಾಹ್ಯಜಗತ್ತಿನಲ್ಲಿ ಹಣ ಚಲಾವಣೆ ಮಾಡಿದಂತೆ, ಆಂತರ್ಯದಲ್ಲಿ ಗುಣ ಚಲಾವಣೆ ಮಾಡಬೇಕು. ಏಕೆಂದರೆ, ಉತ್ತಮ ಗುಣ ಇಲ್ಲದವ ಪರಿಪೂರ್ಣ ಮನುಷ್ಯನಾಗಲಾರ.

ವಿಜ್ಞಾನ ಎಷ್ಟೇ ಬೆಳೆದರೂ, ಮನುಷ್ಯನ ಜ್ಞಾನ ಮಾತ್ರ ನಿಂತನೀರಂತೆ ಬಗ್ಗಡವಾಗಿ ಕೊಳೆಯುತ್ತಿದೆ. ಇದರಲ್ಲಿ ಹುಟ್ಟಿದ ದ್ವೇಷ-ಅಸೂಯೆ ಎಂಬ ಕೊಳಕು, ಮಾನಸಿಕ ರೋಗಗಳನ್ನು ಸೃಷ್ಟಿಸುತ್ತಿವೆ. ಇಂಥ ರೋಗಪೀಡಿತ ಮನಸಿನಲ್ಲಿ ಹಣ-ಅಂತಸ್ತಿನ ಗರ್ವ ಹೆಡೆ ಎತ್ತಿ, ಮನುಷ್ಯರ ಸಂಬಂಧಗಳನ್ನು ಹಾಳುಮಾಡುತ್ತಿದೆ. ಮನುಷ್ಯತನಕ್ಕೆ ಜ್ಯೇಷ್ಠತೆ ಬರುವುದು ತಾಮಸತನ ಅಳಿದು, ಮನಸು ಶುದ್ಧವಾದಾಗ. ಬಂಧುತ್ವ-ಮಿತ್ರತ್ವಕ್ಕೆ ಮಿಡಿಯದ ಮನಸು ಕಂದರವಾದರೆ, ಉತ್ತಮ ಬಾಂಧವ್ಯಕ್ಕೆ ಪ್ರೀತಿ-ವಿಶ್ವಾಸವೇ ಹಂದರ. ಅದು ಗಟ್ಟಿಯಾದಷ್ಟು 'ಸಚ್ಚಿದಾನಂದ' ಬದುಕು ಸಾಕಾರವಾಗುತ್ತದೆ. •

ತಮಿಳುನಾಡು: ಸವಾಲಿನ ಸುಳಿಯಲ್ಲಿ ಎಐಎಡಿಎಂಕೆ

• ಇ.ಟಿ.ಬಿ ಶಿವಪ್ರಿಯನ್



ಚೆನ್ನೈ: ತಮಿಳುನಾಡು ರಾಜಕಾರಣದ ಇಬ್ಬರು ದೈತ್ಯರಾದ ಎಂ.ಕರುಣಾನಿಧಿ ಮತ್ತು ಜೆ.ಜಯಲಲಿತಾ ಅವರಿಲ್ಲದೆ ರಾಜ್ಯವು ಎದುರಿಸುತ್ತಿರುವ ಮೊದಲ ಚುನಾವಣೆ ಇದು. ಹಾಗಾಗಿಯೇ ರಾಜ್ಯದಲ್ಲಿ ಹೊಸ ನಾಯಕರು ಉದಯವಾಗಲು ಈ ಚುನಾವಣೆ ಕಾರಣವಾಗಲಿದೆ.

ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಇಲ್ಲಿ ಪ್ರಮುಖ ಪಕ್ಷವಾಗಿರಲೇ ಇಲ್ಲ. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಹಲವು ಸಮಾನ ಮನಸ್ಕ ಪಕ್ಷಗಳನ್ನು ಒಟ್ಟುಗೂಡಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಈಗ ಎಐಎಡಿಎಂಕೆಯ ಮಿತ್ರಪಕ್ಷಗಳಲ್ಲಿ ಬಿಜೆಪಿ ಒಂದಾಗಿದೆಯಷ್ಟೆ. ಕೇವಲ 25-30 ಕ್ಷೇತ್ರಗಳಲ್ಲಿ ಸ್ಪರ್ಧಿಸಿದರೂ, ಬಿಜೆಪಿ ಮೈತ್ರಿಯಲ್ಲಿ ನಿರ್ಣಾಯಕ ಸ್ಥಾನದಲ್ಲಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 39 ಕ್ಷೇತ್ರಗಳ ಪೈಕಿ 38 ಕ್ಷೇತ್ರಗಳನ್ನು ಡಿಎಂಕೆ ಗೆದ್ದುಕೊಂಡಿತ್ತು. 2019ರಲ್ಲಿ ಹಲವು ಪಕ್ಷಗಳು ಪೈಪೋಟಿಯಲ್ಲಿದ್ದವು. ಈಗಲೂ ಪರಿಸ್ಥಿತಿ ಹಾಗೇ ಇದೆ. ಹಲವು ಪಕ್ಷಗಳು ಕಣದಲ್ಲಿ ಇದ್ದರೂ, ಡಿಎಂಕೆ ಮತ್ತು ಎಐಎಡಿಎಂಕೆ ಮಧ್ಯೆ ಪ್ರಬಲ ಪೈಪೋಟಿ ಇದೆ. ಡಿಎಂಕೆಯು ಕಾಂಗ್ರೆಸ್, ಎಡಪಕ್ಷಗಳು, ವಿಸಿಕೆ, ಐಯುಎಂಎಲ್, ಎಂಎನ್‌ಎಂಕೆ ಪಕ್ಷಗಳ ಜತೆ ಮೈತ್ರಿ ಮಾಡಿಕೊಂಡಿದೆ. ಬಿಜೆಪಿ, ಪಿಎಂಕೆ, ಡಿಎಂಡಿಕೆ, ಟಿಎಂಸಿ ಜತೆ ಎಐಎಡಿಎಂಕೆ ಮೈತ್ರಿ ಮಾಡಿಕೊಂಡಿದೆ.

ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರ ಮುಂದೆ ಸವಾಲುಗಳ ಸಾಲೇ ಇದೆ. ಎರಡು ಅವಧಿಯ ಆಡಳಿತವಿರೋಧಿ ಅಲೆಯನ್ನು ಅವರು ಮೆಟ್ಟಿನಿಲ್ಲಬೇಕಿದೆ. ಜಯಲಲಿತಾ ಅವರ ಅನುಪಸ್ಥಿತಿಯಲ್ಲಿ, ಜನನಾಯಕ ಎಂಬ ಹಣೆಪಟ್ಟಿಯೂ ಇಲ್ಲದೆ ಪಳನಿಸ್ವಾಮಿ ಅವರು ಚುನಾವಣಾ ಕಣಕ್ಕೆ ಧುಮುಕಬೇಕಿದೆ. ಜತೆಗೆ, ಎಐಎಡಿಎಂಕೆ ಒಳಗಿನ ಭಿನ್ನಮತವನ್ನು ಹಾಗೂ ಮಾಜಿ ಮುಖ್ಯಮಂತ್ರಿ ಒ.ಪನ್ನೀರ್‌ಸೆಲ್ವಂ ಅವರನ್ನು ನಿಭಾಯಿಸುವ ಸವಾಲೂ ಪಳನಿಸ್ವಾಮಿ ಅವರ ಮುಂದೆ ಇದೆ. ಎಐಎಡಿಎಂಕೆಯ ಮಾಜಿ ನಾಯಕಿ ಮತ್ತು ಜಯಲಲಿತಾ ಆಪ್ತೆಯಾಗಿದ್ದ ವಿ.ಕೆ. ಶಶಿಕಲಾ ಅವರು ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಪ್ರಕರಣದಲ್ಲಿ ಜೈಲು ಶಿಕ್ಷೆ ಮುಗಿಸಿ ತಮಿಳುನಾಡಿಗೆ ಮರಳಿದ್ದಾರೆ. ಎಐಎಡಿಎಂಕೆಗೆ ಅವರು ಯಾವ ರೀತಿಯಲ್ಲಿ ಪ್ರತಿರೋಧ ಒಡ್ಡಲಿದ್ದಾರೆ ಎಂಬುದೂ ಪಳನಿಸ್ವಾಮಿ ಅವರ ಸಮಸ್ಯೆಗಳ ತೀವ್ರತೆಯನ್ನು ನಿರ್ಧರಿಸಲಿದೆ.

10 ವರ್ಷಗಳಿಂದ ಅಧಿಕಾರದಿಂದ ದೂರ ಉಳಿದಿರುವ ಡಿಎಂಕೆಯನ್ನು ಅಧಿಕಾರಕ್ಕೆ ತರುವ ಸವಾಲು ಎಂ.ಕೆ. ಸ್ಟಾಲಿನ್ ಅವರ ಮುಂದೆ ಇದೆ. ಹತ್ತು ವರ್ಷ ಅಧಿಕಾರದಲ್ಲಿದ್ದ ಎಐಎಡಿಎಂಕೆ ಬಗ್ಗೆ ಜನರಲ್ಲಿ ಮೂಡಿರುವ ಅತೃಪ್ತಿಯನ್ನು ಡಿಎಂಕೆ ನೆಚ್ಚಿಕೊಂಡಿದೆ. ಜತೆಗೆ, ಬಿಜೆಪಿ ದೇಶದಾದ್ಯಂತ ಹಿಂದಿ ಹೇರಲು ಯತ್ನಿಸುತ್ತಿದೆ ಎಂಬುದನ್ನೂ ಸ್ಟಾಲಿನ್ ಅವರು ತಮ್ಮ ಅಸ್ತ್ರವನ್ನಾಗಿಸಿಕೊಂಡಿದ್ದಾರೆ.

ಇ.ಕೆ.ಪಳನಿಸ್ವಾಮಿ
ಉಮ್ಮನ್ ಚಾಂಡಿ
ಮಮತಾ ಬ್ಯಾನರ್ಜಿ
ವಿ.ಕೆ.ಶಶಿಕಲಾ

ಎಂ.ಕೆ.ಸ್ಟಾಲಿನ್

ಪಶ್ಚಿಮ ಬಂಗಾಳ: ಮೋದಿ-ಮಮತಾ ನೇರ ಹೋರಾಟ

• ಸೌಮ್ಯ ದಾಸ್



ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಮೊತ್ತ ಮೊದಲ ಬಾರಿಗೆ ಅಧಿಕಾರಕ್ಕೆ ಬರಲು ಬಿಜೆಪಿ ಯತ್ನಿಸುತ್ತಿದೆ ಎಂಬುದೇ ಈ ಬಾರಿಯ ಚುನಾವಣೆಯ ಕೇಂದ್ರ ಬಿಂದು. ಒಂದು ಕಾಲದಲ್ಲಿ ರಾಜ್ಯ ರಾಜಕಾರಣದ ಅಂಚಿನಲ್ಲಿರುವ ಪಕ್ಷ ಎಂದಷ್ಟೇ ಗುರುತಿಸಿಕೊಂಡಿದ್ದ ಬಿಜೆಪಿ, ಕಳೆದ ಲೋಕಸಭಾ ಚುನಾವಣೆಯಲ್ಲಿ 18 ಕ್ಷೇತ್ರಗಳನ್ನು ಗೆದ್ದು ಪ್ರಮುಖ ವಿರೋಧ ಪಕ್ಷ ಎನಿಸಿಕೊಂಡಿದೆ.

ಅದೇನೇ ಇದ್ದರೂ, ಬಿಜೆಪಿಯ ಎದುರಾಳಿಯಾಗಿ ಇರುವವರು ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಎಂಬುದು ಗಮನಾರ್ಹ.

ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ಬಿಜೆಪಿ ಘೋಷಿಸಿಲ್ಲ. ಹಾಗಾಗಿ, ಈ ಬಾರಿಯ ಚುನಾವಣಾ ಹೋರಾಟವು ಪ್ರಧಾನಿ ನರೇಂದ್ರ ಮೋದಿ ಮತ್ತು ಮಮತಾ ಅವರ ನಡುವೆಯೇ ನಡೆಯಲಿದೆ. ಮಮತಾ ಅವರ ವರ್ಚಸ್ಸಿಗೆ ಸಾಟಿಯಾಗಿ ನಿಲ್ಲಬಲ್ಲ ನಾಯಕರು ಯಾರೂ ಪಶ್ಚಿಮ ಬಂಗಾಳ ಬಿಜೆಪಿಯಲ್ಲಿ ಇಲ್ಲ ಎಂಬುದು ಆ ಪಕ್ಷದ ಚುನಾವಣಾ ಸಾಧನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು.

ಪೌರತ್ವ, ಭ್ರಷ್ಟಾಚಾರ, ಕಾನೂನು ಮತ್ತು ಸುವ್ಯವಸ್ಥೆ, ಒಳನುಸುಳುವಿಕೆ ಮತ್ತು ಅಭಿವೃದ್ಧಿ ಈ ಬಾರಿಯ ಚುನಾವಣೆಯಲ್ಲಿ ಪ್ರಧಾನವಾಗಿ ಪ್ರಸ್ತಾಪವಾಗಲಿರುವ ವಿಚಾರಗಳು. ಟಿಎಂಸಿಯ ಮುಖಂಡರು ಸರ್ಕಾರದ ಎಲ್ಲ ಯೋಜನೆಗಳಲ್ಲಿಯೂ ಲಂಚ ಪಡೆಯುತ್ತಿದ್ದಾರೆ (ಕಟ್ ಮನಿ) ಎಂಬುದನ್ನು ಮುಂದಿಟ್ಟು, ರಾಜ್ಯದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಲು ಬಿಜೆಪಿ ಯತ್ನಿಸುತ್ತಿದೆ. ಆಡಳಿತ ಪಕ್ಷದ 'ಸಿಂಡಿಕೇಟ್‌ಗಳು' ಕಾರ್ಯನಿರ್ವಹಿಸುತ್ತಿವೆ, ಆಂಫನ್ ಚಂಡಮಾರುತದ ಬಳಿಕ ಕೇಂದ್ರವು ನೀಡಿದ ಅನುದಾನದ ದುರುಪಯೋಗವಾಗಿದೆ ಎಂಬುದು ಬಿಜೆಪಿಯ ಆರೋಪ.

ಪೌರತ್ವ ತಿದ್ದುಪಡಿ ಕಾಯ್ದೆಗೆ (ಸಿಎಎ) ಸಂಬಂಧಿಸಿ ಇರುವ ಗೊಂದಲ ಮತ್ತು ಕಾಯ್ದೆ ಜಾರಿಯಲ್ಲಿನ ವಿಳಂಬವನ್ನು ತಮ್ಮ ಪರವಾಗಿ ಬಳಸಿಕೊಳ್ಳಲು ಮಮತಾ ಮುಂದಾಗಿದ್ದಾರೆ. ಸಿಎಎಯ ಅಡಿಯಲ್ಲಿ ಪೌರತ್ವಕ್ಕೆ ಅರ್ಜಿ ಹಾಕಿದರೆ ಸಾಕು ಅಂಥವರು ತನ್ನಿಂತಾನೆ 'ವಿದೇಶಿ'ಯರಾಗಿ ಗುರುತಿಸಿಕೊಳ್ಳಬೇಕಾಗುತ್ತದೆ ಎಂದು ಮಮತಾ ಹೇಳುತ್ತಿದ್ದಾರೆ.

ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಮತ್ತು ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ಅನ್ನು ರಾಜ್ಯದಲ್ಲಿ ಜಾರಿ ಮಾಡಲು ಅವಕಾಶವೇ ಕೊಡುವುದಿಲ್ಲ ಎಂದು ಹೇಳುವ ಮೂಲಕ ನಿರಾಶ್ರಿತರು ಮತ್ತು ಅಲ್ಪಸಂಖ್ಯಾತರ ಬೆಂಬಲ ಪಡೆಯಲು ಮಮತಾ ಯತ್ನಿಸುತ್ತಿದ್ದಾರೆ. ಬಿಜೆಪಿಯವರೆಲ್ಲ 'ಹೊರಗಿನವರು' ಎಂದು ಮಮತಾ ಮತ್ತೆ ಮತ್ತೆ ಹೇಳುತ್ತಿದ್ದಾರೆ. 'ಬಂಗಾಳಕ್ಕೆ ಬೇಕು ಬಂಗಾಳದ ಮಗಳು' ಎಂಬ ಟಿಎಂಸಿಯ ಘೋಷಣೆಯೂ ಇದನ್ನೇ ಧ್ವನಿಸುತ್ತಿದೆ. ತಮ್ಮ ಸರ್ಕಾರ ಅಭಿವೃದ್ಧಿ ಕೆಲಸಗಳ ವಿಚಾರದಲ್ಲಿ ಬಹಳ ಮುಂದಿದೆ ಎಂದು ಮಮತಾ ಹೇಳುತ್ತಿದ್ದಾರೆ.

ಸಿಪಿಎಂ ನೇತೃತ್ವದ ಎಡರಂಗ ಮತ್ತು ಕಾಂಗ್ರೆಸ್ ಪಕ್ಷದ ಪ್ರಯತ್ನವು ನೆಲೆ ಕುಸಿಯುವಿಕೆಯನ್ನು ತಡೆಯುವುದಕ್ಕಷ್ಟೇ ಸೀಮಿತ.

ಕಾಂಗ್ರೆಸ್‌ಮುಕ್ತ ಪುದುಚೇರಿ: ಬಿಜೆಪಿ ಕಾರ್ಯತಂತ್ರ

ಕೆಲವೇ ದಿನಗಳ ಹಿಂದೆ, ಚುನಾವಣೆ ಇನ್ನೇನು ಹೊಸ್ತಿಲಿಗೆ ಬಂತು ಎಂದಾಗ ಕೇಂದ್ರಾಡಳಿತ ಪ್ರದೇಶವಾಗಿರುವ ಪುದುಚೇರಿಯಲ್ಲಿದ್ದ ಕಾಂಗ್ರೆಸ್ ನೇತೃತ್ವದ ಮೈತ್ರಿ ಸರ್ಕಾರ ಪತನವಾಗಿದೆ. 'ಕಾಂಗ್ರೆಸ್‌ಮುಕ್ತ ಭಾರತ' ನಿರ್ಮಾಣದ ಬಿಜೆಪಿಯ ಕನಸು ದಕ್ಷಿಣ ಭಾರತದಲ್ಲಿ ಸಾಕಾರವಾಗಬೇಕಾದರೆ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪುದುಚೇರಿ ಮತ್ತು ಕೇರಳದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಾರದಂತೆ ನೋಡಿಕೊಳ್ಳುವುದು ಬಿಜೆಪಿಗೆ ಮಹತ್ವದ್ದಾಗಿದೆ.

ಈ ಎರಡೂ ರಾಜ್ಯಗಳು ಬಿಜೆಪಿಯ ಮಟ್ಟಿಗೆ ಈವರೆಗೆ ದುರ್ಗಮವೇ ಆಗಿದ್ದವು. ಕೇರಳದಲ್ಲಿ ಕಳೆದ ಬಾರಿ ಪದಾರ್ಪಣೆ ಮಾಡಲು ಬಿಜೆಪಿಗೆ ಸಾಧ್ಯವಾಗಿದ್ದರೂ, ಪುದುಚೇರಿಯಲ್ಲಿ ಖಾತೆ ತೆರೆಯಲೂ ಸಾಧ್ಯವಾಗಿರಲಿಲ್ಲ. ಕೊನೆಗೆ, ನಾಮನಿರ್ದೇಶನದ ಮೂಲಕ ವಿಧಾನಸಭೆಗೆ ಪಕ್ಷದ ಮೂವರು ಪ್ರತಿನಿಧಿಗಳನ್ನು ಕಳುಹಿಸುವಲ್ಲಿಗೆ ಸಮಾಧಾನಪಡಬೇಕಾಯಿತು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ಕಾಂಗ್ರೆಸ್‌ನ ಐವರು ಮುಖಂಡರು ಪಕ್ಷವನ್ನು ತ್ಯಜಿಸಿ, ಕಾಂಗ್ರೆಸ್-ಡಿಎಂಕೆ ಮೈತ್ರಿ ಸರ್ಕಾರದ ಪತನಕ್ಕೆ ಕಾರಣರಾಗಿದ್ದಾರೆ. ಅಷ್ಟೇ ಅಲ್ಲ ಕಾಂಗ್ರೆಸ್ ತ್ಯಜಿಸಿದವರಲ್ಲಿ ಮೂವರು ಬಿಜೆಪಿ ಸೇರ್ಪಡೆಯಾಗಿದ್ದಾರೆ. ಆದ್ದರಿಂದ ಈ ಬಾರಿ ಪುದುಚೇರಿಯಲ್ಲಿ ಅಧಿಕಾರ ಹಿಡಿಯಲು ಬಿಜೆಪಿ ಸಿದ್ಧತೆ ಮಾಡಿಕೊಂಡಿದೆ.

30 ಸ್ಥಾನಗಳ ಪುದುಚೇರಿ ವಿಧಾನಸಭೆಯಲ್ಲಿ 2016ರಲ್ಲಿ ಕಾಂಗ್ರೆಸ್ 15 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಡಿಎಂಕೆಯ ನಾಲ್ವರು ಸದಸ್ಯರು ಗೆದ್ದಿರುವುದರಿಂದ ನಿರಾಯಾಸವಾಗಿ ಅಧಿಕಾರ ಹಿಡಿಯಲು ಕಾಂಗ್ರೆಸ್‌ಗೆ ಸಾಧ್ಯವಾಗಿತ್ತು. ಆದರೆ ಮುಖ್ಯಮಂತ್ರಿ ವಿ. ನಾರಾಯಣಸ್ವಾಮಿ ಅವರ ಕಾರ್ಯವೈಖರಿಯಿಂದಾಗಿ ಪಕ್ಷದೊಳಗೇ ಅಸಮಾಧಾನ ಸೃಷ್ಟಿಯಾಗಿತ್ತು ಎಂದು ಕಾಂಗ್ರೆಸ್ ನಾಯಕರೇ ಹೇಳಿಕೊಂಡಿದ್ದಾರೆ. ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಕಿರಣ್ ಬೇಡಿ ಅವರು ಸೂಪರ್ ಸಿಎಂ ಎಂಬಂತೆ ವರ್ತಿಸಿ, ಕಾಂಗ್ರೆಸ್ ಸರ್ಕಾರಕ್ಕೆ ಅಡ್ಡಿ ಉಂಟುಮಾಡಿದ್ದರು ಎಂದೂ ಆರೋಪಿಸಲಾಗಿತ್ತು.

ಈ ಗೊಂದಲಗಳನ್ನು ಬಿಜೆಪಿಯು ತನಗೆ ಲಾಭದಾಯಕವಾಗಿ ಪರಿವರ್ತಿಸಿಕೊಂಡಿದೆ. ಬೇಡಿ ಅವರ ವರ್ತನೆಯಿಂದ ಪಕ್ಷಕ್ಕೆ ಹಿನ್ನಡೆ ಆಗಬಹುದು ಎಂದು ಭಾವಿಸಿದ ಕೇಂದ್ರ ಸರ್ಕಾರವು ಚುನಾವಣೆಯ ಹೊಸ್ತಿಲಲ್ಲೇ ಅವರನ್ನು ವಜಾ ಮಾಡಿ, ಜನರಿಗೆ ಅಗತ್ಯ ಸಂದೇಶವನ್ನು ರವಾನಿಸಿದೆ. ಇನ್ನೊಂದೆಡೆ, ಕಾಂಗ್ರೆಸ್‌ನ ಅತೃಪ್ತ ಶಾಸಕರ ಜತೆ ಸಂಪರ್ಕ ಸಾಧಿಸಿ, ಅವರಲ್ಲಿ ಪ್ರಮುಖರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಮಿತ್ರಪಕ್ಷವಾಗಿರುವ ಡಿಎಂಕೆ ಸಹ ಮೈತ್ರಿಯಿಂದ ದೂರ ಸರಿಯುವ ಹೇಳಿಕೆ ನೀಡಿರುವುದು ಕಾಂಗ್ರೆಸ್‌ಗೆ ಹೊಸ ಸಮಸ್ಯೆಯನ್ನು ಸೃಷ್ಟಿಸಿದ್ದರೆ, ಇದು ಸಹ ತಮಗೆ ಲಾಭವಾಗಿ ಪರಿಣಮಿಸಬಹುದು ಎಂಬ ಲೆಕ್ಕಾಚಾರದಲ್ಲಿ ಬಿಜೆಪಿ ಇದೆ.

ಅಸ್ಸಾಂನಲ್ಲಿ ಎನ್‌ಡಿಎಗೆ ಸವಾಲು

ಅಸ್ಸಾಂನಲ್ಲಿ ಬಿಜೆಪಿ ಈ ಬಾರಿ 100ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಗುರಿ ಹಾಕಿಕೊಂಡಿದೆ. ಈಚಿನ ವರ್ಷಗಳಲ್ಲಿ ಈಶಾನ್ಯ ರಾಜ್ಯಗಳಲ್ಲಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡಿರುವ ಬಿಜೆಪಿಗೆ ಅಸ್ಸಾಂ ವಿಧಾನಸಭಾ ಚುನಾವಣೆ ಮಹತ್ವದ್ದಾಗಿದೆ. ಆದರೆ, ಹಾಕಿಕೊಂಡಿರುವ ಗುರಿಯನ್ನು ತಲುಪಲು ಬಿಜೆಪಿ ಸಫಲವಾಗುತ್ತದೆಯೇ ಅಥವಾ ಈ ಹಿಂದಿಗಿಂತಲೂ (60) ಕಡಿಮೆ ಸ್ಥಾನಗಳನ್ನು ಗೆಲ್ಲುತ್ತದೆಯೇ ಎಂಬ ಕುತೂಹಲ ಮೂಡಿದೆ.

ಕಳೆದ ವರ್ಷ ಭಾರಿ ವಿರೋಧಕ್ಕೆ ಕಾರಣವಾಗಿ, ಜಗತ್ತಿನ ಗಮನವನ್ನು ಸೆಳೆದಿದ್ದ ಪೌರತ್ವ ತಿದ್ದುಪಡಿ ಕಾಯ್ದೆ, ಎನ್‌ಆರ್‌ಸಿ, ಸಿಎಎ ಎಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಅಸ್ಸಾಂ ರಾಜ್ಯದೊಂದಿಗೆ ತಳಕು ಹಾಕಿಕೊಂಡಿವೆ. ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿ ಆರಂಭದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದೇ ಅಸ್ಸಾಂನಲ್ಲಿ. ಆದರೆ ಆ ನಂತರ ಅಲ್ಲಿ ಅದು ತಣ್ಣಗಾಗಿ ದೆಹಲಿಯಲ್ಲಿ ತೀವ್ರಗೊಂಡಿತು. ಇಲ್ಲಿ ಅಧಿಕಾರ ಉಳಿಸಿಕೊಳ್ಳಬಲ್ಲೆ ಎಂಬ ವಿಶ್ವಾಸ ಬಿಜೆಪಿಗೆ ಇದ್ದರೂ, ಜನರು ಎಂಥ ಪ್ರತಿಕ್ರಿಯೆ ನೀಡುತ್ತಾರೆ ಎಂಬುದರ ಸ್ಪಷ್ಟ ಚಿತ್ರಣ ಚುನಾವಣೆ ಸಮೀಪಿಸುವ ವೇಳೆಗೆ ಲಭಿಸಬಹುದು.

ಇನ್ನೊಂದೆಡೆ ಕಾಂಗ್ರೆಸ್ ಮುಂಚಿತವಾಗಿಯೇ ಎಚ್ಚೆತ್ತುಕೊಂಡು, ಎಡಪಕ್ಷಗಳು ಹಾಗೂ ರಾಜ್ಯಸಭಾ ಸದಸ್ಯ ಅಜಿತ್ ಕುಮಾರ್ ಭುಯಾನ್ ನೇತೃತ್ವದಲ್ಲಿ ಇತ್ತೀಚೆಗೆ ರಚನೆಯಾಗಿರುವ ಅಂಚಲಿಕ್ ಗಣ ಮೋರ್ಚಾದ ಜತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದೆ. ಈ ಮೈತ್ರಿಕೂಟವೂ ಸಹ, 'ನಾವು 100ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದೆ.



ಗುಂಡಣ್ಣ



ದಿನ ಭವಿಷ್ಯ

ಶನಿವಾರ 27 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಶತಭಿಷ ಪೂರ್ಣಿಮಾ ಗಂ. 18-24 (ಹ. 2-05) ಶನಿವಾರ ನಿತ್ಯ ನಕ್ಷತ್ರ ಮಖೆ ಗಂ 12-24 (ಹ. 11-41) ಸುಕರ್ಮ ನಾಮ ಯೋಗ ಗಂ 34-20 ಬವ ಕರಣ ಗಂ 18-24 ವಿಷ. ಗಂ. 31-49 ಅಮೃತ ಗಂ. 5-29 ಪುನರಮೃತ ಗಂ. 55-7 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-42 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 6 7

ಮೇಷ: ಮಿತ್ರವ್ಯವಹಾರಗಳಲ್ಲಿ ಜಾಗರೂಕರಾಗಿರುವುದ ಒಳ್ಳೆಯದು. ಧಾರ್ಮಿಕ ಕಾರ್ಯಗಳಲ್ಲಿ ಭಾಗಿ. ಮಕ್ಕಳಿಂದ ನೆಮ್ಮದಿ. ವಿದ್ಯಾಭ್ಯಾಸದಲ್ಲಿ ಉತ್ತಮ ಶ್ರದ್ಧೆಯಿಂದ ಸಫಲತೆ ಉಂಟಾಗುವುದು.

ವೃಷಭ: ಮಾತೃವರ್ಗದವರಿಂದ ಸಹಕಾರ. ಆರೋಗ್ಯದಲ್ಲಿ ಏರುಪೇರಾಗುವ ಸಂಭವ ಇರುವುದರಿಂದ ವೈದ್ಯರ ಸಲಹೆ ಅತ್ಯಗತ್ಯ. ಅನವಶ್ಯಕ ವ್ಯವಹಾರಕ್ಕೆ ತಲೆಹಾಕದಿರುವುದು ಉತ್ತಮ.

ಮಿಥುನ: ಕುಟುಂಬದಲ್ಲಿ ನೆಮ್ಮದಿಯ ವಾತಾವರಣ. ಸೋದರರಿಂದ ಸಲಹೆ ಸಹಕಾರ ದೊರಕಿ ಗೃಹ ನಿರ್ಮಾಣ ಕಾರ್ಯಗಳಲ್ಲಿ ಪ್ರಗತಿ. ವಿದೇಶದಿಂದ ಪ್ರಮುಖ ಸುದ್ದಿಯೊಂದು ಬರುವ ಸಾಧ್ಯತೆ.

ಕರ್ಕಾಟಕ: ಕಳೆದುಹೋದ ದಿನಗಳ ಬಗ್ಗೆ ಚಿಂತಿಸುವುದರಿಂದ ಪ್ರಯೋಜನವಿಲ್ಲ. ಹಿರಿಯರ ಸಲಹೆ ಸೂಚನೆಗಳನ್ನು ನಿರ್ಲಕ್ಷಿಸದಿರಿ. ಯಾವುದೇ ಕೆಲಸ ಕಾರ್ಯಗಳಲ್ಲಿ ಆತುರತೆ ತೋರಿ ಗಂಡಾಂತರಕ್ಕೆ ಸಿಲುಕದಿರಿ.

ಸಿಂಹ: ದೈನಂದಿನ ಚಟುವಟಿಕೆಯಲ್ಲಿ ಉತ್ಸಾಹ. ಕುಲದೇವತಾ ದರ್ಶನ ಲಭ್ಯ. ಋಣ ಪರಿಹಾರದಿಂದ ಸಂತೃಪ್ತಿ ದೊರಕುವುದು. ಆಸ್ತಿ ಅಥವಾ ಚಿನ್ನಾಭರಣ ಖರೀದಿ ಸಾಧ್ಯತೆ. ವೃತ್ತಿಯಲ್ಲಿನ ಸಮಸ್ಯೆಗಳು ನಿವಾರಣೆ.

ಕನ್ಯಾ: ತಾಯಿಯ ಆರೋಗ್ಯದ ಬಗ್ಗೆ ವಿಶೇಷ ಗಮನ ಅಗತ್ಯ. ನೆರೆಹೊರೆಯವರೊಂದಿಗೆ ಕಲಹ; ಸಮಾಧಾನದ ನಡವಳಿಕೆ ಅಗತ್ಯ. ಮಕ್ಕಳಿಂದ ನೆಮ್ಮದಿ. ವಿವಾಹಾಕಾಂಕ್ಷಿಗಳಿಗೆ ವಿವಾಹ ಯೋಗ.

ತುಲಾ: ಮನೆಯಲ್ಲಿ ನೆಮ್ಮದಿಯ ವಾತಾವರಣ. ನಿಷ್ಠೆ, ಪ್ರಾಮಾಣಿಕತೆಯಿಂದಾಗಿ ಯಶಸ್ಸು ಮತ್ತು ಪ್ರಶಂಸೆ ಪ್ರಾಪ್ತಿ. ವಾಹನ ಚಾಲನೆಯಲ್ಲಿ ಎಚ್ಚರಿಕೆ ಅಗತ್ಯ. ಮೇಲಾಧಿಕಾರಿಗಳಿಂದ ಪ್ರಶಂಸೆ.

ವೃಶ್ಚಿಕ: ಆಧ್ಯಾತ್ಮಿಕ ಜೀವನದಲ್ಲಿ ಸಂತೃಪ್ತಿಯನ್ನು ಕಾಣುವಿರಿ. ವಿಶೇಷ ವ್ಯವಹಾರಗಳಲ್ಲಿ ಅಗತ್ಯ ಪ್ರೋತ್ಸಾಹಗಳು ದೊರಕುವುದು. ಸಹೋದರರಿಂದ ಸಹಕಾರ.

ಧನು: ದೀರ್ಘಕಾಲಿಕ ಅನಾರೋಗ್ಯದಿಂದ ಮುಕ್ತರಾಗುವಿರಿ. ಪ್ರಾಪ್ತವಯಸ್ಕರಿಗೆ ಉತ್ತಮ ಸಂಬಂಧಗಳು ದೊರಕುವ ಸಾಧ್ಯತೆ. ಗೃಹ ನಿರ್ಮಾಣ ಕಾರ್ಯಗಳಲ್ಲಿ ಸ್ವಲ್ಪಮಟ್ಟಿನ ತೊಡಕುಂಟಾಗುವ ಸಾಧ್ಯತೆ.

ಮಕರ: ಭೂ ವ್ಯವಹಾರಗಳಿಂದ ಲಾಭ. ಗುರುದೇವತಾ ದರ್ಶನ ಯೋಗಪ್ರಾಪ್ತಿ. ವೈಯಕ್ತಿಕ ಜೀವನದಲ್ಲಿ ಅಭಿವೃದ್ಧಿ. ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ದೊರೆತು ನೆಮ್ಮದಿಯ ಜೀವನಕ್ಕೆ ನಾಂದಿಯಾಗುವುದು.

ಕುಂಭ: ನಿರೀಕ್ಷಿತ ಮೂಲಗಳಿಂದ ಧನಾಗಮನ. ವೃತ್ತಿ ಸಮಸ್ಯೆಗಳಿಂದ ಪರಿಹಾರ ಕಂಡುಕೊಳ್ಳುವಿರಿ. ಮಹಿಳೆಯರಿಗೆ ಕಲಾವಿದರುಗಳಿಗೆ ಉತ್ತಮ ಅವಕಾಶ ದೊರೆತು ಗೌರವಾದರಗಳು ಪ್ರಾಪ್ತವಾಗುವವು.

ಮೀನ: ದೂರದ ಪ್ರಯಾಣ ಯೋಗ. ವಾಹನ ಖರೀದಿ ಸಾಧ್ಯತೆ. ನ್ಯಾಯಾಲಯದಲ್ಲಿ ಜಯ. ಚಿನ್ನ ಮುಂತಾದ ಹಳದಿ ಲೋಹ ವ್ಯಾಪಾರಿಗಳಿಗೆ ಉತ್ತಮ ಲಾಭದ ನಿರೀಕ್ಷೆ.

ನಿಮ್ಮ ಜನ್ಮದಿನ 27-ಫೆಬ್ರುವರಿ ಈ ದಿನವು ಅತ್ಯಂತ ಶುಭಕರವಾಗಿದ್ದು, ಈ ದಿನದ ಕೆಲಸ ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಬೇರೆಯವರಿಗೆ ಸಹಾಯ ಮಾಡುವಲ್ಲಿ ನಿಷ್ಠೂರವಾಗಿ ವರ್ತಿಸುವಿರಿ. ಬಹುಮುಖ ಪ್ರತಿಭೆ ಇದ್ದರೂ ಸಮಚಿತ್ತದ ಅಭಾವದಿಂದಾಗಿ ಕಾರ್ಯಗಳಲ್ಲಿ ಎಡರುತೊಡರುಗಳನ್ನು ಎದುರಿಸಬೇಕಾದೀತು.

ಪದಬಂಧ 4521 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗ ಹಿಡಿದಿರುವ ಮೈಕ್ರೋಸ್ಕೋಪ್ (5)
3.ಕೂಸಿನ ತಲೆಗೆ ಕಟ್ಟುವ ಟೋಪಿ (3)
5.ಆಹಾ! ರುಚಿಕಟ್ಟಾದ ಭೋಜನ (5)
7.ಕೊನೆಗೆ ಹಣ್ಣನ್ನಿಟ್ಟರೆ ಖಂಡಿತಾ ಯಶಸ್ವಿ! (3)
8.ಯಾವುದೇ ಅಪರಾಧವನ್ನು ಮಾಡದಿರುವವನು (5)
10.ಬಯಕೆ ಈ ರೀತಿ ಮೂಡಿದೆ (3)
11.ನವ ಬಾಳಿದು (5)
14.ಮರಿಗೆ ಜರೂರಾಗಿ ನೀಡಿದ ಕೂಲಿ! (3)
15.ಪ್ರಸವ ಕೋಣೆ ಇಲ್ಲಿದೆ (5)

ಮೇಲಿಂದ ಕೆಳಕ್ಕೆ
1.ಕೊನೆಗೆ ಕೈಯಿಟ್ಟಾಗ ಕಾಣಿಸಿದ ಹಂದಿ (3)
2.ಹತ್ತು ವರ್ಷಗಳ ಕಾಲದ ಅವಧಿ (3)
4.ಚಂಚಲತೆ ಅಥವಾ ಅಸ್ಥಿರತೆ (3)
6.ವರನಲ್ಲಿ ಪ್ರತಿನಿಧಿ ಕಾಣುತ್ತಿರುವನೇ? (3)
7.ಸತ್ತವರನ್ನು ಹೂಳುವ ಸ್ಥಳ (3)
8.ಎದುರು ನೋಡುವುದು (3)
9.ರಾಯರಿಂದ ಬಂದಿರುವ ನಿರೂಪ (3)
10.ದೇವ ಪೂಜಾತಂತ್ರವನ್ನು ತಿಳಿಸುವ ಶಾಸ್ತ್ರ (3)
12.ಇದೊಂದು ಸಾಂಬಾರ ದ್ರವ್ಯ (3)
13.ಮಾದರಿಗೊಂದು ಪರ್ಯಾಯ ಪದ (3)



4520ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಪನ್ನೀರು 4.ಸಾವಿರ 5.ಅಂಟುಜಾಡ್ಯ 6.ಮರಕತ 7.ಸಖ 9.ಗವಿ 13.ಮೃಗಾಲಯ 14.ಅಂಗರಾಗ 15.ಶಾಬ್ದಿಕ 16.ನಕಲಿ

ಮೇಲಿಂದ ಕೆಳಕ್ಕೆ: 1.ವಸಾಹತು 2.ಪರಮಹಂಸ 3.ಕಾಜಾಣ 5.ಅಂತರಂಗ 8.ಖಡ್ಗಮೃಗ 10.ವಿಜಯಶಾಲಿ 11.ದಸಕತ್ತು 12.ಅಂಗನೆ

ಸುಡೊಕು 4907

4		6			8	5		1
	5		2	1			7	
1		2			5	3		8
6		9		2		8		
			5		6			
3		5				2		7
		4				1		2
			1	5				9
9		1			2	7		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4906 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಆನ್‌ಲೈನ್ ಜತೆಗೆ ನಿಯೋಜಿತ ಕೇಂದ್ರಗಳಲ್ಲಿಯೂ ಹೆಸರು ಸೇರ್ಪಡೆಗೆ ಅವಕಾಶ

ಲಸಿಕೆ 2ನೇ ಹಂತ: ನೋಂದಣಿ ಹೇಗೆ?

ಮುಂಬೈನ ಸಿಎಸ್‌ಎಂಟಿ ರೈಲ್ವೆ ನಿಲ್ದಾಣದಲ್ಲಿ ಆರೋಗ್ಯ ಕಾರ್ಯಕರ್ತರು ಜನರ ತಪಾಸಣೆ ಆರಂಭಿಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ದೇಶದ 27 ಕೋಟಿ ಜನರಿಗೆ ಕೋವಿಡ್ ಲಸಿಕೆ ನೀಡುವ, ಜಗತ್ತಿನ ಅತಿ ದೊಡ್ಡ ಲಸಿಕಾ ಅಭಿಯಾನ ಆರಂಭಿಸಲು ದೇಶವು ಸಿದ್ಧತೆ ಮಾಡಿಕೊಳ್ಳುತ್ತಿದೆ. ಎರಡನೇ ಹಂತದ ಈ ಅಭಿಯಾನದಲ್ಲಿ, ಲಸಿಕೆ ಹಾಕಿಸಿಕೊಳ್ಳಲು ಇಚ್ಛಿಸುವವರಿಗೆ ಹೆಸರು ನೋಂದಾಯಿಸಲು ಮೂರು ಆಯ್ಕೆಗಳನ್ನು ಕೇಂದ್ರದ ಆರೋಗ್ಯ ಸಚಿವಾಲಯವು ನೀಡಿದೆ.

ಲಸಿಕೆ ಪಡೆಯಲು ಇಚ್ಛೆ ಇರುವವರು 'ಕೋ–ವಿನ್ 2.0' ಆನ್‌ಲೈನ್ ಸಾಫ್ಟ್‌ವೇರ್ ಮೂಲಕ ಹೆಸರು ನೋಂದಾಯಿಸಬಹುದು ಅಥವಾ ದೇಶದಾದ್ಯಂತ ಇರುವ 30,000 ಲಸಿಕಾ ಕೇಂದ್ರಗಳಿಗೆ ಅಗತ್ಯ ದಾಖಲೆಗಳೊಂದಿಗೆ ಹೋಗಿ ಹೆಸರು ನೋಂದಾಯಿಸಿ ಲಸಿಕೆ ಪಡೆಯಬಹುದು. ಇದಲ್ಲದೆ, ರಾಜ್ಯ ಸರ್ಕಾರಗಳೇ ಲಸಿಕೆಗೆ ಅರ್ಹರಾದವರ ಗುಂಪುಗಳನ್ನು ನೋಂದಾಯಿಸಿ, ಅವರನ್ನು ಕೇಂದ್ರಗಳಿಗೆ ಕರೆತಂದು ಲಸಿಕೆ ಹಾಕಿಸಬಹುದಾಗಿದೆ.

'ಮೇಲ್ದರ್ಜೆಗೆ ಏರಿಸಿರುವ ಸಾಫ್ಟ್‌ವೇರ್ ಕುರಿತ ಮಾಹಿತಿ ಹಾಗೂ ಅಭಿಯಾನಕ್ಕೆ ಸಂಬಂಧಿಸಿದ ಇತರ ಎಲ್ಲಾ ವಿವರಗಳನ್ನು ರಾಜ್ಯಗಳಿಗೆ ನೀಡಲಾಗಿದೆ' ಎಂದು ಕೇಂದ್ರದ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಹಾಗೂ ಲಸಿಕಾ ನಿರ್ವಹಣೆಯ ಉಸ್ತುವಾರಿ ಸಮಿತಿಯ ಅಧ್ಯಕ್ಷ ಆರ್. ಎಸ್. ಶರ್ಮಾ ತಿಳಿಸಿದ್ದಾರೆ.

20 ಸಾವಿರ ಸರ್ಕಾರಿ ಆಸ್ಪತ್ರೆಗಳು ಹಾಗೂ 10 ಸಾವಿರ ಖಾಸಗಿ ಆಸ್ಪತ್ರೆಗಳ ಮೂಲಕ ದೇಶದ ನಾಗರಿಕರಿಗೆ ಲಸಿಕೆಗಳನ್ನು ನೀಡುವ ಅಭಿಯಾನವನ್ನು ಮಾರ್ಚ್ 1ರಿಂದ ಆರಂಭಿಸಲು ಈಚೆಗೆ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಇದಕ್ಕಾಗಿ ಸರ್ಕಾರವು ₹ 35,000 ಕೋಟಿ ಮೀಸಲಿಟ್ಟಿದೆ.

ಈ ಹಂತದಲ್ಲಿ, 60 ವರ್ಷಕ್ಕೂ ಮೇಲ್ಪಟ್ಟವರು ಹಾಗೂ ಆರೋಗ್ಯ ಸಂಬಂಧಿ ಹಲವು ಸಮಸ್ಯೆಗಳಿಂದ ಬಳಲುವ 45– 59 ವರ್ಷದೊಳಗಿನ ವಯಸ್ಸಿನವರು ಮಾತ್ರ ಲಸಿಕೆ ಪಡೆಯಲು ಅರ್ಹರಾಗಿರುತ್ತಾರೆ. ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕೆ ನೀಡಲಾಗುವುದು. ಆದರೆ, ನೋಂದಾಯಿತ ಖಾಸಗಿ ಕೇಂದ್ರಗಳಿಂದ ಲಸಿಕೆ ಪಡೆಯುವವರು ಪೂರ್ವನಿರ್ಧಾರಿತ ಶುಲ್ಕವನ್ನು ಪಾವತಿಸಬೇಕಾಗುತ್ತದೆ ಎಂದು ತಿಳಿಸಿದೆ. ಆದರೆ, ಶುಲ್ಕ ಎಷ್ಟು ಎಂದು ಸರ್ಕಾರ ಇನ್ನೂ ಘೋಷಿಸಿಲ್ಲ.

ಅರ್ಹ ಫಲಾನುಭವಿಗಳು ಆಧಾರ್, ಮತದಾರರ ಗುರುತಿನ ಚೀಟಿ ಅಥವಾ ಇನ್ಯಾವುದೇ ಗುರುತಿನ ಚೀಟಿಯನ್ನು ನೀಡಬೇಕಾಗುತ್ತದೆ. ಆರೋಗ್ಯ ಕಾರ್ಯಕರ್ತರಿಗಾಗಿ ಆಯೋಜಿಸಿದ್ದ ಮೊದಲ ಹಂತದ ಅಭಿಯಾನದಲ್ಲಿ ಲಸಿಕೆ ಹಾಕಿಸಿಕೊಳ್ಳದವರು ಈ ಸಂದರ್ಭದಲ್ಲಿ ಲಸಿಕೆ ಹಾಕಿಸಿಕೊಳ್ಳಬಹುದಾಗಿದೆ. ಇಂಥವರು ತಮ್ಮ ಸಂಸ್ಥೆ ನೀಡಿರುವ ಗುರುತಿನ ಚೀಟಿಯನ್ನು ಸಲ್ಲಿಸಬೇಕಾಗುತ್ತದೆ.

ಕೋ–ವಿನ್ ಸಾಫ್ಟ್‌ವೇರ್ ಅನ್ನು ಮೇಲ್ದರ್ಜೆಗೆ ಏರಿಕೆ ಪ್ರಕ್ರಿಯೆ ನಡೆಯುತ್ತಿರುವುದರಿಂದ ಇನ್ನು ಮುಂದೆ ಶನಿವಾರ ಹಾಗೂ ಭಾನುವಾರಗಳಂದು ಲಸಿಕಾ ಕಾರ್ಯಕ್ರಮ ಇರುವುದಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಕಾರ್ಯಸೂಚಿ ವಿಸ್ತರಣೆ: ಕೋವಿಡ್–19 ಕಣ್ಗಾವಲು, ನಿಯಂತ್ರಣ ಕ್ರಮಗಳನ್ನು ಒಳಗೊಂಡ ಕಾರ್ಯಸೂಚಿಯನ್ನು ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. 'ಕೋವಿಡ್–19 ಸಕ್ರಿಯ ಪ್ರಕರಣಗಳು ಹಾಗೂ ಹೊಸ ಸೋಂಕಿನ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಆದರೆ ಪಿಡುಗಿನಿಂದ ಮುಕ್ತಿ ಪಡೆಯಲು ಇದರ ಮೇಲೆ ಕಣ್ಗಾವಲು ಮುಂದುವರಿಸುವುದು ಅಗತ್ಯ' ಎಂದು ಸಚಿವಾಲಯ ತಿಳಿಸಿದೆ.

ಇನ್ನೂ 40 ರಾಷ್ಟ್ರಗಳಿಗೆ ರಫ್ತು

'ಭಾರತವು 70 ರಾಷ್ಟ್ರಗಳಿಗೆ ಕೋವಿಡ್ ಲಸಿಕೆಯನ್ನು ರಫ್ತು ಮಾಡುತ್ತಿದ್ದು, ಈ ಪಟ್ಟಿಗೆ ಇನ್ನೂ 40 ರಾಷ್ಟ್ರಗಳನ್ನು ಸೇರಿಸಲಾಗುವುದು' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ.

ವಿದೇಶಾಂಗ ಸಚಿವಾಲಯ ಹಾಗೂ ಪುಣೆ ಅಂತರರಾಷ್ಟ್ರೀಯ ಕೇಂದ್ರಗಳ ಆಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ 'ಏಷ್ಯಾ ಆರ್ಥಿಕ ಸಂವಾದ–2021'ರ ಐದನೇ ಆವೃತ್ತಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, '70 ರಾಷ್ಟ್ರಗಳಿಗೆ ಲಸಿಕೆಯನ್ನು ರಫ್ತು ಮಾಡುವ ಮೂಲಕ ತನ್ನ ಮಾತನ್ನು ಭಾರತ ಉಳಿಸಿಕೊಂಡಿದೆ.

ಅಷ್ಟೇ ಅಲ್ಲ, ಈ ಪಟ್ಟಿಗೆ ಇನ್ನೂ 40 ರಾಷ್ಟ್ರಗಳನ್ನು ಶೀಘ್ರದಲ್ಲೇ ಸೇರಿಸಲಿದೆ. ಆರಂಭದಲ್ಲಿಯೇ ಲಾಕ್‌ಡೌನ್, ಅಂತರ ಕಾಯ್ದುಕೊಳ್ಳುವುದು ಮುಂತಾದ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವ ಮೂಲಕ ಭಾರತವು ಸಂಭವಿಸಬಹುದಾದ ಭಾರಿ ಅನಾಹುತವನ್ನು ತಪ್ಪಿಸುವಲ್ಲಿ ಯಶಸ್ವಿಯಾಗಿದೆ' ಎಂದರು.

ಸಕ್ರಿಯ ಪ್ರಕರಣ ಇಳಿಕೆ

ಶುಕ್ರವಾರ ಮುಂಜಾನೆಗೆ ಅಂತ್ಯವಾಗುವ 24 ಗಂಟೆಗಳ ಅವಧಿಯಲ್ಲಿ ದೇಶದ 20 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್‌ನಿಂದ ಒಂದೂ ಸಾವು ಸಂಭವಿಸಿಲ್ಲ. 21 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆಯು 1,000ಕ್ಕೂ ಕಡಿಮೆ ಇದೆ ಎಂದು ಕೇಂದ್ರದ ಆರೋಗ್ಯ ಸಚಿವಾಲಯ ತಿಳಿಸಿದೆ. ಕೆಲವು ರಾಜ್ಯಗಳಲ್ಲಿ ಸೋಂಕಿತ ಪ್ರಕರಣಗಳು ಏರಿಕೆಯಾಗುತ್ತಿದ್ದರೂ, ದೇಶದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆಯು 1,55,986ಕ್ಕೆ ಇಳಿದಿದೆ. ಇದು ಒಟ್ಟಾರೆ ಕೊರೊನಾ ಸೋಂಕಿತರ ಸಂಖ್ಯೆಯ ಶೇ 1.41ರಷ್ಟಾಗುತ್ತದೆ ಎಂದು ಸಚಿವಾಲಯ ಹೇಳಿದೆ.



2025ಕ್ಕೆ 12 ಲಕ್ಷ ಕೌಶಲಯುಕ್ತ ಡಿಜಿಟಲ್ ನೌಕರರು ಅಗತ್ಯ

ಸಿಂಗಪುರ(ಪಿಟಿಐ) : 'ಸಿಂಗಪುರ ಆರ್ಥಿಕ ಕ್ಷೇತ್ರದ ಅಭಿವೃದ್ಧಿಗಾಗಿ 2025ರ ವೇಳೆಗೆ 12 ಲಕ್ಷ ಕೌಶಲಯುಕ್ತ ಡಿಜಿಟಲ್ ನೌಕರರ ಅಗತ್ಯವಿದೆ. ಈಗ ಇಂತಹ ನೌಕರರು 22 ಲಕ್ಷ ಇದ್ದು ಮುಂದೆ ಈ ಪ್ರಮಾಣ ಶೇ 55ರಷ್ಟು ಹೆಚ್ಚಾಗಲಿದೆ' ಎಂದು ಅಮೆಜಾನ್ ವೆಬ್ ಸರ್ವೀಸಸ್‌ನವರು ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ.

ಭವಿಷ್ಯದ ಡಿಜಿಟಲ್ ಕೌಶಲದ ಸವಾಲುಗಳು ನೌಕರರ ಮೇಲೆ ಹೇಗೆ ಪರಿಣಾಮ ಬೀರಬಹುದು ಎಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು ವೆಬ್ ಸರ್ವೀಸಸ್ ಆಸ್ಟ್ರೇಲಿಯಾ, ಭಾರತ, ಇಂಡೊನೇಷ್ಯಾ, ಜಪಾನ್, ಸಿಂಗಪುರ ಮತ್ತು ದಕ್ಷಿಣ ಕೊರಿಯಾದಲ್ಲಿ ಸಮೀಕ್ಷೆ ನಡೆಸಿದ್ದು ಈ ವರದಿಯನ್ನು ಗುರುವಾರ ಬಿಡುಗಡೆ ಮಾಡಲಾಗಿದೆ.

ಸಮೀಕ್ಷೆ ನಡೆಸಿದ ಆರು ರಾಷ್ಟ್ರಗಳ, 3 ಸಾವಿರ ವ್ಯಕ್ತಿಗಳ ಪೈಕಿ ಸಿಂಗಪುರದಲ್ಲಿ 543 ಮಂದಿಯನ್ನು ಸಂದರ್ಶಿಸಲಾಗಿದೆ ಎಂದು ಡಿಜಿಟಲ್ ಕೌಶಲ ವರದಿಯಲ್ಲಿ ಹೇಳಿದೆ. ಪ್ರಸ್ತುತ ಸಿಂಗಪುರದ 10 ನೌಕರರಲ್ಲಿ ಆರು ಮಂದಿ ಈಗಾಗಲೇ ಡಿಜಿಟಲ್ ಕೌಶಲವಿರುವ ಕೆಲಸಗಳಲ್ಲಿ ದುಡಿಯುತ್ತಿದ್ದಾರೆ. ಈ ಪ್ರಕಾರ, ಆರು ರಾಷ್ಟ್ರಗಳ ಆರ್ಥಿಕ ಸ್ಥಿತಿಯಲ್ಲಿ ಆಸ್ಟ್ರೇಲಿಯಾ (ಶೇ 64) ಮೊದಲ ಸ್ಥಾನದಲ್ಲಿದ್ದರೆ, ಸಿಂಗಪುರ ಎರಡನೇ ಸ್ಥಾನದಲ್ಲಿದೆ.

ಸಿಂಗಪುರದಲ್ಲಿ ಐವರು ನೌಕರರಲ್ಲಿ ಒಬ್ಬರು (ಶೇ22) ಸುಧಾರಿತ ಡಿಜಿಟಲ್ ಕೌಶಲಗಳನ್ನು ಕಲಿಯಲು ಮುಂದಾಗುತ್ತಿದ್ದಾರೆ. ಅಧ್ಯಯನ ನಡೆಸಿದ ಆರು ದೇಶಗಳಲ್ಲಿ ಈ ತರಹದ ನೌಕರರ ಸಂಖ್ಯೆ ಹೆಚ್ಚಿದೆ. ಇಂಥ ನೌಕರರಲ್ಲಿ ದಕ್ಷಿಣ ಕೊರಿಯಾದ ಶೇ 21 ರಷ್ಟು ಮಂದಿ ಈ ರೀತಿಯ ಸುಧಾರಿತ ಡಿಜಿಟಲ್ ಕೌಶಲ ಕಲಿಕೆಗೆ ಮುಂದಾಗಿದ್ದು, ಈ ಆರು ರಾಷ್ಟ್ರಗಳಲ್ಲಿ ಅದು ಎರಡನೇ ಸ್ಥಾನದಲ್ಲಿದೆ ಎಂದು ವರದಿ ಹೇಳಿದೆ.

ಲಿಮ್ಕಾ ಬುಕ್‌ಗೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲಾಪುರ–ವಿಜಯಪುರ ಮಾರ್ಗದ 25.54 ಕಿ.ಮೀ ರಾಷ್ಟ್ರೀಯ ಹೆದ್ದಾರಿ ಡಾಂಬರೀಕರಣ ಕಾಮಗಾರಿ ಕೇವಲ 18 ಗಂಟೆಗಳಲ್ಲಿ ಪೂರ್ಣಗೊಳಿಸಿದ್ದು, ಇದನ್ನು ಲಿಮ್ಕಾ ಬುಕ್‌ಗೆ ದಾಖಲಿಸಲಾಗುವುದು ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಟ್ವೀಟ್ ಮಾಡಿದ್ದಾರೆ.

ಈ ಹೆದ್ದಾರಿ ಕಾಮಗಾರಿಗೆ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಮತ್ತು ವಿಜಯಪುರ ಸಂಸದ ರಮೇಶ್ ಜಿಗಜಿಣಗಿ ಚಾಲನೆ ನೀಡಿದ್ದರು.

ಅಂಬಾನಿ ಮನೆ ಬಳಿ ಸ್ಫೋಟಕ ತುಂಬಿದ್ದ ವಾಹನ ವಶ

ಪ್ರಜಾವಾಣಿ ವಾರ್ತೆ

ಮುಂಬೈ: ದಕ್ಷಿಣ ಮುಂಬೈನಲ್ಲಿರುವ ಉದ್ಯಮಿ ಮುಖೇಶ್ ಅಂಬಾನಿ ಅವರ ಐಷಾರಾಮಿ ನಿವಾಸ 'ಅಂಟಲಿಯಾ' ಸಮೀಪ ಗುರುವಾರ ಪತ್ತೆಯಾದ ಸ್ಫೋಟಕ ವಸ್ತು ತುಂಬಿದ್ದ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ವಾಹನದಲ್ಲಿ ಜಿಲೆಟಿನ್ ಕಡ್ಡಿಗಳಿದ್ದು, ವಾಹನದ ನಂಬರ್ ಪ್ಲೇಟ್ (ನೋಂದಣಿ ಸಂಖ್ಯೆ) ನಕಲಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಗಾಮ್ದೇವಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ವಶಪಡಿಸಿಕೊಂಡಿದ್ದ ಸ್ಕಾರ್ಪಿಯೊ ವಾಹನದಲ್ಲಿ 20 ಜಿಲೆಟಿನ್ ಕಡ್ಡಿಗಳು ಸಿಕ್ಕಿವೆ. ಮುಂಬೈ ಅಪರಾಧ ವಿಭಾಗದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ' ಎಂದು ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶ್‌ಮುಖ್ ಟ್ವೀಟ್ ಮಾಡಿದ್ದಾರೆ.

ವಾಹನದ ನಂಬರ್ ಪ್ಲೇಟ್‌ನಲ್ಲಿನ ನೋಂದಣಿ ಸಂಖ್ಯೆಯು ಅಂಬಾನಿಯವರ ಭದ್ರತಾ ಪಟ್ಟಿಯ ವಿವರದಲ್ಲಿರುವ ಎಸ್‌ಯುವಿ ವಾಹನದ ಸಂಖ್ಯೆಯನ್ನು ಹೋಲುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾರದ ಹಿಂದೆ ಕಳವಾಗಿದ್ದ ವಾಹನ

ಕಾರ್ಮೈಕಲ್ ರಸ್ತೆಯಲ್ಲಿರುವ ಉದ್ಯಮಿ ಮುಖೇಶ್ ಅಂಬಾನಿ ಅವರ ಐಷಾರಾಮಿ ನಿವಾಸದ ಸಮೀಪ ಗುರುವಾರ ಪತ್ತೆಯಾದ ಸ್ಫೋಟಕ ತುಂಬಿದ್ದ ವಾಹನವು ಒಂದು ವಾರದ ಹಿಂದೆ ಕಳ್ಳತನವಾಗಿದ್ದ ವಾಹನ. ಇದರ ಮಾಲೀಕರು ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ವಾಹನದ ಮಾಲೀಕರಾದ ಠಾಣೆಯ ನಿವಾಸಿ ಹೀರೇನ್ ಮನ್ಸುಖ್ ಎಂಬುವವರು, ಟಿ.ವಿಗಳಲ್ಲಿ ಎಸ್‌ಯುವಿ ವಾಹನದ ದೃಶ್ಯಗಳನ್ನು ಗಮನಿಸಿ, ಶುಕ್ರವಾರ ಮಧ್ಯಾಹ್ನ ಪೊಲೀಸ್ ಆಯುಕ್ತರ ಕಚೇರಿಗೆ ಬಂದು ದೂರು ನೀಡಿದ್ದಾರೆ. ಅಪರಾಧ ಪತ್ತೆ ಗುಪ್ತದಳದ ವಿಭಾಗವು (ಸಿಐಯು) ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಫೆಬ್ರುವರಿ 17ರಂದು ಕುಟುಂಬದ ಕಾರ್ಯಕ್ರಮಕ್ಕೆ ಹೋಗುತ್ತಿರುವಾಗ ಐರೋಲಿ ಮುಲುಂದ್ ಸೇತುವೆ ಬಳಿ ವಾಹನದ ಸ್ಟೀಯರಿಂಗ್ ಜಾಮ್ ಆಗಿದ್ದು, ಅಲ್ಲಿಯೇ ವಾಹನ ಬಿಟ್ಟು ಕಾರ್ಯಕ್ರಮಕ್ಕೆ ಹೋಗಿದ್ದೆ. ಮರು ದಿನ ವಾಹನ ತರಲು ಹೋದಾಗ, ಅದು ಅಲ್ಲಿ ಇರಲಿಲ್ಲ. ಸುಮಾರು ನಾಲ್ಕು ತಾಸು ಹುಡುಕಾಡಿದೆ. ಅದು ಕಳ್ಳತನವಾಗಿರುವುದು ಅರಿವಾಗಿ, ವಿಖ್ರೋಲಿ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದೆ' ಎಂದು ಮನ್ಸುಖ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಅಂಬಾನಿ ಕುಟುಂಬಕ್ಕೆ ಬೆದರಿಕೆ

ಈ ವಾಹನದಲ್ಲಿ ಪತ್ತೆಯಾದ ಪತ್ರದಲ್ಲಿನ ವಿವರಗಳು ಬಹಿರಂಗವಾಗಿದ್ದು, ಅಪರಿಚಿತರು ಇದು ಮುಂದೆ ಎದುರಾಗಲಿರುವ ಅನಾಹುತದ ಒಂದು 'ತುಣುಕು' ಅಷ್ಟೇ ಎಂದು ಮುಖೇಶ್ ಅಂಬಾನಿ ಕುಟುಂಬಕ್ಕೆ ಬೆದರಿಕೆಯೊಡ್ಡಿ ಬರೆದಿರುವ ಅಂಶಗಳು ಪತ್ರದಲ್ಲಿರುವುದು ಕಂಡುಬಂದಿದೆ.

'ಪತ್ರದ ಸಾಲುಗಳು ಹಿಂದಿಯಲ್ಲಿದ್ದು, ಇಂಗ್ಲಿಷ್ ಅಕ್ಷರಗಳಲ್ಲಿ ಬರೆಯಲಾಗಿದೆ. ಅಂಬಾನಿ ಮತ್ತು ಅವರ ಪತ್ನಿ ಹಾಗೂ ಕುಟುಂಬವನ್ನು ಉದ್ದೇಶಿಸಿ 'ಇದು ಕೇವಲ ಝಲಕ್ (ಗ್ಲಿಂಪ್ಸ್). ಆದರೆ, ಮುಂದಿನ ಬಾರಿ 'ಸಾಮನ್' (ಸ್ಫೋಟಕ)ಗಳನ್ನು ಪೂರ್ಣವಾಗಿ ಜೋಡಿಸಿಡಲಾಗುವುದು' ಎನ್ನುವ ಸಾಲುಗಳಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಾಹನದಲ್ಲಿ ಜೋಡಿಸಿಟ್ಟ ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ. ಪತ್ರವು ಚಾಲಕನ ಸೀಟಿನ ಪಕ್ಕದಲ್ಲಿ ನೀಲಿ ಬಣ್ಣದ ಚೀಲದಲ್ಲಿತ್ತು. ಜೆಲೆಟಿನ್ ಕಡ್ಡಿಗಳನ್ನು ಅದರ ತಯಾರಕರ ಹೆಸರಿನೊಂದಿಗೆ ಪ್ಯಾಕೆಟ್‌ನಲ್ಲಿ ಇರಿಸಲಾಗಿತ್ತು. 'ಮುಂಬೈ ಇಂಡಿಯನ್ಸ್' ಎಂದು ಮುದ್ರಿಸಿರುವ ಚೀಲವೂ ವಾಹನದಲ್ಲಿ ಸಿಕ್ಕಿದೆ. ಜತೆಗೆ ನಾಲ್ಕು ನಂಬರ್ ಪ್ಲೇಟ್‌ಗಳು ಸಿಕ್ಕಿವೆ. ಸ್ಕಾರ್ಪಿಯೋ ನಿಲ್ಲಿಸಿ ಹೋದ ವ್ಯಕ್ತಿ ಮತ್ತು ಇನೊವಾ ಕಾರಿನ ದೃಶ್ಯಾವಳಿ ಹತ್ತಿರದ ಸಿಸಿಟಿವಿಗಳಲ್ಲಿ ಸೆರೆಯಾಗಿದ್ದು, ಪತ್ತೆಹಚ್ಚಲು ಪೊಲೀಸರು ಪ್ರಯತ್ನಿಸುತ್ತಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸಂಘರ್ಷವಿದ್ದ ಎಲ್ಲ ಸ್ಥಳಗಳಿಂದ ಸೇನೆ ಹಿಂತೆಗೆತ ಅಗತ್ಯ: ಭಾರತ

ನವದೆಹಲಿ/ಬೀಜಿಂಗ್ (ಪಿಟಿಐ): ಘರ್ಷಣೆ ನಡೆದ ಎಲ್ಲ ಸ್ಥಳಗಳಿಂದಲೂ ಸೇನೆಯನ್ನು ಹಿಂತೆಗೆದುಕೊಳ್ಳುವುದು ಮುಖ್ಯ. ಇಂಥ ಕ್ರಮದಿಂದ ಮಾತ್ರ ಉಭಯ ದೇಶಗಳ ಸೇನೆಗಳ ನಡುವಿನ ಸಂಘರ್ಷ ಶಮನಗೊಳಿಸಲು ಸಾಧ್ಯ ಎಂದು ಭಾರತ ಚೀನಾಕ್ಕೆ ಹೇಳಿದೆ.

ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿಯಾಗಲು ಗಡಿಯಲ್ಲಿ ಶಾಂತಿ ಮತ್ತು ಸೌಹಾರ್ದ ವಾತಾವರಣ ನಿರ್ಮಾಣವಾಗುವುದು ಸಹ ಅಷ್ಟೇ ಮುಖ್ಯ ಎಂದೂ ಭಾರತ ಪ್ರತಿಪಾದಿಸಿದೆ.

ಚೀನಾ ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗೆ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಗುರುವಾರ ದೂರವಾಣಿ ಮೂಲಕ 75 ನಿಮಿಷಗಳ ಕಾಲ ಚರ್ಚೆ ನಡೆಸಿದ್ದಾರೆ. ಈ ಕುರಿತ ವಿವರಗಳನ್ನು ವಿದೇಶಾಂಗ ಸಚಿವಾಲಯ ಶುಕ್ರವಾರ ಬಿಡುಗಡೆ ಮಾಡಿದೆ. ಗಡಿಯಲ್ಲಿನ ಸಂಘರ್ಷವು ಕಳೆದ ವರ್ಷ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂಬುದಾಗಿ ಜೈಶಂಕರ್ ಹೇಳಿದರು ಎಂದೂ ಸಚಿವಾಲಯ ತಿಳಿಸಿದೆ.

ಎರಡೂ ದೇಶಗಳ ಸೇನಾ ಕಮಾಂಡರ್‌ಗಳ ಮಟ್ಟದಲ್ಲಿ ಅನೇಕ ಸುತ್ತಿನ ಮಾತುಕತೆ ನಂತರ, ಪ್ಯಾಂಗ್ಯಾಂಗ್ ತ್ಸೊ ಸರೋವರದ ಉತ್ತರ ಹಾಗೂ ದಕ್ಷಿಣ ಭಾಗದಿಂದ ಸೇನೆಯನ್ನು ಹಿಂತೆಗೆಯಲು ಉಭಯ ದೇಶಗಳು ಸಮ್ಮತಿಸಿದ್ದವು.

ಸಂಘರ್ಷವನ್ನು ಶಮನಗೊಳಿಸುವ ನಿಟ್ಟಿನಲ್ಲಿ ನಡೆದ ಈ ಮಹತ್ವದ ಬೆಳವಣಿಗೆ ಬೆನ್ನಲ್ಲೇ, ವಿಚಾರ ವಿನಿಮಯ ಹಾಗೂ ತ್ವರಿತ ಸಂಪರ್ಕಕ್ಕೆ ಹಾಟ್‌ಲೈನ್ ಸ್ಥಾಪಿಸಲು ಸಹ ಉಭಯ ಸಚಿವರು ಒಪ್ಪಿಗೆ ಸೂಚಿಸಿದರು ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ.

ಕಾರ್ಮಿಕ ಹಕ್ಕುಗಳ ಹೋರಾಟಗಾರ್ತಿ ನವದೀಪ್ ಕೌರ್‌ಗೆ ಜಾಮೀನು

ಚಂಡಿಗಡ(ಪಿಟಿಐ): ಕಾರ್ಮಿಕ ಹಕ್ಕುಗಳ ಹೋರಾಟಗಾರ್ತಿ ಪಂಜಾಬ್‌ನ ನವದೀಪ್ ಕೌರ್ ಅವರಿಗೆ ಶುಕ್ರವಾರ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಜಾಮೀನು ನೀಡಿದೆ.

ನವದೀಪ್ ಕೌರ್ ಅವರು ಹರಿಯಾಣದ ಸೋನಿಪತ್‌ನಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ಜನವರಿ 12ರಂದು ಕಂಪನಿಯೊಂದರ ಎದುರು ವೇತನಕ್ಕಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದರು. ಈ ವೇಳೆ ಪೊಲೀಸರು ಅವರನ್ನು ಬಂಧಿಸಿದ್ದರು. ಇವರ ವಿರುದ್ಧ ಕೊಲೆ, ಸುಲಿಗೆ, ಕಳ್ಳತನ, ಗಲಭೆ, ಕಾನೂನುಬಾಹಿರ ಸಭೆ ಮತ್ತು ಕ್ರಿಮಿನಲ್ ಬೆದರಿಕೆಯಂತಹ ಆರೋಪಗಳನ್ನು ಹೊರಿಸಲಾಗಿತ್ತು.

'ನವದೀಪ್ ಕೌರ್ ಅವರ ಜಾಮೀನು ಅರ್ಜಿಯನ್ನು ನ್ಯಾಯಾಲಯ ಸ್ವೀಕರಿಸಿದೆ. ಹೈಕೋರ್ಟ್ ಅವರಿಗೆ ಜಾಮೀನು ನೀಡಿದೆ' ಎಂದು ನೌದೀಪ್ ಪರ ವಕೀಲರಾದ ಅರ್ಶದೀಪ್ ಸಿಂಗ್ ಚೀಮಾ ತಿಳಿಸಿದರು. ನವದೀಪ್ ಕೌರ್ ಅವರು, ಜಾಮೀನು ಅರ್ಜಿಯಲ್ಲಿ, 'ನನ್ನನ್ನು ಬಂಧಿಸಿದ ಸೋನಿಪತ್ ಪೊಲೀಸರು ಠಾಣೆಯಲ್ಲಿ ತೀವ್ರವಾಗಿ ಥಳಿಸಿದರು. ನನ್ನ ವಿರುದ್ಧ ಐಪಿಸಿ 307 (ಕೊಲೆ ಯತ್ನ) ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ಹಾಕಿ, ತಪ್ಪಾಗಿ ಬಂಧಿಸಲಾಗಿದೆ' ಎಂದು ಉಲ್ಲೇಖಿಸಿದ್ದರು. ಇದು ಆಧಾರ ರಹಿತ ಆರೋಪ ಎಂದು ಪೊಲೀಸರು ನಿರಾಕರಿಸಿದ್ದರು.

'ರೈತರ ಆಂದೋಲನಕ್ಕೆ ಬೆಂಬಲ ನೀಡುವಲ್ಲಿ ಯಶಸ್ವಿಯಾಗಿದ್ದರಿಂದ ನನ್ನನ್ನು ಗುರಿಯಾಗಿಸಿ ಸುಳ್ಳು ಆರೋಪ ಮಾಡಲಾಗಿದೆ' ಎಂದು ನವದೀಪ್ ಕೌರ್ ಹೇಳಿದ್ದಾರೆ.

ರಾಜ್ಯಪಾಲ ಬಂಡಾರು ದತ್ತಾತ್ರೇಯ ಮೇಲೆ ಹಲ್ಲೆ ಆರೋಪ

ಕಾಂಗ್ರೆಸ್‌ನ ಐವರು ಶಾಸಕರ ಅಮಾನತು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ವಿಧಾನಸಭೆ ಆವರಣದಲ್ಲಿ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರ ಮೇಲೆ ಕಾಂಗ್ರೆಸ್ ಶಾಸಕರು ಶುಕ್ರವಾರ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಐವರು ಕಾಂಗ್ರೆಸ್ ಶಾಸಕರನ್ನು ಈ ಬಜೆಟ್ ಅಧಿವೇಶನ ಮುಗಿಯುವವರೆಗೆ ಅಮಾನತು ಮಾಡಲಾಗಿದೆ. 'ಸಂಸದೀಯ ವ್ಯವಹಾರಗಳ ಸಚಿವ ಸುರೇಶ್ ಭಾರದ್ವಾಜ್ ಮಂಡಿಸಿದ ಸೂಚನೆಯನ್ನು ಪರಿಗಣಿಸಿ, ವಿರೋಧ ಪಕ್ಷದ ನಾಯಕ ಮುಕೇಶ್ ಅಗ್ನಿಹೋತ್ರಿ, ಹರ್ಷವರ್ಧನ್ ಚೌಹಾಣ್, ಸುಂದರ್‌ಸಿಂಗ್ ಠಾಕೂರ್, ಸತ್ಪಾಲ್ ರಾಯ್ಜಾದ ಹಾಗೂ ವಿನಯಕುಮಾರ್ ಅವರನ್ನು ಅಮಾನತು ಮಾಡಲಾಗಿದೆ'ಎಂದು ಸ್ಪೀಕರ್ ವಿಪಿನ್ ಪರ್ಮಾರ್ ಪ್ರಕಟಿಸಿದರು.

ಅಮಾನತುಗೊಳಿಸಿರುವ ವಿಷಯವನ್ನು ಪ್ರಕಟಿಸಿದ ಸಂದರ್ಭದಲ್ಲಿ ಕಾಂಗ್ರೆಸ್‌ನ ಶಾಸಕರು ಸದನದಲ್ಲಿ ಇರಲಿಲ್ಲ.

ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ಸದನವನ್ನು ಉದ್ದೇಶಿಸಿ ಮಾತನಾಡಿದ ನಂತರ ರಾಜ್ಯಪಾಲ ಬಂಡಾರು ದತ್ತಾತ್ರೇಯ ಅವರು ನಿರ್ಗಮಿಸುತ್ತಿದ್ದರು. ಅವರು ಸ್ಪೀಕರ್ ಅವರ ಕೊಠಡಿ ಬಳಿ ಸಾಗುತ್ತಿದ್ದಾಗ ವಿರೋಧ ಪಕ್ಷದ ಶಾಸಕರು ಅವರನ್ನು ತಡೆಯಲು ಯತ್ನಿಸಿದರು ಎನ್ನಲಾಗಿದೆ.

ಚೀನಾ: ಚಿತ್ರಮಂದಿರ ಭರ್ತಿ

ಬೀಜಿಂಗ್(ಎಪಿ): ದೊಡ್ಡ ಪರದೆ ಮೇಲೆ ತಮ್ಮಿಷ್ಟದ ಚಲನಚಿತ್ರ ನೋಡಿ ಆನಂದಿಸುವ, ರೋಮಾಂಚನಗೊಳ್ಳುವ ದಿನಗಳು ಚೀನಾದ ಜನತೆಗೆ ಮತ್ತೆ ಬಂದಿವೆ.

ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಗತ್ತಿನ ದೊಡ್ಡ ಮಾರುಕಟ್ಟೆ ಎನಿಸಿರುವ ಚೀನಾದ ಸಿನಿಪ್ರಿಯರು ಈ ಮನರಂಜನೆಯಿಂದ ವಂಚಿತರಾಗಿದ್ದರು. ಕೊರೊನಾ ಸೋಂಕಿನಿಂದಾಗಿ ವಿವಿಧ ಚಟುವಟಿಕೆಗಳಂತೆ ಸಿನಿಮಾ ಪ್ರದರ್ಶನದ ಮೇಲೂ ನಿರ್ಬಂಧ ಹೇರಿದ್ದೇ ಇದಕ್ಕೆ ಕಾರಣ.

ಈಗ ಕೋವಿಡ್–19 ನಿಯಂತ್ರಣಕ್ಕೆ ಬಂದಿರುವ ಕಾರಣ, ಚಿತ್ರಮಂದಿರಗಳಲ್ಲಿ ಅವುಗಳ ಸಾಮರ್ಥ್ಯದ ಶೇ 50ರಷ್ಟು ಸೀಟುಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ. ಟಿಕೆಟ್‌ಗಳು ಕ್ಷಣಾರ್ಧದಲ್ಲಿ ಬಿಕರಿಯಾಗುತ್ತಿರುವ ಕಾರಣ ಪ್ರದರ್ಶಕರ ಸಂತಸಕ್ಕೆ ಮಿತಿಯೇ ಇಲ್ಲ ಎಂಬಂತಾಗಿದೆ.

ಗಲ್ಲಾ ಪೆಟ್ಟಿಗೆ ಸಂಗ್ರಹದ ವಿಷಯದಲ್ಲಿ ದೇಶೀಯ ನಿರ್ಮಾಣದ ಚಿತ್ರಗಳು ಹಾಲಿವುಡ್ ಚಿತ್ರಗಳಿಗಿಂತ ಹೆಚ್ಚು ಆದಾಯ ತರುತ್ತಿವೆ ಎಂದು ಮೂಲಗಳು ಹೇಳಿವೆ.

ಫೆಬ್ರುವರಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಟಿಕೆಟ್‌ಗಳು ಮಾರಾಟವಾಗಿವೆ. ಕೋವಿಡ್‌ನಿಂದಾಗಿ ಹಾಲಿವುಡ್‌ನಲ್ಲಿ ಸಹ ಚಿತ್ರ ನಿರ್ಮಾಣ ಕುಂಠಿತಗೊಂಡಿದೆ. ಇದರ ಲಾಭವನ್ನು ಚೀನಾದ ಚಿತ್ರರಂಗ ಪಡೆಯುವಲ್ಲಿ ಯಶಸ್ವಿಯಾಗಿದೆ. ಪ್ರೇಕ್ಷಕರು ಅಧಿಕ ಸಂಖ್ಯೆಯಲ್ಲಿ ಈಗ ಚಿತ್ರಮಂದಿರಗಳತ್ತ ಹೆಜ್ಜೆ ಹಾಕುತ್ತಿರುವುದು ಈ ಮಾತಿಗೆ ಪುಷ್ಟಿ ನೀಡುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಚಲನಚಿತ್ರ ನೋಡಲು ಚಿತ್ರಮಂದಿರಗಳಿಗೆ ಹೋದರೂ, ಕೋವಿಡ್ ಮಾರ್ಗಸೂಚಿಯನ್ನು ಪಾಲಿಸುವುದನ್ನು ಕಡ್ಡಾಯ ಮಾಡಲಾಗಿದೆ. ಮಾಸ್ಕ್ ಧರಿಸಬೇಕು. ಮೊಬೈಲ್‌ನಲ್ಲಿ ನಿರ್ದಿಷ್ಟ ಆ್ಯಪ್ ಅಳವಡಿಸಿಕೊಂಡು, ನೋಂದಣಿ ಮಾಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

'ಅವನಿ' ಕೊಂದವರಿಗೆ ಬಹುಮಾನ ಪ್ರಕರಣ ಮುಕ್ತಾಯಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಮಹಾರಾಷ್ಟ್ರದ ಯಾವತ್‌ಮಲ್ ಜಿಲ್ಲೆಯಲ್ಲಿ 2018ರಲ್ಲಿ ನರಭಕ್ಷಕ ಹುಲಿ 'ಅವನಿ'ಯನ್ನು ಹತ್ಯೆ ಮಾಡಿದವರಿಗೆ ಬಹುಮಾನ ನೀಡಿದ್ದ ಮಹಾರಾಷ್ಟ್ರದ ಹಿರಿಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ದಾಖಲಾಗಿದ್ದ ಪ್ರಕರಣವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಮುಕ್ತಾಯಗೊಳಿಸಿದೆ.

ಬಾಂಬೆ ಹೈಕೋರ್ಟ್ ಆದೇಶದ ಮೇರೆಗೆ 'ಅವನಿ'ಯನ್ನು ಹತ್ಯೆ ಮಾಡಲಾಗಿತ್ತು ಎನ್ನುವ ಮಾಹಿತಿ ತಿಳಿದ ನಂತರ ಸುಪ್ರೀಂ ಕೋರ್ಟ್ ಈ ಪ್ರಕರಣವನ್ನು ರದ್ದುಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ವಿ. ರಾಮಸುಬ್ರಮಣಿಯನ್ ಅವರನ್ನೊಳಗೊಂಡ ನ್ಯಾಯಪೀಠವು ಪ್ರಾಣಿ ಹಕ್ಕುಗಳ ಕಾರ್ಯಕರ್ತೆ ಸಂಗೀತಾ ಡೋಗ್ರಾ ಅವರ ಅರ್ಜಿಯನ್ನು ವಾಪಸ್ ಪಡೆಯಲು ಅನುಮತಿ ನೀಡಿದೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ವಿಚಾರಣೆಯ ವೇಳೆ 'ನರಭಕ್ಷಕ ಹುಲಿಯನ್ನು ಕೊಲ್ಲುವ ನಿರ್ಧಾರವನ್ನು ಬಾಂಬೆ ಹೈಕೋರ್ಟ್ ಅನುಮೋದಿಸಿದೆ ಎಂದು ಮಹಾರಾಷ್ಟ್ರ ಸರ್ಕಾರವು ತನ್ನ ಉತ್ತರದಲ್ಲಿ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ. ಉನ್ನತ ನ್ಯಾಯಾಲಯದ ಹಿಂದಿನ ತೀರ್ಪುಗಳನ್ನು ಪರಿಶೀಲಿಸಿದ ನಂತರ ಹುಲಿಯು 'ನರಭಕ್ಷಕ' ಆಗಿರಲಿಲ್ಲ ಎಂದು ಹೇಳಲು ಸಾಧ್ಯವಾಗದು. ಹುಲಿಯ ಹತ್ಯೆಯ ನಂತರ ಅಲ್ಲಿನ ಗ್ರಾಮಸ್ಥರು ಸಂಭ್ರಮಾಚರಣೆಯನ್ನೂ ಮಾಡಿದ್ದಾರೆ' ಎಂದು ಸಂಗೀತಾ ಡೋಗ್ರಾ ಅವರಿಗೆ ನ್ಯಾಯಪೀಠವು ತಿಳಿಸಿದೆ.

ಖುದ್ದು ಹಾಜರಿದ್ದ ಸಂಗೀತಾ ಡೋಗ್ರಾ, 'ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಸರಿಯಾದ ಮಾಹಿತಿಗಳನ್ನು ಒದಗಿಸಲಾಗಿಲ್ಲ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು 'ಮುಂದಿನ ಬಾರಿ ನೀವು ಸರಿಯಾದ ಮಾಹಿತಿಯುಳ್ಳ ಪ್ರಕರಣವನ್ನು ತಂದಲ್ಲಿ ಮಾತ್ರ ನಾವು ನಿಮಗೆ ಸಹಾಯ ಮಾಡಬಹುದು. ಈ ಅರ್ಜಿಯನ್ನು ನೀವೇ ವಾಪಸ್ ಪಡೆಯುತ್ತೀರೋ ಅಥವಾ ನಾವೇ ಅರ್ಜಿಯನ್ನು ವಜಾಗೊಳಿಸಬೇಕೋ' ಎಂದೂ ಪ್ರಶ್ನಿಸಿತು.

ಇದಕ್ಕೆ ಉತ್ತರಿಸಿದ ಸಂಗೀತಾ ಡೋಗ್ರಾ ಅರ್ಜಿಯನ್ನು ವಾಪಸ್ ಪಡೆಯುವುದಾಗಿ ತಿಳಿಸಿದರು. 'ನರಭಕ್ಷಕ' ಹುಲಿ ಅವನಿಯನ್ನು ಹತ್ಯೆ ಮಾಡಿದ ಕಾರಣಕ್ಕಾಗಿ ಮಹಾರಾಷ್ಟ್ರದ ಪ್ರಧಾನ ಕಾರ್ಯದರ್ಶಿ ವಿಕಾಸ್ ಖರ್ಗೆ ಮತ್ತು ಇತರ ಎಂಟು ಮಂದಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಫೆ. 10ರಂದು ಪ್ರಕರಣ ದಾಖಲಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಗೋಡ್ಸೆ ಬೆಂಬಲಿಗ ಕಾಂಗ್ರೆಸ್ ಸೇರ್ಪಡೆ; ತೀವ್ರ ವಿರೋಧ

ಭೋಪಾಲ್/ ಗ್ವಾಲಿಯರ್ (ಪಿಟಿಐ): ಮಹಾತ್ಮಗಾಂಧಿಯ ಹಂತಕ ನಾಥೂರಾಮ್ ಗೋಡ್ಸೆಯ ಪ್ರತಿಮೆಯನ್ನು ಹಿಂದೂ ಮಹಸಭಾ ಕಚೇರಿಯಲ್ಲಿ ಸ್ಥಾಪಿಸಿ ಪೂಜೆ ಸಲ್ಲಿಸಿದ್ದ ಗ್ವಾಲಿಯರ್ ಮಹಾನಗರ ಪಾಲಿಕೆ ಸದಸ್ಯ ಬಾಬುಲಾಲ್ ಚೌರಾಸಿಯಾ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ. ಇದಕ್ಕೆ ಈಗ ಪಕ್ಷದೊಳಗೆ ಪರ ಮತ್ತು ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿವೆ.

'ನಾನು ನನ್ನ ಮಾತೃ ಪಕ್ಷಕ್ಕೆ ಮರಳಿದ್ದೇನೆ. ಹಿಂದೂ ಮಹಸಾಭಾ ನಾಯಕರು ನನ್ನನ್ನು ದಾರಿತಪ್ಪಿಸಿದ್ದರು. ನನ್ನ ಕೈಯಿಂದ ಗೋಡ್ಸೆ ಪ್ರತಿಮೆಗೆ ಪೂಜೆ ಸಲ್ಲಿಸುವಂತೆ ಮಾಡಿದ್ದರು. ಅದು ನಾನು ಮಾಡಿದ ತಪ್ಪು. ನನಗೆ ಅದರ ಅರಿವಾಗಿದೆ. ಕಳೆದ ಎರಡೂವರೆ ವರ್ಷಗಳಿಂದ ನಾನು ಯಾವುದೇ ಬಲಪಂಥೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲ್ಲ' ಎಂದು ಚೌರಾಸಿಯಾ ಪಕ್ಷ ಸೇರ್ಪಡೆಯ ನಂತರ ಹೇಳಿದ್ದಾರೆ.

ಚೌರಾಸಿಯಾ ಅವರ ಸೇರ್ಪಡೆ ವಿರೋಧಿಸಿರುವ ಕೇಂದ್ರದ ಮಾಜಿ ಸಚಿವ ಮತ್ತು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಯಾದವ್ ಅವರು 'ಬಾಪು, ನಾವು ಮುಜುಗರಕ್ಕೀಡಾಗಿದ್ದೇವೆ' ಎಂದು ಟ್ವೀಟ್ ಮಾಡಿದ್ದಾರೆ.

ಎನ್‌ಎಂಸಿಯಿಂದ ಪಾರದರ್ಶಕತೆ

ಚೆನ್ನೈ (ಪಿಟಿಐ): ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ)ಬಹಳಷ್ಟು ಪಾರದರ್ಶಕತೆಯನ್ನು ತರುವುದು ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಇಲ್ಲಿನ ತಮಿಳುನಾಡು ಡಾ.ಎಂ.ಜಿ.ಆರ್ ವೈದ್ಯಕೀಯ ವಿಶ್ವವಿದ್ಯಾಲಯದ 33ನೇ ಘಟಿಕೋತ್ಸವವನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಅವರು ಮಾತನಾಡಿದರು.

'ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಪರಿವರ್ತನೆ ತರಲು ಸರ್ಕಾರ ಶ್ರಮಿಸುತ್ತಿದೆ. ಇದರ ಭಾಗವಾಗಿ ಅಸ್ತಿತ್ವಕ್ಕೆ ತರಲಾಗಿರುವ ಆಯೋಗವು ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಿ, ಉತ್ತಮ ಮಾನವ ಸಂಪನ್ಮೂಲ ಲಭ್ಯವಾಗುವಂತೆ ಮಾಡುವುದು' ಎಂದು ಹೇಳಿದರು.

ವೇತನ ಹೆಚ್ಚಳ ಕೈಬಿಟ್ಟ ಸೆನೆಟ್

ವಾಷಿಂಗ್ಟನ್ (ಎಪಿ): ಕೋವಿಡ್ ಹಿನ್ನೆಲೆಯಲ್ಲಿ ಕನಿಷ್ಠ ವೇತನ ಹೆಚ್ಚಳ ಮಾಡಬೇಕು ಎಂಬ ಡೆಮಾಕ್ರಟಿಕ್ ಸಂಸದರ ಪ್ರಯತ್ನಕ್ಕೆ ಸೆನೆಟ್‌ನಲ್ಲಿ ತೀವ್ರ ಹಿನ್ನಡೆಯಾಗಿದೆ.

ಕೋವಿಡ್–19 ಹಿನ್ನೆಲೆಯಲ್ಲಿ ಅಮೆರಿಕದ ಅರ್ಹ ಪ್ರಜೆಗಳಿಗೆ ಪರಿಹಾರ ವಿತರಿಸಲು 1.9 ಟ್ರಿಲಿಯನ್ ಡಾಲರ್ ಪ್ಯಾಕೇಜ್‌ಗೆ ಸಂಬಂಧಿಸಿದ ಮಸೂದೆಯಿಂದ ಈ ಕನಿಷ್ಠ ವೇತನ ಹೆಚ್ಚಳ ಅಂಶವನ್ನು ಕೈಬಿಡಬೇಕು ಎಂದು ರಿಪಬ್ಲಿಕನ್ ಸದಸ್ಯರು ಪಟ್ಟು ಹಿಡಿದಿದ್ದೇ ಈ ಹಿನ್ನಡೆಗೆ ಕಾರಣ.

ಈ ಕುರಿತ ಚರ್ಚೆ ನಂತರ ಮಾತನಾಡಿದ, ಸಂಧಾನಕಾರರಾದ ಎಲಿಜಬೆತ್ ಮ್ಯಾಕ್‌ಡೊನೊ, 'ರಿಪಬ್ಲಿಕನ್ ಸಂಸದರಿಂದ ತೀವ್ರ ವಿರೋಧ ವ್ಯಕ್ತವಾದ ಕಾರಣ, ಕನಿಷ್ಠ ವೇತನಕ್ಕೆ ಸಂಬಂಧಿಸಿದ ವಿಷಯಕ್ಕೆ ಸಂಸತ್‌ನ ಅನುಮೋದನೆ ಸಿಕ್ಕಿಲ್ಲ' ಎಂದು ಪ್ರಕಟಿಸಿದರು.

ಪಶ್ಚಿಮ ಬಂಗಾಳ: ಇಡಿ, ಸಿಬಿಐ ದಾಳಿ

ಕೋಲ್ಕತ್ತ: ಬಹುಕೋಟಿ ಕಲ್ಲಿದ್ದಲು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳದ ಹಲವೆಡೆ ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ಜಂಟಿ ಶೋಧ ಕಾರ್ಯಾಚರಣೆ ನಡೆಸಿದ್ದಾರೆ. ಕೋಲ್ಕತ್ತದಲ್ಲಿ ಉದ್ಯಮಿ ರಣ್‌ಧೀರ್ ಕುಮಾರ್ ಬಾರ್ನ್ವಾಲ್ ಅವರ ಕಚೇರಿ ಮತ್ತು ನಿವಾಸದ ಮೇಲೆ ಸಿಬಿಐ ದಾಳಿ ನಡೆಸಿದೆ. ಇನ್ನೊಂದೆಡೆ ಕೋಲ್ಕತ್ತ, ದುರ್ಗಾಪುರ ಮತ್ತು ಅಸನ್‌ಸೋಲ್‌ನಲ್ಲಿ ಇ.ಡಿ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ಎರಡು ತನಿಖಾ ಸಂಸ್ಥೆಗಳು ಈ ಹಗರಣದ ಬಗ್ಗೆ ತನಿಖೆ ನಡೆಸುತ್ತಿವೆ. ಸಿಬಿಐ ಕ್ರಿಮಿನಲ್ ಆಯಾಮದಲ್ಲಿ ತನಿಖೆ ನಡೆಸುತ್ತಿದ್ದರೆ, ಇ.ಡಿಯು ಹಣ ಅಕ್ರಮ ವರ್ಗಾವಣೆ ಆಯಾಮದಲ್ಲಿ ಪ್ರಕರಣದ ವಿಚಾರಣೆಯನ್ನು ನಡೆಸುತ್ತಿದೆ.

ನೀರವ್ ಮೋದಿಗೆ ಜೈಲಿನ ವಿಶೇಷ ಕೊಠಡಿ ಸಜ್ಜು

ಮುಂಬೈ: ಬಹುಕೋಟಿ ವಂಚನೆ ಆರೋಪ ಎದುರಿಸುತ್ತಿರುವ ಉದ್ಯಮಿ ನೀರವ್ ಮೋದಿ ಅವರನ್ನು ಭಾರತಕ್ಕೆ ಹಸ್ತಾಂತರಿಸಲು ಬ್ರಿಟನ್ ಕೋರ್ಟ್ ಒಪ್ಪಿಗೆ ನೀಡುತ್ತಿದ್ದಂತೆಯೇ, ಇತ್ತ ಮುಂಬೈನ ಆರ್ಥರ್ ರಸ್ತೆಯ ಜೈಲಿನಲ್ಲಿ ಅವರಿಗಾಗಿ ವಿಶೇಷ ಕೊಠಡಿಯನ್ನು ಸಿದ್ಧಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ನೀರವ್ ಮೋದಿಯನ್ನು ಜೈಲಿನಲ್ಲಿರಿಸಲು ಸಿದ್ಧತೆಗಳು ಪೂರ್ಣಗೊಂಡಿವೆ. ಅವರನ್ನು ಮುಂಬೈಗೆ ಕರೆತಂದ ನಂತರ, ಜೈಲಿನ ಬ್ಯಾರಕ್ ಸಂಖ್ಯೆ 12ರ ಮೂರು ಕೊಠಡಿಗಳ ಪೈಕಿ ಒಂದರಲ್ಲಿ ಇರಿಸಲಾಗುವುದು. ಇದು ಅತಿ ಹೆಚ್ಚು ಭದ್ರತೆ ಹೊಂದಿರುವ ಬ್ಯಾರಕ್ ಆಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯಪ್ರದೇಶದ ನಿವೃತ್ತ ನ್ಯಾಯಾಧೀಶರೊಬ್ಬರ ವಿರುದ್ಧದ ಪ್ರಕರಣ: ವಿಚಾರಣೆ ಎದುರಿಸಲು ಸೂಚನೆ

'ಲೈಂಗಿಕ ಕಿರುಕುಳ ಪ್ರಕರಣ ಮುಚ್ಚಿಡಲು ಅಸಾಧ್ಯ'

ಪ್ರಜಾವಾಣಿ ವಾರ್ತೆ



ನವದೆಹಲಿ: 'ಲೈಂಗಿಕ ಕಿರುಕುಳದ ಪ್ರಕರಣಗಳನ್ನು ಯಾವುದೇ ರೀತಿಯಲ್ಲೂ ಮುಚ್ಚಿಡಲು ಸಾಧ್ಯವಾಗದು' ಎಂದು ಶುಕ್ರವಾರ ಸುಪ್ರೀಂ ಕೋರ್ಟ್ ಹೇಳಿದೆ.

ಲೈಂಗಿಕ ಕಿರುಕುಳದ ಪ್ರಕರಣವೊಂದರಲ್ಲಿ ಆರೋಪಿಯಾಗಿರುವ ಜಿಲ್ಲಾ ನಿವೃತ್ತ ನ್ಯಾಯಾಧೀಶರೊಬ್ಬರ ವಿರುದ್ಧ ಮಧ್ಯಪ್ರದೇಶ ಹೈಕೋರ್ಟ್ ಇಲಾಖಾ ಆಂತರಿಕ ತನಿಖೆಯನ್ನು ನಡೆಸಲು ನೀಡಿದ್ದ ಆದೇಶವನ್ನು ರದ್ದುಗೊಳಿಸಲು ಕೋರಿ ಸಲ್ಲಿಸಿದ್ದ ಮನವಿಯ ವಿಚಾರಣೆ ಮಾಡಲು ಸಹ ಕೋರ್ಟ್ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ವಿ. ರಾಮಸುಬ್ರಮಣಿಯನ್ ಅವರನ್ನೊಳಗೊಂಡ ನ್ಯಾಯಪೀಠವು, 'ನಾವು ಯಾವುದೇ ರೀತಿಯ ಲೈಂಗಿಕ ಕಿರುಕುಳದಂಥ ಪ್ರಕರಣಗಳನ್ನು ಮುಚ್ಚಿಡಲು ಆಸ್ಪದ ನೀಡುವುದಿಲ್ಲ' ಎಂದು ಸ್ಪಷ್ಟವಾಗಿ ಹೇಳಿದೆ.

ಮಧ್ಯಪ್ರದೇಶದ ನಿವೃತ್ತ ನ್ಯಾಯಾಧೀಶ ಶಂಭೂ ಸಿಂಗ್ ರಘುವಂಶಿ ಅವರು ನ್ಯಾಯಾಂಗದ ಕಿರಿಯ ಮಹಿಳಾ ಅಧಿಕಾರಿಯೊಬ್ಬರಿಗೆ ವ್ಯಾಟ್ಸ್‌ಆ್ಯಪ್‌ನಲ್ಲಿ ಅನುಚಿತವಾದ ಸಂದೇಶಗಳನ್ನು ಕಳುಹಿಸಿದ್ದರು. ಈ ಸಂಬಂಧ ಅಧಿಕಾರಿಯು ದೂರು ಸಲ್ಲಿಸಿದ್ದರು. ಹೀಗಾಗಿ, ಜಿಲ್ಲಾ ನಿವೃತ್ತ ನ್ಯಾಯಾಧೀಶರ ವಿರುದ್ಧ ಮಧ್ಯಪ್ರದೇಶ ಹೈಕೋರ್ಟ್ ಇಲಾಖಾ ಆಂತರಿಕ ತನಿಖೆಗೆ ಆದೇಶ ನೀಡಿತ್ತು. ಈ ಆದೇಶವನ್ನು ರದ್ದುಗೊಳಿಸಲು ಕೋರಿ ನಿವೃತ್ತ ನ್ಯಾಯಾಧೀಶರು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದರು. ಅಲ್ಲದೇ, ದೂರು ನೀಡಿದ್ದ ಅಧಿಕಾರಿಯು ತಮ್ಮ ಅರ್ಜಿಯನ್ನು ಹಿಂಪಡೆಯಲು ಮನವಿ ಮಾಡಿದ್ದರು.

ಫೆ. 16ರಂದು ನಡೆದ ನ್ಯಾಯಾಲಯದ ವಿಚಾರಣೆಯಲ್ಲಿ ನಿವೃತ್ತ ನ್ಯಾಯಾಧೀಶರು ತಮ್ಮ ಕಿರಿಯ ಅಧಿಕಾರಿಗೆ ವಾಟ್ಸ್ ಆ್ಯಪ್‌ನಲ್ಲಿ ಅನುಚಿತವಾದ ಸಂದೇಶಗಳನ್ನು ಕಳಹಿಸಿದ್ದನ್ನು ಒಪ್ಪಿಕೊಂಡಿದ್ದರು. ಅಲ್ಲದೇ ತಮ್ಮದು ಕೇವಲ 'ಫ್ಲರ್ಟಿಂಗ್' ಎಂದೂ ಸಮರ್ಥನೆ ಮಾಡಿಕೊಂಡಿದ್ದರು.

ಮುಖ್ಯ ನ್ಯಾಯಮೂರ್ತಿ ಬೊಬಡೆ ನೇತೃತ್ವದ ನ್ಯಾಯಪೀಠವು, 'ನೀವೀಗ (ನಿವೃತ್ತ ನ್ಯಾಯಾಧೀಶ) ತೆಳುವಾದ ಹಗ್ಗದ ಮೇಲಿದ್ದೀರಿ. ನೀವು ಯಾವಾಗ ಬೇಕಾದರೂ ಕೆಳಗೆ ಬೀಳುವ ಸಾಧ್ಯತೆ ಇದೆ. ಆಂತರಿಕ ತನಿಖೆ ವಿಚಾರಣೆಯಲ್ಲಿ ನೀವು ಖುಲಾಸೆಗೊಳ್ಳಬಹುದು. ಆದರೆ, ನೀವು ಈಗಾಗಲೇ ಈ ಪರಿಸ್ಥಿತಿಯಲ್ಲಿ ಶಿಕ್ಷೆಗೊಳಗಾಗಿದ್ದೀರಿ' ಎಂದು ತಿಳಿಸಿದ ಪೀಠವು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ.

ಕಿರಿಯ ಅಧಿಕಾರಿಯ ಜತೆ 'ಫ್ಲರ್ಟ್' ಮಾಡುವುದು ನ್ಯಾಯಾಧೀಶರ ನಡವಳಿಕೆಗೆ ತಕ್ಕುದಲ್ಲ. ಇಂತಹ ನಡವಳಿಕೆಯನ್ನು ಸಹಿಸಲು ಸಾಧ್ಯವಿಲ್ಲ ಎಂದು ಪೀಠವು ಹೇಳಿದೆ. ಬಳಿಕ, ನಿವೃತ್ತ ನ್ಯಾಯಾಧೀಶರ ಪರ ವಕೀಲರು ತಮ್ಮ ಅರ್ಜಿಯನ್ನು ವಾಪಸ್ ಪಡೆದರು.

'ಆರೋಪಿ ನಿವೃತ್ತ ನ್ಯಾಯಾಧೀಶರು 32 ವರ್ಷಗಳ ವೃತ್ತಿ ಬದುಕನ್ನು ಪೂರೈಸಿದ್ದಾರೆ. ಅಲ್ಲದೇ, ಅವರು ಹೈಕೋರ್ಟ್‌ಗೆ ನೇಮಕವಾಗುವ ಸಾಧ್ಯತೆಯೂ ಇತ್ತು. ಆದರೆ, 2018ರಲ್ಲಿ ಅವರ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ ದಾಖಲಾಗಿದ್ದರಿಂದ ಅವರ ವಿರುದ್ಧ ತನಿಖೆಯನ್ನು ಕೈಗೊಳ್ಳಲಾಯಿತು. ಇದರಿಂದಾಗಿ ನಿವೃತ್ತ ನ್ಯಾಯಾಧೀಶರು ತಮ್ಮ ನಿವೃತ್ತಿಯ ಅಂಚಿನಲ್ಲಿ ಮುಜುಗರಕ್ಕೊಳಗಾಗಬೇಕಾಯಿತು' ಎಂದು ಆರೋಪಿ ಪರ ವಕೀಲರು ಅರ್ಜಿಯಲ್ಲಿ ತಿಳಿಸಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,097
ಇಂದಿನ ಅಂತ್ಯ	14,529
▲	568
ದಿನದ ಗರಿಷ್ಠ	14,919

ವಿನಿಮಯ ದರ

$ ಡಾಲರ್	73.47
£ ಪೌಂಡ್	101.82
€ ಯುರೊ	88.75
¥ ಯೆನ್ (100ಕ್ಕೆ)	69.31

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹1185(1185)
ಸೂರ್ಯಕಾಂತಿ (ರಿಫೈನ್ಡ್)	₹1570 (1550)
ಪಾಮೋಲಿನ್	₹1170 (1172)

ಕೊಬ್ಬರಿ ಧಾರಣೆ

ಬೆಂಗಳೂರು	₹14500-15200
ತುರುವೇಕೆರೆ	₹15500-15500

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹2400-2600
ಮಧ್ಯಮ	₹2000-2400
ಸಣ್ಣ	₹1500-2000

ಚಿನ್ನದ ಬೆಲೆಯಲ್ಲಿ ₹ 342ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಶುಕ್ರವಾರದ ವಹಿವಾಟಿನಲ್ಲಿ ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆ ₹ 342ರಷ್ಟು ತಗ್ಗಿ, ₹ 45,599ಕ್ಕೆ ಮಾರಾಟವಾಯಿತು. ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 2,007ರಷ್ಟು ಕಡಿಮೆ ಆಗಿ ₹ 67,419ಕ್ಕೆ ಮಾರಾಟವಾಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನ, ಬೆಳ್ಳಿಯ ಬೆಲೆ ತಗ್ಗಿದ್ದು ದೇಶಿ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆಗೆ ಕಾರಣವಾಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

26-2-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	1170 (1165)
ಪಾಮ್ ವಾರದ ಡೆಲಿವರಿ	1168 (1170)
ಸೂರ್ಯಕಾಂತಿ ಎಣ್ಣೆ ಕಚ್ಚಾ	1540 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,400 (46,150)
ಬೆಳ್ಳಿ ಕೆ.ಜಿ
68,600 (70,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೋವಿಡ್ ಲಸಿಕೆ ಪಡೆದಿದ್ದ 'ಡಿ' ದರ್ಜೆ ನೌಕರ ಸಾವು

ಹಾಸನ: ಕೋವಿಡ್ ಲಸಿಕೆ ಪಡೆದ 20 ದಿನಗಳ ಬಳಿಕ, ನಗರದ ಸಿಎಸ್‌ಐ ಮಿಷನ್ ಆಸ್ಪತ್ರೆಯ 'ಡಿ' ದರ್ಜೆ ನೌಕರ ಶುಕ್ರವಾರ ಮೃತಪಟ್ಟಿದ್ದಾರೆ.

ಸುರೇಶ್

ಬೇಲೂರು ತಾಲ್ಲೂಕಿನ ನೆಟ್ಟೆಕೆರೆ ಗ್ರಾಮದ ಸುರೇಶ್ (44) ಬೆಳಿಗ್ಗೆ ತಮ್ಮ ಮನೆಯಲ್ಲಿ ಅಸ್ವಸ್ಥಗೊಂಡಿದ್ದರು, ಅವರನ್ನು ಮಿಷನ್ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ.

'ಸುರೇಶ್‌ಗೆ ಯಾವುದೇ ಕಾಯಿಲೆ ಇರಲಿಲ್ಲ. ಕೋವಿಡ್ ಲಸಿಕೆಯ ಅಡ್ಡ ಪರಿಣಾಮದಿಂದಲೇ ಮೃತಪಟ್ಟಿರುವ ಸಾಧ್ಯತೆ ಇದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಮೃತರ ಸಂಬಂಧಿಕರು ಆಗ್ರಹಿಸಿದರು.

ಲಗೇಜ್ ರಹಿತ ಪ್ರಯಾಣ ಅಗ್ಗ

ನವದೆಹಲಿ: ವಿಮಾನದಲ್ಲಿ ಲಗೇಜ್ (ಚೆಕ್ ಇನ್ ಬ್ಯಾಗೇಜ್) ರಹಿತವಾಗಿ ಪ್ರಯಾಣ ಮಾಡುವ ಪ್ರಯಾಣಿಕರಿಗೆ ಇನ್ನು ಮುಂದೆ ಟಿಕೆಟ್‌ಗಳ ದರ ಅಗ್ಗವಾಗಲಿದೆ.

ನಾಗರಿಕ ವಿಮಾನಯಾನ ನಿಯಂತ್ರಕ ಡಿಜಿಸಿಎ ಈಗ ವಿಮಾನಯಾನ ಸಂಸ್ಥೆಗಳಿಗೆ ಕೆಲವು ಸೇವೆಗಳನ್ನು ತೆರೆದಿಡಲು ಅವಕಾಶ ಮಾಡಿಕೊಟ್ಟಿದ್ದು, ಆ ಸೇವೆಗಳಿಗೆ ಆಯ್ಕೆ ಆಧಾರದ ಮೇಲೆ ಶುಲ್ಕ ವಿಧಿಸಲಿದೆ. ದೇಶೀಯ ವಿಮಾನಗಳ ಪ್ರಯಾಣ ಶುಲ್ಕ ಹೆಚ್ಚಳಕ್ಕೆ ಸರ್ಕಾರ ಅನುಮೋದನೆ ನೀಡಿದ ಕೆಲವೇ ವಾರಗಳ ನಂತರ ಡಿಜಿಸಿಎ (ನಾಗರಿಕ ವಿಮಾನಯಾನ ನಿರ್ದೇಶನಾಲಯ) ಈ ಹೊಸ ಆಯ್ಕೆ ಸೇವೆಯನ್ನು ಪ್ರಕಟಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಶೇ 0.4ರಷ್ಟು ಬೆಳವಣಿಗೆ

ಹಿಂಜರಿತದಿಂದ ಹೊರಬಂದ ಅರ್ಥ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ತಯಾರಿಕೆ, ಕಟ್ಟಡ ನಿರ್ಮಾಣ ಮತ್ತು ಕೃಷಿ ವಲಯಗಳಲ್ಲಿ ಚೇತರಿಕೆ
- ಬೆಳವಣಿಗೆಯ ಹಾದಿಗೆ ಮರಳಿದ ಅರ್ಥ ವ್ಯವಸ್ಥೆ
- ಹಬ್ಬದ ಸಂದರ್ಭದಲ್ಲಿ ಕಂಡುಬಂದ ಬೇಡಿಕೆ: ಶೇ 0.4ರಷ್ಟು ಬೆಳವಣಿಗೆ

ನವದೆಹಲಿ: ತಯಾರಿಕೆ, ಕಟ್ಟಡ ನಿರ್ಮಾಣ ಮತ್ತು ಕೃಷಿ ವಲಯಗಳಲ್ಲಿ ಚೇತರಿಕೆ ಕಂಡುಬಂದ ಕಾರಣದಿಂದಾಗಿ ದೇಶದ ಅರ್ಥ ವ್ಯವಸ್ಥೆಯು ಡಿಸೆಂಬರ್ ತ್ರೈಮಾಸಿಕದಲ್ಲಿ ಬೆಳವಣಿಗೆಯ ಹಾದಿಗೆ ಮರಳಿದೆ. ಹಿಂಜರಿತದ ಸ್ಥಿತಿಯಿಂದ ಹೊರಬಂದಿದೆ. ಇದಕ್ಕೂ ಹಿಂದಿನ ಸತತ ಎರಡು ತ್ರೈಮಾಸಿಕಗಳಲ್ಲಿ ದೇಶದ ಅರ್ಥ ವ್ಯವಸ್ಥೆಯು ಹಿಂಜರಿತ ಅನುಭವಿಸಿತ್ತು.

ತಯಾರಿಕೆ, ಕಟ್ಟಡ ನಿರ್ಮಾಣ ಮತ್ತು ಕೃಷಿ ವಲಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಗಾರರ ಅಗತ್ಯವಿದೆ. ಈ ಮೂರು ವಲಯಗಳು ದೇಶದಲ್ಲಿ ಉದ್ಯೋಗ ಸೃಷ್ಟಿಗೆ ನೀಡುವ ಕೊಡುಗೆ ದೊಡ್ಡದು. ಲಾಕ್‌ಡೌನ್ ನಂತರ ಆರ್ಥಿಕ ಚಟುವಟಿಕೆಗಳಿಗೆ ಹಂತಹಂತವಾಗಿ ಅವಕಾಶ ಕಲ್ಪಿಸಿದ್ದು, ಸರ್ಕಾರ ಮಾಡುವ ವೆಚ್ಚಗಳು ಹೆಚ್ಚಾಗಿದ್ದು, ಹಬ್ಬಗಳ ಸಂದರ್ಭದಲ್ಲಿ ಕಂಡುಬಂದ ಬೇಡಿಕೆಯು ಜಿಡಿಪಿ ಶೇ 0.4ರಷ್ಟು ಬೆಳವಣಿಗೆ ಕಾಣಲು ನೆರವಾದವು. ದೇಶದ ಅರ್ಥ ವ್ಯವಸ್ಥೆಯು ಜೂನ್ ತ್ರೈಮಾಸಿಕದಲ್ಲಿ ಶೇ (–)24.4ರಷ್ಟು, ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ (–)7.3ರಷ್ಟು ಕುಸಿತ ದಾಖಲಿಸಿತ್ತು.

ಸರ್ಕಾರ ಕೈಗೊಂಡ ಆರ್ಥಿಕ ಚೇತರಿಕೆಯ ಕ್ರಮಗಳಿಂದಾಗಿ, ಕೋವಿಡ್–19 ಸಾಂಕ್ರಾಮಿಕಕ್ಕೆ ಅಭಿವೃದ್ಧಿಪಡಿಸಿರುವ ಲಸಿಕೆಯು ತಂದಿರುವ ಆಶಾಭಾವನೆಯಿಂದಾಗಿ ಅರ್ಥ ವ್ಯವಸ್ಥೆಯು ತ್ವರಿತ ಗತಿಯಲ್ಲಿ ಬೆಳವಣಿಗೆಯ ಹಳಿಗೆ ಮರಳಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಆದರೆ, ಬೆಳವಣಿಗೆಯ ಗತಿಯನ್ನು ಕಾಯ್ದುಕೊಳ್ಳಬೇಕು ಎಂದಾದರೆ ಸಾಂಕ್ರಾಮಿಕ ಮತ್ತೆ ಹರಡುವುದನ್ನು ತಡೆಯಬೇಕು ಎಂದು ಹೇಳಿದ್ದಾರೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕೃಷಿ ವಲಯವು ಶೇ 3.9ರಷ್ಟು ಬೆಳವಣಿಗೆ ದಾಖಲಿಸಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಇದು ಶೇ 3.4ರಷ್ಟು ಬೆಳವಣಿಗೆ ಕಂಡಿತ್ತು. ಡಿಸೆಂಬರ್ ತ್ರೈಮಾಸಿಕದಲ್ಲಿ ತಯಾರಿಕಾ ವಲಯವು ಶೇ 1.6ರಷ್ಟು ಬೆಳವಣಿಗೆ ಕಂಡಿದೆ. ಸರಿಸುಮಾರು ಆರು ಕೋಟಿ ಜನರಿಗೆ ಉದ್ಯೋಗ ಕಲ್ಪಿಸಿರುವ ನಿರ್ಮಾಣ ಕ್ಷೇತ್ರವು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 6.2ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ.

ಸಾಂಕ್ರಾಮಿಕ ಅಪ್ಪಳಿಸುವವರೆಗೂ ದೇಶದ ಅರ್ಥ ವ್ಯವಸ್ಥೆಯ ಮುಖ್ಯ ಸ್ತಂಭಗಳಲ್ಲಿ ಒಂದಾಗಿದ್ದ ಸೇವಾ ವಲಯವು, ನಕಾರಾತ್ಮಕ ಬೆಳವಣಿಗೆಯ ಹಾದಿಯಲ್ಲಿ ಮುಂದುವರಿದಿದ್ದು, ಶೇ 7.7ರಷ್ಟು ಕುಸಿತ ದಾಖಲಿಸಿದೆ.

'ಅಂತೂ ಆರ್ಥಿಕತೆಯು ಚೇತರಿಕೆಯ ಹಾದಿಗೆ ಮರಳಿದೆ. ಆದರೆ, ಈ ಬೆಳವಣಿಗೆಯು ಎಷ್ಟು ಸ್ಥಿರ ಎಂಬುದು ಕೊರೊನಾ ಎರಡನೆಯ ಅಲೆಯನ್ನು ಹೇಗೆ ನಿಯಂತ್ರಿಸಲಾಗುತ್ತದೆ ಎಂಬುದನ್ನು ಆಧರಿಸಿದೆ. ಶಿಕ್ಷಣ, ಹೋಟೆಲ್ ಮತ್ತು ರೆಸ್ಟೊರೆಂಟ್, ಪ್ರವಾಸ ಮತ್ತು ಪ್ರಯಾಣ ವಲಯಗಳು ಇನ್ನೂ ಪೂರ್ತಿಯಾಗಿ ತೆರೆದುಕೊಳ್ಳಬೇಕಿವೆ. ಈಗಿನ ಸಂದರ್ಭದಲ್ಲಿ ಕೆಲವೆಡೆ ಕಿರು ಅವಧಿಯ ಲಾಕ್‌ಡೌನ್ ಕ್ರಮಗಳು ಜಾರಿಯಲ್ಲಿ ಇವೆ. ಇಂತಹ ಕ್ರಮಗಳು ತೀವ್ರಗೊಂಡರೆ ನಾಲ್ಕನೆಯ ತ್ರೈಮಾಸಿಕದ ಬೆಳವಣಿಗೆ ದರದ ಮೇಲೆ ಪರಿಣಾಮ ಉಂಟಾಗಬಹುದು' ಎಂದು ಎಮ್‌ಕೆ ವೆಲ್ತ್ ಸಂಸ್ಥೆಯ ಸಂಶೋಧನಾ ವಿಭಾಗದ ಮುಖ್ಯಸ್ಥ ಜೋಸೆಫ್ ಥಾಮಸ್ ಅಭಿಪ್ರಾಯ ವ್ಯಕ್ತಪಡಿಸಿದರು.

2020–21 ಹಣಕಾಸು ವರ್ಷವನ್ನು ಪೂರ್ತಿಯಾಗಿ ಪರಿಗಣಿಸಿದರೆ ಅರ್ಥ ವ್ಯವಸ್ಥೆಯು ಶೇ (–)8ರಷ್ಟು ಕುಸಿಯಲಿದೆ ಎಂದು ಶುಕ್ರವಾರ ಬಿಡುಗಡೆ ಮಾಡಲಾದ ಎರಡನೆಯ ಅಂದಾಜಿನಲ್ಲಿ ಹೇಳಲಾಗಿದೆ. ಮೊದಲನೆಯ ಅಂದಾಜಿನಲ್ಲಿ, ಕುಸಿತವು ಶೇ (–)7.7ರಷ್ಟು ಇರಲಿದೆ ಎಂದು ಹೇಳಲಾಗಿತ್ತು.

ಚಿನ್ನದ ಗಣಿ ಆಧುನೀಕರಣ ಯೋಜನೆ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ (ರಾಯಚೂರು): 'ಕಡಿಮೆ ವೆಚ್ಚದಲ್ಲಿ ಹೆಚ್ಚು ಚಿನ್ನ ಉತ್ಪಾದಿಸಲು ಹಟ್ಟಿ ಚಿನ್ನದ ಗಣಿಯ ಆಧುನೀಕರಣ ಮತ್ತು ವಿಸ್ತರಣೆ ಯೋಜನೆ ತೆಗೆದುಕೊಳ್ಳಲಾಗಿದೆ' ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಹೇಳಿದರು.

ಇಲ್ಲಿಯ ಗಣಿ ಕಂಪನಿಗೆ ಶುಕ್ರವಾರ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನುರಿತ ಕಾರ್ಮಿಕರು, ಎಂಜಿನಿಯರರು ಮತ್ತು ಅಧಿಕಾರಿಗಳ ತಂಡವನ್ನು ದಕ್ಷಿಣ ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ದೇಶಗಳ ಗಣಿ ಅಧ್ಯಯನಕ್ಕೆ ಕಳುಹಿಸಲಾಗುವುದು' ಎಂದರು.

'ಹಟ್ಟಿ ಚಿನ್ನದ ಗಣಿ ಸದ್ಯ ವಾರ್ಷಿಕ 1,700 ಕೆ.ಜಿ ಚಿನ್ನ ಉತ್ಪಾದಿಸುವ ಸಾಮರ್ಥ್ಯ ಹೊಂದಿದ್ದು, ಈ ವರ್ಷ ₹200 ಕೋಟಿ ಲಾಭ ಮಾಡಿದೆ. ಆಧುನೀಕರಣದಿಂದ ಇನ್ನೂ ಹೆಚ್ಚಿನ ಲಾಭ ಸಾಧ್ಯವಾಗಲಿದೆ. ಕಂಪನಿಯಲ್ಲಿ 371-ಜೆ ಅಡಿಯಲ್ಲಿ ಶೇ 90 ರಷ್ಟು ಉದ್ಯೋಗಗಳನ್ನು ಈ ಭಾಗದ ಜನರಿಗೆ ಕೊಡುವ ಉದ್ದೇಶ ಹೊಂದಲಾಗಿದೆ' ಎಂದು ಹೇಳಿದರು.

ಡಿ.ಸಿ ಕಚೇರಿ ಎದುರೇ ಕ್ರಿಮಿನಾಶಕ ಸೇವನೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕಲ್ಯಾಣ ಕರ್ನಾಟಕ ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ನಡೆದ ಪ್ರತಿಭಟನೆ ವೇಳೆ, ಜೇವರ್ಗಿ ತಾಲ್ಲೂಕು ಸುಂಬಡ ಗ್ರಾಮದ ಸಿದ್ಧಗಂಗಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರಕಾಶ ಸುಂಬಡ ಕ್ರಿಮಿನಾಶಕ ಕುಡಿದು ಆತ್ಮಹತ್ಯೆಗೆ ಯತ್ನಿಸಿದರು.

ಸೇಡಂನ ವಿಶ್ವಗಂಗಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಂಕರ ಬಿರಾದರ (49) ಅವರು ಸಾಲ ಬಾಧೆ ತಾಳದೇ ಕಲಬುರ್ಗಿಯಲ್ಲಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಾವಿಗೆ ಸರ್ಕಾರದ ಧೋರಣೆಯೇ ಕಾರಣ ಎಂದು ಆರೋಪಿಸಿ, ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಮಧ್ಯಾಹ್ನದವರೆಗೂ ಜಿಲ್ಲಾಧಿಕಾರಿ, ಜನಪ್ರತಿನಿಧಿಗಳು ಸ್ಥಳಕ್ಕೆ ಬರಲಿಲ್ಲ. ಇದರಿಂದ ಪ್ರತಿಭಟನಕಾರರು ತೀವ್ರ ಆಕ್ರೋಶಗೊಂಡರು. ನಂತರ ಬಂದ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ, ಪ್ರತಿಭಟನಕಾರರ ದೂರು ಆಲಿಸುತ್ತಿದ್ದರು.

ವೈಕುಂಠ ಸಮಾರಾಧನೆ



ಶ್ರೀ ಸಿ. ವೆಂಕಟಸ್ವಾಮಿ ರೆಡ್ಡಿ

ಇವರು ದಿ. 18.2.2021ನೇ ಗುರುವಾರ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ತತ್ಸಂಬಂಧ ಉತ್ತರ ಕ್ರಿಯಾದಿ ದಿ. 28.2.2021 ಭಾನುವಾರದಂದು ಬೆಳಿಗ್ಗೆ 9.00 ಪುಣ್ಯಾಹ ಮತ್ತು 12.00 ವೈಕುಂಠ ಸಮಾರಾಧನೆಯನ್ನು ಏರ್ಪಡಿಸಲಾಗಿದ್ದು ತಾವುಗಳೆಲ್ಲರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕಾಗಿ ವಿನಂತಿ.

ದುಃಖತಪ್ತರು:
ಶ್ರೀಮತಿ ಜಿ.ಸಿ. ಅಶ್ವತ್ಥಮ್ಮ ಮತ್ತು ಮಕ್ಕಳು

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

1,939 ಅಂಶ ಇಳಿಕೆ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 1,939 ಅಂಶಗಳ ಕುಸಿತ ಕಂಡಿತು. ಹಿಂದಿನ ವರ್ಷದ ಮೇ 4ರ ನಂತರ ಸೆನ್ಸೆಕ್ಸ್ ಒಂದೇ ದಿನದಲ್ಲಿ ಕಂಡ ಅತಿದೊಡ್ಡ ಕುಸಿತ ಇದು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕವಾದ ನಿಫ್ಟಿ 568 ಅಂಶಗಳ ಇಳಿಕೆ ದಾಖಲಿಸಿತು.

ಜಾಗತಿಕ ಮಟ್ಟದಲ್ಲಿ ಬಾಂಡ್ ಮಾರುಕಟ್ಟೆಯಲ್ಲಿ ಉಂಟಾದ ತಳಮಳ, ಅಮೆರಿಕ ಮತ್ತು ಸಿರಿಯಾ ನಡುವೆ ಬಿಕ್ಕಟ್ಟು ತೀವ್ರಗೊಂಡಿರುವುದು ಹೂಡಿಕೆದಾರರ ಮೇಲೆ ಪ್ರಭಾವ ಬೀರಿದವು.

ಬ್ಯಾಂಕಿಂಗ್ ವಲಯದ ಷೇರುಗಳು ಅತಿಹೆಚ್ಚಿನ ಇಳಿಕೆ ಕಂಡವು. ಹಣಕಾಸು ಮತ್ತು ದೂರಸಂಪರ್ಕ ವಲಯದ ಕಂಪನಿಗಳ ಷೇರುಗಳ ಮೌಲ್ಯದಲ್ಲಿ ಕೂಡ ದೊಡ್ಡ ಮಟ್ಟದ ಇಳಿಕೆ ಆಯಿತು. 'ಬಾಂಡ್ ಗಳಿಕೆಯಲ್ಲಿನ ತೀವ್ರ ಹೆಚ್ಚಳವು ಜಾಗತಿಕ ಮಾರುಕಟ್ಟೆಗಳಲ್ಲಿ ಕುಸಿತಕ್ಕೆ ದಾರಿ ಮಾಡಿಕೊಟ್ಟಿತು. ಇದರ ಪರಿಣಾಮವು ದೇಶಿ ಮಾರುಕಟ್ಟೆಯ ಮೇಲೆಯೂ ಆಯಿತು. ಅಮೆರಿಕ ಮತ್ತು ಸಿರಿಯಾ ನಡುವಿನ ಬಿಕ್ಕಟ್ಟು ಉಲ್ಬಣಿಸಿದ್ದು ಷೇರುಗಳ ಮಾರಾಟಕ್ಕೆ ಇನ್ನಷ್ಟು ತೀವ್ರತೆ ತಂದುಕೊಟ್ಟಿತು' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಕುಸಿತ ಕಂಡರೂ, ಅವುಗಳು ಸೆನ್ಸೆಕ್ಸ್‌ನಷ್ಟು ತೀವ್ರವಾಗಿ ಇಳಿಯಲಿಲ್ಲ. ಹೂಡಿಕೆದಾರರು ಆ ವಲಯದ ಷೇರುಗಳಲ್ಲಿ ಹೆಚ್ಚಿನ ವಿಶ್ವಾಸ ತೋರಿಸಿದರು ಎಂದು ನಾಯರ್ ಹೇಳಿದ್ದಾರೆ. ಏಷ್ಯಾದ ಇತರ ಷೇರು ಮಾರುಕಟ್ಟೆಗಳು ಕೂಡ ಭಾರಿ ಇಳಿಕೆ ಕಂಡವು.

ಕುಸಿದ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ ಶುಕ್ರವಾರ 104 ಪೈಸೆಗಳಷ್ಟು ಇಳಿಕೆ ಆಗಿದೆ. 2019ರ ಆಗಸ್ಟ್ 5ರ ನಂತರ ರೂಪಾಯಿಯು ಒಂದೇ ದಿನದಲ್ಲಿ ಕಂಡ ಅತಿದೊಡ್ಡ ಕುಸಿತ ಇದು.

ಶುಕ್ರವಾರದ ಅಂತ್ಯಕ್ಕೆ ಡಾಲರ್ ಎದುರು ರೂಪಾಯಿ ಮೌಲ್ಯ 73.47 ಆಗಿತ್ತು. ದಿನದ ವಹಿವಾಟಿನ ನಡುವಿನಲ್ಲಿ ರೂಪಾಯಿಯು 73.51ರ ಮಟ್ಟಕ್ಕೂ ಕುಸಿದಿತ್ತು. ನಂತರ ತುಸು ಚೇತರಿಕೆ ದಾಖಲಿಸಿತು.

'ಅಮೆರಿಕದಲ್ಲಿ ಬಾಂಡ್ ಗಳಿಕೆಯು ಏರಿಕೆ ಕಂಡಿದೆ. ಅಲ್ಲಿನ ಅರ್ಥ ವ್ಯವಸ್ಥೆಯು ಸಹಜ ಸ್ಥಿತಿಗೆ ಬರುತ್ತಿರುವ ಸೂಚನೆಗಳು ಇವೆ. ಇದರಿಂದಾಗಿ ಡಾಲರ್ ಮೌಲ್ಯ ಹೆಚ್ಚಾಗಿದೆ' ಎಂದು ರೆಲಿಗೇರ್ ಬ್ರೋಕಿಂಗ್ ಸಂಸ್ಥೆಯ ಇಂಧನ ಮತ್ತು ಕರೆನ್ಸಿ ಸಂಶೋಧನಾ ವಿಭಾಗದ ಉಪಾಧ್ಯಕ್ಷೆ ಸುಗಂಧಾ ಸಚದೇವ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1050
ನಡುಗೋಲು	1150-1250
ರಾಶಿ	1400-1450
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2000-2050
ಕಾಳು ಮೆಣಸು	325
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಬೆಳ್ತಂಗಡಿ	
ಕೋಕ	17000-26000
ಹೊಸತು	20000-38000
ಚಿತ್ರದುರ್ಗ	
ಅಪಿ	42119-42559
ಬೆಟ್ಟೆ	33429-33899
ಕೆಂಪುಗೋಟು	29509-29910
ರಾಶಿ	41639-42069
ಹೊಸನಗರ	
ಬಿಳಿಗೋಟು	17419-20619
ಚಾಲಿ	30609-33399
ಕೆಂಪುಗೋಟು	28899-34399
ರಾಶಿ	39699-43299
ಸಿಪ್ಪೆಗೋಟು	15669-16599
ಕಾರ್ಕಳ	
ಹೊಸತು	35000-40500
ಹಳತು	45000-50500
ಕುಮಟಾ	
ಚಿಪ್ಪು	24569-29099
ಕೋಕ	18099-28509
ಫ್ಯಾಕ್ಟರಿ	14509-18611
ಹಳೆಚಾಲಿ	39099-41169
ಹೊಸಚಾಲಿ	32569-36379
ಕುಂದಾಪುರ	
ಹಳೆಚಾಲಿ	40000-50500
ಹೊಸಚಾಲಿ	33000-40500
ಪುತ್ತೂರು	
ಕೋಕ	9500-24000
ಹೊಸತು	28500-40500
ಸಾಗರ	
ಬಿಳಿಗೋಟು	22890-23685
ಚಾಲಿ	30899-33399
ಕೋಕ	29299-29299
ರಾಶಿ	41799-42399
ಸಿಪ್ಪೆಗೋಟು	17299-17299
ಸಿದ್ದಾಪುರ	
ಬಿಳಿಗೋಟು	21699-28889
ಕೋಕ	18660-29108
ಹಳೆಚಾಲಿ	35399-41369
ಹೊಸಚಾಲಿ	33699-38809
ಕೆಂಪುಗೋಟು	26889-30289
ರಾಶಿ	40389-42099
ತಟ್ಟಿಬೆಟ್ಟೆ	29099-39899
ಯಲ್ಲಾಪುರ	
ಅಪಿ	48779-52399
ಬಿಳಿಗೋಟು	20255-29999
ಚಾಲಿ	30612-41311
ಕೋಕ	19612-28671
ಕೆಂಪುಗೋಟು	25000-33799
ರಾಶಿ	39911-47675
ತಟ್ಟಿಬೆಟ್ಟೆ	34969-39800
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	42769-44199
ಗೊರಬಲು	15159-31899
ರಾಶಿ	38289-42909
ಸರಕು	47109-74540
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	200-401
ದ್ವಿತಳಿ (ಬಿ.ವಿ)	316-495

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10175	---	10200	---ಸೆಂಟ್ಸ್
ಎಸಿ	4100	---	4020	
ಆರ್‌ಪಿ	5400	---	5275	
ಆರ್‌ಸಿ	3000	---	3025	--- ಡಾಲರ್ಸ್

ಉದ್ದಿಮೆಗಳಿಗೆ ಸಾಲ ವಿತರಣೆ ಹೆಚ್ಚಲಿ: ಮೋದಿ

ನವದೆಹಲಿ (ಪಿಟಿಐ): ವೇಗವಾಗಿ ಚೇತರಿಕೆ ಕಾಣುತ್ತಿರುವ ಅರ್ಥ ವ್ಯವಸ್ಥೆಯ ಅಗತ್ಯಗಳನ್ನು ಪೂರೈಸಲು, ಉದ್ಯಮ ವಲಯಕ್ಕೆ ಸಾಲ ವಿತರಣೆಯನ್ನು ಹೆಚ್ಚಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಹಣಕಾಸು ತಂತ್ರಜ್ಞಾನ ಹಾಗೂ ನವೋದ್ಯಮ ವಲಯದ ಕಂಪನಿಗಳ ಅಗತ್ಯಗಳಿಗೆ ಅನುಗುಣವಾಗಿ ಹಣಕಾಸಿನ ಉತ್ಪನ್ನಗಳನ್ನು ಒದಗಿಸಬೇಕು ಎಂದೂ ಅವರು ಪ್ರತಿಪಾದಿಸಿದರು.

ಖಾಸಗಿ ವಲಯವನ್ನು ಉತ್ತೇಜಿಸುವ ಪ್ರಯತ್ನದಲ್ಲಿ ಸರ್ಕಾರ ತೊಡಗಿದ್ದರೂ, ಬ್ಯಾಂಕಿಂಗ್ ಮತ್ತು ವಿಮಾ ವಲಯಗಳಲ್ಲಿ ಬಡವರಿಗೆ ನೆರವಾಗುವ ಉದ್ದೇಶದಿಂದ ಸರ್ಕಾರಿ ಸ್ವಾಮ್ಯದ ಕಂಪನಿಗಳು ಇರಬೇಕು ಎಂದರು.

ಹಣಕಾಸು ಸೇವೆಗಳಿಗೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಮಾಡಲಾದ ಘೋಷಣೆಗಳ ಕುರಿತ ವೆಬಿನಾರ್‌ನಲ್ಲಿ ಮಾತನಾಡಿದ ಮೋದಿ ಅವರು, 'ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳು ಹಾಗೂ ನವೋದ್ಯಮಗಳಿಗೆ ಸಾಲ ವಿತರಣೆ ವಿಸ್ತರಿಸುವುದು ಅಗತ್ಯ. ಸರ್ಕಾರವು ಸುಧಾರಣೆಗಳನ್ನು ತರುತ್ತಿದೆ; ಕೃಷಿ, ಕಲ್ಲಿದ್ದಲು ಮತ್ತು ಬಾಹ್ಯಾಕಾಶದಂತಹ ಕ್ಷೇತ್ರಗಳನ್ನು ಮುಕ್ತಗೊಳಿಸಿದೆ. ಈಗ ಹಣಕಾಸು ವಲಯವು ಗ್ರಾಮೀಣ ಹಾಗೂ ಸಣ್ಣ ನಗರ ಪ್ರದೇಶಗಳ ಆಕಾಂಕ್ಷೆಗಳನ್ನು ಅರ್ಥ ಮಾಡಿಕೊಂಡು, ಆ ಪ್ರದೇಶಗಳು ಆತ್ಮನಿರ್ಭರ ಭಾರತದ ಪಾಲಿಗೆ ಶಕ್ತಿಯಾಗುವಂತೆ ಮಾಡಬೇಕಿದೆ' ಎಂದರು.


ಮೋದಿ

'10–12 ವರ್ಷಗಳ ಹಿಂದೆ ಸಾಲ ವಿತರಿಸುವುದಕ್ಕೆ ಬಹಳ ಆದ್ಯತೆ ನೀಡಿದ್ದ ಕಾರಣದಿಂದಾಗಿ ಹಣಕಾಸು ವಲಯಕ್ಕೆ ತೊಂದರೆ ಉಂಟಾಯಿತು. ಪಾರದರ್ಶಕ ಅಲ್ಲದ ಸಾಲ ವಿತರಣೆ ಸಂಸ್ಕೃತಿಯಿಂದ ದೇಶವನ್ನು ಹೊರತರಲು ಕ್ರಮ ಕೈಗೊಳ್ಳಲಾಗಿದೆ. ವಸೂಲಾಗದ ಸಾಲಗಳ (ಎನ್‌ಪಿಎ) ಬಗ್ಗೆ ತಕ್ಷಣವೇ ಮಾಹಿತಿ ನೀಡುವುದನ್ನು ನಾವು ಈಗ ಕಡ್ಡಾಯಗೊಳಿಸಿದ್ದೇವೆ' ಎಂದರು.

ಕಸ್ತೂರಿ ರಂಗನ್, ನಾಗೇಶ ಹೆಗಡೆ ಸೇರಿ 6 ಮಂದಿಗೆ ಕೆಎಸ್‌ಟಿಎ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು (ಕೆಎಸ್‌ಟಿಎ) ಜೀವಮಾನ ಸಾಧನೆಗೆ ನೀಡುವ 2019 ಮತ್ತು 2020ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ಇಸ್ರೊ ಮಾಜಿ ಅಧ್ಯಕ್ಷ ಡಾ.ಕೆ. ಕಸ್ತೂರಿ ರಂಗನ್, ವಿಜ್ಞಾನ ಲೇಖಕ ನಾಗೇಶ ಹೆಗಡೆ ಸೇರಿದಂತೆ ಆರು ಮಂದಿ ಆಯ್ಕೆಯಾಗಿದ್ದಾರೆ.

ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಅನನ್ಯ ಕೊಡುಗೆ ನೀಡಿದ ನಾಡಿನ ಶ್ರೇಷ್ಠ ವಿಜ್ಞಾನಿಗಳು, ತಂತ್ರಜ್ಞಾನಿಗಳು ಹಾಗೂ ಕನ್ನಡದ ವಿಜ್ಞಾನ ಸಂವಹನ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಅಕಾಡೆಮಿ ಗೌರವಿಸುತ್ತಿದೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಡಾ. ಗೋಡ್ಬೋಲೆ ರೋಹಿಣಿ ಮಧುಸೂದನ್, ಧಾರವಾಡದ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಎಂ. ಮಹದೇವಪ್ಪ, ಬೆಂಗಳೂರು ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ. ಕಾಮೇಶ್ವರ ರಾವ್ ಹಾಗೂ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.


ನಾಗೇಶ ಹೆಗಡೆ


ಡಾ.ಸಿ.ಆರ್. ಚಂದ್ರಶೇಖರ್


ಡಾ.ಕೆ.ಕಸ್ತೂರಿ ರಂಗನ್


ಡಾ.ಎಂ. ಮಹದೇವಪ್ಪ

ಕಾಮೇಶ್ವರ ರಾವ್

ಡಾ. ಗೋಡ್ಬೋಲೆ ರೋಹಿಣಿ

ಈ ಪ್ರಶಸ್ತಿಯು ತಲಾ ₹ 1 ಲಕ್ಷ ನಗದು ಬಹುಮಾನ ಹಾಗೂ ಚಿನ್ನದ ಪದಕ ಒಳಗೊಂಡಿದೆ. ಮಾ.2ರಂದು ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಯಲಹಂಕದಲ್ಲಿರುವ ಅಕಾಡೆಮಿಯ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೀದರ್: ಬಿಳಿಜೋಳ ದರ ₹3200

ಬೀದರ್: ಜಿಲ್ಲೆಯಲ್ಲಿ ಬಿಳಿಜೋಳ ಕ್ವಿಂಟಲ್‌ಗೆ ₹ 3,200ರಿಂದ ₹ 4,000 ವರೆಗೆ ಮಾರಾಟವಾಗುತ್ತಿದೆ.

ಸರ್ಕಾರ ₹ 2,620ರಿಂದ ₹ 2,640 ಬೆಂಬಲ ಬೆಲೆ ನಿಗದಿ ಮಾಡಿದ್ದು, ಜೋಳ ಮಾರಾಟಕ್ಕೆ ನೋಂದಣಿ ಮಾಡಿಕೊಳ್ಳಲು ಮಾರ್ಚ್ 15ರ ವರೆಗೆ ಅವಕಾಶ ಕಲ್ಪಿಸಿದೆ. ಆದರೆ, ಮುಕ್ತ ಮಾರುಕಟ್ಟೆಯಲ್ಲಿ ಹೆಚ್ಚಿನ ದರ ಇರುವುದರಿಂದ ರೈತರು ಖರೀದಿ ಕೇಂದ್ರಗಳತ್ತ ಸುಳಿಯುತ್ತಿಲ್ಲ.

ಕಲಬುರ್ಗಿ ಎಪಿಎಂಸಿಯಲ್ಲಿ ಶುಕ್ರವಾರ ಜೋಳದ ಧಾರಣೆ ಕ್ವಿಂಟಲ್‌ಗೆ ₹1800ರಿಂದ ₹2800, ರಾಯಚೂರಿನಲ್ಲಿ ಸರಾಸರಿ ದರ ₹3,537 ಇತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಸಸ್ಯಾಹಾರಿ, ಮಾಂಸಾಹಾರಿ ಅಡುಗೆ ಮಾಡಲು ಮತ್ತು ನಾಯಿಗಳನ್ನು ನೋಡಿಕೊಳ್ಳಲು ಮಹಿಳೆ ಮಾತ್ರ ಬೇಕಾಗಿದ್ದಾರೆ. ನಮ್ಮ ಮನೆಯಲ್ಲೇ ಇರಬೇಕು ಉತ್ತಮ ಸಂಬಳ ಕೊಡಲಾಗುತ್ತದೆ.ಕನಕಪುರ ರೋಡ್, ಬೆಂಗಳೂರು.9606173617

General

✔ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

✔ TATA MOTORS, ಟಯೋಟಾ, ಬ್ರಿಟಾನಿಯಾ, TVS ಗಳಿಗೆ 7th,SSLC, PUC ಡಿಗ್ರಿಯವರುಗಳು, ITI ನವರುಗಳು,ನೇರನೇಮಕಾತಿಯಿದೆ. 16,500-52,000/- ವಸತಿಯೂಟವಿದೆ. 7795048129, 7795049766

✔ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

ಹೊಸದಾಗಿ ಪ್ರಾರಂಭವಾಗುತ್ತಿರುವ ಧಾರಾವಾಹಿ ಹಾಗೂ ಚಲನಚಿತ್ರದಲ್ಲಿ ನಟಿಸಲು ಆಸಕ್ತಿಯುಳ್ಳವರು ಸಂಪರ್ಕಿಸಿ. ಮಕ್ಕಳಿಗೂ ಅವಕಾಶ ಫೋ.: 8088233523, 7257999369

Part-Time Jobs

✔ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

✔ WORK FROM HOME: ಮನೆಯಿಂದಲೇ ಕುಳಿತು ಬುಕ್ ಬರೆಯುವ, ಫಾರಂ ತುಂಬುವ ಕೆಲಸ,ಗಳಿಸಿ 15000-22000/- ಕೊರಿಯರ್ ಸೌಲಭ್ಯವಿದೆ.8749014431, 9844978728

WORK FROM HOME: ಮನೆಯಿಂದಲೇ ಕುಳಿತು ಫಾರಂ ತುಂಬುವ ಕೆಲಸ, ಗಳಿಸಿ ತಿಂಗಳಿಗೆ 15000-22000/- ಕೊರಿಯರ್ ಸೌಲಭ್ಯವಿದೆ. 8970861643, 9844978728

Wanted

✔ ತಕ್ಷಣ ಬೇಕಾಗಿದ್ದಾರೆ :TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

✔ ತಕ್ಷಣ ಬೇಕಾಗಿದ್ದಾರೆ ಕಂಪನಿ ಹಾಗು ಆಫೀಸ್ ಕೆಲಸಗಳಿಗೆ SSLC PUC Any degree ಯುವಕ ಯುವತಿಯರಿಗೆ ವಸತಿಯೂಟದೊಂದಿಗೆ Rs.16600 -Rs.60000 7259261011, 9902839010

JOB ROLE: e-learning based content creation. (Full time in S.N.Pet, Ballari). Qualification: Diploma/ Degree. Salary: 5k- 20k/ month. Whatsapp: 6361290380.

ವ್ಯಾಪಾರ

Business to Business

Business

ಜೋವರ್ ರೊಟ್ಟಿ, ರಾಗಿ ರೊಟ್ಟಿ, ಚಪಾತಿ, ಪುರಿ ಇತ್ಯಾದಿಗಳನ್ನು ತಯಾರಿಸಲು ಬೇಕಾದ ಯಂತ್ರಗಳಿಗೆ ಕರೆ ಮಾಡಿ. B K Engineers, Marathahalli, Bangalore, Ph:7676212917

Business Offers

Finance

ಮುದ್ರಾ ಯೋಜನೆಯ ಮೂಲಕ ಕೃಷಿ ಸ್ಥಿರಾಸ್ತಿ ವೈಯುಕ್ತಿಕ ಬಿಸಿನೆಸ್ ವಿದ್ಯಾ, ವಾಹನ ಸಾಲ ವಾರ್ಷಿಕ 4% ಬಡ್ಡಿಯಲ್ಲಿ ಸಾಲ ಲಭ್ಯ. 8095868219, 7057624634

ಭವಿಷ್ಯ

Astrology

★॥ಶ್ರೀಆದಿಶಕ್ತಿ ಅಣ್ಣಮ್ಮ ದೇವಿ॥★ ಜ್ಯೋತಿಷ್ಯರು ಜನವಶೀಕರಣ, ಸ್ತ್ರೀ ಪುರುಷ ವಶೀಕರಣ, ಶತ್ರುವಶೀಕರಣ, ಇನ್ನೂಯಾವುದೇ ಸಮಸ್ಯೆಗಳಿದ್ದರೂ 24ಗಂಟೆಗಳಲ್ಲಿ ಶಾಶ್ವತ ಪರಿಹಾರ. 'ಪಂಡಿತ್.ಸಹದೇವ್‌ಭಟ್'. 9008968867

★100%ವಶೀಕರಣ ಸ್ಪೆಷಲಿಸ್ಟ್★ ಗಂಡಹೆಂಡತಿ ಸಮಸ್ಯೆ,ಮದುವೆ, ಹಣಕಾಸು, ಇನ್ನೂ ಅನೇಕ ಸಮಸ್ಯೆಗಳಿಗೆ ತುಳಸಿದಾಸಭಟ್ ಅವರಿಂದ ಶೀಘ್ರದಲ್ಲಿ ಶಾಶ್ವತ ಪರಿಹಾರ. 9916733308

DH Classifieds
BOOK YOUR PROPERTY TEXT AD ON SATURDAY & SUNDAY
FOR JUST ₹ 1530/-*
For more information contact:
9880856233
9731810277 | 9901641752
9845114560 | 9886213331
*condition apply

CONNECT

ಪಿ.ಎಚ್.ಡಿ ಪ್ರದಾನ

ರಾಧಾ. ಎಂ.

ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ. ವಡ್ಡೆ ಹೇಮಲತಾ ಅವರ ಮಾರ್ಗದರ್ಶನದಲ್ಲಿ ಸಂಶೋಧನಾ ವಿದ್ಯಾರ್ಥಿನಿ ರಾಧಾ. ಎಂ. ಅವರು ಸಿದ್ಧಪಡಿಸಿದ "ಎನ್. ನರಸಿಂಹಯ್ಯ ಅವರ ಪತ್ತೇದಾರಿ ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ" ಮಹಾ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಪಿ.ಎಚ್.ಡಿ ನೀಡಿದೆ.

ಸ್ಪರ್ಧಾ ಮಿತ್ರ Academy
IAS / KAS
ADMISSION OPEN FOR NEW BATCHES, KANNADA & ENGLISH MEDIUM
IBPS / PSI
Online / Offline Classes
Near Attiguppe Metro Station, Service Road, Vijayanagar, Bangalore & Kalburgi
9535111133 / 9535111199

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ, ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

ಸಮಾಜಸೇವೆ

Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

★20.04.2021 8ದಿನಗಳು★ ವಿಮಾನ, AC ಬಸ್ಸಿನಲ್ಲಿ ಗುಜರಾತ್, ಸೋಮನಾಥ, ದ್ವಾರಕ, ಡಿಯು, ಭಾವನಗರ್, ಸರ್ದಾರ್‌ಪ್ರತಿಮೆ, ಆರ್.ಗಾಂಧಿ ಟೂರ್ಸ್. 9902433500/ 9945445809

ರಿಯಾಯಿತಿ ದರದಲ್ಲಿ ಹವಳ ದ್ವೀಪ ಅಂಡಮಾನ್ ನಿಕೋಬಾರ್ ಮಾರ್ಚ್:24 ರಿಂದ 5 ದಿನಗಳ ವಿಮಾನದಲ್ಲಿ ಪ್ರವಾಸ,ಸಂಪರ್ಕಿಸಿ: TravelComfort 080.41664646, 9731001111

ಗ್ಲೋಬಲ್ ವಿಂಗ್ಸ್ ಟೂರ್ಸ್(ಇಂಡಿಯಾ) ಪ್ರೈವೇಟ್ ಲಿಮಿಟೆಡ್, ರವರಿಂದ 5/6/21 ಹಾಗೂ 24/6/21 ರಿಂದ 18 ದಿನಗಳ ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಕೇದಾರನಾಥ, ಯಾತ್ರೆ, 8/5/21 ರಿಂದ 17 ದಿನಗಳ ಪಂಚ ದ್ವಾರಕ ಜೊತೆಗೆ 4 ದಿವ್ಯ ಜ್ಯೋತಿರ್ಲಿಂಗ ದರ್ಶನ, 14/25 ಏಪ್ರಿಲ್ ನಲ್ಲಿ 12 ದಿನಗಳ ಅಹಮದಬಾದ್, ಕೇವಾಡಿಯ, ದ್ವಾರಕ, ಸೊಮನಾಥ, ಮಾತ್ರ, ಗಯ, ಮೊದೇರಾ ಪ್ರವಾಸ, ಮೇ ತಿಂಗಳ 10/18 ರಂದು ಡಾರ್ಜಲಿಂಗ್, ಗ್ಯಾಂಗ್ಟಕ್, ಲಾಚುಂಗ್, ಪೆಲ್ಲಿಂಗ್ 16 ದಿನಗಳ ಪ್ರವಾಸ,10/5/21 ಹಾಗು 20/05/21 ರಂದು 15 ದಿನಗಳ ದೆಹಲಿ, ಚಂಡೀಗಡ್, ಸಿಮ್ಲಾ, ಕುಲು, ಮನಾಲಿ, ಅಮೃತ್ ಸರ, ಪ್ರವಾಸ, ಮೇ ತಿಂಗಳ 19/29 ರಂದು 9 ದಿನಗಳ ಕೊಲ್ಕತ್ತ, ಪುರಿ, ಭುವನೇಶ್ವರ್ 28/06/21 ರಂದು ಕಾಶಿಯಾತ್ರೆ, ಏಪ್ರಿಲ್ ತಿಂಗಳ 10/16/25 ರಂದು 7 ದಿನಗಳ ಅಂಡಮಾನ್ ಐಲಾಂಡ್ ಹಾಗು ಇನ್ನಿತರ ಹತ್ತು ಹಲವಾರು ದೇಶ ವಿದೇಶ ಪ್ರವಾಸಗಳಿಗೆ ಸಂಪರ್ಕಿಸಿ: 080 - 41511387/ 7406101999 /9916101999 /7406050999 /9742050999. ವಿ.ಸೂ: 10 ಸೀಟುಗಳ ಬುಕ್ಕಿಂಗ್ ಗೆ 1 ಸೀಟು ಉಚಿತವಾಗಿ ನೀಡಲಾಗುವುದು

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅನ್ನನಾಳದ ಉರಿಯೂತ

ಅನ್ನನಾಳದಲ್ಲಿ ಉರಿಯೂತವಿದ್ದರೆ ಒಂದು ಲೋಟ ನೀರಿಗೆ ಕೊತ್ತಂಬರಿ ಸೊಪ್ಪಿನ ರಸ, ಜೇನುತುಪ್ಪ ಸೇರಿಸಿ ಕಲೆಸಿ ಕುಡಿಯುವುದರಿಂದ ಕಡಿಮೆಯಾಗುತ್ತದೆ.

ಸಂಗಾತಿ ಜೊತೆಗಿದ್ದರೂ ಒಂಟಿ ಹಾದಿಯ ಪಯಣ!

ರೇಷ್ಮಾ



ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದ ಅನಿತಾ ವಿದೇಶದಲ್ಲಿ ಉದ್ಯೋಗದಲ್ಲಿದ್ದು, ಕೈ ತುಂಬಾ ಸಂಪಾದನೆ ಮಾಡುತ್ತಿದ್ದ ವಿನೋದ್‌ನನ್ನು ಮದುವೆಯಾಗಿದ್ದಳು. ಮನೆಯವರ ಇಚ್ಛೆಯಂತೆ, ಅವರು ತೋರಿಸಿದ್ದ ಹುಡುಗನನ್ನೇ ಮೆಚ್ಚಿ ಮದುವೆಯಾಗಿ ವಿದೇಶಕ್ಕೆ ಹಾರಿದ್ದ ಅವಳಿಗೆ ಕೆಲವೇ ದಿನಗಳಲ್ಲಿ ತಾನು ಒಂಟಿ ಎಂಬ ಭಾವನೆ ಮೂಡಲು ಆರಂಭವಾಗಿತ್ತು. ಅವನ ಪಾಡಿಗೆ ಅವನು, ಇವಳ ಪಾಡಿಗೆ ಇವಳು.

‘ಯಾವಾಗಲೋ ಒಮ್ಮೆ ಜೊತೆಯಾಗಿ ಹೊರಗೆ ಹೋಗುವುದು, ಒಟ್ಟಿಗೆ ಕುಳಿತು ಊಟ ಮಾಡುವುದು.. ಇಷ್ಟೇ ಜೀವನ ಎಂಬಂತಾಗಿಬಿಟ್ಟಿದೆ’ ಎಂದು ಅಳಲು ತೋಡಿಕೊಳ್ಳುವ ಅನಿತಾಗೆ ದೂರದ ದೇಶ, ಜನ ಇನ್ನಷ್ಟು ಒಂಟಿತನ ಹೆಚ್ಚುವಂತೆ ಮಾಡಿತ್ತು.

ಅನಿತಾಳಂತೆ ಹಲವರಲ್ಲಿ ಮದುವೆಯಾದ ಮೇಲೆ ಅಥವಾ ಸಂಗಾತಿ ಜೊತೆ ಇದ್ದಾಗಲೂ ಒಂಟಿತನದ ಭಾವನೆ ಕಾಡುತ್ತದೆ. ಸಂಗಾತಿಯ ಕೆಲವು ವರ್ತನೆಗಳು ಅವಳಲ್ಲಿ ತಾನು ಒಂಟಿ ಎಂಬ ಭಾವನೆ ಮೂಡುವಂತೆ ಮಾಡಬಹುದು. ‘ಸಂಬಂಧದಲ್ಲಿನ ಒಂಟಿತನವನ್ನು ಹೋಗಲಾಡಿಸಲು ಕೆಲವೊಂದು ಸೂಕ್ತ ಮಾರ್ಗಗಳಿಂದ ಸಂಗಾತಿಯನ್ನು ಒಲಿಸಿಕೊಂಡು ಉತ್ತಮ ದಾಂಪತ್ಯ ಜೀವನವನ್ನು ಸಾಗಿಸಲು ಸಾಧ್ಯ. ಆದರೆ ತಾಳ್ಮೆ ಇರಬೇಕಷ್ಟೇ’ ಎನ್ನುತ್ತಾರೆ ಆಪ್ತಸಮಾಲೋಚಕಿ ಆಯೇಷಾ ಬಾನು.

‘ಉತ್ತಮ ದಾಂಪತ್ಯ ಜೀವನ ನಮ್ಮದಾಗಬೇಕು ಎಂದರೆ ಅದೃಷ್ಟವಿರಬೇಕು ಎಂದು ಹಲವರು ನಂಬಿರುತ್ತಾರೆ. ಆದರೆ ಒಂದು ಉತ್ತಮ ಸಂಬಂಧದಲ್ಲಿ ಸ್ನೇಹ, ಪರಸ್ಪರ ಒಬ್ಬರನ್ನೊಬ್ಬರು ಆರಾಧಿಸುವುದು, ಸಂಗಾತಿಯ ಪ್ರತಿಭೆಯನ್ನು ಗೌರವಿಸುವುದು, ಅರ್ಥ ಮಾಡಿಕೊಳ್ಳುವುದು ತುಂಬಾ ಮುಖ್ಯ’ ಎನ್ನುವುದು ಆಯೇಷಾ ಅವರ ಅಭಿಪ್ರಾಯ.

ಸಮೀಕ್ಷೆಯೊಂದರ ಪ್ರಕಾರ ಶೇ 40ರಷ್ಟು ಮಂದಿ ತಮ್ಮ ಸಂಬಂಧದಲ್ಲಿ ತಾವು ಒಂಟಿಯಾಗಿದ್ದೇವೆ ಎಂಬ ನೋವಿನೊಂದಿಗೆ ಬದುಕುತ್ತಾರಂತೆ. ಅಂದರೆ ದೈಹಿಕವಾಗಿ ಅಥವಾ ವಾಸ್ತವವಾಗಿ ಸಂಗಾತಿಯಿಂದ ದೂರವಿರುವುದು ಎಂದರ್ಥವಲ್ಲ. ಭಾವನಾತ್ಮಕವಾಗಿ ಸಂಗಾತಿಗೆ ಸ್ಪಂದಿಸದೇ ಇದ್ದರೆ ಸಂಗಾತಿ ಸಂಬಂಧದಲ್ಲಿ ಏಕಾಂಗಿತನವನ್ನು ಅನುಭವಿಸಬಹುದು. ಗಂಡನಾದವನು ತನ್ನ ಗುರಿ, ಭಯ ಹಾಗೂ ಕನಸುಗಳ ಬಗ್ಗೆ ಕೇಳಿಸಿಕೊಳ್ಳದೇ ಇದ್ದಾಗ ಹೆಂಡತಿಗೆ ತಾನು ಒಂಟಿ ಎಂಬ ಭಾವ ಮೂಡಲು ಆರಂಭವಾಗುತ್ತದೆ. ದಾಂಪತ್ಯದಲ್ಲಿ ತಾನು ಒಂಟಿ ಎನ್ನುವ ಭಾವನೆ ಹೊಂದಿರುವ ಪೋಷಕರು ತಮ್ಮ ಮಕ್ಕಳನ್ನು ಕಡೆಗಣಿಸುವುದಿಲ್ಲ. ಆದರೆ ಹಲವರು ಮಕ್ಕಳ ಮೇಲೆ ಪ್ರೀತಿ, ಅಕ್ಕರೆ ತೋರಿಸುವ ಭರದಲ್ಲಿ ಸಂಗಾತಿಯ ಭಾವನೆಗಳನ್ನು ಕಡೆಗಣಿಸುತ್ತಾರೆ. ಆಗಲೂ ಸಂಬಂಧದಲ್ಲಿ ಒಂಟಿತನ ಕಾಡಬಹುದು.

> ಮದುವೆಯಾದ ಅಥವಾ ಪ್ರೀತಿಸುತ್ತಿರುವ ಹಲವರಲ್ಲಿ ಸಂಗಾತಿ ಇದ್ದರೂ ತಾವು ಒಂಟಿ ಎನ್ನುವ ಭಾವನೆ ಕಾಡುತ್ತದೆ. ಸಂಬಂಧದಲ್ಲಿನ ಒಂಟಿತನವನ್ನು ದೂರ ಮಾಡಲು ಸಂಗಾತಿಗೆ ಹತ್ತಿರವಾಗುವ ಮಾರ್ಗವನ್ನು ಕಂಡುಕೊಳ್ಳಬೇಕು.

ಸಂಬಂಧದಲ್ಲಿನ ಒಂಟಿತನ ನಿವಾರಿಸುವುದು ಹೇಗೆ?

ವಿಷಯವನ್ನು ಸ್ಪಷ್ಟಪಡಿಸಿಕೊಳ್ಳಿ

ನಿಮ್ಮ ಸಂಬಂಧದಲ್ಲಿ ನೀವು ಒಂಟಿ ಎನ್ನಿಸಿದರೆ ಸಂಗಾತಿ ನಿಮ್ಮನ್ನು ಪ್ರೀತಿಸುತ್ತಿಲ್ಲ ಎಂದು ಅರ್ಥವಲ್ಲ. ನಿಮ್ಮ ನಡುವೆ ಭಾವನಾತ್ಮಕ ಅಂತರ ಹೆಚ್ಚಿದ್ದು, ಪ್ರೀತಿಗೆ ಅಗತ್ಯವಾದ ಅನ್ಯೋನ್ಯತೆಯ ಕೊರತೆಯಿದೆ ಎಂದು ಅರ್ಥ. ಹಾಗಾದರೆ ಅವರು ನಿಮ್ಮೊಂದಿಗೆ ಯಾವ ಕಾರಣಕ್ಕೆ ಹೀಗಿದ್ದಾರೆ ಎಂಬ ವಿಷಯವನ್ನು ಸ್ಪಷ್ಟಪಡಿಸಿಕೊಳ್ಳಿ. ಸರಿಪಡಿಸುವ ದಾರಿಯನ್ನು ಕಂಡುಕೊಳ್ಳಿ.

ಭರವಸೆ ಕಳೆದುಕೊಳ್ಳಬೇಡಿ

ಭಾವನಾತ್ಮಕವಾಗಿ ನಿಮ್ಮಲ್ಲಿ ಒಂಟಿ ಎಂಬ ಭಾವನೆ ಮೂಡಿದರೆ ನಿಮ್ಮ ಸಂಬಂಧದಿಂದ ದೂರ ಉಳಿಯಲು ಪ್ರಯತ್ನಿಸಬೇಡಿ. ಕಳೆದುಕೊಳ್ಳುವ ಭೀತಿ ಇದ್ದರೂ ಆಶಾದಾಯಕವಾಗಿರಿ. ಇಂದಲ್ಲ ನಾಳೆ ಸಂಬಂಧ ಸರಿ ಹೋಗುತ್ತದೆ ಎಂಬ ಭರವಸೆ ಇರಲಿ.

ವರ್ತನೆಯಲ್ಲಿ ಬದಲಾವಣೆ ತಂದುಕೊಳ್ಳಿ

ಸಂಬಂಧದಲ್ಲಿನ ಏಕಾಂಗಿತನವನ್ನು ಹೋಗಲಾಡಿಸಲು ವರ್ತನೆಯಲ್ಲಿ ಬದಲಾವಣೆ ತಂದುಕೊಳ್ಳುವುದು ಮುಖ್ಯ. ನಿಮ್ಮ ಪತಿ ಅಥವಾ ಪ್ರೇಮಿಗೆ ನಿಮ್ಮ ಯಾವ ವರ್ತನೆ ಇಷ್ಟವಾಗುತ್ತಿಲ್ಲ ಎಂಬುದನ್ನು ನೀವೇ ಅರಿತುಕೊಂಡು ಅದರಲ್ಲಿ ಬದಲಾವಣೆ ಮಾಡಿಕೊಳ್ಳಿ.

ಅವರ ಪ್ರಪಂಚದಲ್ಲಿ ಜಾಗ ಮಾಡಿಕೊಳ್ಳಿ

ಸಂಗಾತಿಯ ಯೋಚನಾ ಪ್ರಪಂಚದೊಳಗೆ ನಿಮ್ಮ ಜಾಗವನ್ನು ಭದ್ರಪಡಿಸಿಕೊಳ್ಳಿ. ನಿಮ್ಮಿಬ್ಬರ ನಡುವಿನ ಭಾವನಾತ್ಮಕ ಬಂಧ ಗಟ್ಟಿಯಾಗಲು ಅವರ ದೃಷ್ಟಿಕೋನಕ್ಕೆ ತಕ್ಕಂತೆ ಸಾಗುವುದು ಮುಖ್ಯವಾಗುತ್ತದೆ.

ಪ್ರತಿದಿನ ಒಂದು ನಿಮಿಷ ಕಣ್ಣುಮುಚ್ಚಿ ಯೋಚಿಸಿ. ನಿಮ್ಮ ಸಂಗಾತಿಯ ಜಗತ್ತು ಪ್ರಸ್ತುತ ಹೇಗಿದೆ ಎಂದು ಊಹಿಸಿಕೊಳ್ಳಿ. ಈ ಕ್ಷಣಕ್ಕೆ ಅವರು ಏನು ಯೋಚಿಸುತ್ತಿದ್ದಾರೆ, ಅವರಿಗೇನು ಬೇಕು? ವಾಸ್ತವವೇನು? ಸವಾಲುಗಳು ಏನಿರಬಹುದು? ಅವರು ಎಲ್ಲಿ ಸಂತೋಷವನ್ನು ಹುಡುಕುತ್ತಿದ್ದಾರೆ? ಅವರ ಚಿಂತೆ ಏನು? ಹಂಬಲ ಏನು? ಇದೆಲ್ಲದರ ಬಗ್ಗೆಯೂ ಯೋಚಿಸಿ ತಿಳಿದುಕೊಳ್ಳಿ. ಆ ಮೂಲಕ ಅವರಿಗೆ ಹತ್ತಿರವಾಗಲು ಪ್ರಯತ್ನಿಸಿ. ನಿಮ್ಮ ಒಂಟಿತನವನ್ನು ದೂರ ಮಾಡಲು ದಾರಿ ಕಂಡುಕೊಳ್ಳಿ.

ಸಣ್ಣ ಪುಟ ಸರ್ಪ್ರೈಸ್‌ಗಳನ್ನು ನೀಡಿ

ನಿಮ್ಮ ಸಂಗಾತಿ ಊಹಿಸಿಯೇ ಇರದ ಸಣ್ಣ ಪುಟ್ಟ ಸರ್ಪ್ರೈಸ್‌ಗಳನ್ನು ನೀಡಿ. ಭಾವನಾತ್ಮಕ ಬಂಧ ಗಟ್ಟಿಯಾಗುವಂತೆ ನೋಡಿಕೊಳ್ಳಿ. ನಿಮ್ಮ ಭಾವನೆ ಹಾಗೂ ಯೋಚನೆಗಳನ್ನು ಹಂಚಿಕೊಳ್ಳಿ, ಅವರ ಭಾವನೆ, ಯೋಚನೆಗಳಿಗೆ ಸ್ಪಂದಿಸಿ.

ಆರೋಗ್ಯ

ಹೆಣ್ಣುಮಕ್ಕಳನ್ನು ಕಾಡುವ ಎಂಡೋಮೆಟ್ರಿಯೋಸಿಸ್ ಸಮಸ್ಯೆಯ ಕುರಿತು ಮಾತನಾಡಿದ್ದಾರೆ ಬೆಂಗಳೂರಿನ ಸ್ತ್ರೀರೋಗ ತಜ್ಞೆ ಡಾ. ವಿದ್ಯಾ ಭಟ್. ಈ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://bit.ly/3uvgYKh

ಅಭಿವೃದ್ಧಿಯ ಧರೆಗಿಳಿಸಿದ ‘ಬಂಗಾರದ ಮನುಷ್ಯ’

ಪ್ರಸ್ತುತಿ:
ಪಿ.ವಿ.
ಬ್ರ್ಯಾಂಡ್ ಸ್ಪಾಟ್

ಸವಾಲುಗಳು, ಸಮಸ್ಯೆಗಳು ಅಲೆಯಂತೆ ಅಪ್ಪಳಿಸಿ ಬರುವುದೇ ನೈಜ ನಾಯಕರಿದ್ದಾಗಲೇ ಏನೋ; ಅವುಗಳನ್ನು ದಿಟ್ಟವಾಗಿ ಎದುರಿಸಿ, ನಾಡನ್ನು-ಪ್ರಜೆಗಳನ್ನು ಸುರಕ್ಷಿತವಾಗಿ ಪಾರು ಮಾಡುವುದೇ ಅಂತಹ ನಾಯಕತ್ವಕ್ಕೆ ಮುಖಾಮುಖಿಯಾಗುವ ಅಗ್ನಿಪರೀಕ್ಷೆ. ನೈಜ ನಾಯಕ ಇಂತಹ ನೂರು ಅಗ್ನಿಪರೀಕ್ಷೆಗಳನ್ನು ದಿಟ್ಟವಾಗಿ ಗೆಲ್ಲುತ್ತಾನೆ. ನಾಯಕ ಗುಣವನ್ನು ಪುಟಕ್ಕಿಟ್ಟ ಚಿನ್ನದಂತೆ ಸಾಬೀತುಪಡಿಸುತ್ತಾನೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕರ್ನಾಟಕ ಕಂಡ ಅಂತಹ ಒಬ್ಬ ಅಪರೂಪದ ನಾಯಕ.

ಹೌದು, ಕರ್ನಾಟಕ ಕಳೆದ ಎರಡು- ಮೂರು ದಶಕಗಳಲ್ಲಿ ಕಂಡ ಅತ್ಯಂತ ಸಂಕೀರ್ಣ ಸಮಸ್ಯಾತ್ಮಕ ವರ್ಷಗಳೆಂದರೆ ಎಂದರೆ 2019 ಮತ್ತು 2020. ಇತಿಹಾಸವೇ ಕಂಡರಿಯದ ಪ್ರಾಕೃತಿಕ, ಜೈವಿಕ ಪ್ರಕೋಪಗಳು ದೈತ್ಯಾಕಾರದಲ್ಲಿ ಧುತ್ತನೆ ಎರಗಿ ನಿಂತವು. 2019 ರಲ್ಲಿ ಶತಮಾನ ಕಂಡರಿಯದ ಮಳೆ, ಪ್ರವಾಹ ಮತ್ತು ಭೂಕುಸಿತಗಳು. 2020 ರಲ್ಲಿ ದೃಗ್ಗೋಚರವಿಲ್ಲದ ‘ಸೈಲೆಂಟ್ ಕಿಲ್ಲರ್’ ಆಗಿ ಬಂದ ಕೊರೊನಾ ವೈರಾಣುವಿನ ಆಟಾಟೋಪ. ಇಡೀ ಜಗತ್ತೇ ಬೆಸ್ತು ಬಿದ್ದಾಗ ಇವುಗಳನ್ನು ನಿಭಾಯಿಸುವಲ್ಲಿ ಜಾಣ್ಮೆ, ತಾಳ್ಮೆ, ಪರಿಶ್ರಮ ಮತ್ತು ಚಾಕಚಕ್ಯತೆಯಿಂದ ನಿಭಾಯಿಸಿ ಸೈ ಎನಿಸಿಕೊಂಡವರು ಯಡಿಯೂರಪ್ಪ.

ಎಂತಹ ಪರಿಸ್ಥಿತಿಯಲ್ಲೂ ಕಷ್ಟದಲ್ಲಿ ಸಿಕ್ಕಿಕೊಂಡವರಿಗೆ ಮಾತೃ ಹೃದಯದಿಂದ ಸ್ಪಂದಿಸುತ್ತಲೇ; ಶ್ರೀಸಾಮಾನ್ಯರ ಜನರ ಕುರಿತು ಅಸಾಮಾನ್ಯ ಪ್ರೀತಿ ತೋರಿದವರು. ಸಿಟ್ಟು, ಕೋಪ ಬಾಹ್ಯರೂಪವಾಗಿದ್ದರೂ, ಎಂದಿಗೂ ಪ್ರೀತಿಯ ರಸಗಂಗೆ ಅಂತರಂಗದಲ್ಲಿ.

ಪ್ರವಾಹ ಮತ್ತು ಕೊರೊನಾದ ಸಂಕಷ್ಟದ ಸಂದರ್ಭದಲ್ಲಿ ಎಲ್ಲೋ ಅಡಗಿ ಕೂರದೇ ಅಧಿಕಾರಿಗಳ ಜತೆಗೆ ಹಗಲಿಗೆ ಹಗಲು ಕೊಟ್ಟು, ಅವರನ್ನು ಪ್ರೇರೇಪಿಸುತ್ತಾ, ದಣಿವರಿಯದೇ ಕೆಲಸ ಮಾಡಿ, ತಮ್ಮ ಸಮಕಾಲೀನರನ್ನು ಮಾತ್ರವಲ್ಲದೆ, ಯುವ ಪೀಳಿಗೆಯೂ ಮೂಗಿನ ಮೇಲೆ ಬೆರಳಿಡುವಷ್ಟರ ಮಟ್ಟಿಗೆ ಕ್ರಿಯಾಶೀಲತೆ ತೋರಿದರು. ಹೀಗಾಗಿಯೇ ಅವರ ಅಭಿಮಾನಿಗಳು ‘ಬೆವರಿನಿಂದ ಬಂದ ಬಂಗಾರದ ಮನುಷ್ಯ’ ಎಂದು ಪ್ರೀತಿಯಿಂದ ಕರೆಯುತ್ತಾರೆ.

ನೈಸರ್ಗಿಕ, ಜೈವಿಕ ಸಂಕೀರ್ಣ ಸಮಸ್ಯೆಗಳ ಜತೆ ಜತೆಗೆ ರಾಜಕೀಯ ಮತ್ತು ಸಾಮಾಜಿಕ ಸವಾಲುಗಳು ಇವರನ್ನು ತೀವ್ರವಾಗಿ ಕಾಡಿತು. ಅದು ಅವರಿಗೆ ಹೊಸತಲ್ಲ. ಸಂಕಷ್ಟಗಳ ಅಗ್ನಿಕುಂಡದಿಂದಲೇ ಹುಟ್ಟಿ ಬಂದವರು. ಇತ್ತೀಚಿನ ವರ್ಷಗಳಲ್ಲಿ ಯಾವುದೇ ಮುಖ್ಯಮಂತ್ರಿಗಳನ್ನು ಈ ಪರಿಯಾಗಿ ಸಮಸ್ಯೆಗಳು ಕಾಡಿದ್ದಿಲ್ಲ. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆದಾಗಲೆಲ್ಲಾ ವರ್ಷಧಾರೆಯಿಂದ ನಾಡು ತೋಯ್ದು ಹೋಗುತ್ತದೆ. ಬರದಿಂದ ಕಂಗೆಟ್ಟ ಭೂಮಿ ತಣಿದು ಹೋಗುತ್ತದೆ. ಆ ಅಬ್ಬರಕ್ಕೆ ನಲುಗಿ ಹೋದ ಜನ ಸಮೂಹವನ್ನು ಮೈದಡವಿ, ಸಂತೈಸಲು ಯಡಿಯೂರಪ್ಪ ಅಂತಹ ನಾಯಕರೇ ಇರಬೇಕು. ಹಗಲು- ರಾತ್ರಿ ಎನ್ನದೇ ಸಂಕಷ್ಟದ ಪೀಡಿತರ ಪ್ರದೇಶಕ್ಕೆ ಹೋಗಿ, ಅವರ ಆರ್ತನಾದಕ್ಕೆ ಕಿವಿಗೊಟ್ಟು ಮಿಡಿದ ಪರಿ ಅನನ್ಯ. ಒಮ್ಮೆ ಪ್ರವಾಹಪೀಡಿತ ಪ್ರದೇಶಕ್ಕೆ ಭೇಟಿ ಕೊಟ್ಟಾಗಲಂತೂ ಕತ್ತಲು ಆವರಿಸಿತ್ತು. ಗ್ರಾಮದಲ್ಲಿ ವಿದ್ಯುತ್ ದೀಪ ಇಲ್ಲದೇ ಕಗ್ಗತ್ತಲು. ಆಗ ಮೊಬೈಲ್ ಫೋನ್‌ಗಳ ಬೆಳಕಿನಲ್ಲೇ ತಾಸುಗಟ್ಟಲೆ ಜನರ ಕಷ್ಟ ಆಲಿಸಿದ ಚಿತ್ರಣದ ನೆನಪು ಕನ್ನಡದ ಜನರ ಮನಸ್ಸಿನಿಂದ ಮಾಸಿ ಹೋಗದು.

ಯಡಿಯೂರಪ್ಪ ಅವರ ಇಂತಹ ಕರ್ತೃತ್ವ ಧೀಃಶಕ್ತಿಗೆ ಪ್ರೇರಣೆ ಬೇರೇನೂ ಅಲ್ಲ; ಬಸವಣ್ಣ ಅವರ ‘ಕಾಯಕ’ ತತ್ವ. ಅದರ ಪ್ರಾಮಾಣಿಕ ಪರಿಪಾಲನೆ. ಒಂದೆಡೆ ಬಸವ ತತ್ವಗಳು ಮತ್ತು ಮತ್ತೊಂಡೆ ಭಾರತೀಯ ಜನತಾ ಪಕ್ಷದ ಏಕಾತ್ಮ ಮತ್ತು ಸಾಮಾಜಿಕ ತತ್ವದ ಸಮನ್ವಯದ ಮೂಲಕ ಸಮಾಜದ ಕಟ್ಟ ಕಡೆಯ ಪ್ರಜೆಗೂ ಸಾಮಾಜಿಕ ನ್ಯಾಯ ದೊರಕಿಸುವ ಬದ್ಧತೆ ತೋರಿದ್ದಾರೆ. ಪಂಡಿತ್ ದೀನದಯಾಳ ಉಪಾಧ್ಯ, ಶ್ಯಾಮಪ್ರಸಾದ್ ಮುಖರ್ಜಿ ಅವರ ಚಿಂತನೆಗಳು ಸ್ಫೂರ್ತಿ ಸೆಲೆಯಾಗಿವೆ. ಪ್ರಧಾನಿ ನರೇಂದ್ರ ಮೋದಿ ಅವರ ದೇಶ ಮೊದಲು, ‘ಸಬ್‌ಕಾ ಸಾತ್ ಸಬ್‌ಕಾ ವಿಕಾಸ್’ ಮಂತ್ರವನ್ನು ಚಾಚೂ ತಪ್ಪದೇ ಪಾಲಿಸುತ್ತಿರುವ ಪರಿಣಾಮ ಕರ್ನಾಟಕ ಅಭಿವೃದ್ಧಿಯ ಪಥ ಮತ್ತೊಂದು ಆಯಾಮಕ್ಕೆ ಅಡಿ ಇಟ್ಟಿದೆ.

ರೈತರು, ಕೂಲಿ ಕಾರ್ಮಿಕರು, ಬಡವರ ಬಗ್ಗೆ ಇರುವ ಪ್ರೀತಿ, ಕಾಳಜಿಯ ಕಾರಣಕ್ಕೇ ಎರಡನೇ ಬಾರಿಗೆ ಪೂರ್ಣ ಆಡಳಿತ ನಡೆಸಲು ಮುಖ್ಯಮಂತ್ರಿ ಆಗುವ ಅವಕಾಶ ಸಿಕ್ಕಿತು. (ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ ಏಕೈಕ ನಾಯಕ ಇವರು) ಈ ಸುವರ್ಣ ಅವಕಾಶ ಕೊಟ್ಟಿದ್ದು ನಾಡಿದ ಜನತೆ. ರಾಜಕೀಯ ಪಲ್ಲಟಗಳಿಂದ ಜನರ ಆಶಯಕ್ಕೆ ಪೂರಕವಾಗಿ ಬಹುಮತ ಪಡೆದದ್ದೂ ಅಲ್ಲದೆ, ನಂತರ ಬಂದ ಸಾಲು ಸಾಲು ಉಪಚುನಾವಣೆಗಳಲ್ಲಿ ದಿಗ್ವಿಜಯ ಸಾಧಿಸಿದರು. ಗ್ರಾಮ ಪಂಚಾಯಿತಿ ಚುನಾವಣೆಯಲ್ಲೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಅತ್ಯಧಿಕ ಸಂಖ್ಯೆಯಲ್ಲಿ ಗೆಲ್ಲುವ ಮೂಲಕ ಘಟಾನುಘಟಿ ಎದುರಾಳಿಗಳ ತಂತ್ರಗಾರಿಕೆಗಳಿಗೆ ತಿರುಮಂತ್ರ ಹಾಕಿ, ವಿಜಯದ ರಥವನ್ನು ಮುನ್ನಡೆಸಿದ್ದಾರೆ. ಬಿಜೆಪಿ ಮುಟ್ಟಲಾಗದ ಕೋಟೆಗಳಿಗೆ ಲಗ್ಗೆ ಇಟ್ಟು ಕೆ.ಆರ್.ಪೇಟೆ, ಶಿರಾದಂತಹ ಕ್ಷೇತ್ರಗಳಲ್ಲಿ ಕಮಲ ಧ್ವಜವನ್ನು ನೆಟ್ಟು ಬಂದ ಕೀರ್ತಿ ಯಡಿಯೂರಪ್ಪ ಅವರದು. ಈ ವಿಜಯ ಪಕ್ಷದ ವರಿಷ್ಠರ ಮೆಚ್ಚುಗೆಗೂ ಕಾರಣವಾಯಿತು. ಒಟ್ಟು 2019-20 ರಲ್ಲಿ ನಡೆದ 17 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ಒಟ್ಟು 14 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತು. ಶಿರಾ ಹಾಗೂ ರಾಜರಾಜೇಶ್ವರಿ-ನಗರ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸಿತು. ಈ ಸಾಧನೆ ಯಡಿಯೂರಪ್ಪ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ತುರಾಯಿ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ 150 ಸ್ಥಾನ ಗೆಲುವಿನ ಗುರಿ ಈಗಲೇ ಹಾಕಿಕೊಂಡಿದ್ದಾರೆ. ಅದಕ್ಕಾಗಿ ಶ್ರಮವನ್ನೂ ಹಾಕುತ್ತಿದ್ದಾರೆ. ವಿರಾಮ, ನಿವೃತ್ತಿಯ ಮಾತು ಆಡದೇ ದಣಿಯದೇ, ಶ್ರಮಿಸುತ್ತಿರುವ ನಾಯಕ ಬಿಎಸ್‌ವೈ.

ದಕ್ಷಿಣ ಭಾರತದಲ್ಲಿ ಕೇಸರಿ ಪತಾಕೆ ಹಾರಿಸಿದ ವೀರ

ತುರ್ತುಪರಿಸ್ಥಿತಿಯ ಕರಾಳ ದಿನಗಳ ಬಳಿಕ ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರವನ್ನು ಹಿಡಿಯಿತು. ಜನಸಂಘ ಜನತಾ ಪಕ್ಷದಲ್ಲಿ ವಿಲೀನವಾಯಿತು. ಆದರೆ, ಜನತಾಪಕ್ಷ ಹೆಚ್ಚು ಕಾಲ ಬಾಳಲಿಲ್ಲ. ಜನಸಂಘ ಜನತಾದಿಂದ ನಿರ್ಗಮಿಸಿ ಭಾರತೀಯ ಜನತಾ ಪಕ್ಷವಾಗಿ ಮರು ಹುಟ್ಟು ಪಡೆಯಿತು. ಕರ್ನಾಟಕದಲ್ಲಿ 1983 ರಲ್ಲಿ ಬಿಜೆಪಿ ಮೊದಲ ಬಾರಿಗೆ 18 ಸ್ಥಾನಗಳನ್ನು ಗೆದ್ದು, ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರಕ್ಕೆ ಬಾಹ್ಯ ಬೆಂಬಲ ನೀಡಿತ್ತು. ಹೊಸದಾಗಿ ಗೆದ್ದು ಬಂದ 18 ಶಾಸಕರಲ್ಲಿ ಯಡಿಯೂರಪ್ಪ ಅವರೂ ಒಬ್ಬರು. ಶಿಕಾರಿಪುರದಿಂದ ಗೆದ್ದು ಬಂದಿದ್ದ ಯಡಿಯೂರಪ್ಪ ಅವರು ಆಗ ಒಬ್ಬ ಸಾಮಾನ್ಯ ಶಾಸಕರಾಗಿ ಎಲ್ಲರಿಗೂ ಕಂಡಿರಬಹುದು. ಆದರೆ, ಅವರ ಅಂತರಂಗದಲ್ಲಿದ್ದ ಹೋರಾಟದ ಜ್ವಾಲಾಮುಖಿ ಹೊಮ್ಮಿದ್ದು, ಆ ಬಳಿಕ.

ಶಿಕಾರಿಪುರದಲ್ಲಿದ್ದಾಗಲೇ ಧ್ವನಿ ಇಲ್ಲದ ಸಮುದಾಯಗಳ ಪರವಾಗಿ ಹೋರಾಟ ಮಾಡುತ್ತಲೇ ಬಂದಿದ್ದರು. ಜೀತದಾಳುಗಳು, ಹಕ್ಕಿ-ಪಿಕ್ಕಿಗಳು, ಅಲೆಮಾರಿಗಳನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಕೆಲವೊಮ್ಮೆ ಜಿಲ್ಲಾ ಕೇಂದ್ರ ಶಿವಮೊಗ್ಗದಲ್ಲಿ ಹೋರಾಟ ಮಾಡಿದ್ದರು. ಆಗ ಇವರನ್ನು ಅಷ್ಟು ಗಂಭೀರವಾಗಿ ಪರಿಗಣಿಸಿದ್ದು ಕಡಿಮೆಯೇ. ಏಕೆಂದರೆ, ಬಿಜೆಪಿ ರಾಜ್ಯದಲ್ಲಿ ದೊಡ್ಡ ಶಕ್ತಿಯೂ ಆಗಿರಲಿಲ್ಲ. ಇನ್ನೂ ವಿಧಾನಸಭೆಗೂ ಪ್ರವೇಶ ಪಡೆದಿರಲಿಲ್ಲ.

1985ರ ಬಳಿಕ ಇವರ ದಿಕ್ಕೇ ಬದಲಾಯಿತು. ಆಗ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಗೆದ್ದಿದ್ದು ಇಬ್ಬರೇ. ಅವರಲ್ಲಿ ಯಡಿಯೂರಪ್ಪ ಒಬ್ಬರು. ಪಕ್ಷಾಂತರದ ಆಮಿಷಕ್ಕೆ ತುತ್ತಾಗದೇ ಏಕಾಂಗಿಯಾಗಿ ತಮ್ಮ ಹೋರಾಟದ ಕೆಚ್ಚಿಗೆ ವಿಧಾನಸಭೆಯನ್ನು ಅಖಾಡವಾಗಿ ಬಳಸಿಕೊಂಡರು. ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ ಎಂಬ ವಿಶೇಷಣ ಅಂಟಿಕೊಂಡಿದ್ದೂ ಆಗಲೇ.



1994ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 40 ಸ್ಥಾನಗಳನ್ನು ಗೆದ್ದುಕೊಂಡಿತು. ಬಿ.ಎಸ್.ಯಡಿಯೂರಪ್ಪ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದರು. ಬಿಜೆಪಿಗೆ ದಕ್ಷಿಣದ ಹೆಬ್ಬಾಗಿಲಾಗಿ ಮತ್ತು ಭವಿಷ್ಯದಲ್ಲಿ ದಕ್ಷಿಣದ ದೊಡ್ಡ ರಾಜ್ಯದ ಅಧಿಕಾರ ಸೂತ್ರ ಹಿಡಿಯುವ ಭವಿಷ್ಯ ಕಂಡಿದ್ದು ಆಗಲೇ. ಬಿಜೆಪಿ ಆ ಕನಸನ್ನು ನನಸಾಗುವತ್ತ ರಥವನ್ನು ಮುನ್ನಡೆಸಿದ್ದು ಯಡಿಯೂರಪ್ಪ. ಅಂದಿನ ರಾಜಕಾರಣದ ಮೈದಾನ ಹೋರಾಟದಲ್ಲಿ ಕಲಿಯಾಗಿ ಎದುರಾಳಿಗಳಿಗೆ ಸಡ್ಡು ಹೊಡೆದದ್ದು ಯಡಿಯೂರಪ್ಪ. ಅವರಿಗೆ ಸಾಥ್ ನೀಡಿದ್ದು ದಿವಂಗತ ಅನಂತಕುಮಾರ್. ಬಿಜೆಪಿಯ ಹಕ್ಕ-ಬುಕ್ಕರು ಎಂದೇ ಖ್ಯಾತಿ ಪಡೆದರು. 1999 ರಲ್ಲಿ ಬಿಜೆಪಿ 44 ಸ್ಥಾನಗಳನ್ನು ಗೆದ್ದಿತು. 2004 ರಲ್ಲಿ 79 ಸ್ಥಾನಗಳನ್ನು ಗೆದ್ದು ಏಕೈಕ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿತು. ಜೆಡಿಎಸ್ ಮತ್ತು ಕಾಂಗ್ರೆಸ್ ಜತೆಗೂಡಿ ಸರ್ಕಾರ ರಚಿಸಿದವು. ಹೆಚ್ಚು ಕಾಲ ಬಾಳದ ಮೈತ್ರಿ ಸರ್ಕಾರ ಪತನಗೊಂಡು ಎಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ 20:20 ಸರ್ಕಾರ ರಚನೆ ಆಯಿತು. 20 ತಿಂಗಳು ಮುಗಿದ ನಂತರ ಕುಮಾರಸ್ವಾಮಿ ಅವರು ಬಿಜೆಪಿಗೆ ಅಧಿಕಾರ ಬಿಟ್ಟುಕೊಡಲಿಲ್ಲ. ಸರ್ಕಾರ ಪತನಗೊಂಡು ಮತ್ತೆ ಚುನಾವಣೆಗೆ ಹೋದಾಗ 110 ಸ್ಥಾನಗಳನ್ನು ಗೆದ್ದುಕೊಂಡು ಬಂದು ಯಡಿಯೂರಪ್ಪ ಮುಖ್ಯಮಂತ್ರಿಯಾದರು.

ಕುಮಾರಸ್ವಾಮಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿ, ಆ ಬಳಿಕ ಮುಖ್ಯಮಂತ್ರಿಯಾಗಿ ಅವರು ಹಮ್ಮಿಕೊಂಡ ಕೆಲವು ಕಾರ್ಯಕ್ರಮಗಳು ಜನಪ್ರಿಯತೆ ತಂದು ಕೊಟ್ಟವು. ಮುಖ್ಯವಾಗಿ ಸ್ತ್ರೀಭ್ರೂಣ ಹತ್ಯೆ ತಡೆಗಟ್ಟಿ, ಹೆಣ್ಣು ಮಕ್ಕಳು ಶೈಕ್ಷಣಿಕವಾಗಿ ಮುನ್ನಡೆಯಲು ಸಹಾಯಕವಾಗುವ ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ, ಹೆಣ್ಣು ಮಕ್ಕಳಿಗೆ ಸೈಕಲ್ ಯೋಜನೆ ಜಾರಿ ತಂದರು. ಇವು ಕ್ರಾಂತಿಕಾರಿ ಯೋಜನೆ ಎನಿಸಿಕೊಂಡವು.

2018 ರಲ್ಲೂ ಬಹುಮತಕ್ಕೆ ಕೆಲವೇ ಸೀಟುಗಳ ಕೊರತೆಯಿಂದ ಅಧಿಕಾರದಿಂದ ಬಿಜೆಪಿ ವಂಚಿತವಾಯಿತು. ಆದರೆ, ಮೈತ್ರಿ ಸರ್ಕಾರದಲ್ಲಿ ತಲೆದೋರಿದ ಬಿಕ್ಕಟ್ಟು ಬಿಜೆಪಿಗೆ ವರವಾಯಿತು. ಅಲ್ಲಿ ಬಂಡಾಯ ಎದ್ದು ಹೊರಬಂದ 17 ಶಾಸಕರು ಯಡಿಯೂರಪ್ಪ ಅವರ ನಾಯಕತ್ವದ ಬಿಜೆಪಿ ಸರ್ಕಾರದ ರಚನೆಗೆ ಕಾರಣರಾದರು. ಪಕ್ಷಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದ್ದೂ ಮಾತ್ರವಲ್ಲದೇ, ಬಿಜೆಪಿ ನೆರಳೂ ಸೋಕದ ಪ್ರದೇಶದಲ್ಲಿ ಕಮಲವನ್ನು ಅರಳಿಸುವಲ್ಲಿ ಯಡಿಯೂರಪ್ಪ ಅವರ ಪ್ರಭಾವ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಪ್ರಮುಖ ಕಾರಣವಾಗಿದೆ.

ಸರ್ವ ಜನರ ನಾಯಕ

ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವ ತತ್ವದಲ್ಲಿ ನಂಬಿಕೆಯುಳ್ಳ ಯಡಿಯೂರಪ್ಪ ಅವರು, ಬಸವಣ್ಣ ಅವರ ಕಾಯಕ ತತ್ವವನ್ನು ಅನುಸರಿಸುತ್ತಿದ್ದಾರೆ. ಸರ್ವ ಸಮಾಜಗಳನ್ನು ಒಟ್ಟಿಗೆ ಹೇಗೆ ಒಯ್ಯಬಹುದು ಎಂಬ ಬಗ್ಗೆ ಅವರಿಗೆ ಅಣ್ಣ ಬಸವಣ್ಣ ಅವರೇ ಸ್ಫೂರ್ತಿ. ಈ ನಿಟ್ಟಿನಲ್ಲಿ ಯಾವುದೇ ಸಣ್ಣಪುಟ್ಟ ಜಾತಿಗಳಿಗೂ ಎಳ್ಳಷ್ಟು ಅನ್ಯಾಯವಾಗದ ರೀತಿಯಲ್ಲಿ ಮತ್ತು ಎಲ್ಲ ವರ್ಗಗಳ ಆರ್ಥಿಕ ದುರ್ಬಲರಿಗೂ ನ್ಯಾಯ ಸಿಗುವ ನಿಟ್ಟಿನಲ್ಲಿ ಅತ್ಯುತ್ತಮ ಸೂತ್ರ ರೂಪಿಸುವ ಉದ್ದೇಶ ಹೊಂದಿದ್ದಾರೆ. ಯಾವುದೇ ಅಸಂಘಟಿತ ಸಣ್ಣ ಪುಟ್ಟ ಸಮಾಜಗಳೂ ಅನಾಥ ಪ್ರಜ್ಞೆ ಎದುರಿಸಲು ಎಂತಹ ಸಂದರ್ಭದಲ್ಲೂ ಯಡಿಯೂರಪ್ಪ ಅವಕಾಶ ನೀಡುವುದಿಲ್ಲ. ನೇರ ನುಡಿ, ಪಾರದರ್ಶಕ ನಡೆ, ನಿರಂತರ ಹೋರಾಟ ಇದು ಯಡಿಯೂರಪ್ಪ ಅವರ ವ್ಯಕ್ತಿತ್ವ ಹಾಗೂ ಹಿನ್ನೆಲೆ. ಯಾವುದೇ ಸಮಸ್ಯೆಗೆ ಅವರು ಬೆನ್ನು ತಿರುಗಿಸಿದವರಲ್ಲ. ಜವಾಬ್ದಾರಿಗಳಿಂದ ನುಣುಚಿ ಪಲಾಯನ ಮಾಡುವ ಸ್ವಭಾವವನ್ನೂ ಹೊಂದಿಲ್ಲ. ಈಗ ನಡೆದಿರುವ ಮೀಸಲಾತಿ ಕುರಿತ ಹೋರಾಟಕ್ಕೂ ಈ ನಡೆ ಅನ್ವಯಿಸುತ್ತದೆ.

₹1,610 ಕೋಟಿ	₹162 ಕೋಟಿ	₹500 ಕೋಟಿ	₹2,272 ಕೋಟಿ
ಮೊದಲ ಹಂತದ ಪ್ಯಾಕೇಜ್	ಎರಡನೇ ಹಂತದ ಪ್ಯಾಕೇಜ್	ಮೂರನೇ ಹಂತದ ಪ್ಯಾಕೇಜ್	ಕಾರ್ಮಿಕರು, ಕೃಷಿಕರು, ಕೈಗಾರಿಕೋದ್ಯಮಿಗಳು, ಹೀಗೆ ವಿವಿಧ ವಲಯಗಳಿಗೆ ಘೋಷಿಸಿದ ಪ್ಯಾಕೇಜ್‌ನ ಒಟ್ಟು ಮೊತ್ತ

ಪ್ರಮುಖ ವಲಯಗಳಿಗೆ ಆರ್ಥಿಕ ಪ್ಯಾಕೇಜ್ ಘೋಷಣೆ • ಸರ್ಕಾರಿ ನೌಕರರ ವೇತನ ಪಾವತಿಗೂ ಕ್ರಮ

ಸಂಕಷ್ಟದಲ್ಲೂ ಸರ್ವರ ಹಿತ ಕಾಯ್ದ ಕರುಣಾಮಯಿ

ನಿರೀಕ್ಷೆಯೇ ಮಾಡಿರದ, ಊಹಿಸಲೂ ಆಗದ ಸಮಸ್ಯೆ ಮತ್ತು ಸವಾಲುಗಳನ್ನು ತಂದೊಡ್ಡಿದ್ದು ಕೋವಿಡ್ ಬಿಕ್ಕಟ್ಟು. ಸಾರ್ವಜನಿಕರ ಮುಕ್ತ ಸಂಚಾರಕ್ಕೆ, ಗುಂಪಾಗಿ ಸೇರಲು ಅವಕಾಶ ನೀಡಿದರೆ ಕೊರೊನಾ ಸೋಂಕು ವ್ಯಾಪಕವಾಗಿ ಹರಡುವ ಅಪಾಯವಿದ್ದರೆ, ಹೆಚ್ಚು ನಿರ್ಬಂಧಗಳನ್ನು ವಿಧಿಸತೊಡಗಿದರೆ ಆರ್ಥಿಕ ಸಂಕಷ್ಟ ಎದುರಾಗುವ ಸವಾಲೂ ಇತ್ತು. ಇಂತಹ ಸಂದಿಗ್ಧ ಪರಿಸ್ಥಿತಿಗಳನ್ನು ಯಶಸ್ವಿಯಾಗಿ ಮತ್ತು ಸಮರ್ಥವಾಗಿ ನಿಭಾಯಿಸಿದ್ದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು.

ಸ್ವತಃ ಯಡಿಯೂರಪ್ಪನವರೇ ಕೋವಿಡ್ ಪೀಡಿತರಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ಆದರೂ ಕರ್ತವ್ಯವನ್ನು ಮಾತ್ರ ಮರೆಯಲೇ ಇಲ್ಲ. ತಾವು ದಾಖಲಾಗಿದ್ದ ಆಸ್ಪತ್ರೆಯ ವಾರ್ಡ್‌ನಿಂದಲೇ ಕಡತಗಳನ್ನು ವಿಲೇವಾರಿ ಮಾಡುತ್ತಾ ಆಡಳಿತಕ್ಕೆ ಕೊಂಚವೂ ತೊಂದರೆಯಾಗದಂತೆ ಕಾರ್ಯನಿರ್ವಹಿಸಿದರು. ತುರ್ತು ಆಗಲೇಬೇಕಾದ ಕಾರ್ಯಗಳಿಗೆ ಯಾವುದೇ ಅಡ್ಡಿಯಾಗದಂತೆ ನೋಡಿಕೊಂಡರು. ಆ ಮೂಲಕ ನಾಡಿನ ಜನತೆಗೆ ಆತ್ಮವಿಶ್ವಾಸದ ಪಾಠವನ್ನೂ ಹೇಳಿಕೊಟ್ಟರು.

ಕೋವಿಡ್ ಮತ್ತು ಲಾಕ್‌ಡೌನ್‌ನಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದ ಸಮುದಾಯಗಳಿಗೆ ಹಣಕಾಸಿನ ತೊಂದರೆಯ ನಡುವೆಯೂ ಆರ್ಥಿಕ ಪ್ಯಾಕೇಜ್ ಘೋಷಿಸಿದರು. ಕೋವಿಡ್ ನಿರ್ವಹಣೆಗೆ ಸರ್ಕಾರ ಸಮರೋಪಾದಿಯಲ್ಲಿ ಸಿದ್ಧತೆ ನಡೆಸಿತು. ಅಕ್ಕ-ಪಕ್ಕದ ರಾಜ್ಯಗಳಲ್ಲಿ ಸರ್ಕಾರಿ ನೌಕರರ ವೇತನವನ್ನು ಹಲವು ಕಂತುಗಳಲ್ಲಿ ವಿತರಿಸುವ ಅಥವಾ ಕಡಿತಗೊಳಿಸಿ ಪಾವತಿಸುವ ಕೆಲಸಕ್ಕೆ ಮುಂದಾಗಿದ್ದರು. ಆದರೆ, ಯಡಿಯೂರಪ್ಪ ನೇತೃತ್ವದ ಸರ್ಕಾರವು ಹಲವು ಮಿತಿಗಳ ನಡುವೆಯೂ ಸಕಾಲದಲ್ಲಿ ಸರ್ಕಾರಿ ನೌಕರರಿಗೆ ಪಾವತಿಸುವ ಮೂಲಕ ಆಡಳಿತ ಯಂತ್ರವನ್ನು ಕ್ರಿಯಾಶೀಲವಾಗಿ ಇಟ್ಟರು.

ಲಾಕ್‌ಡೌನ್‌ನಿಂದ ಸಂಚಾರ ನಿರ್ಬಂಧಿಸಲಾಗಿತ್ತು. ಸಾರ್ವಜನಿಕ ಸಾರಿಗೆ ವಾಹನಗಳೂ ರಸ್ತೆಗೆ ಇಳಿದಿರಲಿಲ್ಲ. ಪರಿಣಾಮ ಕೆಎಸ್‌ಆರ್‌ಟಿಸಿ ಸೇರಿದಂತೆ ಎಲ್ಲ ಸಾರಿಗೆ ನಿಗಮಗಳಿಗೆ ಆರ್ಥಿಕವಾಗಿ ದೊಡ್ಡ ಹೊಡೆತ ಬಿತ್ತು. ಆದರೂ, ಈ ನೌಕರರಿಗೆ ವೇತನ ಪಾವತಿಸಲಾಯಿತು. ಉಳಿಕೆ ರಜೆಗಳ ಪಾವತಿಗೂ ಅವಕಾಶ ಮಾಡಿಕೊಟ್ಟಿದ್ದು ಯಡಿಯೂರಪ್ಪನವರ ಕಾಳಜಿಗೆ ಸಾಕ್ಷಿ.

ಸರ್ವರಿಗೂ ಸ್ಪಂದನೆ:

ಸಾಂಕ್ರಾಮಿಕ ರೋಗದ ಕಾರಣ ಉದ್ದಿಮೆ, ವ್ಯಾಪಾರ ಮತ್ತು ವಹಿವಾಟುಗಳು ಸ್ಥಗಿತಗೊಂಡಾಗ ಹತಾಶರಾದ ಅಸಂಘಟಿತ ವಲಯದ ಕಾರ್ಮಿಕರು, ರೈತರು, ಹೂವು, ಹಣ್ಣು ಮತ್ತು ತರಕಾರಿ ಬೆಳೆಗಾರರು, ರೇಷ್ಮೆ ಬೆಳೆಗಾರರು, ನೇಕಾರರು ಮತ್ತು ಮೀನುಗಾರರು, ಕಟ್ಟಡ ನಿರ್ಮಾಣ ವಲಯದ ಕಾರ್ಮಿಕರು, ಪಾರಂಪರಿಕ ವೃತ್ತಿನಿರತ ಕ್ಷೌರಿಕರು ಮತ್ತು ಮಡಿವಾಳರು, ಟ್ಯಾಕ್ಸಿ ಚಾಲಕರು ಮತ್ತು ಆಟೊ ಚಾಲಕರು ಸೇರಿ ಬಡವರಿಗೆ ಧನಸಹಾಯ ಒದಗಿಸಲಾಯಿತು. ಸಮಾಜದ ಎಲ್ಲ ವರ್ಗ ಮತ್ತು ವಲಯಗಳು ಚೇತರಿಸಿಕೊಳ್ಳಲು ಅವಶ್ಯಕವಾದ ಎಲ್ಲ ಕ್ರಮಗಳನ್ನೂ ಮುಖ್ಯಮಂತ್ರಿ ಕೈಗೊಂಡರು.

ವಿದ್ಯಾಗಮದ ರೂವಾರಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸುವ ಬಗ್ಗೆ ಅಕ್ಕ-ಪಕ್ಕದ ರಾಜ್ಯಗಳು ಇನ್ನೂ ಯೋಚಿಸುತ್ತಿರುವಾಗ ಅದನ್ನೂ ಯಶಸ್ವಿಯಾಗಿ ನಡೆಸಿದವರು ಬಿ.ಎಸ್. ಯಡಿಯೂರಪ್ಪ. ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿದ್ದ ಸಂದರ್ಭದಲ್ಲಿ ಎಲ್ಲರೂ ಆತಂಕಕ್ಕೆ ಈಡಾಗಿದ್ದರು. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಪೋಷಕರ ಮನವೊಲಿಸಿ, ಅವರಲ್ಲಿಯೂ ವಿಶ್ವಾಸ ಮೂಡುವಂತಹ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಸುಮಾರು 8 ಲಕ್ಷ ವಿದ್ಯಾರ್ಥಿಗಳಿಂದ ಪರೀಕ್ಷೆ ಬರೆಸಿದರು. ನಂತರ ಸಿಇಟಿಯನ್ನೂ ಯಶಸ್ವಿಯಾಗಿ ನಡೆಸಲಾಯಿತು.

ಶೈಕ್ಷಣಿಕ ಚಟುವಟಿಕೆ ನಡೆಯದೇ ಹೆಚ್ಚಾಗಿ ಸರ್ಕಾರಿ ಶಾಲೆಯ ಮಕ್ಕಳು ಸಂಕಷ್ಟಕ್ಕೆ ಈಡಾದಾಗ, ಕಲಿಕೆಗೆ ತೊಂದರೆಯಾಗದಿರುವಂತೆ ವಿನೂತನವಾಗಿ ವಿದ್ಯಾಗಮ ಕಾರ್ಯಕ್ರಮವನ್ನು ಜಾರಿ ಮಾಡಲಾಯಿತು. ವಿದ್ಯಾರ್ಥಿಗಳ ಮನೆ ಬಾಗಿಲಿಗೇ ತೆರಳಿ ಪಾಠ ಮಾಡಲಾಯಿತು. ಬಿಸಿಯೂಟದ ಬದಲು, ಮಕ್ಕಳನ್ನು ಶಾಲೆಗೆ ಕರೆಸಿ ಪಡಿತರ ವಿತರಿಸಲಾಯಿತು. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕರ್ನಾಟಕ ಕೈಗೊಂಡ ಇಂತಹ ಕ್ರಮಗಳನ್ನು, ಮಾದರಿಗಳನ್ನು ಕೇಂದ್ರ ಹಾಗೂ ಇತರೆ ರಾಜ್ಯ ಸರ್ಕಾರಗಳೂ ಅನುಸರಿಸಿದ್ದು ಯಡಿಯೂರಪ್ಪನವರ ದೂರದೃಷ್ಟಿಯ ನಾಯಕತ್ವಕ್ಕೆ ಸಾಕ್ಷಿ.

ಕೋವಿಡ್‌ನಿಂದ ಸಂಕಷ್ಟಕ್ಕೆ ಈಡಾಗಿದ್ದ ಪೋಷಕರು ಖಾಸಗಿ ಶಾಲೆಗಳ ಶುಲ್ಕವನ್ನು ಕಟ್ಟಲಾಗದೇ ಕಷ್ಟದಲ್ಲಿದ್ದಾಗ, ಬೋಧನಾ ಶುಲ್ಕದಲ್ಲಿ ಶೇ 30ರಷ್ಟನ್ನು ಕಡಿತಗೊಳಿಸುವ ಮೂಲಕ ಬಡ ಪೋಷಕರ ನೆರವಿಗೂ ಧುಮುಕಿದವರು ಬಿಎಸ್‌ವೈ.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ ಅವರು ಆಶಾ ಕಾರ್ಯಕರ್ತೆಯರಿಗೆ ತಲಾ ₹ 3 ಸಾವಿರ ಪ್ರೋತ್ಸಾಹಧನದ ಚೆಕ್ ನೀಡಿದರು

ಚಿತ್ರರಂಗದ ಮನವಿಗೂ ಸ್ಪಂದನೆ

ಕೋವಿಡ್ ಬಿಕ್ಕಟ್ಟಿನಿಂದ ಹೆಚ್ಚು ಸಂಕಷ್ಟಕ್ಕೆ ಒಳಗಾದ ಉದ್ಯಮಗಳಲ್ಲಿ ಕನ್ನಡ ಚಿತ್ರರಂಗವೂ ಒಂದು. ಚಿತ್ರರಂಗದ ಕಾರ್ಮಿಕರಿಗೆ ಆರ್ಥಿಕ ನೆರವು ಘೋಷಿಸಲು ಕ್ರಮ ಕೈಗೊಳ್ಳುವುದರ ಜೊತೆಗೆ ಚಿತ್ರಮಂದಿರಗಳನ್ನು ತೆರೆಯಲೂ ಅವಕಾಶ ನೀಡಲಾಯಿತು. ಅಲ್ಲದೆ, ಶೇ 100 ಸೀಟು ಭರ್ತಿಗೂ ಅನುಮತಿ ನೀಡಲಾಯಿತು. ಸ್ಟುಡಿಯೊಗಳಿಗೆ ವಿದ್ಯುತ್ ಶುಲ್ಕ, ನೀರಿನ ಶುಲ್ಕ, ಆಸ್ತಿ ತೆರಿಗೆಯಲ್ಲಿ ವಿನಾಯಿತಿ ನೀಡಬೇಕು, ಏಕಪರದೆಯ ಚಿತ್ರಮಂದಿರಗಳಲ್ಲಿರುವ ಕಾರ್ಮಿಕರನ್ನು ಕಾರ್ಮಿಕ ಇಲಾಖೆಯ ಪರಿಮಿತಿಯಲ್ಲಿ ಪರಿಗಣಿಸುವುದು ಸೇರಿದಂತೆ ಚಿತ್ರರಂಗದ 14ಕ್ಕೂ ಹೆಚ್ಚು ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಮೂಲಕ ಯಡಿಯೂರಪ್ಪ ಕಾಳಜಿ ಮೆರೆದರು.

ಸರ್ವರಿಗೆ ಪರಿಹಾರದ ಮಹಾಪೂರ

- ಹೂವು ಬೆಳೆಗಾರರಿಗೆ ಹೆಕ್ಟೇರ್‌ಗೆ ಗರಿಷ್ಠ ₹25 ಸಾವಿರ ಪರಿಹಾರ
- ಹಣ್ಣು, ತರಕಾರಿ ಬೆಳೆಗಾರರಿಗೆ ಹೆಕ್ಟೇರ್‌ಗೆ ಗರಿಷ್ಠ 15 ಸಾವಿರ ಪರಿಹಾರ
- ಮೆಕ್ಕೆಜೋಳ ಬೆಳೆಗಾರರಿಗೆ ತಲಾ ₹5000 ಪರಿಹಾರ
- ಕ್ಷೌರಿಕರು, ಮಡಿವಾಳರು, ಆಟೊ-ಟ್ಯಾಕ್ಸಿ ಚಾಲಕರಿಗೆ ತಲಾ ₹5000 ಪರಿಹಾರ
- ಆಶಾ ಕಾರ್ಯಕರ್ತೆಯರಿಗೆ ತಲಾ ₹3000 ಪ್ರೋತ್ಸಾಹಧನ
- ಅತಿ ಸಣ್ಣ, ಮಧ್ಯಮ ಉದ್ಯಮಗಳ ವಿದ್ಯುತ್ ಬಿಲ್‌ನ ನಿಶ್ಚಿತ ಶುಲ್ಕ ಎರಡು ತಿಂಗಳು ಮನ್ನಾ
- ಕೈಮಗ್ಗ ನೇಕಾರರಿಗೆ ಪ್ರತಿ ವರ್ಷ ₹2000 ನೀಡುವ ನೇಕಾರ ಸಮ್ಮಾನ್ ಯೋಜನೆಗೆ ಚಾಲನೆ
- 15.80 ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ತಲಾ ₹5000 ಪರಿಹಾರ
- ಲಾಕ್‌ಡೌನ್ ಅವಧಿಯಲ್ಲಿ ಅಗ್ರಿ ವಾರ್‌ರೂಮ್ ತೆರೆದು ರೈತರಿಗೆ ಸಲಹೆ
- 540 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ತೆರೆದು ರೈತರಿಗೆ ಅಗತ್ಯ ಉಪಕರಣ ವಿತರಣೆ
- ರೈತರಿಗೆ ಹಸಿರು ಪಾಸ್‌ಗಳನ್ನು ನೀಡುವ ಮೂಲಕ ಹಣ್ಣು-ತರಕಾರಿ ಖರೀದಿಸಲು ಅವಕಾಶ
- ರೇಷ್ಮೆಗೂಡಿಗೆ ರಕ್ಷಣಾತ್ಮಕ ದರ ನೀಡಲು ಕ್ರಮ
- ಕೃಷಿ ಮತ್ತು ಸ್ವಸಹಾಯ ಗುಂಪುಗಳ ಸಾಲ ಮಂಜೂರಾತಿ ಅವಧಿ ಒಂದು ವರ್ಷ ವಿಸ್ತರಣೆ

ಪಡಿತರ, ಆಹಾರ ವಿತರಣೆಗೆ ಕ್ರಮ

ನಿರ್ಗತಿಕರು, ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರು, ದೈನಂದಿನ ಕೂಲಿ ಕಾರ್ಮಿಕರು ಸ್ವಂತ ಊರಿಗೆ ಹಿಂದಿರುಗಲು ಸಾಧ್ಯವಾಗದೇ ಉಳಿದಿರುವಂಥವರ ಮತ್ತು ವಸತಿ ರಹಿತರನ್ನು ಗುರುತಿಸಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಶಾಲೆ ಮತ್ತು ಸಮುದಾಯ ಭವನಗಳಲ್ಲಿ ಉಚಿತ ಆಶ್ರಯ ವ್ಯವಸ್ಥೆ ಮಾಡಲಾಯಿತು. ಆಶ್ರಯ ಕೇಂದ್ರಗಳಲ್ಲಿ ಉಚಿತವಾಗಿ ಊಟ, ಶುದ್ಧ ಕುಡಿಯುವ ನೀರು, ಶೌಚಾಲಯ ಹಾಗೂ ವೈದ್ಯಕೀಯ ವ್ಯವಸ್ಥೆ ಕಲ್ಪಿಸಲಾಯಿತು.

ಕಟ್ಟಡ ಮತ್ತು ವಲಸೆ ಕಾರ್ಮಿಕರಿಗೆ 84.75 ಲಕ್ಷ ಸಿದ್ಧಪಡಿಸಿದ ಆಹಾರ ಪ್ಯಾಕೇಟ್ ವಿತರಿಸಲಾಯಿತು. ಲಾಕ್‌ಡೌನ್ ಸಂದರ್ಭದಲ್ಲಿಯೂ ಬಡವರಿಗೆ ಆಹಾರ ಒದಗಿಸುವ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳ ಕಾರ್ಯನಿರ್ವಹಣೆಗೆ ವ್ಯವಸ್ಥೆ ಮಾಡಿದರು. ಕೋವಿಡ್‌ನಿಂದ ಹೊಸ-ಹೊಸ ಸವಾಲುಗಳು ಎದುರಾಗುತ್ತಿದ್ದರೂ, ಆಯಾ ಹಂತದಲ್ಲಿಯೇ ಅವುಗಳಿಗೆ ಪರಿಹಾರ ಕಂಡುಕೊಳ್ಳುತ್ತಾ ಸಾಗಿದರು. ಇಂತಹ ಬಿಕ್ಕಟ್ಟುಗಳನ್ನು ಎದುರಿಸಲು ಬೇಕಾದ ಸಮರ್ಥ ಮತ್ತು ದೂರದೃಷ್ಟಿಯ ನಾಯಕತ್ವದ ಮಾದರಿಯನ್ನು ಪ್ರದರ್ಶಿಸುವ ಮೂಲಕ ಕೇಂದ್ರ ಸರ್ಕಾರದಿಂದಲೂ ಪ್ರಶಂಸೆಗೆ ಪಾತ್ರರಾದರು ಜನನಾಯಕ ಬಿ.ಎಸ್. ಯಡಿಯೂರಪ್ಪ.



ಕೋವಿಡ್‌ನಿಂದ ಬಳಲುತ್ತಿದ್ದ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ ಗುಣಮುಖರಾದ ವೇಳೆ ಆಸ್ಪತ್ರೆಯ ಸಿಬ್ಬಂದಿಗೆ ಧನ್ಯವಾದ ತಿಳಿಸಿದರು

ಕಾಯಕ ಯೋಗಿ ಬಿ.ಎಸ್. ಯಡಿಯೂರಪ್ಪ

ವಿಶೇಷ ಪುಟ

ಯಡಿಯೂರಪ್ಪ ದೂರದೃಷ್ಟಿಯ ಫಲ 'ಬೆಂಗಳೂರು ಮಿಷನ್ 2020'

ಜಾಗತಿಕ ಮಟ್ಟಕ್ಕೆ 'ಬೆಂಗಳೂರು ಬ್ರ್ಯಾಂಡ್'

ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ಬೆಂಗಳೂರಿಗೆ ಸುಸಜ್ಜಿತ ಮೂಲಸೌಕರ್ಯ ಕಲ್ಪಿಸಿ, ನಗರದ ಖ್ಯಾತಿಯನ್ನು ಉತ್ತುಂಗಕ್ಕೆ ಏರಿಸಬೇಕೆಂಬುದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಕನಸು. ರಾಜ್ಯದ ರಾಜಧಾನಿಗೆ ನವಚೈತನ್ಯ ತುಂಬುವ ಈ ಕನಸನ್ನು ಸಾಕಾರಗೊಳಿಸಬೇಕೆಂಬ ಉದ್ದೇಶದಿಂದ ಅವರ ಮನದ ಮೂಸೆಯಲ್ಲಿ ರೂಪುಗೊಂಡ ಯೋಜನೆಯೇ 'ಬೆಂಗಳೂರು ಮಿಷನ್ 2020'.

ಬೆಂಗಳೂರು ಅಭಿವೃದ್ಧಿ ಖಾತೆಯನ್ನೂ ಸ್ವತಃ ನಿಭಾಯಿಸುತ್ತಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬೆಂಗಳೂರು ನಗರವು ಎದುರಿಸುತ್ತಿರುವ ಸವಾಲುಗಳ ಅರಿವಿದೆ. ಈ ಸವಾಲುಗಳನ್ನೆಲ್ಲ ಮೆಟ್ಟಿನಿಂತು ಸುಂದರ ಸುಸಜ್ಜಿತ ನಗರ ನಿರ್ಮಿಸುವ ಆಶಯದೊಂದಿಗೆ 'ಬೆಂಗಳೂರು ಮಿಷನ್ 2022' ಯೋಜನೆಯನ್ನು ಅವರು ರೂಪಿಸಿದ್ದಾರೆ. ಸುಗಮ ಸಂಚಾರಕ್ಕಾಗಿ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು, ಚತುರ ಸಾರಿಗೆ ವ್ಯವಸ್ಥೆ ಜಾರಿ, 'ಸ್ವಚ್ಛ ಬೆಂಗಳೂರು', 'ಹಸಿರು ಬೆಂಗಳೂರು', ಜಲಮೂಲಗಳ ಸಂರಕ್ಷಣೆ, ಜನ ಸಂಪರ್ಕಕ್ಕಾಗಿ ಏಕೀಕೃತ ಡಿಜಿಟಲ್ ಪೋರ್ಟಲ್ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಈ ಯೋಜನೆಯಡಿ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ.

ಸುಗಮ ಸಂಚಾರ:
ಬೆಂಗಳೂರು ನಗರದಲ್ಲಿ ಎರಡು ದಶಕಗಳಲ್ಲಿ ವಾಹನಗಳ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಳವಾಗಿವೆ. ಇಲ್ಲಿ 80 ಲಕ್ಷಕ್ಕೂ ಅಧಿಕ ವಾಹನಗಳು ನೋಂದಣಿಯಾಗಿವೆ. ಹಾಗಾಗಿ ನಗರಕ್ಕೆ ಸುಗಮ ಸಂಚಾರ ವ್ಯವಸ್ಥೆ ರೂಪಿಸುವುದು 'ಬೆಂಗಳೂರು ಮಿಷನ್ 2020'ಯ ಪ್ರಮುಖ ಅಂಶಗಳಲ್ಲಿ ಒಂದು. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಹಾಗೂ ಸಾರಿಗೆ ಮೂಲಸೌಕರ್ಯಗಳನ್ನು ಬಲಪಡಿಸುವ ಮೂಲಕ ಸಂಚಾರ ದಟ್ಟಣೆಯ ಕಿರಿಕಿರಿಗೆ ಮುಕ್ತಿ ನೀಡಲು ರೂಪರೇಷೆಗಳು ಸಜ್ಜಾಗಿವೆ. ನಮ್ಮ ಮೆಟ್ರೊ ಜಾಲದ ವಿಸ್ತರಣೆ, ದಶಕಗಳ ಕನಸಾಗಿರುವ ಉಪನಗರ ರೈಲು ಯೋಜನೆಯ ಪರಿಣಾಮಕಾರಿ ಅನುಷ್ಠಾನ, ಜಾಗತಿಕ ಗುಣಮಟ್ಟದ ರಸ್ತೆಗಳ ನಿರ್ಮಾಣಕ್ಕಾಗಿ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

ಉಪನಗರ ರೈಲು ಯೋಜನೆ ಕನಸು ನನಸು

ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ಉಪನಗರ ರೈಲು ವ್ಯವಸ್ಥೆ ಹೊಂದುವ ದಶಕಗಳ ಕನಸು ಯಡಿಯೂರಪ್ಪ ನೇತೃತ್ವದ ಸರ್ಕಾರದ ಅವಧಿಯಲ್ಲಿ ಸಾಕಾರಗೊಳ್ಳುತ್ತಿದೆ. ಕೇಂದ್ರ ಸರ್ಕಾರವು 2020–21ನೇ ಸಾಲಿನ ಬಜೆಟ್‌ನಲ್ಲಿ ₹ 15,767 ಕೋಟಿ ವೆಚ್ಚದ ಈ ಯೋಜನೆಯನ್ನು ಅಧಿಕೃತವಾಗಿ ಪ್ರಕಟಿಸಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ ಶೇ 20ರಷ್ಟು (₹ 2,479 ಕೋಟಿ) ವೆಚ್ಚವನ್ನು ಭರಿಸಲಿವೆ. ಶೇ 60ರಷ್ಟು (₹ 7,438 ಕೋಟಿ) ಮೊತ್ತವನ್ನು ಸಾಲ ಪಡೆಯಲಾಗುತ್ತದೆ. ಭೂಸ್ವಾಧೀನ ಮತ್ತು ಪುನರ್ವಸತಿಗೆ ರಾಜ್ಯ ₹ 1,470 ಕೋಟಿ ಭರಿಸಲಿದೆ.

ಬೆಂಗಳೂರಿನಲ್ಲಿ ಸ್ಮಾರ್ಟ್ ಸಿಟಿ ರಸ್ತೆ ಕಾಮಗಾರಿಗಳನ್ನು ಪರಿಶೀಲಿಸಿದ ಮುಖ್ಯಮಂತ್ರಿ ಬಿ. ಎಸ್ ಯಡಿಯೂರಪ್ಪ

ರಸ್ತೆ ಮೂಲಸೌಕರ್ಯ ಮೇಲ್ದರ್ಜೆಗೆ:
ನಗರದಲ್ಲಿ ಅತಿ ಹೆಚ್ಚು ಸಂಚಾರ ದಟ್ಟಣೆ ಹೊಂದಿರುವ 12 ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಅತ್ಯುತ್ತಮವಾಗಿ ನಿರ್ವಹಣೆ ಮಾಡುವ ಕಾರ್ಯಕ್ರಮವನ್ನು ಮಿಷನ್ 2022 ಯೋಜನೆಯಡಿ ಹಮ್ಮಿಕೊಳ್ಳಲಾಗಿದೆ. ಒಟ್ಟು 190 ಕಿ.ಮೀ ಉದ್ದದ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಹೊಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ವಹಿಸಲಾಗಿದೆ.

ಸ್ಮಾರ್ಟ್ ಸಿಟಿ ಯೋಜನೆಯಡಿಯೂ 36 ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ವಾರ್ಷಿಕ ನಿರ್ವಹಣಾ ಒಪ್ಪಂದದ ಮೂಲಕ 400 ಕಿ.ಮೀ ಉದ್ದದ ಸಂಪರ್ಕ ರಸ್ತೆಗಳ ಅತ್ಯುತ್ತಮ ನಿರ್ವಹಣೆಗೂ ಕ್ರಮ ಕೈಗೊಳ್ಳಲಾಗಿದೆ. ರಸ್ತೆ ಸುರಕ್ಷತಾ ಪರಿಕರಗಳನ್ನು ಅಳವಡಿಸಿ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಪರಸ್ಪರ ಸಮನ್ವಯ ಹೊಂದಿರುವ ಸಿಗ್ನಲ್ ದೀಪಗಳನ್ನು ಅಳವಡಿಸುವ ಮೂಲಕ ಜನ ಅನಗತ್ಯವಾಗಿ ಸಿಗ್ನಲ್‌ಗಳ ಬಳಿ ಕಾಯುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗಿದೆ.

'ಹಸಿರು ಬೆಂಗಳೂರು': ನಗರದ ಪರಿಸರ ಸಂರಕ್ಷಣೆ ಸಲುವಾಗಿಯೇ ವಿವಿಧೆಡೆ ಕಿರು ಅರಣ್ಯಗಳನ್ನು ಅಭಿವೃದ್ಧಿಪಡಿಸಲು ಮಿಷನ್ 2022 ಅಡಿ ಕಾರ್ಯಕ್ರಮ ಅಳವಡಿಸಲಾಗಿದೆ. ಹೊರ ವಲಯಗಳಲ್ಲಿ 400 ಎಕರೆಗಳಷ್ಟು ವಿಶಾಲವಾದ ವೃಕ್ಷೋದ್ಯಾನಗಳನ್ನು ನಿರ್ಮಿಸಲಾಗುತ್ತದೆ. ಸರ್ಕಾರಿ ಉದ್ದಿಮೆಗಳ ಭೂಮಿಯನ್ನು ಬಳಸಿಕೊಂಡು ಹಸಿರು ಹೊದಿಕೆ ಹೆಚ್ಚಿಸಲಾಗುತ್ತದೆ. ಕಾಡುಗೋಡಿಯಲ್ಲಿ 102 ಎಕರೆಯಷ್ಟು ವಿಶಾಲವಾದ ವೃಕ್ಷೋದ್ಯಾನ ಮುಂಬರುವ ಮೇ ಅಂತ್ಯಕ್ಕೆ ಮತ್ತು ಮಾಚೋಹಳ್ಳಿಯ 98 ಎಕರೆ ವೃಕ್ಷೋದ್ಯಾ ಜೂನ್ ಒಳಗೆ ಲೋಕಾರ್ಪಣೆಗೊಳ್ಳಲಿವೆ. ಹಸಿರು ಬೆಂಗಳೂರಿಗಾಗಿ ನೆರೆಹೊರೆ ಎಂಬ ಧ್ಯೇಯವಾಕ್ಯದೊಂದಿಗೆ ಗಿಡ–ಮರಗಳ ಸಂರಕ್ಷಣೆಗೆ ಜನರ ಸಹಭಾಗಿತ್ವವನ್ನೂ ಪಡೆಯುವ ಹಾಗೂ ಅವರ ಉತ್ತರದಾಯಿತ್ವ ಹೆಚ್ಚಿಸುವ ಅಂಶವನ್ನೂ ಈ ಕಾರ್ಯಕ್ರಮದಡಿ ಅಳವಡಿಸಿಕೊಳ್ಳಲಾಗಿದೆ. ❖

ನಮ್ಮ ಮೆಟ್ರೊ– ಕಾಮಗಾರಿ ಚುರುಕು

ನಮ್ಮ ಮೆಟ್ರೊ ಎರಡನೇ ಹಂತದ ವಿಸ್ತರಣಾ ಕಾಮಗಾರಿಗಳನ್ನು ಚುರುಕುಗೊಳಿಸಲಾಗಿದೆ. ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ನಿರ್ಮಾಣಗೊಂಡ ಯಲಚೇನಹಳ್ಳಿಯಿಂದ ರೇಷ್ಮೆ ಸಂಸ್ಥೆಯವರೆಗಿನ ಎತ್ತರಿಸಿದ ಮಾರ್ಗ 2021ರ ಜ.15ರಂದು ಲೋಕಾರ್ಪಣೆಗೊಂಡಿದೆ.

ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್.ಪುರದವರೆಗಿನ ಮಾರ್ಗ (2ಎ) ಮತ್ತು ಕೆ.ಆರ್.ಪುರದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ಮಾರ್ಗಗಳ (2ಬಿ) ಅನುಷ್ಠಾನಕ್ಕೆ ಇದ್ದ ತೊಡಕು ನಿವಾರಣೆ ಆಗಿವೆ. ಈ ಮಾರ್ಗಗಳ ನಿರ್ಮಾಣ ಯೋಜನೆಗಳಿಗೆ ಕೇಂದ್ರ ಸರ್ಕಾರ 2021–22ನೇ ಸಾಲಿನ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡಿದೆ. ಒಟ್ಟು 58.19 ಕಿ.ಮೀ ಉದ್ದದ ಈ ಮಾರ್ಗಗಳ ಕಾಮಗಾರಿಗೆ ₹ 14,788 ಕೋಟಿ ವೆಚ್ಚವಾಗಲಿದೆ. ಗೊಟ್ಟಿಗೆರೆ– ನಾಗವಾರ ಮಾರ್ಗದಲ್ಲಿ ಡೇರಿ ವೃತ್ತದಿಂದ ನಾಗವಾರದವರೆಗೆ ನಿರ್ಮಾಣವಾಗಲಿರುವ 13 ಕಿ.ಮೀ ಉದ್ದದ ಸುರಂಗ ಕೊರೆಯುವ ಕಾಮಗಾರಿಯೂ ಚುರುಕಿನಿಂದ ಸಾಗುತ್ತಿದೆ. ಮೈಸೂರು ರಸ್ತೆ ನಿಲ್ದಾಣ– ಕೆಂಗೇರಿ ನಡುವಿನ ಎತ್ತರಿಸಿದ ಮಾರ್ಗದ ಕಾಮಗಾರಿಗಳೂ ಬಹುತೇಕ ಪೂರ್ಣಗೊಂಡಿದ್ದು, ಶೀಘ್ರವೇ ಕಾರ್ಯಾರಂಭ ಮಾಡಲಿದೆ.

ಬಿಬಿಎಂಪಿ ಆಡಳಿತ ಬಲಪಡಿಸಲು ಹೊಸ ಕಾಯ್ದೆ

ಬಿಬಿಎಂಪಿಗೆ ಸಮರ್ಥ ಆಡಳಿತ ವ್ಯವಸ್ಥೆ ರೂಪಿಸುವ ನಿಟ್ಟಿನಲ್ಲಿ ಸರ್ಕಾರ 'ಬಿಬಿಎಂಪಿ ಕಾಯ್ದೆ– 2020' ಅನ್ನು ಜಾರಿಗೆ ತಂದಿದೆ. ಮೇಯರ್ ಅಧಿಕಾರಾವಧಿಯನ್ನು ಎರಡೂವರೆ ವರ್ಷಗಳಿಗೆ ಹೆಚ್ಚಿಸುವ ಹಾಗೂ ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ ಜನರ ಕೈಗೆ ಹೆಚ್ಚು ಅಧಿಕಾರ ನೀಡುವ ಮಹತ್ವಾಕಾಂಕ್ಷಿ ಕಾಯ್ದೆ ಇದು. ವಾರ್ಡ್ ಸಮಿತಿಗಳ ಜೊತೆಗೆ ಏರಿಯಾ ಸಭಾ ಹಾಗೂ ವಲಯ ಸಮಿತಿ ರಚಿಸುವುದು ಈ ಕಾಯ್ದೆಯ ಪ್ರಮುಖ ಅಂಶಗಳಲ್ಲೊಂದು.

ಬಿಬಿಎಂಪಿಯ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲೂ ಸರ್ಕಾರ ಕ್ರಮ ಕೈಗೊಂಡಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕಲ್ಯಾಣ ಕರ್ನಾಟಕದ ಚಹರೆ ಬದಲಿಸಲು ಹೆಜ್ಜೆ

ಮೂಲಸೌಕರ್ಯಕ್ಕೆ ಭರಪೂರ ಕೊಡುಗೆ

ಒಂದು ಪ್ರದೇಶದ ಅಭಿವೃದ್ಧಿ ಹಾಗೂ ಆ ಮೂಲಕ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಗುಣಮಟ್ಟದ ಸಂಪರ್ಕ ವ್ಯವಸ್ಥೆ ಹಾಗೂ ಸೌಲಭ್ಯ ಈಗಿನ ಪ್ರಾಥಮಿಕ ಅಗತ್ಯ. ರಾಜಧಾನಿ ಬೆಂಗಳೂರು ನಡುವೆ ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳು ತ್ವರಿತ ಸಂಪರ್ಕಕ್ಕೆ ಬರಲು ಉತ್ತಮ ಸಂಪರ್ಕ ವ್ಯವಸ್ಥೆ ಈಗಿನ ತುರ್ತು ಅಗತ್ಯ. ಒಂದು ಕಡೆ ರಸ್ತೆಗಳ ಗುಣಮಟ್ಟ ಹೆಚ್ಚಿಸಲು ಒತ್ತು ನೀಡಿರುವಂತೆಯೇ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ದೂರದೃಷ್ಟಿ ಚಿಂತನೆಯ ರಾಜ್ಯ ಸರ್ಕಾರ ವಿಮಾನಯಾನ ಸಂಪರ್ಕ ಸೌಲಭ್ಯವನ್ನು ಉತ್ತಮಪಡಿಸಲು ಆದ್ಯತೆ ನೀಡುತ್ತಿದೆ. ವಿವಿಧ ಹಂತದಲ್ಲಿರುವ ಈ ಯೋಜನೆಗಳು ಒಮ್ಮೆ ಪೂರ್ಣವಾಗಿ ಕಾರ್ಯಗತಗೊಂಡರೆ ದೂರದ ಬೀದರ್, ವಿಜಯಪುರ, ಬೆಳಗಾವಿ ನಗರಗಳಿಂದಲೂ ಬೆಂಗಳೂರು ತಲುಪುವುದು ಕಷ್ಟವಾಗುವುದಿಲ್ಲ. ಆರಾಮದಾಯಕವಾಗಲಿದ್ದು, ಔದ್ಯಮಿಕ ಪ್ರಗತಿ ದೃಷ್ಟಿಯಿಂದ ಉತ್ತೇಜನಕಾರಿಯೂ ಆಗಲಿದೆ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಮೂಲಕ ಯಡಿಯೂರಪ್ಪ ನೇತೃತ್ವದ ಸರ್ಕಾರವು ಕಲ್ಯಾಣ ಕರ್ನಾಟಕ ಪ್ರದೇಶದ ಕಲಬುರಗಿ ವಿಮಾನ ನಿಲ್ದಾಣವನ್ನು ಈಗಾಗಲೇ ಕಾರ್ಯಾಚರಣೆಗೊಳಿಸಿದೆ. ದಿನಕ್ಕೆ ಎರಡು ವಿಮಾನಗಳು ಕಾರ್ಯಾಚರಣೆ ನಡೆಸುತ್ತಿವೆ. ಬೀದರ್ ವಿಮಾನ ನಿಲ್ದಾಣ ಪ್ರಾರಂಭಿಸಲಾಗಿದ್ದು, ದಿನಕ್ಕೆ ಒಂದು ವಿಮಾನ ಕಾರ್ಯಾಚರಣೆ ನಡೆಸುತ್ತಿದೆ. ಇತ್ತ, ಶಿವಮೊಗ್ಗ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ಐತಿಹಾಸಿಕ ಗುಮ್ಮಟನಗರಿಯನ್ನು ದೇಶದ ಪ್ರಮುಖ ನಗರಗಳೊಂದಿಗೆ ವಾಯುಯಾನದ ಮೂಲಕ ಬೆಸೆಯುವ ದಶಕಗಳ ಕನಸು ಕೊನೆಗೂ ನನಸಾಗುವ ಸಮಯ ಕೂಡಿ ಬಂದಿದೆ.

ಉದ್ದೇಶಿತ ವಿಮಾನ ನಿಲ್ದಾಣ ಕಾಮಗಾರಿಗೆ ಈಗಾಗಲೇ ಚಾಲನೆ ನೀಡಲಾಗಿದ್ದು, ನಿರೀಕ್ಷೆಯಂತೆ ಎಲ್ಲವೂ ನಡೆದರೆ ಕೆಲವೇ ಸಮಯದಲ್ಲಿ ಬಸವ ನಾಡಿನಿಂದ ಲೋಹದ ಹಕ್ಕಿಗಳ ಹಾರಾಟ ಆರಂಭವಾಗಲಿದೆ. ಈ ಮೂಲಕ ಜಿಲ್ಲೆಯ ಪ್ರವಾಸೋದ್ಯಮ, ತೋಟಗಾರಿಕೆ, ಕೈಗಾರಿಕಾ ಕ್ಷೇತ್ರದಲ್ಲಿ ಮತ್ತಷ್ಟು ವೇಗವಾಗಿ ಬೆಳೆಯಲು ನೆರವಾಗಲಿದ್ದು, ಉದ್ಯೋಗ ಸೃಷ್ಟಿಯಾಗಲಿದೆ.

ವಿಜಯಪುರ ನಗರದಿಂದ ಕೇವಲ 10 ಕಿ.ಮೀ.ದೂರದಲ್ಲಿರುವ ಮದಭಾವಿ ಮತ್ತು ಬುರಣಾಪುರ ಗ್ರಾಮಗಳ ಮಧ್ಯದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಸಂಬಂಧ ಈಗಾಗಲೇ 727 ಎಕರೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

2010ರಲ್ಲಿ ಬಿಜೆಪಿ ಸರ್ಕಾರದ ಆಡಳಿತಾವಧಿಯಲ್ಲೇ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಅಡಿಯಲ್ಲಿ ಈ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿತ್ತು. ಅಲ್ಲದೇ, ನಿಲ್ದಾಣದ ಅಭಿವೃದ್ಧಿಗಾಗಿ ಮಾರ್ಗ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಈ ಸಂಬಂಧ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಕಾರಣಾಂತರದಿಂದ ಮಾರ್ಗ್ ಕಂಪನಿಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದ 2014 ಅಕ್ಟೋಬರ್‌ನಲ್ಲಿ ರದ್ದಾಗಿತ್ತು. ಪರಿಣಾಮ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಯು ನನೆಗುದಿಗೆ ಬಿದ್ದಿತ್ತು. ಇದೀಗ ಲೋಹದ ಹಕ್ಕಿಗಳ ಹಾರಾಟಕ್ಕೆ ನಿಲ್ದಾಣ ಸಿದ್ಧಗೊಳ್ಳತೊಡಗಿದೆ.

ಬೀದರ್ ವಿಮಾನ ನಿಲ್ದಾಣ ಉದ್ಘಾಟಿಸಿದ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ

ದಶಕಗಳ ಕನಸಾಗಿದ್ದ ಹಾಸನ ವಿಮಾನ ನಿಲ್ದಾಣ ಕಾಮಗಾರಿಗೂ ಚಾಲನೆ ನೀಡಲು ಯಡಿಯೂರಪ್ಪ ಮುಂದಾಗಿದ್ದಾರೆ. ಈ ಕ್ರಮವು ಪರೋಕ್ಷವಾಗಿ ಈ ಭಾಗಗಳಲ್ಲಿ ಕೈಗಾರಿಕೆಗಳ ಅಭಿವೃದ್ಧಿ, ಉದ್ದಿಮೆಗಳ ಸ್ಥಾಪನೆಗೂ ನೆರವಾಗಲಿದೆ ಎಂದು ಆಶಿಸಲಾಗಿದೆ.

ನೀರಾವರಿಗೆ ಆದ್ಯತೆ: ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವ ಸರ್ಕಾರ ನೀರಾವರಿ ಯೋಜನೆಗಳಿಗೆ ಮೊದಲ ಆದ್ಯತೆ ನೀಡಿದೆ. ಜಲಸಂಪನ್ಮೂಲ ಇಲಾಖೆ ಹಾಗೂ ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಗಳು ವಿವಿಧ ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ಜಲಪೂರಣ, ಅಂತರ್ಜಲ ವೃದ್ಧಿಗೆ ಸಂಬಂಧಿಸಿದಂತೆ ಕೈಗೊಂಡ ವಿವಿಧ ಕಾರ್ಯಕ್ರಮಗಳು. ಕೃಷಿಕನಿಗೆ ಕೃಷಿ ಚಟುವಟಿಕೆಗಳಿಗೆ ನೀರು ಒದಗಿಸುವ ಕಾರ್ಯಕ್ಕೆಗೂಡಿದರೆ ಆತನ ಸಮಗ್ರ ಅಭಿವೃದ್ಧಿ ಆದಂತೆ ಎಂದು ನಂಬಿರುವ ಅವರು, ಹಾಲಿ ಕೆರೆಗಳಿಗೆ ನೀರು ಹರಿಸುವುದು ಸೇರಿದಂತೆ ವಿವಿಧ ಕಾರ್ಯಕ್ರಮಗಳ ಮೂಲಕ ಇದನ್ನು ಸಾಕಾರಗೊಳಿಸಲು ಮುಂದಾಗಿದ್ದಾರೆ.

ಜಲಸಂಪನ್ಮೂಲ ಇಲಾಖೆಯು 2019–20ನೇ ಆಯವ್ಯಯದಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಒಟ್ಟು ₹16984.25 ಕೋಟಿ ಪರಿಷ್ಕೃತ ಅನುದಾನ ಕಾಯ್ದಿರಿಸಿದೆ. ನಾಲೆಗಳ ಅಭಿವೃದ್ಧಿ, ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿದೆ. ಇನ್ನೊಂದೆಡೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಯು ವಿವಿಧ ಕೆರೆಗಳಿಗೆ ನೀರು ತುಂಬಿಸಲು ಒತ್ತು ನೀಡಿದೆ.

ಅಲ್ಲದೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆ ಮೂಲಕ ₹ 29 ಕೋಟಿ ಅಂದಾಜು ವೆಚ್ಚದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಯ ಬಿಕ್ಕೋನಹಳ್ಳಿ, ಕೊಮ್ಮನಾಳು, ಅಬ್ಬಲಗೆರೆ, ಬೀರನಕೆರೆ, ಕುಂಚೇನಹಳ್ಳಿ, ಕಲ್ಲಾಪುರ ಗ್ರಾಮಗಳ 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ.

ಉದ್ಯೋಗ ಸೃಷ್ಟಿ: ಯುವಜನರಿಗೆ ಉದ್ಯೋಗ ಒದಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಗಳ ಸೃಷ್ಟಿಗೆ ಆದ್ಯತೆ ನೀಡಲು ಪೂರಕವಾಗಿ ಮೂಲಸೌಕರ್ಯ ಒದಗಿಸುವುದು ಅಗತ್ಯ. ಮೂಲಸೌಕರ್ಯಗಳ ಅಭಿವೃದ್ಧಿ,ಉದ್ಯೋಗ ಸೃಷ್ಟಿ ಮತ್ತು ನಿರ್ದಿಷ್ಟ ಭಾಗದ ಅಭಿವೃದ್ಧಿ ಒಟ್ಟಿಗೇ ನಡೆಯಬೇಕಾದ ಪ್ರಕ್ರಿಯೆಗಳು. ಇವು, ಒಂದು ಸರ್ಕಾರದ ಯಶಸ್ಸನ್ನು, ಅದರ ನಾಯಕನ ಸಾಧನೆಗೆ ಕನ್ನಡಿಯನ್ನು ಹಿಡಿಯುವ ಅಂಶಗಳು ಕೂಡಾ. ಹಾಗೆಯೇ, ಅಭಿವೃದ್ಧಿಯ ಅಳತೆಗೋಲು ಹೌದು.

ಉದ್ಯೋಗ ಸೃಷ್ಟಿ, ಸ್ವಯಂ ಉದ್ಯೋಗಕ್ಕೆ ಒತ್ತು ನೀಡುವ ಕ್ರಮವಾಗಿ ಕೌಶಲಾಭಿವೃದ್ಧಿ,ಉದ್ಯಮಶೀಲತೆ ಮತ್ತು ಮತ್ತು ಜೀವನೋಪಾಯ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ಸಂಸ್ಥೆಗಳ ಸಹಯೋಗದಲ್ಲಿ ರಾಜ್ಯದ ಐ.ಟಿ.ಐ.ಗಳಲ್ಲಿ ಉಭಯ ತರಬೇತಿ ವ್ಯವಸ್ಥೆ ಜಾರಿಗೆ ತರಲು ಮುಂದಾಗಿದೆ. ❖

ಸ್ಮಾರ್ಟ್ ಸಿಟಿ–ಜಿಗಿದ ರಾಜ್ಯದ ಶ್ರೇಯಾಂಕ

ಸ್ಮಾರ್ಟ್ ಸಿಟಿ ಯೋಜನೆಗೆ ಬೆಂಗಳೂರು,ಬೆಳಗಾವಿ ದಾವಣಗೆರೆ ಹುಬ್ಬಳ್ಳಿ-ಧಾರವಾಡ ಮಂಗಳೂರು ಶಿವಮೊಗ್ಗ, ತುಮಕೂರು ನಗರಗಳು ಆಯ್ಕೆಯಾಗಿವೆ. ₹ 178 ಕೋಟಿ ಮೊತ್ತದ 59 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ₹1549 ಕೋಟಿ ಮೊತ್ತದ 128 ಕಾಮಗಾರಿ ಆರಂಭವಾಗಿದೆ. ಯೋಜನಾ ಅನುಷ್ಠಾನದಲ್ಲಿ ರಾಜ್ಯದ ಎಲ್ಲಾ ನಗರಗಳ ಶ್ರೇಯಾಂಕವು ಉತ್ತಮಗೊಂಡಿದ್ದು, ರಾಜ್ಯದ ಶ್ರೇಯಾಂಕವು 7ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಏರಿದೆ.

ಮೂಗೂರು ಕೆರೆ ತುಂಬಿಸುವ ಕನಸು ವರ್ಷದಲ್ಲಿಯೇ ಆಯಿತು ನನಸು

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಆನವಟ್ಟಿ ಗ್ರಾಮ ಮೂಗೂರು ಕೆರೆ ತುಂಬಿಸುವ ಅಂದಾಜು 105 ಕೋಟಿ ವೆಚ್ಚದ ಯೋಜನೆಯನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ರಾಜ್ಯದ ಬಿಜೆಪಿ ಸರ್ಕಾರ ಸಾಕಾರಗೊಳಿಸಿದೆ.

ಮಹತ್ವದ ಕಾರ್ಯಕ್ರಮದಿಂದ 31 ಕೆರೆಗಳಿಗೆ ಕಾಯಕಲ್ಪ ದೊರೆತಿದ್ದು, ಇದರ ಅನುಕೂಲ ಸುಮಾರು 16 ಗ್ರಾಮಗಳಿಗೆ ಸಿಗಲಿದ್ದು, ಸುಮಾರು 23 ಸಾವಿರ ಜನರು ಫಲಾನುಭವಿಗಳಾಗಲಿದ್ದಾರೆ. ಮೂಗೂರು ಕೆರೆ ತುಂಬಿಸಬೇಕು ಎಂಬುದು ಈ ಭಾಗದ ಜನರ 30 ವರ್ಷಗಳ ಬೇಡಿಕೆಯಾಗಿತ್ತು. ಹಿಂದಿನ ಸರ್ಕಾರಗಳು ಆಶ್ವಾಸನೆಗೆ ಸೀಮಿತವಾಗಿದ್ದರೆ, ಯಡಿಯೂರಪ್ಪ ನೇತೃತ್ವದ ಸರ್ಕಾರ ಅದನ್ನು ಜಾರಿಗೆ ತಂದಿತು.

₹105 ಕೋಟಿ ವೆಚ್ಚದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಒಂದು ವರ್ಷದಲ್ಲಿ ಯೋಜನೆ ಪೂರ್ಣಗೊಳಿಸಿದೆ. 11 ತಿಂಗಳಲ್ಲಿ ಸಮರೋಪಾದಿಯಲ್ಲಿ ಯೋಜನೆ ಪೂರ್ಣಗೊಂಡಿರುವುದು ಗಮನಾರ್ಹ.

ಶಿಕಾರಿಪುರ ತಾಲ್ಲೂಕಿನ ಅಂಜನಾಪರ ಜಲಾಶಯ ಮತ್ತು ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ 75 ಕೆರೆಗಳನ್ನು ತುಂಬಿಸುವ ಹೊಸಹಳ್ಳಿ ಕೆರೆ ತುಂಬಿಸುವ ಯೋಜನೆಗಳಿಗೆ ಹಿಂದೆಯೇ ಕೇಂದ್ರಕ್ಕೆ ಮನವಿ ಸಲ್ಲಿಸಿದ್ದು, ಪರಿಶೀಲನೆಗೆ ಕೇಂದ್ರ ಜಲ ಆಯೋಗದ ತಂಡವೂ ಭೇಟಿ ನೀಡಿತ್ತು. ಈ ಪೈಕಿ ಮೂಗೂರು ಯೋಜನೆ ಪೂರ್ಣಗೊಂಡಿದ್ದು, ಉಳಿದ ಎರಡು ತಿಂಗಳಲ್ಲಿ ಇತರೆ ಯೋಜನೆಗಳನ್ನು ಪೂರ್ಣಗೊಳಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಟ್ಟುನಿಟ್ಟಾಗಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಈ ವರ್ಷ ಮಳೆಗಾಲ ಆರಂಭವಾಗುವ ಮೊದಲು ಶಿವಮೊಗ್ಗ ಲೋಕಸಭೆ ಕ್ಷೇತ್ರದ 5 ನೀರಾವರಿ ಯೋಜನೆಗಳು, ಹಾವೇರಿ ಜಿಲ್ಲೆಯ 4, ದಾವಣಗೆರೆ ಜಿಲ್ಲೆಯ 2, ಚಿತ್ರದುರ್ಗ ಜಿಲ್ಲೆಯ ಭರಮಸಾಗರ ಯೋಜನೆ ಮತ್ತು ಉತ್ತರ ಕರ್ನಾಟಕ ಭಾಗದ ಯೋಜನೆಗಳು ಒಳಗೊಂಡು ರಾಜ್ಯದ ಸುಮಾರು 25 ಯೋಜನೆಗಳನ್ನು ಪೂರ್ಣಗೊಳಿಸಲು ಹಾಗೂ ಲೋಕಾರ್ಪಣೆಗೊಳಿಸಲು ಮುಖ್ಯಮಂತ್ರಿ ಅವರು ಬದ್ಧರಾಗಿದ್ದಾರೆ.

ರಾಜ್ಯ ಸರ್ಕಾರ ನೀರಾವರಿ ಯೋಜನೆಗಳಿಗೆ ಪ್ರಥಮ ಆದ್ಯತೆ ನೀಡಿದ್ದು, ಸುಮಾರು 12,000 ಕೋಟಿ ಮೊತ್ತದ 36 ಯೋಜನೆಗಳಿಗೆ ಈಗಾಗಲೇ ಅನುಮೋದನೆ ನೀಡಿದೆ. ಬಹುತೇಕ ಯೋಜನೆಗಳು ಪ್ರಗತಿಯಲ್ಲಿವೆ ಎಂದು ಹೇಳುತ್ತಾರೆ.

ಅಲ್ದೆ, ಮಧ್ಯ ಕರ್ನಾಟಕದ ಭದ್ರಾ ಮೆಲ್ದಂಡೆ ಯೋಜನೆಯ ಪರಿಷ್ಕೃತ ಯೋಜನಾ ಮೊತ್ತ 21,473 ಕೋಟಿಗಳಿಗೆ ಅನುಮೋದನೆ ನೀಡಿದ್ದು, ರಾಷ್ಟ್ರೀಯ ಯೋಜನೆ ಎಂದು ಘೋಷಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಇದು ಕಾರ್ಯಗತಗೊಂಡರೆ ನಾಲ್ಕು ಜಿಲ್ಲೆಗಳಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿ ಪೂರ್ಣಗೊಳಿಸಲು ಅನುಕೂಲವಾಗಲಿದೆ. ಈ ಮೂಲಕ 'ನುಡಿದಂತೆ ನಡೆಯುವ ಹೆಗ್ಗಳಿಕೆ'ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ರೈತರು, ಜನರ ಆಶೋತ್ತರಗಳಿಗೆ ಸ್ಪಂದಿಸಿದೆ.

ಕೋವಿಡ್ ಕಾಯಿಲೆ ನಿಯಂತ್ರಿಸುವಲ್ಲಿ ದೇಶಕ್ಕೇ ಮಾದರಿಯಾದ ಕರ್ನಾಟಕ • ಕೇಂದ್ರ ಸರ್ಕಾರ ಮೆಚ್ಚುಗೆ

ಆರೋಗ್ಯ ಕ್ಷೇತ್ರಕ್ಕೆ ಹೈಟೆಕ್ ಸ್ಪರ್ಶ

ಬೆಂಗಳೂರು: ಕೋವಿಡ್ ಕಾಯಿಲೆಯು ಆರೋಗ್ಯ ಕ್ಷೇತ್ರದಲ್ಲಿ ಸೃಷ್ಟಿಸಿದ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಿದ ಬಿ.ಎಸ್. ಯಡಿಯೂರಪ್ಪ, ಇದೇ ವೇಳೆ ಆರೋಗ್ಯ ಕೇಂದ್ರಗಳಿಗೆ ಹೈಟೆಕ್ ಸ್ಪರ್ಶ ಒದಗಿಸಿದ್ದಾರೆ.

ರಾಜ್ಯದಲ್ಲಿ ಕೋವಿಡ್ ಕಾಯಿಲೆ ಕಾಣಿಸಿಕೊಳ್ಳುವ ಮುನ್ನವೇ ಆರೋಗ್ಯ ಕ್ಷೇತ್ರದ ತಜ್ಞರು ಹಾಗೂ ಅಧಿಕಾರಿಗಳ ಜತೆಗೆ ಸರಣಿ ಸಭೆಗಳನ್ನು ನಡೆಸಿದ ಅವರು, ಕಟ್ಟುನಿಟ್ಟಾಗಿ ಕ್ವಾರಂಟೈನ್, ಪರೀಕ್ಷೆ ಸೇರಿದಂತೆ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿ ಮಾಡುವಂತೆ ಸೂಚಿಸಿದ್ದರು. ಸೋಂಕು ಕಾಣಿಸಿಕೊಂಡಾಗಿನಿಂದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರತಿನಿತ್ಯ ವಸ್ತುಸ್ಥಿತಿಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆಯುವ ಜತೆಗೆ ಆಸ್ಪತ್ರೆಗಳಿಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸಿದರು. ಅದೇ ರೀತಿ, ಕೋವಿಡ್ ಪರೀಕ್ಷೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯೋಗಾಲಯ ಸ್ಥಾಪನೆ, ಎಲ್ಲೆಡೆ ಪರೀಕ್ಷೆ ವ್ಯವಸ್ಥೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಸೇರಿದಂತೆ ಕಾಲ ಕಾಲಕ್ಕೆ ಅವರು ಕೈಗೊಂಡ ಕ್ರಮಗಳು ಮತ್ತು ನಿರ್ಧಾರಗಳು ಕೋವಿಡ್ ನಿಯಂತ್ರಣಕ್ಕೆ ಸಹಕಾರಿಯಾಯಿತು ಎನ್ನುತ್ತಾರೆ ತಜ್ಞರು.

ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಾಣುತ್ತಿದ್ದಂತೆ ತಜ್ಞರ ಜತೆಗೆ ಸಭೆ ನಡೆಸಿದ ಅವರು, ಬೆಂಗಳೂರಿನಲ್ಲಿ ವಿಕ್ಟೋರಿಯಾ ಹಾಗೂ ಬೌರಿಂಗ್ ಆಸ್ಪತ್ರೆಯನ್ನು ಕೋವಿಡ್–19 ಆಸ್ಪತ್ರೆಗಳನ್ನಾಗಿ ಮಾರ್ಪಡಿಸಲು ಸೂಚಿಸಿದರು. ಈ ರೀತಿ ಕೋವಿಡ್ ಚಿಕಿತ್ಸೆಗೆ ಪ್ರತ್ಯೇಕ ಆಸ್ಪತ್ರೆ ಗುರುತಿಸಿದ್ದು ದೇಶದಲ್ಲಿಯೇ ಮೊದಲು. ಅದೇ ರೀತಿ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ, ಕೆ.ಸಿ. ಜನರಲ್ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿಸಿದರು. ಜಿಲ್ಲಾ ಆಸ್ಪತ್ರೆಗಳಲ್ಲಿ ಕೂಡ ಬಹುತೇಕ ಎಲ್ಲ ಹಾಸಿಗೆಗಳನ್ನು ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಲು ಮೀಸಲಿಡಲಾಗಿತ್ತು. ಪ್ರತಿ ಹಾಸಿಗೆಗೂ ಕೃತಕ ಉಸಿರಾಟದ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು.

ಕಟ್ಟುನಿಟ್ಟಾದ ಲಾಕ್‌ಡೌನ್, ಸೋಂಕು ಶಂಕಿತರ ಪತ್ತೆ, ವಿಮಾನ ನಿಲ್ದಾಣದಲ್ಲಿ ತಪಾಸಣೆ, ಸಹಾಯವಾಣಿ, ಕ್ವಾರಂಟೈನ್ ವ್ಯವಸ್ಥೆ, ಸಂಪರ್ಕಿತರಿಗೂ ಪರೀಕ್ಷೆ, ಜ್ವರ ಚಿಕಿತ್ಸಾಲಯಗಳ ಸ್ಥಾಪನೆ, ಮುಖಗವಸು ಕಡ್ಡಾಯ ಸೇರಿದಂತೆ ಕೋವಿಡ್ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳು ಕೋವಿಡ್ ಕಾಯಿಲೆಯನ್ನು ಹತೋಟಿಗೆ ತರಲು ಸಹಕಾರಿಯಾಯಿತು.

ಆಸ್ಪತ್ರೆಗಳಿಗೆ ಮೂಲಸೌಕರ್ಯ: ಕೋವಿಡ್ ನಿಯಂತ್ರಣಕ್ಕೆ ಕಾಲಕಾಲಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಜತೆಗೆ ಆಸ್ಪತ್ರೆಗಳನ್ನು ಬಲಪಡಿಸಲು ಕೂಡ ಯಡಿಯೂರಪ್ಪ ಆದ್ಯತೆ ನೀಡಿದರು. ಇದರಿಂದಾಗಿ ಸರ್ಕಾರಿ ಆರೋಗ್ಯ ಕೇಂದ್ರಗಳ ಬಲವರ್ಧನೆ ಅಲ್ಪಾವಧಿಯಲ್ಲಿಯೇ ಸಾಕಾರವಾಯಿತು. ರಾಜ್ಯದ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕಕ್ಕೆ (ಐಸಿಯು) ಮಾತ್ರ ಸೀಮಿತವಾಗಿದ್ದ ಆಮ್ಲಜನಕ ಪೂರೈಕೆ ಹಾಗೂ ವಿವಿಧ ಅತ್ಯಾಧುನಿಕ ಸೌಲಭ್ಯಗಳು ಕೋವಿಡ್ ಕಾಣಿಸಿಕೊಂಡ ಬಳಿಕ ಸಾಮಾನ್ಯ ಹಾಸಿಗೆಗಳಿಗೆ ಕೂಡ ವಿಸ್ತರಿಸಿದ್ದಾರೆ. ಈ ಮೂಲಕ ಸರ್ಕಾರಿ ಆಸ್ಪತ್ರೆಗಳ ಸ್ವರೂಪ ಬದಲಿಸಿದ್ದಾರೆ. ❖

ಬಿ.ಎಸ್‌ಯಡಿಯೂರಪ್ಪ ಅವರನ್ನು ಥರ್ಮಲ್ ಸ್ಕ್ಯಾನರ್ ಮೂಲಕ ತಪಾಸಣೆ ನಡೆಸುತ್ತಿರುವುದು

ವೈದ್ಯರಿಗೆ ಭತ್ಯೆ ಹೆಚ್ಚಳದ ಕೊಡುಗೆ

ಕೋವಿಡ್ ಸಂದರ್ಭದಲ್ಲಿ ವೈದ್ಯರ ಕಾರ್ಯವೈಖರಿಯನ್ನು ಗುರುತಿಸಿದ್ದ ಯಡಿಯೂರಪ್ಪ, ಅವರ ಮನವಿಗಳಿಗೆ ಸ್ಪಂದಿಸಿದ್ದಾರೆ. ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ (ಸಿಜಿಎಚ್‌ಎಸ್) ಮಾದರಿಯಲ್ಲಿ ವೈದ್ಯರ ವಿಶೇಷ ಭತ್ಯೆ ಪರಿಷ್ಕರಿಸಿದ್ದಾರೆ. 25 ವರ್ಷಕ್ಕಿಂತ ಅಧಿಕ ಅವಧಿ ಸೇವೆ ಸಲ್ಲಿಸಿದ ಸೂಪರ್ ಸ್ಪೆಷಾಲಿಟಿ ವೈದ್ಯರ ತಿಂಗಳ ಭತ್ಯೆಯನ್ನು ₹ 58 ಸಾವಿರದಿಂದ ₹ 1.03 ಲಕ್ಷಕ್ಕೆ ಹೆಚ್ಚಿಸಿದ್ದಾರೆ. ಅದೇ ರೀತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವೃಂದಗಳ ತಜ್ಞ ವೈದ್ಯರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ ದಂತ ಆರೋಗ್ಯಾಧಿಕಾರಿಗಳ ವಿಶೇಷ ಭತ್ಯೆಯನ್ನು ಸೇವಾ ಅವಧಿ ಅನುಸಾರ ಪರಿಷ್ಕರಿಸುವ ಮೂಲಕ ವೈದ್ಯ ಸಮೂಹದ ಬಹುದಿನಗಳ ಬೇಡಿಕೆ ಈಡೇರಿಸಿದ್ದಾರೆ.

ಕೋವಿಡ್ ನಿಯಂತ್ರಣಕ್ಕೆ ಶ್ರಮಿಸಿದವರಿಗೆ ಚಪ್ಪಾಳೆ ತಟ್ಟುವ ಮೂಲಕ ಕೃತಜ್ಞತೆ ಸಲ್ಲಿಸಿದ ಬಿ.ಎಸ್ ಯಡಿಯೂರಪ್ಪ ಹಾಗೂ ಅವರ ಕುಟುಂಬದ ಸದಸ್ಯರು

ಬಸವಕಲ್ಯಾಣದಲ್ಲಿ ಆಧುನಿಕ ಅನುಭವ ಮಂಟಪ

ಜಗಜ್ಯೋತಿ ಬಸವೇಶ್ವರರ ಕಾರ್ಯಕ್ಷೇತ್ರ ಎನಿಸಿದ ಬೀದರ್‌ನ ಬಸವ ಕಲ್ಯಾಣದಲ್ಲಿ ಆಧುನಿಕ ಅನುಭವ ಮಂಟಪ ನಿರ್ಮಾಣಕ್ಕೆ ಚಾಲನೆ ನೀಡಿದವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ.

₹604 ಕೋಟಿ ವೆಚ್ಚದಲ್ಲಿ ಬಸವ ಕಲ್ಯಾಣದ ತ್ರಿಪುರಾಂತಕ ಕೆರೆ ದಂಡೆಯಲ್ಲಿ ಜಗತ್ತಿನ ಮೊದಲ ಸಂಸತ್ತು ಎನಿಸಿದ ಅನುಭವ ಮಂಟಪದ ಆಧುನಿಕ ರೂಪ ತಲೆ ಎತ್ತಲಿದೆ. ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಾಣವಾಗುತ್ತಿರುವ ಈ ಮಂಟಪವು ಸಂಗೀತ ಕಾರಂಜಿ, ಕಲ್ಯಾಣ ಮಂಟಪ, ದೋಣಿ ವಿಹಾರದ, 770 ಆಸನಗಳ ವ್ಯವಸ್ಥೆಯನ್ನು ಹೊಂದಿರಲಿದೆ. 182 ಅಡಿ ಎತ್ತರದ ಆರು ಮಹಡಿ, ಮೇಲೆ 100 ಅಡಿ ವ್ಯಾಸದ ಲಿಂಗಾಕಾರದ ಬೃಹತ್ ಗೋಪುರವು ಆಕರ್ಷಣೆಯ ಕೇಂದ್ರವಾಗಲಿದೆ.

ಎರಡು ವರ್ಷದಲ್ಲಿ ನಿರ್ಮಾಣ ಕಾರ್ಯ ಪೂರ್ಣಗೊಳಿಸಿ, ಪ್ರಧಾನಿ ನರೇಂದ್ರ ಮೋದಿಯವರಿಂದ ಉದ್ಘಾಟಿಸುವ ಗುರಿಯನ್ನು ಮುಖ್ಯಮಂತ್ರಿ ಹೊಂದಿದ್ದಾರೆ.

ಅನ್ನದಾತನಿಗೆ ಪ್ರೋತ್ಸಾಹಧನ ಕಿಸಾನ್ ಸಮ್ಮಾನಕ್ಕೆ ಭಾಜನ

ನಮ್ಮ ನಾಡು ನಂ. 1

ಕರ್ನಾಟಕದ ಕೃಷಿ ಇಲಾಖೆಯ ಕಿರೀಟಕ್ಕೆ ಪ್ರಶಸ್ತಿಯ ಗರಿ

ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರಿಂದ ಕೃಷಿ ಸಚಿವ ಬಿ.ಸಿ.ಪಾಟೀಲ ಹಾಗೂ ಕೃಷಿ ಇಲಾಖೆಯ ಅಧಿಕಾರಿಗಳು ಕೇಂದ್ರದ ಪುರಸ್ಕಾರ ಸ್ವೀಕರಿಸಿದ ಕ್ಷಣ

ಕರ್ನಾಟಕದ ಕೃಷಿ ಇಲಾಖೆಯ ಕಿರೀಟಕ್ಕೊಂದು ಗರಿ ಬಂದಿದೆ. ಇಡೀ ದೇಶದ ರೈತರ ಚಿತ್ತ ಇದೀಗ ಕರ್ನಾಟಕದತ್ತ ನೆಟ್ಟಿದೆ. 'ಕಿಸಾನ್ ಸಮ್ಮಾನ್ ಯೋಜನೆ'ಯಲ್ಲೀಗ ಕರ್ನಾಟಕವೇ ಪ್ರಥಮ ಸ್ಥಾನ ಪಡೆದಿದೆ. ಕಿಸಾನ್ ಸಮ್ಮಾನ್ ಯೋಜನೆಯಡಿ ಆಯ್ಕೆಯಾದ ಐದು ರಾಜ್ಯಗಳ ಪೈಕಿ ಕರ್ನಾಟಕ ಕೃಷಿ ಇಲಾಖೆ ಮೊದಲ ಸ್ಥಾನ ಪಡೆದಿದೆ.

ಇದು ಕೃಷಿ ಇಲಾಖೆ ಹಾಗೂ ಕೃಷಿ ಸಚಿವ ಬಿ.ಸಿ. ಪಾಟೀಲ ಅವರ ಸೇವೆಗೆ ಶ್ರಮಕ್ಕೆ ಕೇಂದ್ರದಿಂದ ಸಂದ ಫಲ. ಹೌದು, ಬಿ.ಸಿ.ಪಾಟೀಲ ಅವರು ಕೃಷಿ ಸಚಿವರಾದ ಬಳಿಕ ಕಳೆದ 6-8 ತಿಂಗಳಿನಲ್ಲಿಯೇ ಈ ಮಹತ್ವಾಕಾಂಕ್ಷಿ "ಕಿಸಾನ್ ಸಮ್ಮಾನ್' ಯೋಜನೆಗೆ ರಾಜ್ಯದಲ್ಲಿ ಒಂದು ಸ್ಪಷ್ಟ ರೂಪ ನೀಡಿದ್ದಾರೆ. ಅಂದ ಹಾಗೆ ಬಿ.ಸಿ. ಪಾಟೀಲ್ ಅವರ ಶ್ರಮ ಹಾಗೂ ಕೃಷಿ ಇಲಾಖೆಯ ಸ್ಪಷ್ಟ ಕಾರ್ಯವೈಖರಿಯ ಫಲವೇ 'ಕಿಸಾನ್ ಸಮ್ಮಾನ್ ಯೋಜನೆ'' ಅನುಷ್ಠಾನದಲ್ಲಿ ಕರ್ನಾಟಕವನ್ನು ಅಗ್ರ ಸ್ಥಾನಕ್ಕೆ ಏರುವಂತೆ ಮಾಡಿದೆ.

ಅಷ್ಟಕ್ಕೂ 'ಕಿಸಾನ್ ಸಮ್ಮಾನ್ ಯೋಜನೆ' ಎನ್ನುವುದು ಕೇಂದ್ರದ ಮಹತ್ತರ ಯೋಜನೆಯಾಗಿದ್ದು, ರೈತರಿಗೆ ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ ಆದಾಯ ಗಳಿಸಲು ನೆರವಾಗುವ ಉದ್ದೇಶದಿಂದ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತ ಕುಟುಂಬಕ್ಕೆ ಕೇಂದ್ರ ಸರ್ಕಾರದಿಂದ ವಾರ್ಷಿಕ ₹6,000 ಹಾಗೂ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ವಾರ್ಷಿಕ ₹4,000 ಆರ್ಥಿಕ ನೆರವು ನೀಡಲಾಗುತ್ತಿದೆ. 2019ರಿಂದ ಅನುಷ್ಠಾನಗೊಂಡಿರುವ ಈ 'ಕಿಸಾನ್ ಸಮ್ಮಾನ್' ಯೋಜನೆ ಇದೀಗ ಕರ್ನಾಟಕವನ್ನೇ ದೇಶದ ಇತರೆ ರಾಜ್ಯಗಳು ಸಹ ತಿರುಗಿ ನೋಡುವಂತೆ ಮಾಡಿದೆ.

ಹೌದು, ಪಿಎಂ ಕಿಸಾನ್ ಯೋಜನೆಯಡಿ ಕರ್ನಾಟಕ ಸ್ಥಾನ ಮೊದಲ ಸ್ಥಾನ ಪಡೆದಿದ್ದಕ್ಕಾಗಿ ಕೇಂದ್ರ ಸರ್ಕಾರ ಕರ್ನಾಟಕದ ಕೃಷಿ ಮಂತ್ರಿ ಬಿ.ಸಿ.ಪಾಟೀಲ ಅವರನ್ನು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೌರವಿಸಿದ್ದಾರೆ.

'ಪ್ರಧಾನ್ ಮಂತ್ರಿ ಕಿಸಾನ ಸಮ್ಮಾನ ನಿಧಿ ಯೋಜನೆ' ಯಡಿಯಲ್ಲಿ ರಾಜ್ಯವು ಅತಿ ಹೆಚ್ಚು ಶೇಕಡ ಪ್ರಮಾಣದಲ್ಲಿ ಆಧಾರ ಜೋಡಣೆ ಆಧಾರಿತ ಮೂಲಕ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಅನುಷ್ಠಾನಗೊಳಿಸಿರುವುದಕ್ಕಾಗಿ ರಾಜ್ಯವು ಈ ಪ್ರಶಸ್ತಿಗೆ ಭಾಜನವಾಗಿದೆ. ನವದೆಹಲಿಯ 'ಪೂಸಾ'ದಲ್ಲಿ ನಡೆದ ಪಿ.ಎಂ.ಕಿಸಾನ್ ಯೋಜನೆಯ 2ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಕೃಷಿ ಸಚಿವ ಬಿ.ಸಿ.ಪಾಟೀಲ್ ಹಾಗೂ ಇಲಾಖಾ ಅಧಿಕಾರಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಈ ಯೋಜನೆಯಡಿ ರಾಜ್ಯವು ಶೇ97ರಷ್ಟು 'ಆಧಾರ್' ದೃಢೀಕರಿಸಿದ ದತ್ತಾಂಶವನ್ನು ಹೊಂದಿದ್ದು, ರಾಜ್ಯದ ಶೇ90ಕ್ಕೂ ಹೆಚ್ಚು ಫಲಾನುಭವಿಗಳಿಗೆ "ಆಧಾರ್" ಆಧಾರಿತ ನೇರ ನಗದು ವರ್ಗಾವಣೆ ವಿಧಾನದ ಮೂಲಕ ಈ ಯೋಜನೆಯಡಿ ಪ್ರಯೋಜನ ನೀಡಲಾಗುತ್ತಿದೆ. ರಾಜ್ಯವು ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿರುವುದಕ್ಕೆ ಈ ಪ್ರಶಸ್ತಿ ಸಂದಿದೆ.

ಚಿತ್ರನಟ ದರ್ಶನ್ ಕೃಷಿ ರಾಯಭಾರಿ

ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರನ್ನು ಕೃಷಿ ಇಲಾಖೆಯ ರಾಯಭಾರಿಯನ್ನಾಗಿ ಸರ್ಕಾರ ನೇಮಿಸಿದೆ.

ಕೃಷಿ ಇಲಾಖೆ ರೈತರ ಹಿತಕ್ಕಾಗಿ ಕೈಗೊಂಡಿರುವ ಕಾರ್ಯಕ್ರಮಗಳನ್ನು ಪ್ರಚುರಪಡಿಸಲು ಹಾಗೂ ಕೃಷಿಕರಲ್ಲಿ ಸ್ಫೂರ್ತಿ ತುಂಬಲು ಕೃಷಿ ಇಲಾಖೆಯ ರಾಯಭಾರಿಯನ್ನಾಗಿ ಘೋಷಿಸಲಾಗಿದೆ.

ಕೃಷಿ ಇಲಾಖೆಯ ರಾಯಭಾರಿಯಾಗಿ ಕೆಲಸ ನಿರ್ವಹಿಸಲು ಯಾವುದೇ ಸಂಭಾವನೆ ಇಲ್ಲದೇ ದುಡಿಯುವುದಾಗಿ ನಟ ದರ್ಶನ್ ಒಪ್ಪಿಕೊಂಡಿದ್ದರು. ಅಲ್ಲದೇ ಈ ಕುರಿತು ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರ ರೈತರೊಂದಿಗೊಂದು ದಿನ ಕಾರ್ಯಕ್ರಮವನ್ನು ಸಹ ಮೆಚ್ಚಿದ್ದರು. ಸ್ವತಃ ಕೃಷಿಕರೂ ಆಗಿರುವ ದರ್ಶನ್ ಬಿ.ಸಿ. ಪಾಟೀಲ್ ಅವರೊಂದಿಗೆ ಚರ್ಚಿಸಿ ತಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಸರ್ಕಾರ ಇದೀಗ ಕೃಷಿ ಇಲಾಖೆಯ ರಾಯಭಾರಿಯನ್ನಾಗಿ ದರ್ಶನ್ ಅವರನ್ನು ನೇಮಿಸಿ ಆದೇಶಿಸಿದೆ.

ಕೃಷಿ ಇಲಾಖೆಗೆ ಬಲ ತುಂಬಿದ ಸಚಿವ ಬಿ.ಸಿ.ಪಾಟೀಲ

ನಗರ ಪ್ರದೇಶದ ಮಕ್ಕಳಿಗೆ ಬಾಲ್ಯದಲ್ಲಿಯೇ ಕೃಷಿ ಬಗೆಗಿನ ಅರಿವು ಮಹತ್ವ ಮೂಡಿಸಲು, ಅಗ್ರಿ ಟೂರಿಸಂ(ಕೃಷಿ ಪ್ರವಾಸ) ಚಿಂತನೆಗೆ ಮುಂದಾಗಿದ್ದಾರೆ. ಕರ್ನಾಟಕ ಬೀಜ ನಿಗಮವನ್ನು ಮಾದರಿ ನಿಗಮವಾಗಿಸಲು ಸಚಿವರು ಸಂಕಲ್ಪ ಹೊಂದಿದ್ದು, ಕೃಷಿ ಇಲಾಖೆಯನ್ನು ರೈತಸ್ನೇಹಿಯಾಗಿ ಮಾಡಿದ್ದಾರೆ. ಅಂದ ಹಾಗೆ ಮುಂಗಾರಿನಲ್ಲಿ ಈಬಾರಿ ಶೇ106ರಷ್ಟು ಬಿತ್ತನೆಯಾಗಿದ್ದು, ಕೃಷಿಯತ್ತ ಯುವಕರ ಒಲವು ಹೆಚ್ಚಿಸಲು ಸ್ಫೂರ್ತಿಯಾಗಿದ್ದಾರೆ. ಅನ್ನದಾತರ ಶ್ರೇಯೋಭಿವೃದ್ಧಿಗೆ ಕಟಿಬದ್ಧರಾದ ಬಿ.ಸಿ.ಪಾಟೀಲ, ತಮ್ಮ ಪೊಲೀಸ್ ಅನುಭವವನ್ನು ನಕಲಿ ಬೀಜ, ಗೊಬ್ಬರ ಮಾರಾಟಕ್ಕೆ ಕಡಿವಾಣ ಹಾಕಲು ಧಾರೆಯೆರೆದು, ಸುಮಾರು ಒಟ್ಟು 149ಕ್ಕೂ ಹೆಚ್ಚು ಅಂಗಡಿಗಳ ಪರವಾನಿಗೆ ರದ್ದು ಮಾಡಲಾಗಿದೆ. ರೈತರ ಹೆಸರಿನಲ್ಲಿ ನಕಲಿ ಬಿಲ್ ಜಾಲಭೇದಿಸಿದ್ದಾರೆ. ಬಿ.ಸಿ.ಪಾಟೀಲ, ನವೀನ ಕೃಷಿ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ನೀಡುತ್ತ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತ, ಕೃಷಿ ನವೋದ್ಯಮಕ್ಕೂ ಮುಂದಾಗಿದ್ದಾರೆ.

ಪಿ.ಎಂ ಕಿಸಾನ್ ಯೋಜನೆಯಡಿ ಕರ್ನಾಟಕ ಸ್ಥಾನ ಮೊದಲ ಸ್ಥಾನ ಪಡೆದಿದ್ದಕ್ಕಾಗಿ ಕೇಂದ್ರ ಸರ್ಕಾರ ಕರ್ನಾಟಕದ ಕೃಷಿ ಮಂತ್ರಿ ಬಿ.ಸಿ.ಪಾಟೀಲ ಅವರನ್ನು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೌರವಿಸಿ ಸನ್ಮಾನಿಸಿದರು.

ಈ ಪೋರ್ಟಲ್‌ನಲ್ಲಿ ಆಧಾರ್ ಗುರುತಿನ ಸಂಖ್ಯೆ, ಭೂಮಿ ಹಿಡುವಳಿ ಮಾಲೀಕತ್ವ ಮತ್ತು ಸಂಬಂಧಿತ ಮಾರ್ಗಸೂಚಿಗಳಿಗೆ ಮಾಹಿತಿ ಪರಿಶೀಲಿಸಲಾಗುತ್ತದೆ. ರಾಜ್ಯ ಪೋರ್ಟಲ್‌ನಲ್ಲಿ ಪರಿಶೀಲಿಸಿದ 55 ಲಕ್ಷ ರೈತರ ಮಾಹಿತಿಯನ್ನು ಭಾರತ ಸರ್ಕಾರದ ಪಿಎಂ ಕಿಸಾನ್ ಪೋರ್ಟಲ್‌ಗೆ ಅಪ್ಲೋಡ್ ಮಾಡಲಾಗಿದೆ. ಇಲ್ಲಿಯವರೆಗೆ, ಕೇಂದ್ರ ಸರ್ಕಾರದಿಂದ ಪಿ.ಎಂ. ಕಿಸಾನ್ ಯೋಜನೆಯಡಿ 53,96,762 ರೈತ ಫಲಾನುಭವಿಗಳಿಗೆ ಒಟ್ಟು ₹5,828.87 ಕೋಟಿಗಳ ಆರ್ಥಿಕ ಸಹಾಯವನ್ನು ನೇರ ವರ್ಗಾವಣೆ ಮಾಡಲಾಗಿರುತ್ತದೆ.

ಇತ್ತೀಚೆಗೆ ಕರ್ನಾಟಕದಲ್ಲಿ ಮೊಬೈಲ್ ಬೆಳೆ ಸಮೀಕ್ಷೆ ಸಹ ಯಶಸ್ವಿಯಾಗಿದ್ದು, ಕೇಂದ್ರದಿಂದ ಮೆಚ್ಚುಗೆಯನ್ನು ಸಹ ಪಡೆದಿದೆ. ಅಲ್ಲದೇ ಇತರೆ ರಾಜ್ಯಗಳಿಗೂ ಮಾದರಿಯಾಗಿದೆ. ಅಲ್ಲದೇ ಕೃಷಿ ಸಂಜೀವಿನಿ ಯೋಜನೆಯೂ ಶ್ಲಾಘನೆ ಪಡೆದಿದ್ದು, ಕರ್ನಾಟಕದ ಕೃಷಿ ಇಲಾಖೆಯಲ್ಲಿ ತಂತ್ರಜ್ಞಾನ ಅಳವಡಿಕೆ ಹಾಗೂ ರೈತರಿಗೆ ಹೊಸಹೊಸ ಯೋಜನೆಗಳನ್ನು ಪರಿಚಯಿಸುತ್ತಿರುವುದಕ್ಕೆ ಬಿ.ಸಿ.ಪಾಟೀಲರನ್ನು ಕೇಂದ್ರ ಶ್ಲಾಘಿಸಿದೆ. ಕೃಷಿ ಯಂತ್ರಧಾರೆಯಡಿ ಯಂತ್ರೋಪಕರಣ ಇಲಾಖೆಯಿಂದ ಇನ್ನೂ ಹಲವಾರು ಸೌಲಭ್ಯಗಳು ರೈತರಿಗೆ ಲಭ್ಯವಿದ್ದು, ಹೋಬಳಿಗೊಂದರಂತೆ ಶೇ70ರ ಸಹಾಯಧನ ಅಡಿಯಲ್ಲಿ ಗರಿಷ್ಠ ₹70 ಲಕ್ಷಗಳಿಗೆ ಮಿತಿಗೊಳಿಸಿ ರಾಜ್ಯದಲ್ಲಿ 630 ಕೃಷಿ ಯಂತ್ರೋಪಕರಣ ಬಾಡಿಗೆ ಕೇಂದ್ರಗಳನ್ನು (ಕೃಷಿ ಯಂತ್ರಧಾರೆ) ಸ್ಥಾಪಿಸಲಾಗಿದೆ. ಉಳಿದ ಎಲ್ಲಾ ಹೋಬಳಿಗಳಲ್ಲಿ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆ.

ಕೇಂದ್ರ ಪುರಸ್ಕೃತ ಕೃಷಿ ಯಾಂತ್ರೀಕರಣ ಅಭಿಯಾನದಡಿ ನೋಂದಾಯಿತ ರೈತ ಸಹಕಾರಿ ಸೊಸೈಟಿಗಳು, ನೋಂದಾಯಿತ ರೈತರ ಸೊಸೈಟಿಗಳು, ರೈತ ಉತ್ಪಾದಕ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತ್ ಆಯ್ದ ಗ್ರಾಮಗಳಲ್ಲಿ ಪ್ರತಿ ಕೇಂದ್ರಕ್ಕೆ ಶೇ80ರಂತೆ ಗರಿಷ್ಠ ₹8 ಲಕ್ಷಗಳ ಸಹಾಯಧನ ನೀಡಿ 216 ಕೃಷಿ ಯಂತ್ರೋಪಕರಣಗಳ ಬ್ಯಾಂಕ್‌ಗಳ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಸೂಕ್ಷ್ಮ ನೀರಾವರಿ ಪದ್ಧತಿಗೆ ಆದ್ಯತೆ

ಕೃಷಿಯಲ್ಲಿನ ಎಲ್ಲಾ ಬೆಳೆಗಳಿಗೆ ಮತ್ತು ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2ಹೆಕ್ಟೇರ್‌ಗೆ ತುಂತುರು/ಹನಿ ನೀರಾವರಿ ಘಟಕಗಳನ್ನು ಅಳವಡಿಸಲು ಶೇ90ರ ಸಹಾಯಧನ, 2 ಹೆಕ್ಟೇರ್‌ನಿಂದ 5 ಹೆಕ್ಟೇರ್ ವರೆಗೆ ಎಲ್ಲಾ ವರ್ಗದ ರೈತರಿಗೆ ಶೇ45ರಷ್ಟು ಸಹಾಯಧನ, 2020-21ನೇ ಸಾಲಿನಲ್ಲಿ 1.31 ಲಕ್ಷ ಹೆಕ್ಟೇರ್ ಪ್ರದೇಶವನ್ನು ಸೂಕ್ಷ್ಮ ನೀರಾವರಿ ಪದ್ಧತಿಯಡಿ ತರಲು ₹282 ಕೋಟಿ ಸಹಾಯಧನವನ್ನು ಒದಗಿಸಲಾಗಿದೆ.

ಬೆಳೆ ವಿಮೆ ಯೋಜನೆ

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2019ರ ಮುಂಗಾರು ಹಂಗಾಮಿನಲ್ಲಿ 14.20 ಲಕ್ಷ ರೈತರು 12.15 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಬೆಳೆ ವಿಮೆ ನೋಂದಣಿ ಮಾಡಿಸಿಕೊಂಡಿರುತ್ತಾರೆ. ಒಟ್ಟು 5.65ಲಕ್ಷ ರೈತ ಫಲಾನುಭವಿಗಳಿಗೆ ₹658.34 ಕೋಟಿ ಕ್ಲೇಮ್ ಇನಿಷಿಯೇಟ್ (claim initiate) ಮಾಡಲಾಗಿರುತ್ತದೆ. ಅನುಷ್ಠಾನ ವಿಮಾ ಸಂಸ್ಥೆಯವರು 4.62 ಲಕ್ಷ ಫಲಾನುಭವಿಗಳಿಗೆ ₹558.88 ಕೋಟಿಗಳು ಬೆಳೆ ವಿಮಾ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಿರುತ್ತಾರೆ. ಬಾಕಿ ಉಳಿದ ₹99.46 ಕೋಟಿಗಳು ಇತ್ಯರ್ಥಪಡಿಸುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ.

2019-20ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 6.81 ಲಕ್ಷ ರೈತರು 8.29 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಬೆಳೆ ವಿಮೆ ನೋಂದಣಿ ಮಾಡಿಸಿಕೊಂಡಿರುತ್ತಾರೆ. ಒಟ್ಟು 1.24 ಲಕ್ಷ ರೈತ ಫಲಾನುಭವಿಗಳಿಗೆ ₹129.06 ಕೋಟಿಗಳ ಕೋಟಿ ಕ್ಲೇಮ್ ಇನಿಷಿಯೇಟ್ (claim initiate) ಮಾಡಲಾಗಿರುತ್ತದೆ. ವಿಮಾ ಸಂಸ್ಥೆಯವರಿಂದ ಬಾಕಿ ಉಳಿದ ಪ್ರಕರಣಗಳ ವಿಮಾ ಪರಿಹಾರ ಇತ್ಯರ್ಥಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

2020ರ ಮುಂಗಾರು ಹಂಗಾಮಿಗೆ ಒಟ್ಟು 13.44 ಲಕ್ಷ ರೈತರು ಬೆಳೆ ವಿಮೆ ನೋಂದಣಿ ಮಾಡಿಕೊಂಡಿದ್ದು, ಒಟ್ಟು 12.61ಲಕ್ಷ ಹೆಕ್ಟೇರ್ ಪ್ರದೇಶ ವಿಸ್ತೀರ್ಣವು ಬೆಳೆ ವಿಮೆಗೆ ಒಳಪಟ್ಟಿರುತ್ತದೆ. 2020-21ರ ಹಿಂಗಾರು ಹಂಗಾಮಿಗೆ ಒಟ್ಟು 1.62 ಲಕ್ಷ ರೈತರು ಬೆಳೆ ವಿಮೆ ನೋಂದಣಿ ಮಾಡಿಕೊಂಡಿದ್ದು, ಒಟ್ಟು 2.11ಲಕ್ಷ ಹೆಕ್ಟೇರ್ ಪ್ರದೇಶ ವಿಸ್ತೀರ್ಣವು ಬೆಳೆ ವಿಮೆಗೆ ಒಳಪಟ್ಟಿರುತ್ತದೆ. 2020-21ರ ಬೇಸಿಗೆ ಹಂಗಾಮಿಗೆ ಇಲ್ಲಿಯವರೆಗೆ ಒಟ್ಟು 3,446 ರೈತರು ನೋಂದಣಿ ಮಾಡಿಕೊಂಡಿರುತ್ತಾರೆ.

ಕೃಷಿ ಸ್ಟಾರ್ಟ್‌ಅಪ್ ಹಬ್

ಕೃಷಿಯಲ್ಲಿ ಆಧುನಿಕತೆ ಮತ್ತು ಹೊಸ ತಂತ್ರಜ್ಞಾನಗಳಿಗೆ ಉತ್ತೇಜನ ನೀಡುತ್ತಿರುವ ಕೃಷಿ ಸಚಿವ ಬಿ.ಸಿ. ಪಾಟೀಲ್, ಕರ್ನಾಟಕ ರಾಜ್ಯವನ್ನು ಕೃಷಿ ಸ್ಟಾರ್ಟ್‌ಅಪ್ ಹಬ್ ಆಗಿಸುವ ಮಹತ್ತರ ಗುರಿಹೊಂದಿರುವುದಾಗಿ ಹೇಳಿದ್ದಾರೆ. ರಾಜಧಾನಿ ಬೆಂಗಳೂರು ಸ್ಟಾರ್ಟ್‌ಅಪ್ ಹಬ್ ಎಂದೇ ಪ್ರಖ್ಯಾತಿ ಹೊಂದಿದೆ. 6 ಸಾವಿರ ಸ್ಟಾರ್ಟ್‌ಅಪ್‌ಗಳಿದ್ದರೂ ಸಹ ಬಹಳ ಕಡಿಮೆ ಸಂಖ್ಯೆಯಲ್ಲಿ ಅಗ್ರಿ ಸ್ಟಾರ್ಟ್‌ಅಪ್‌ಗಳಿವೆ. ಕೃಷಿಗೆ ಮತ್ತು ಕೃಷಿಕರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯ ಅಗ್ರಿ ಸ್ಟಾರ್ಟ್‌ಅಪ್ ಹಬ್‌ಗಳನ್ನು ಸ್ಥಾಪಿಸಿ ಬೆಂಗಳೂರನ್ನು ಅಗ್ರಿ ಸ್ಟಾರ್ಟ್‌ಅಪ್ ಹಬ್ ಆಗಿಸುವ ಗುರಿ ಇದೆ.

ಯಡಿಯೂರಪ್ಪ ಸಂಪುಟದ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಬಿ.ಸಿ.ಪಾಟೀಲ್, ಕೃಷಿ ಖಾತೆಯನ್ನು ಸವಾಲಾಗಿ ಸ್ವೀಕರಿಸಿದರು. ಕೃಷಿ ಖಾತೆಯನ್ನು ಹೊಂದುತ್ತಿದ್ದಂತೆಯೇ ಎದುರಾಗಿದ್ದು ಕೊರೊನಾ ಸೋಂಕಿನ ಕಾಟ. ಆದರೆ, ಕೊರೊನಾ ಸೋಂಕು, ಲಾಕ್‌ಡೌನ್ ಎಂದು ಸುಮ್ಮನೆ ಕೂರಲಿಲ್ಲ. ಅನ್ನದಾತ ಕೈಕಟ್ಟಿ ಕೂತರೇ ಅನ್ನಕ್ಕೆ ತೊಂದರೆಯುಂಟಾದೀತೆಂಬ ಮುನ್ಸೂಚನೆ ಅರಿತ ಸಚಿವ ಬಿ.ಸಿ. ಪಾಟೀಲ್ ರಾಜ್ಯ ಎಲ್ಲ ಜಿಲ್ಲೆಗಳ ಪ್ರವಾಸ ಮಾಡಿದರು.

ಲಾಕ್‌ಡೌನ್‌ನಲ್ಲಿಯೂ ಅನ್ನದಾತರ ಕೈಹಿಡಿದ ಕೃಷಿ ಸಚಿವ ಬಿ.ಸಿ.ಪಾಟೀಲ್ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಸಂಚರಿಸಿ, ಅನ್ನದಾತರ ಸಂಕಷ್ಟಗಳನ್ನು ಅರಿತರು. ರೈತರ ಕೃಷಿ ಚಟುವಟಿಕೆಗಳಿಗೆ ಎದುರಾಗಿದ್ದ ಅಡೆತಡೆಗಳನ್ನು ತೆರವುಗೊಳಿಸಿ, 'ಅಗ್ರಿವಾರ್ ರೂಂ' ಸ್ಥಾಪಿಸಿ 'ಗ್ರೀನ್ ಪಾಸ್' ವಿತರಿಸಿದರು.

ರೈತರ ಮಹತ್ವವನ್ನು ದೇಶದಾದ್ಯಂತ ಸಾರಲು "ಹಲೊ ಬದಲಿಗೆ ಜೈ ಕಿಸಾನ್" ಘೋಷಣೆ ಮೊಳಗಿಸಿದರು. ಇದೀಗ ಕೃಷಿ ಅಧಿಕಾರಿಗಳ, ಇಲಾಖೆಯ ಸಿಬ್ಬಂದಿ ಬಾಯಲ್ಲಿ ಜೈ ಕಿಸಾನ್ ಎಂಬುದಾಗಿದೆ. ಎಲ್ಲರ ಮೊಬೈಲ್‌ಗಳಲ್ಲಿ ರಿಂಗಣಿಸುತ್ತಿದೆ.

ಬಿ.ಸಿ.ಪಾಟೀಲ ತಮ್ಮ ಹುಟ್ಟಿದ ದಿನವನ್ನು ಸಂಭ್ರಮಿಸದೇ ಅದನ್ನು ರೈತರಿಗಾಗಿ ಮೀಸಲಿಟ್ಟರು. ರೈತರಿಗೆ ಆತ್ಮಸ್ಥೈರ್ಯ ತುಂಬಲು ಬಿ.ಸಿ.ಪಾಟೀಲರು ಹಾಕಿದ ಕ್ರಾಂತಿಕಾರಕ ಯೋಜನೆಯೇ 'ರೈತರೊಂದಿಗೊಂದು ದಿನ' ಕಾರ್ಯಕ್ರಮ.

ರೈತರ ಮನೆ ಬಾಗಿಲಿಗೆ ಸರ್ಕಾರ ತರುವ ಉದ್ದೇಶದಿಂದ ಈ ರೈತರೊಂದಿಗೊಂದು ದಿನ ಕಾರ್ಯಕ್ರಮ ಆಯೋಜನೆಗೊಂಡಿದ್ದು, ಪ್ರತಿ ತಿಂಗಳು ಎರಡು ಮೂರು ಜಿಲ್ಲೆಗಳಿಗೆ ಭೇಟಿ ನೀಡಿ, ಅಲ್ಲಿನ ರೈತರೊಂದಿಗೆ ಕಾಲ ಕಳೆದು ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾಗಿ ಸ್ಥಳೀಯವಾಗಿ ಸಾಧ್ಯವಾಗುವಂತಹ ಸಮಸ್ಯೆಗಳನ್ನು ಪರಿಹರಿಸುತ್ತಿದ್ದಾರೆ. ಕೃಷಿ ವಿಶ್ವವಿದ್ಯಾಲಯಗಳು ರೈತರ ನಡುವೆ ಬಿ.ಸಿ.ಪಾಟೀಲ ಸೇತುವೆಯಂತೆ ಕಾರ್ಯನಿರ್ವಹಿಸುತ್ತಿದ್ದು, ವಿಶ್ವವಿದ್ಯಾಲಯಗಳು ರೈತರಿಗೆ ಕೃಷಿಗೆ ಆಸ್ಪತ್ರೆಯಂತಾಗಬೇಕು ಎಂದು ಕರೆ ನೀಡಿದ್ದಾರೆ.

ರೈತರ ಆದಾಯ ದ್ವಿಗುಣಗೊಳಿಸಲು 'ಒಂದು ಜಿಲ್ಲೆ ಒಂದು ಉತ್ಪನ್ನ'ದಡಿ ರೈತನೇ ತನ್ನ ಬೆಳೆಗೆ ತಾನೇ ಬ್ರ್ಯಾಂಡ್ ಮಾಡುವಂತೆ, ಬೆಲೆ ನಿಗದಿಪಡಿಸಲು ಅನುಕೂಲವಾಗುವಂತೆ ಮಾಡಲು ಕೃಷಿ ಸಚಿವರ ಮಾರ್ಗದರ್ಶನದಲ್ಲಿ ಆಯ್ದ ಕೃಷಿಕರಿಗೆ ತರಬೇತಿಯೂ ನೀಡಲಾಗುತ್ತಿದೆ. 'ನನ್ನ ಬೆಳೆ ನನ್ನ ಹಕ್ಕು' ಎಂದು ರೈತರಿಗೆ ಮನವರಿಕೆ ಮಾಡಿದ ಕೃಷಿ ಸಚಿವರು, ತನ್ನ ಬೆಳೆಗೆ ತಾನೇ ಪ್ರಮಾಣಪತ್ರ ನೀಡಲು 'ಮೊಬೈಲ್ ಆ್ಯಪ್ ಸಮೀಕ್ಷೆ' ಎಂಬ ನೂತನ ಯೋಜನೆಗೆ ಕೈ ಹಾಕಿದ್ದು, ಮೊಬೈಲ್ ಆ್ಯಪ್ ಬೆಳೆ ಸಮೀಕ್ಷೆ ಯಶಸ್ವಿಯಾಗಿ ನೂರಕ್ಕೆ ನೂರರಷ್ಟಾಗಿದೆ. ಕೇಂದ್ರದ ಮೆಚ್ಚುಗೆಯನ್ನೂ ಗಳಿಸಿರುವ ಈ ಮೊಬೈಲ್ ಆ್ಯಪ್ ಸಮೀಕ್ಷೆ ಇತರೆ ರಾಜ್ಯಗಳಿಗೂ ಮಾದರಿಯಾಗಿದೆ.

ಅನ್ನದಾತರ ಹಿರಿಮೆ ಹೆಚ್ಚಿಸಲು 'ಸ್ವಾಭಿಮಾನಿ ರೈತ" ಗುರುತಿನ ಚೀಟಿ, ರೈತರ ಜಮೀನಿಗೆ ನೆರವಾದ 'ಕೃಷಿ ಸಂಜೀವಿನಿ' ಸಂಚಾರ ಸಸ್ಯ ಆರೋಗ್ಯ ಚಿಕಿತ್ಸಾಲಯ ಸಂಚಾರ ವಾಹನ ಲೋಕಾರ್ಪಣೆ ಮಾಡಲಾಗಿದ್ದು, 'ಲ್ಯಾಬ್ ಟೂ ಲ್ಯಾಂಡ್' (ಪ್ರಯೋಗಾಲಯದಿಂದ ಭೂಮಿಗೆ) ಯೋಜನೆ ಇದು ರೈತರ ಜಮೀನಿನ ಆಂಬುಲೆನ್ಸ್ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಸಂಚಾರ ಸಸ್ಯ ಆರೋಗ್ಯ ಚಿಕಿತ್ಸಾಲಯವು ಸಾವಯವ ಕೃಷಿಗೆ ಒತ್ತು ನೀಡಿ, ರೈತ ಸ್ನೇಹಿ ಭೂಸಿರಿ ಮಿತ್ರ ಯೋಜನೆಯನ್ನು ಜಾರಿಗೊಳಿಸಿದೆ. 'ನಮ್ಮದು ಕೋಲಾರ ಕೃಷಿ ಮಾದರಿ' ಎಂದು ಸಾರುತ್ತಿರುವ ಬಿ.ಸಿ. ಪಾಟೀಲ ಸಮಗ್ರ ಕೃಷಿ ಪದ್ಧತಿಗೆ ಒತ್ತು ನೀಡಲು ಕರೆ ನೀಡಿದ್ದಾರೆ.

ಯಾಂತ್ರೀಕೃತ ಕೃಷಿ ರೈತರಿಗೆ ವರದಾನ

ಕೃಷಿಯನ್ನು ಯಾಂತ್ರೀಕರಣಗೊಳಿಸಿ, ಶ್ರಮದ ದುಡಿಮೆಯನ್ನು ಹಾಗೂ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸಿ, ಕಾರ್ಮಿಕರ ಕೊರತೆಯನ್ನು ನಿಭಾಯಿಸುವುದರೊಂದಿಗೆ ಉತ್ಪಾದಕತೆ ಹೆಚ್ಚಿಸುವುದು ಯಾಂತ್ರೀಕೃತ ಕೃಷಿಯ ಉದ್ದೇಶ.

ಯಂತ್ರೋಪಕರಣಗಳನ್ನು ಹಾಗೂ ಕೃಷಿ ಸಂಸ್ಕರಣೆ ಘಟಕಗಳನ್ನು ವಿತರಿಸಲು ಸಾಮಾನ್ಯ ವರ್ಗದ ರೈತರಿಗೆ ಶೇ50ರಷ್ಟು ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೈತರಿಗೆ ಶೇ90ರಷ್ಟು ಸಹಾಯಧನದಡಿ ಗರಿಷ್ಠ ಮಿತಿ ₹1 ಲಕ್ಷ ನೀಡಲಾಗುತ್ತಿದೆ. ಅಲ್ಲದೇ ಸಣ್ಣ ಟ್ರ್ಯಾಕ್ಟರ್‌ಗಳಿಗೆ ಸಾಮಾನ್ಯ ವರ್ಗದ ರೈತರಿಗೆ ₹75 ಸಾವಿರ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ90ರ ಸಹಾಯಧನ ಅಡಿಯಲ್ಲಿ ಗರಿಷ್ಠ ಮಿತಿ ₹3ಲಕ್ಷ 2020-21ನೇ ಸಾಲಿನಲ್ಲಿ 1.25 ಲಕ್ಷ ಫಲಾನುಭವಿಗಳಿಗೆ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲು ₹182 ಕೋಟಿ ಸಹಾಯಧನ ಹಾಗೂ ₹45 ಕೋಟಿಗಳ ಅನುದಾನದಲ್ಲಿ 24,276 ಫಲಾನುಭವಿಗಳಿಗೆ ಕೃಷಿ ಉತ್ಪನ್ನಗಳ ಸಂಸ್ಕರಣಾ ಘಟಕಗಳ ವಿತರಿಸಲಾಗಿದೆ.

ಕೃಷಿಯಂತ್ರ ಬಳಸಿ ಭತ್ತದ ನಾಟಿಯಲ್ಲಿ ತೊಡಗಿರುವ ಕೃಷಿ ಕುಟುಂಬ

ಅನ್ನದಾತರ ನೇತಾರ • ನೇಗಿಲಯೋಗಿ ಸೇವೆಗೆ ಅಧಿಕಾರ • ಕೃಷಿಕ್ಷೇತ್ರಕ್ಕೆ ತಂತ್ರಜ್ಞಾನದ ಸ್ಪರ್ಶ

ರೈತರ ಆದಾಯ ಹೆಚ್ಚಳಕ್ಕೆ ಹತ್ತಾರು ದಾರಿ

ರೈತರು ತಮ್ಮ ಬೆಳೆಗೆ ತಾವೇ ಬ್ರ್ಯಾಂಡ್ ರೂಪಿಸಬೇಕು. ಆಹಾರ ಉತ್ಪನ್ನಗಳ ಸಂಸ್ಕರಣೆಯ ಜೊತೆಗೆ ಮಾರುಕಟ್ಟೆ ಜ್ಞಾನ ಕೂಡ ಹೊಂದಬೇಕು ಎನ್ನುವ ನಿಟ್ಟಿನಲ್ಲಿ ಅಸಂಘಟಿತ ವಲಯದಲ್ಲಿರುವ ಸಣ್ಣ ಆಹಾರ ಸಂಸ್ಕರಣ ಉದ್ದಿಮೆಗಳನ್ನು, ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ರೈತರಿಗೆ ತರಬೇತಿ ನೀಡಲಾಗುತ್ತಿದೆ. ಕೃಷಿ ಉದ್ಯಮ ರೈತೋದ್ಯಮವಾಗಬೇಕು. ರೈತನು ಕೃಷಿ ಉದ್ಯಮಿಯಾಗಬೇಕು.

ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ರಾಜ್ಯದ ಕೃಷಿ ಚಟುವಟಿಕೆಗಳನ್ನು ಅರಿಯಲು ಜಿಲ್ಲೆಗಳಿಗೆ ಭೇಟಿ ನೀಡಿದಾಗ ಉತ್ಪಾದನೆಯ ಜೊತೆಗೆ ಉತ್ಪನ್ನಗಳ ಸಂಸ್ಕರಣೆ, ಅವುಗಳ ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಬಹುಮುಖ್ಯವೆಂಬುದನ್ನು ಮನಗಾಣಲಾಯಿತು.

ರೈತರಿಗೆ ಅನುಕೂಲ ಕಲ್ಪಿಸಲು ಹಾಗೂ ಅವರನ್ನು ಲಾಭದಾಯಕ ಕೃಷಿಯತ್ತ ಕೊಂಡೊಯ್ಯಲು ಸಿಎಫ್‌ಟಿಆರ್ ಐ ಜೊತೆ ಸಭೆ ನಡೆಸಿ ರೈತರಿಗೆ ತರಬೇತಿ ನೀಡಲು ತೀರ್ಮಾನಿಸಿ, ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ ಹಣ್ಣು ತರಕಾರಿಗಳು, ತೋಟಗಾರಿಕಾ, ಸಾಂಬಾರು, ಸಿರಿಧಾನ್ಯಗಳು, ಎಣ್ಣೆಕಾಳು, ಬೇಕರಿ ಉತ್ಪನ್ನಗಳು ಸೇರಿದಂತೆ ಹೀಗೆ ವಿವಿಧ ರೈತ ಉತ್ಪನ್ನ ಬೆಳೆಗಳ ಸಂಸ್ಕರಣೆ ಮಾರುಕಟ್ಟೆಗೆ ತರಬೇತಿ ನೀಡಲಾಗುತ್ತಿದೆ.

ತರಬೇತಿ ಪಡೆದ ರೈತರಿಗೆ ಪಿಎಂಎಫ್ ಎಂಇ ಯೋಜನೆಯಡಿ ಆಯ್ಕೆಯಾದ ಜಿಲ್ಲೆಯ ಉತ್ಪನ್ನಕ್ಕೆ ಚಿಕ್ಕ ಉದ್ದಿಮೆ ಪ್ರಾರಂಭಿಸಲು ಶೇ 35ರಷ್ಟು ಸಹಾಯಧನವನ್ನು ಗರಿಷ್ಠ ₹10 ಲಕ್ಷದ ವರೆಗೆ ನೀಡಲಾಗುವುದು.

‘ಸ್ವಾಭಿಮಾನಿ ರೈತ’

> ರೈತ ತನ್ನ ಬೆಳೆಗೆ ತಾನೇ ಬೆಲೆ ನಿಗದಿಪಡಿಸಬೇಕು. ತಮ್ಮ ಬೆಳೆಗೆ ತಾವೇಬ್ರ್ಯಾಂಡ್ ಮಾಡಿದಲ್ಲಿ ರೈತರ ಆದಾಯ ಖಂಡಿತವಾಗಿಯೂ ದ್ವಿಗುಣಗೊಳ್ಳಲಿದೆ
>
> –ಬಿ.ಸಿ.ಪಾಟೀಲ, ಕೃಷಿ ಸಚಿವ

ಗುರುತಿನಚೀಟಿ

ದೇಶಕ್ಕೆ ಅನ್ನ ನೀಡುವ ಅನ್ನದಾತ ಸ್ವಾಭಿಮಾನಿಯೂ ಕೂಡ ಆಗಿದ್ದಾನೆ. ಐಟಿ ಬಿಟಿ, ಸರ್ಕಾರಿ, ಖಾಸಗಿ ಕಚೇರಿಗಳಲ್ಲಿ ಕೆಲಸಮಾಡುವ ಸಿಬ್ಬಂದಿ ಬಳಿ ಗುರುತಿನ ಚೀಟಿಯಿರುತ್ತದೆ. ಆದರೆ ಹೊಟ್ಟೆಗೆ ಅನ್ನ ನೀಡುವ ಜೀವದಾತನ ಬಳಿ ಇಂತಹ ಗುರುತಿನ ಚೀಟಿ ಇರದಿದ್ದರೆ ಹೇಗೆ? ಅಲ್ಲವೇ. ಹೌದು, ಈ ಪ್ರಶ್ನೆಗೆ ಈಗ ಉತ್ತರವೂ ದೊರಕಿದೆ. ಅಂದ ಹಾಗೇ ಕೃಷಿ ಇಲಾಖೆ ರೈತ ತಾನೊಬ್ಬ ಸ್ವಾಭಿಮಾನಿ ರೈತ ಎಂದು ಎದೆಯುಬ್ಬಿಸಿ ಹೇಳುವಂತಹ ‘ಸ್ವಾಭಿಮಾನಿ ರೈತ’ ಹೆಸರಿನ ಗುರುತಿನ ಚೀಟಿಯನ್ನು ರೈತರಿಗೆ ನೀಡಿದ್ದಾರೆ.

ಕೃಷಿ ಸಂಜೀವಿನಿ ಬಲ

ಚಿಕ್ಕ ಜಿಲ್ಲೆಗಳಿಗೆ ಒಂದು ದೊಡ್ಡ ಜಿಲ್ಲೆಗಳಿಗೆ ಎರಡರಂತೆ ರಾಜ್ಯಾದ್ಯಂತ ಒಟ್ಟು 40 ‘ಕೃಷಿ ಸಂಜೀವಿನಿ’ ವಾಹನಗಳು ರೈತರಿಗೆ ಲೋಕಾರ್ಪಣೆಗೊಂಡಿವೆ. ಇನ್ನು ಕೊಪ್ಪಳ ಉಸ್ತುವಾರಿ ಜಿಲ್ಲೆಗೆ 20 ಕೃಷಿ ಸಂಜೀವಿನಿ ಸಸ್ಯ ಚಿಕಿತ್ಸಾ ಸಂಚಾರಿ ವಾಹನ ರೈತರಿಗಾಗಿ ಒದಗಿಸಲಾಗಿದ್ದು, ಈ ವಾಹನಗಳನ್ನು ರೈತರಿಗೆ ಮುಖ್ಯಮಂತ್ರಿಗಳು ಲೋಕಾರ್ಪಣೆಗೊಳಿಸಿದ್ದಾರೆ.

ಇದು ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಯು ನೈಸರ್ಗಿಕ ವಿಕೋಪಗಳಾದ ಅನಾವೃಷ್ಟಿ, ಅತಿವೃಷ್ಟಿ, ಚಂಡಮಾರುತ, ಬೆಳೆಗಳಿಗೆ ಕಾಡುವ ಕೀಟ ಮತ್ತು ರೋಗ ಬಾಧೆ ಹಾಗೂ ಮಣ್ಣಿನ ಫಲವತ್ತತೆ ಮತ್ತು ಇತರ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಸುಧಾರಿತ ಕೃಷಿ ಉತ್ಪಾದನಾ ತಾಂತ್ರಿಕತೆ, ಗುಣಮಟ್ಟದ ಕೃಷಿ ಪರಿಕರಗಳ ಪೂರೈಕೆ ಮತ್ತು ಶಿಫಾರಸ್ಸು ಮಾಡಲಾದ ರಸಗೊಬ್ಬರಗಳ ಸಮರ್ಪಕ ಬಳಕೆ, ರೋಗ - ಕೀಟಗಳ ಹತೋಟಿ, ಮಣ್ಣಿನಲ್ಲಿ ಲಭ್ಯವಿರುವ ಪೋಷಕಾಂಶಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸಿ, ಸೂಕ್ತ ಬೆಳೆ ಬೆಳೆಯಲು ಪ್ರೋತ್ಸಾಹಿಸುವುದು ಇಲಾಖೆಯ ಆದ್ಯ ಕರ್ತವ್ಯವಾಗಿದೆ.

ಕೀಟ,ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆ ಕುರಿತಂತೆ ರೈತರ ತಾಕುಗಳಲ್ಲಿಯೇ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯಗಳನ್ನು ಒದಗಿಸಲು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ) ಯೋಜನೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕೋಲಾರ ಮಾದರಿ, ಸಮಗ್ರ ಕೃಷಿಗೆ ಒತ್ತು

ರೈತ ಆತ್ಮಸ್ಥೈರ್ಯ ಕುಂದಿಸಿಕೊಳ್ಳುವ ಅಗತ್ಯ ಇಲ್ಲ. ಕೋಲಾರದ ಸಮಗ್ರ ಕೃಷಿಯತ್ತ ಎಲ್ಲರೂ ಆಕರ್ಷಕರಾಗಬೇಕು. ಬಿ.ಎಸ್. ಯಡಿಯೂರಪ್ಪ ಹಾಗೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರಗಳು ಎಂದಿಗೂ ರೈತರ ಬೆನ್ನಿಗೆ ನಿಲ್ಲಲಿವೆ. ಕೃಷಿಯತ್ತ ಇನ್ನಷ್ಟು ಆಕರ್ಷಿಸಿ ಲಾಭದಾಯಕ ಕೃಷಿಕರನ್ನಾಗಿ ಮಾಡುವ ನಿಟ್ಟಿನಲ್ಲಿ ರೈತರೊಂದಿಗೊಂದು ದಿನ ಕಾರ್ಯಕ್ರಮ ನಡೆಸಲಾಗುತ್ತಿದೆ. ಕೋಲಾರದಲ್ಲಿನ ಸಮಗ್ರ ಕೃಷಿ ಪದ್ಧತಿ ಮಾದರಿಯಾಗಲು ಸಚಿವರು ಸಂಕಲ್ಪ ತೊಟ್ಟಿದ್ದಾರೆ.

ವೀಕೆಂಡ್ ಪಬ್, ಬಾರ್ ಸಂಸ್ಕೃತಿ ಬಿಟ್ಟು ವೀಕೆಂಡ್ ಅಗ್ರಿಕಲ್ಚರ್ ಸಂಸ್ಕೃತಿ ಬೆಳೆಯಲಿ ಎಂದು ಬಿ.ಸಿ.ಪಾಟೀಲ ಕರೆ ನೀಡಿದ್ದಾರೆ. ನಗರದವರಲ್ಲಿ ಕೃಷಿಯತ್ತ ಆಕರ್ಷಣೆ ಹೆಚ್ಚಾಗುತ್ತಿದೆ. ವೀಕೆಂಡ್ ಪಬ್ ಬಾರ್ ಬಿಟ್ಟು ವೀಕೆಂಡ್ ಅಗ್ರಿಕಲ್ಚರ್ ಹುಟ್ಟುವಂತಾಗಬೇಕು. ರೈತರೊಂದಿಗೆ ನಾವಿದ್ದೇವೆ, ಸರ್ಕಾರವಿದೆ ಎಂಬ ಸಂದೇಶ ಆತ್ಮವಿಶ್ವಾಸ ಮೂಡಿಸುವುದೇ ನನ್ನ ಗುರಿ ಎನ್ನುತ್ತಾರೆ ಪಾಟೀಲರು.

ಯಶಸ್ವಿ ಬೆಳೆ ಸಮೀಕ್ಷೆ ಆ್ಯಪ್ ಯಶಸ್ವಿ

ಅನ್ನ ನೀಡುವ ರೈತ ಸಶಕ್ತನಾದರೆ ಮಾತ್ರವೇ ಸಮರ್ಥ ಹಾಗೂ ಸಶಕ್ತ ರಾಷ್ಟ್ರ ನಿರ್ಮಾಣ ಮಾಡಲು ಸಾಧ್ಯ. ‘ಅನ್ನದಾತೋ ಸುಖೀಭವ’ ಅನ್ನುವ ಮಾತು ಕೇವಲ ಮಾತಾಗಿ ಉಳಿಯಬಾರದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸೌಲಭ್ಯಗಳು ನೇರವಾಗಿ ರೈತನಿಗೆ ಸಕಾಲದಲ್ಲಿ ತಲುಪಬೇಕು. ಆಗಲೇ ರೈತರಿಗೆ ಸರಿಯಾದ ನ್ಯಾಯ ಒದಗಿಸಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ, ದೇಶದಲ್ಲೇ ಮೊದಲಬಾರಿಗೆ ರೈತರಿಗೆ ಸಹಕಾರಿಯಾಗಲೆಂದು ಬೆಳೆ ಸಮೀಕ್ಷೆ ಆ್ಯಪ್ ಮೂಲಕ, ರೈತನಿಗೆ ತನ್ನ ಹೊಲಕ್ಕೆ ತಾನೇ ಸರ್ಟಿಫಿಕೆಟ್ ಕೊಡುವ ಸ್ವಾತಂತ್ರ್ಯ ನೀಡಲಾಯಿತು. ಈ ವಿನೂತನ ಪ್ರಯತ್ನಕ್ಕೆ ರಾಜ್ಯದಾದ್ಯಂತ ರೈತರಿಂದ ನಿರೀಕ್ಷೆಗೂ ಮೀರಿದ ಬೆಂಬಲ ದೊರೆಯುವುದರೊಂದಿಗೆ ’ಬೆಳೆ ಸಮೀಕ್ಷೆ ಉತ್ಸವ’ ಕಾರ್ಯಕ್ರಮ ಯಶ ಕಂಡಿತು. ಅಲ್ಲದೇ ಇಡೀ ದೇಶವೇ ರಾಜ್ಯದತ್ತ ತಿರುಗಿ ನೋಡುವಂತೆ ಈ ಮೊಬೈಲ್ ಬೆಳೆ ಸಮೀಕ್ಷೆ ಆಪ್ ಮಾಡಿದ್ದು, ಕೇಂದ್ರದಿಂದ ಪ್ರಶಂಸೆಗೂ ಪಾತ್ರವಾಗಿ ‘ಅಗ್ರಿ ಟ್ರೆಂಡ್ ಸೆಟ್ಟರ್’ ಎಂಬ ಹೆಗ್ಗಳಿಕೆ ಕೇಂದ್ರದಿಂದ ಪಡೆದಿದೆ.

ಕೃಷಿ ತಜ್ಞರೇ ವೈದ್ಯರಾಗಬೇಕು

ಕೃಷಿ ವಿಜ್ಞಾನಿಗಳು ಕೃಷಿ ಪ್ರೊಫೆಸರ್‌ಗಳಾಗಬೇಕು. ವಿಶ್ವವಿದ್ಯಾಲಯದ ಆವರಣ ಬಿಟ್ಟು ಹೊರಬರಬೇಕು. ಜ್ಞಾನವನ್ನು ಸಮಗ್ರವಾಗಿ ರೈತರಿಗೆ ಸಾರಬೇಕು ಎಂದು ಕೃಷಿ ಸಚಿವರು ಸಲಹೆ ನೀಡಿದ್ದಾರೆ.

ಕೃಷಿ ಪದವಿ ವಿದ್ಯಾರ್ಥಿಗಳ ಜೊತೆ ವಿಡಿಯೋ ಸಂವಾದ ನಡೆಸಿ, ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳು ರೈತರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಬಗ್ಗೆ ಸಚಿವರು ಮಾಹಿತಿ ಹಂಚಿಕೊಂಡಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



ಬೀಜ ನಿಗಮ ದೇಶಕ್ಕೆ ಮಾದರಿಯಾಗಿಸಲು ಸಂಕಲ್ಪ

ರಾಜ್ಯ ಬೀಜ ನಿಗಮವನ್ನು ಇಡೀ ದೇಶದಲ್ಲಿ ಮಾದರಿ ಬೀಜ ನಿಗಮವನ್ನಾಗಿ ಮಾಡಲು ದೃಢ ಸಂಕಲ್ಪ ಹೊಂದಿದ್ದು, ನಿಗಮವನ್ನು ಬಲಪಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ಕೃಷಿ ಸಚಿವರೂ ಆಗಿರುವ ರಾಜ್ಯ ಬೀಜ ನಿಗಮದ ಅಧ್ಯಕ್ಷ ಬಿ.ಸಿ.ಪಾಟೀಲ ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ಮೊದಲ ಬಾರಿಗೆ ಬೀಜ ನಿಗಮಕ್ಕೆ ಚುನಾಯಿತ ಪ್ರತಿನಿಧಿಯೊಬ್ಬರು ಅಧ್ಯಕ್ಷರಾಗಿರುವುದು ಹೆಮ್ಮೆಯ ವಿಚಾರವಾಗಿದ್ದು, ಕೃಷಿಕ ಕುಟುಂಬದಿಂದ ಬಂದಿರುವ ಬಿ.ಸಿ.ಪಾಟೀಲ, ಅಧಿಕಾರ ಸ್ವೀಕರಿಸಿ ಮೊದಲ ಬಾರಿಗೆ ರಾಜ್ಯ ಬೀಜ ನಿಗಮದ ಇಲ್ಲಿಯವರೆಗಿನ ಸಾಧನೆ, ಮುಂದಿರುವ ಯೋಜನೆಗಳು, ಬೀಜ ಉತ್ಪಾದನೆ, ಕೈಗೊಂಡಿರುವ ಕ್ರಮಗಳು ಸೇರಿದಂತೆ ಸಮಗ್ರವಾಗಿ ಬೀಜ ನಿಗಮದ ಅಧಿಕಾರಿ ಸಿಬ್ಬಂದಿ ವರ್ಗದ ಜೊತೆ ಬೆಂಗಳೂರಿನಲ್ಲಿ ಸಭೆ ನಡೆಸಿ ಪ್ರಮಾಣಿತ ಬೀಜಗಳನ್ನೇ ಉತ್ಪಾದಿಸಬೇಕು ಹಾಗೂ ರೈತರಿಗೆ ಯಾವುದೇ ತೊಂದರೆಯಾಗದಂತೆ ಅವುಗಳನ್ನು ಪೂರೈಸಬೇಕು. ಕಳಪೆ ಬಿತ್ತನೆ ಬೀಜ ಮಾರಾಟಗಾರರ ಮೇಲೆ ನಿಗಾ ಇಟ್ಟಿರಬೇಕು ಎಂದು ಅಧಿಕಾರಿಗಳಿಗೆ ಕೃಷಿ ಸಚಿವರು ಸೂಚಿಸಿದ್ದಾರೆ.

ಬೀಜ ನಿಗಮ ಅಭಿವೃದ್ಧಿಯಾಗಲು ಹಾಗೂ ರೈತರಿಗೆ ಸಾಧ್ಯವಾದಷ್ಟು ಅನುಕೂಲ ಕಲ್ಪಿಸಲು ರಾಜ್ಯದಲ್ಲಿ ಸಾಕಷ್ಟು ಅವಕಾಶಗಳಿದ್ದು, ಇರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ರಾಜ್ಯ ಬೀಜ ನಿಗಮವನ್ನು ಇಡೀ ದೇಶದಲ್ಲಿಯೇ ಮಾದರಿ ನಿಗಮವನ್ನಾಗಿ ಮಾಡಲು ಎಲ್ಲರೂ ಕಟಿಬದ್ಧರಾಗಿ ದೃಢ ಸಂಕಲ್ಪ ಹೊಂದಿದ್ದಾರೆ.

ರಾಜ್ಯದಲ್ಲಿಯೂ ಸಾವಯವ ಕೃಷಿ ವಿವಿ ಸರ್ಕಾರದ ಚಿಂತನೆ

ಗುಜರಾತ್ ಹಾಗೂ ಛತ್ತೀಸಗಡ ರಾಜ್ಯಗಳ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಾವಯವ ಕೃಷಿ ವಿಶ್ವವಿದ್ಯಾಲಯದ ಕುರಿತು ಕೃಷಿ ಸಚಿವ ಬಿ.ಸಿ.ಪಾಟೀಲ ಚಿಂತನೆ ನಡೆಸಿದ್ದಾರೆ.

ಆರೋಗ್ಯದ ದೃಷ್ಟಿಯಿಂದ ಸಾವಯವದತ್ತ ಜನರು ಹೆಚ್ಚು ವಾಲುತ್ತಿರುವುದರಿಂದ ಸಾವಯವ ಪದಾರ್ಥಗಳಿಗೆ ಹೆಚ್ಚು ಮಹತ್ವ ದೊರೆಯುತ್ತಿದೆ. ಹೀಗಾಗಿ ಸಾವಯವ ಕೃಷಿಗೆ ಹೆಚ್ಚಿನ ಪ್ರಾಧಾನ್ಯ ನೀಡಬೇಕು. ಗುಜರಾತ್ ಹಾಗೂ ಛತ್ತಿಸಗಢ ರಾಜ್ಯಗಳಲ್ಲಿ ಸಾವಯವ ಕೃಷಿ ವಿಶ್ವವಿದ್ಯಾಲಯಗಳಿವೆ.

ಇದೇ ಮಾದರಿಯಲ್ಲಿ ಶಿವಮೊಗ್ಗದಲ್ಲಿ ಸಾವಯವ ಕೃಷಿ ಸ್ಥಾಪಿಸುವ ಬಗ್ಗೆ ಸಾವಯವ ಸಮಿತಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಈ ಕುರಿತು ಚಿಂತನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಚಿವರು ಹೇಳಿದ್ದಾರೆ.

ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು

ಆಧುನಿಕ ಕೃಷಿ ತಂತ್ರಜ್ಞಾನದ ಅಳವಡಿಕೆಯಲ್ಲಿ ರೈತರ, ರೈತ ಮಹಿಳೆಯರ ಮತ್ತು ವಿಸ್ತರಣಾ ಕಾರ್ಯಕರ್ತರ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತಿದೆ. ರೈತರು ಹಾಗೂ ರೈತ ಮಹಿಳೆಯರಿಗೆ ವಿಷಯಾಧಾರಿತ ಹಾಗೂ ಸ್ಥಳೀಯ ಬೇಡಿಕೆಗನುಗುಣವಾಗಿ ತಂತ್ರಜ್ಞಾನದ ಅವಶ್ಯಕತೆಯನ್ನು ಗುರುತಿಸಿ ಸಮಸ್ಯೆ, ಕೌಶಲಾಧಾರಿತ ತರಬೇತಿಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ

ಕೃಷಿ ಸಂಬಂಧಿಸಿದಂತೆ ಆಧುನಿಕ ಬೇಸಾಯ ಕ್ರಮ, ಕೊಯ್ಲೋತ್ತರ ತಂತ್ರಜ್ಞಾನ, ಮಾರುಕಟ್ಟೆ ಸೌಲಭ್ಯ, ಮಾರುಕಟ್ಟೆ ಆಧಾರಿತ ಬೆಳೆ ಯೋಜನೆ, ಕೃಷಿ ಉತ್ಪನ್ನಗಳ ಸಂಸ್ಕರಣೆ, ಕೃಷಿ ಆಧಾರಿತ ಕೈಗಾರಿಕೆ ಯೋಗ ಮುಂತಾದ ವಿಷಯಗಳ ಕುರಿತು ರಾಜ್ಯದ ಒಟ್ಟು 23 ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತದೆ.

ಮೂಲಸೌಕರ್ಯ ನಿಧಿ ಅಡಿಯಲ್ಲಿ ನೆರವು

ಆತ್ಮನಿರ್ಭರ್ ಅಭಿಯಾನದಡಿ ಕೇಂದ್ರ ಪುರಸ್ಕೃತ ಹೊಸ ಯೋಜನೆ ‘ಕೃಷಿ ಮೂಲ ಸೌಕರ್ಯ ನಿಧಿ’ ಅಡಿಯಲ್ಲಿ ಹಣಕಾಸು ಸೌಲಭ್ಯ ನೀಡಲಾಗುತ್ತಿದೆ. ಇ–ಮಾರುಕಟ್ಟೆ ವೇದಿಕೆ ಸೇರಿದಂತೆ ಸರಬರಾಜು ಸರಪಳಿ ಸೇವೆಗಳು, ಗೋದಾಮುಗಳು ಮತ್ತು ಸೈಲೋಗಳು, ಪ್ಯಾಕ್ ಹೌಸ್‌ಗಳು, ವಿಂಗಡಣೆ ಮತ್ತು ಶ್ರೇಣೀಕರಣ ಘಟಕಗಳು, ಶೀತಲಗೃಹ ಸರಪಳಿಗಳು, ಸಾಗಾಣಿಕೆ ಸೌಲಭ್ಯಗಳು, ಪ್ರಾಥಮಿಕ ಸಂಸ್ಕರಣಾ ಕೇಂದ್ರಗಳು, ಹಣ್ಣು ಮಾಗಿಸುವ ಘಟಕಗಳು, ಮೌಲ್ಯಮಾಪನ ಘಟಕಗಳು ಇದ್ದು, ವಾರ್ಷಿಕ ಶೇ3 ಗರಿಷ್ಠ ಮಿತಿ ₹2 ಕೋಟಿಯಂತೆ ಏಳು ವರ್ಷಗಳ ಕಾಲ ಬಡ್ಡಿ ಸಹಾಯಧನ ನೀಡಲಾಗುತ್ತದೆ.

ರೈತರು, ರೈತ ಉತ್ಪಾದಕ ಸಂಸ್ಥೆಗಳು, ಕೃಷಿ ಉದ್ಯಮಿಗಳು-ನವೋದ್ಯಮಿಗಳು, ಪ್ರಾಥಮಿಕ ಕೃಷಿ ಕ್ರೆಡಿಟ್ ಸಹಕಾರ ಸಂಘಗಳು, ವಿವಿಧೋದ್ದೇಶ ಸಹಕಾರಿ ಸಂಘಗಳು, ಸ್ವ-ಸಹಾಯ ಗುಂಪುಗಳು, ಜಂಟಿ ಬಾಧ್ಯತಾ ಗುಂಪುಗಳು, ಖಾಸಗಿ ಮಾಲೀಕತ್ವ ಸಂಸ್ಥೆಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರ- -ಸ್ಥಳೀಯ ಆಡಳಿತ ಪ್ರಾಯೋಜಿತ ಸಾರ್ವಜನಿಕ- -ಖಾಸಗಿ ಸಹಭಾಗಿತ್ವದ ಯೋಜನೆಗಳು ಇವೆ.

ಮೆಕ್ಕೆಜೋಳ ಬೆಳೆಗಾರರಿಗೆ ನೆರವು

ಬೆಳೆ ಸಮೀಕ್ಷೆ ತಂತ್ರಾಂಶದಲ್ಲಿ ನೋಂದಣಿಯಾಗಿರುವ ಮುಸುಕಿನ ಜೋಳ ಬೆಳೆಗಾರರಿಗೆ ಆರ್ಥಿಕ ನೆರವನ್ನು ನೇರ ನಗದು ಮೂಲಕ ವರ್ಗಾವಣೆ ಮಾಡಲಾಗಿದೆ. 2020–21ನೇ ಸಾಲಿನಲ್ಲಿ ಕೋವಿಡ್-19 ಲಾಕ್‌ಡೌನ್ ಸಮಯದಲ್ಲಿ ಸಂಕಷ್ಟಕ್ಕೆ ಒಳಗಾಗಿದ್ದ ಹಾಗೂ 2019–20ನೇ ಸಾಲಿನಲ್ಲಿ ಮುಸುಕಿನ ಜೋಳ ಬೆಳೆದ ರೈತರಿಗೆ ₹5 ಸಾವಿರದಂತೆ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮೂಲಕ ಫಲಾನುಭವಿಗಳಿಗೆ ಒದಗಿಸಲಾಗಿದೆ. 2021ರ ಫೆ.26ರವರೆಗೆ ಒಟ್ಟು ₹374.21 ಕೋಟಿ ನೆರವು ಒದಗಿಸಲಾಗಿದೆ.

ಕೃಷಿ ಪ್ರಶಸ್ತಿ, ರೈತರಿಗೆ ಬಹುಮಾನಗಳು

ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ರೈತರಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವ ಹೆಚ್ಚಿಸಿ ಅತಿಹೆಚ್ಚು ಇಳುವರಿ ಪಡೆಯುವ ರೈತರಿಗೆ ಬಹುಮಾನದ ನೀಡುವ ಮೂಲಕ ಅವರನ್ನು ಉತ್ತೇಜಿಸಲಾಗುತ್ತಿದೆ. ಇದೇ ಉದ್ದೇಶದಿಂದ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಕೃಷಿ ಪ್ರಶಸ್ತಿ ರೈತರಿಗೆ ಉತ್ಪಾದನಾ ಬಹುಮಾನ ನೀಡಲಾಗುತ್ತದೆ.

ರಾಜ್ಯ ಕೃಷಿ ಕ್ಷೇತ್ರದಲ್ಲಿ ವಿನೂತನ/ಹೊಸ ಅನ್ವೇಷಣೆ ಮತ್ತು ಸೃಜನಾತ್ಮಕ ಕಾರ್ಯಗಳಿಂದ ವಿಶಿಷ್ಟ ಮತ್ತು ಗಮನಾರ್ಹ ಸಾಧನೆ ಮಾಡಿರುವ ಮತ್ತು ರೈತ ಸಮುದಾಯದ ಶ್ರೇಯೋಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಿರುವ ಪರಿಣತರನ್ನು ಗುರುತಿಸಿ ಕೃಷಿ ಪಂಡಿತ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ನೀಡಿ ಗೌರವಿಸಲಾಗುತ್ತದೆ.

ಅಲ್ಲದೇ ಯುವ ರೈತರಿಗೆ ಕೃಷಿ ಚಟುವಟಿಕೆಗಳತ್ತ ಆಕರ್ಷಿಸಲು ರೈತರ ಮನೆ ಬಾಗಿಲಿಗೆ ಹೋಗಿ ಆದರ್ಶ ಯುವ ರೈತ ಪ್ರಶಸ್ತಿ ಪುರಸ್ಕಾರ ನೀಡಲಾಗಿದೆ.

ಕ್ರಿಕೆಟ್‌ಗೆ ವಿದಾಯ ಹೇಳಿದ 'ದಾವಣಗೆರೆ ಎಕ್ಸ್‌ಪ್ರೆಸ್' ಖ್ಯಾತಿಯ ವೇಗಿ ವಿನಯಕುಮಾರ್

'ಡಬಲ್ ಟ್ರಿಪಲ್' ಕಿರೀಟ ಧರಿಸಿದ ನಾಯಕ

• ಗಿರೀಶ ದೊಡ್ಡಮನಿ

ಬೆಂಗಳೂರು: ದೇಶಿ ಕ್ರಿಕೆಟ್ ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ ಕಾಣಸಿಗುವ ಒಂದು ವಿಶೇಷ ದಾಖಲೆಯೆಂದರೆ ಕರ್ನಾಟಕ ತಂಡದ 'ಡಬಲ್ ಟ್ರಿಪಲ್' ಪ್ರಶಸ್ತಿ ಸಾಧನೆ.

ಸತತ ಎರಡು ಋತುಗಳಲ್ಲಿ (2013-14 ಮತ್ತು 2014–15) ರಣಜಿ ಟ್ರೋಫಿ, ವಿಜಯ್ ಹಜಾರೆ ಮತ್ತು ಇರಾನಿ ಟ್ರೋಫಿಗಳನ್ನು ಗೆದ್ದ ಅನನ್ಯ ಸಾಧನೆ ಅದು. ಭಾರತದ ಒಂಬತ್ತು ದಶಕಗಳ ದೇಶಿ ಕ್ರಿಕೆಟ್ ಇತಿಹಾಸದಲ್ಲಿ ಇರುವ ಈ ಏಕೈಕ ಸಾಧನೆಯ ರೂವಾರಿ ರಂಗನಾಥ್ ವಿನಯಕುಮಾರ್.

'ದಾವಣಗೆರೆ ಎಕ್ಸ್‌ಪ್ರೆಸ್' ಎಂದೇ ಖ್ಯಾತರಾಗಿರುವ 37 ವರ್ಷದ ವಿನಯ್, ಎಲ್ಲ ಮಾದರಿಗಳ ಕ್ರಿಕೆಟ್‌ನಿಂದ ನಿವೃತ್ತರಾಗಿರುವುದಾಗಿ ಶುಕ್ರವಾರ ಘೋಷಿಸಿದ್ದಾರೆ.

'ನಿಮ್ಮೆಲ್ಲರ ನೆಚ್ಚಿನ ದಾವಣಗೆರೆ ಎಕ್ಸ್‌ಪ್ರೆಸ್ ಇದೀಗ ನಿವೃತ್ತಿಯ ನಿಲ್ದಾಣಕ್ಕೆ ಬಂದು ತಲುಪಿದೆ' ಎಂದು ಪತ್ರ ಬರೆದು ಟ್ವೀಟ್ ಮಾಡಿದ್ದಾರೆ.

ಈ ಹೊತ್ತಿನಲ್ಲಿ ವಿನಯ್ ಸಾಧನೆಯ ಹಾದಿಯನ್ನು ನೋಡಿದರೆ ಹತ್ತಾರು ವಿಷಯಗಳು ಗಮನ ಸೆಳೆಯುತ್ತವೆ.

ಜಾವಗಲ್ ಶ್ರೀನಾಥ್, ವೆಂಕಟೇಶ್ ಪ್ರಸಾದ್, ದೊಡ್ಡಗಣೇಶ್, ಡೇವಿಡ್ ಜಾನ್ಸನ್ ಅವರು ಶ್ರೀಮಂತಗೊಳಿಸಿದ ಕರ್ನಾಟಕದ ಮಧ್ಯಮವೇಗದ ಬೌಲಿಂಗ್ ಪರಂಪರೆಗೆ ಮೆರುಗು ತಂದ ಶ್ರೇಯ ವಿನಯ್ ಕುಮಾರ್ ಅವರಿಗೆ ಸಲ್ಲುತ್ತದೆ. 2004ರಲ್ಲಿ ಬಂಗಾಳದ ಎದುರು ರಣಜಿ ಟ್ರೋಫಿ ಕ್ರಿಕೆಟ್‌ಗೆ ವಿನಯ್ ಪದಾರ್ಪಣೆ ಮಾಡಿದ್ದರು.

ಆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ದೊಡ್ಡಗಣೇಶ್ ಮತ್ತು ವಿನಯ್ ವೇಗದ ವಿಭಾಗದ ಹೊಣೆ ನಿಭಾಯಿಸಿದ್ದರು. ಇಬ್ಬರೂ ತಲಾ ನಾಲ್ಕು ವಿಕೆಟ್ ಗಳಿಸಿದ್ದರು. ವಿನಯ್ ಬಂಗಾಳ ತಂಡದಲ್ಲಿ ಆಡಿದ್ದ ಭಾರತ ತಂಡದ ನಾಯಕ ಸೌರವ್ ಗಂಗೂಲಿ ಮತ್ತು ರೋಹನ್ ಗಾವಸ್ಕರ್ ವಿಕೆಟ್ ಗಳಿಸಿದ್ದರು.

> ಭಾರತ ತಂಡದಲ್ಲಿ ಹೆಚ್ಚು ಕಾಲ ಆಡಲಿಲ್ಲವೆಂಬುದರ ಬಗ್ಗೆ ಬೇಸರವಿಲ್ಲ. ಆದರೆ ಕರ್ನಾಟಕ ತಂಡ ಕೊಟ್ಟ ಸಂತಸ ಇದೆಯಲ್ಲ. ಅದು ಎಲ್ಲಕ್ಕಿಂತಲೂ ಅಮೂಲ್ಯವಾದದ್ದು. ನನ್ನ ನಾಯಕತ್ವದಲ್ಲಿ ಉತ್ತಮವಾದ ಡ್ರೆಸ್ಸಿಂಗ್ ರೂಮ್ ವಾತಾವರಣ ಇತ್ತು. ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ಮನೀಷ್ ಪಾಂಡೆ ಮತ್ತು ಕರುಣ್ ನಾಯರ್ ಕೂಡ ಭಾರತ ತಂಡದಲ್ಲಿ ಆಡಿದ್ದು ಹೆಮ್ಮೆಯ ವಿಷಯ. ಡಬಲ್ ಟ್ರಿಪಲ್ ಸಾಧನೆಯು ಅವಿಸ್ಮರಣೀಯ. ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಉತ್ತಮ ಸಾಧನೆ ಮಾಡಿದ್ದೆ. ಪ್ರಶಸ್ತಿ ಗೆದ್ದ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದೆ. ಬಹಳಷ್ಟು ಯಶಸ್ಸಿನ ಸವಿಯನ್ನು ಉಂಡಿದ್ದೇನೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮತ್ತು ಬಿಸಿಸಿಐಗೆ ಕೃತಜ್ಞತೆ ಸಲ್ಲಿಸುತ್ತೇನೆ.
>
> – ಆರ್. ವಿನಯಕುಮಾರ್

'ದಾವಣಗೆರೆಯಲ್ಲಿ ಹುಟ್ಟಿ, ಬೆಳೆದು ಬಂದ ವಿನಯ್ ಕ್ರಿಕೆಟ್‌ನಲ್ಲಿ ಬೆಳೆದಿದ್ದು ಯುವ ಆಟಗಾರರಿಗೆ ಮಾದರಿ. ಸೌಲಭ್ಯಗಳ ಕೊರತೆ ಇರುವ ಗ್ರಾಮಾಂತರ ಪ್ರದೇಶದಿಂದ ಬಂದು ಕರ್ನಾಟಕ ತಂಡದ ನಾಯಕರಾಗಿ, ಭಾರತ ತಂಡದಲ್ಲಿಯೂ ಆಡುವ ಮಟ್ಟಕ್ಕೆ ಬೆಳೆದಿದ್ದು ಅವರ ಸಾಧನೆ' ಎಂದು ಮಾಜಿ ಕ್ರಿಕೆಟಿಗ ದೊಡ್ಡಗಣೇಶ್ ಹೇಳುತ್ತಾರೆ.

ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ವಿನಯ್‌ಗೆ ಬಾಲ್ಯದಲ್ಲಿ ಕ್ರಿಕೆಟ್ ಕಲಿಕೆಗೆ ಉತ್ತಮ ಸೌಲಭ್ಯಗಳು ಸಿಕ್ಕಿರಲಿಲ್ಲ.

ಆದರೆ ನಿರಂತರ ಪರಿಶ್ರಮ ಮತ್ತು ಛಲದ ಸಾಧನೆಯಿಂದ ಕರ್ನಾಟಕ ತಂಡಕ್ಕೆ ಕಾಲಿಟ್ಟವರು.

ಸ್ವಿಂಗ್ ಮೋಡಿ: ಬಲಗೈ ಮಧ್ಯಮವೇಗಿಯಾಗಿದ್ದ ವಿನಯ್, ತಮ್ಮ ಛಲದ ಹೋರಾಟದಿಂದ ಗಮನ ಸೆಳೆದವರು. ತಮ್ಮ ಬೌಲಿಂಗ್‌ನಲ್ಲಿ ವೇಗಕ್ಕಿಂತ ಹೆಚ್ಚು ವೇರಿಯೇಷನ್‌ಗಳಿಗೆ ಮಹತ್ವ ನೀಡಿದ್ದರು. ಸ್ವಿಂಗ್ ಮತ್ತು ಕಟರ್‌ಗಳ ಹದವಾದ ಮಿಶ್ರಣದ ಮೂಲಕ ಎದುರಾಳಿಗಳನ್ನು ಕಂಗೆಡಿಸುತ್ತಿದ್ದರು.

ಸಾಲು ಟ್ರೋಫಿ ಗೆದ್ದಿದ್ದು ಖುಷಿ

'ಚಿಕ್ಕ ವಯಸ್ಸಿನಿಂದಲೂ ಆಟ ಶುರು ಮಾಡಿದ್ದ. ಕರ್ನಾಟಕ, ಭಾರತ ತಂಡದಲ್ಲಿ ಆಡಿ ಬಹುಮಾನಗಳನ್ನು ಗೆದ್ದಿದ್ದಾನೆ. ರಣಜಿ ತಂಡದಲ್ಲಿ ನಿರಂತರವಾಗಿ ಕಪ್‌ಗಳನ್ನು ಗೆದ್ದಿದ್ದು ಹೆಚ್ಚಿನ ಖುಷಿ ಕೊಡುತ್ತದೆ. ಅವಕಾಶ ಇದ್ದಿದ್ದರೆ ಇನ್ನಷ್ಟು ದಿವಸ ಆಡಿ ಹೆಚ್ಚಿನ ಸಾಧನೆ ಮಾಡಬಹುದಿತ್ತು. ಮಗ ಮನೆಯಲ್ಲಿರುತ್ತಾನೆ ಎಂಬುದು ಮತ್ತೊಂದು ಖುಷಿ. ಮುಂದೆ ಯಾವ ನಿರ್ಧಾರ ಕೈಗೊಳ್ಳುತ್ತಾನೋ ಗೊತ್ತಿಲ್ಲ' ಎನ್ನುತ್ತಾರೆ ವಿನಯ್ ಕುಮಾರ್ ಅವರ ತಾಯಿ ಸೌಭಾಗ್ಯ.

ಆರ್. ವಿನಯಕುಮಾರ್ ಮತ್ತು ಪತ್ನಿ ರಿಚಾ ಸಿಂಗ್

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಾಧನೆ

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ವಿಕೆಟ್	ಶ್ರೇಷ್ಠ
ಟೆಸ್ಟ್	1	11	6	00	00	1	73ಕ್ಕೆ1
ಏಕದಿನ	31	86	27*	00	00	38	30ಕ್ಕೆ4
ಟಿ20	9	2	2*	00	00	10	24ಕ್ಕೆ3

ವಿನಯ್ ನಾಯಕತ್ವದ ಸಾಧನೆ (ಕರ್ನಾಟಕ)

ಬ್ಯಾಟಿಂಗ್

ಪಂದ್ಯ	ಇನಿಂಗ್ಸ್	ರನ್	ಶ್ರೇಷ್ಠ	ಸರಾಸರಿ	ಅರ್ಧಶತಕ	ಶತಕ
59	75	1663	105*	25.98	9	2

ಬೌಲಿಂಗ್

ಪಂದ್ಯ	ಎಸೆತಗಳು	ಮೇಡನ್	ರನ್	ವಿಕೆಟ್	ಶ್ರೇಷ್ಠ	ಸರಾಸರಿ	ಕ್ಯಾಚ್
59	9941	396	4599	210	58ಕ್ಕೆ7	21.90	34

ಮಾಹಿತಿ: ಎಚ್.ಆರ್.ಗೋಪಾಲಕೃಷ್ಣ